ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ:- ಮಾನ್ಯ ಅಧ್ಯಕ್ಷರೆ, ನಮಗೆ ಅವಕಾಶ ಕೊಡಿ. ನಿನ್ನೆ ಕೂಡ ಅವಕಾಶ ಕೊಡಲಿಲ್ಲ.

ಅಧ್ಯಕ್ಷರು:- ನಾಳೆ ಕೊಡುತ್ತೇನೆ. ಆಯಿತು ಕೊಡೋಣ. ನಿನ್ನೆ ಒಂದು ಘಂಟೆ ತೆಗೆದುಕೊಂಡಿದ್ದೀರಿ. ನಾಳೆ ಕೊಡುತ್ತೇನೆ.

ಶ್ರೀ ನೆಹರು ಚೆನ್ನಬಸಪ್ಪ ಓಲೀಕಾರ್:- ಮಾನ್ಯ ಅಧ್ಯಕ್ಷರೆ, ದಯಮಾಡಿ ಬ್ಯಾಕ್‌ಲಾಗ್ ವಿಚಾರದಲ್ಲಿ ಮಾತನಾಡುವುದಕ್ಕೆ ಅವಕಾಶ ಮಾಡಿಕಕೊಡಬೇಕು.

ಅಧ್ಯಕ್ಷರು:- ಇದಕ್ಕೆ ಅವಕಾಶ ಇಲ್ಲ. ಸರ್ಕಾರದವರು ಉತ್ತರವನ್ನು ಕೊಟ್ಟಿದ್ದಾರೆ. ಕುಳಿತುಕೊಳ್ಳಿ.

ಶ್ರೀ ನೆಹರು ಚೆನ್ನಬಸಪ್ಪ ಓಲೀಕಾರ್:- ದಯಮಾಡಿ ಮಾನ್ಯ ಅಧ್ಯಕ್ಷರೆ, ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಬೇಕು. ಇಲ್ಲವೆಂದರೆ ಸದನದಿಂದ ವಾಕ್‌ಔಟ್ ಮಾಡುತ್ತೇನೆ.

ಅಧ್ಯಕ್ಷರು:- ಮಾತನಾಡಿ, ಶ್ರೀರಾಮರೆಡ್ಡಿಯವರೆ, ದಯಮಾಡಿ ಕುಳಿತುಕೊಳ್ಳಿ. ಎಷ್ಟು ಬಾರಿ ನಿಮಗೆ ಹೇಳುವುದು? ನಿಮಗೇನು ಅರ್ಥವಾಗುವುದಿಲ್ಲವೇನು?

ಶ್ರೀ ನೆಹರು ಚೆನ್ನಬಸಪ್ಪ ಓಲೀಕಾರ್:- ನಾವು ಕೇಳಿದರೆ ನಾಳೆ ನಾಳೆ ಎಂದು ಹೇಳುತ್ತಿದ್ದೀರಿ.

ಅಧ್ಯಕ್ಷರು:- ಹೌದು. ನೀವು ಕೇಳಿದ್ದಕ್ಕೆಲ್ಲಾ ಕೊಡುವುದಕ್ಕಾಗುತ್ತದೆ ಏನು? ಕುಳಿತುಕೊಳ್ಳಿ ದಯಮಾಡಿ. ಶ್ರೀರಾಮರೆಡ್ಡಿಯವರೆ ಮಾತನಾಡಿ.

3. ವಿತ್ತೀಯ ಕಾರ್ಯಕಲಾಪ

2005-06ನೇ ಸಾಲಿನ ಆಯವ್ಯಯ ಅಂದಾಜುಗಳ ಮೇಲೆ ಸಾಮಾನ್ಯ ಚರ್ಚೆ (ಮುಂದು)

ಶ್ರೀ ಜಿ.ವಿ. ಶ್ರೀರಾಮರೆಡ್ಡಿ (ಬಾಗೇಪಲ್ಲಿ):- ಸನ್ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ಉಪ ಮುಖ್ಯಮಂತ್ರಿಗಳಾದಂತಹ ಸಿದ್ದರಾಮಯ್ಯನವರು 2005-05ನೇ ಇಸವಿಯ ಆಯವ್ಯಯವನ್ನು ಈ ಸದನದಲ್ಲಿ ಮಂಡಿಸಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು ಬಹುಶಃ ಈ ರಾಜ್ಯದಲ್ಲಿ ಅತಿ ಹೆಚ್ಚು ಸಲ ಆಯವ್ಯಯವನ್ನು ಮಂಡಿಸಿರತಕ್ಕಂಥ ಸಚಿವರು ಎಂದು ಹೇಳಿ ನಾನು ಬಹಳ ಹೆಮ್ಮೆಯಿಂದ ಹೇಳುತ್ತೇನೆ. ಅವರು ಬಹಳ ಒಳ್ಳೆಯ ಸ್ನೇಹಿತರು. ಅವರ ಬಗ್ಗೆ ನನಗೆ ಬಹಳ ಗೌರವ ಇದೆ. ಅವರ ಪ್ರಾಮಾಣಿಕತೆ, ಅವರ ನೇರ ನುಡಿ ಬಗ್ಗೆ ನನಗೆ ಅಪಾರವಾದಂತಹ ವಿಶ್ವಾಸ ಹಾಗೂ ಗೌರವ ಕೂಡ ಇದೆ. ಈ ವರ್ಷ ಅವರು ಬಜೆಟ್‌ನ್ನು ಮಂಡಿಸಿದ್ದಾರೆ. ಆದರೆ ಮಾನ್ಯ ಸಿದ್ದರಾಮಯ್ಯನವರು, ನಾನು ಹೇಳತಕ್ಕಂಥ ವಿಚಾರದಲ್ಲಿ ಸತ್ಯ ಇದ್ದರೆ ಅದನ್ನು ಪರಿಗಣಿಸಬೇಕು ಎಂದು ನಾನು ತಮ್ಮ ಮುಖಾಂತರ ಅವರಿಗೆ ವಿನಂತಿಸಿಕೊಳ್ಳುತ್ತೇನೆ. Managing the economy of the State is different from developing the economy. ನೀವು ಬಹಳ ಸೊಗಸಾಗಿ ಆಯವ್ಯಯವನ್ನು ಮಂಡಿಸಿದ್ದೀರಿ. ಒಳ್ಳೆಯ ಆಶಯಗಳನ್ನು ವ್ಯಕ್ತಪಡಿಸಿದ್ದೀರಿ. ಕೆಲವು ಪ್ರಮುಖವಾದಂತಹ ಸಮಸ್ಯೆಗಳನ್ನು ಮತ್ತು ಗಂಭೀರವಾದಂತಹ ವಿಚಾರಗಳನ್ನು

ಗುರುತಿಸಿದ್ದೀರಿ. ಅದಕ್ಕೆ ಖಂಡಿತವಾಗಿ ನಿಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತೇನೆ. ಯಾವ್ಯಾವುದು ಬಹಳ ಗಂಭೀರವಾದದ್ದು, ಬಹಳ ಪ್ರಮುಖವಾದದ್ದು ಎಂಬ ವಿಚಾರಗಳನ್ನು ಗುರುತಿಸಿದ್ದೀರಿ ಎಂಬುದನ್ನು ನಾನು ಹೇಳುತ್ತೇನೆ.

(ಈ ಹಂತದಲ್ಲಿ ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನಲಂಕರಿಸಿದರು).

ಬಹಳ ಗಂಭೀರವಾದಂತಹ ವಿಚಾರಗಳನ್ನು ತಾವು ಬಜೆಟ್‌ನಲ್ಲಿ ಗಮನಿಸಿದ್ದೀರಿ. ಆದರೆ ನೀವು ರಾಜ್ಯದ ಅರ್ಥ ವ್ಯವಸ್ಥೆಯನ್ನು ಅಭಿವೃದ್ಧಿ ಪಡಿಸತಕ್ಕಂಥ ಆಯವ್ಯಯವನ್ನು ಮಂಡಿಸುವುದರ ಬದಲು ರಾಜ್ಯದಲ್ಲಿ ಇರತಕ್ಕಂಥ ಅರ್ಥ ವ್ಯವಸ್ಥೆಯನ್ನು ಬಹಳ ಉತ್ತಮರೀತಿಯಲ್ಲಿ ನಿರ್ವಹಿಸತಕ್ಕಂಥ ವಿಚಾರದಲ್ಲಿ ಹೆಚ್ಚು ಗಮನ ಕೊಟ್ಟಿದ್ದೀರಿ ಎನ್ನುವುದು ನನ್ನ ಮೊದಲನೆ ಅಭಿಪ್ರಾಯ. ಅದಕ್ಕೆ ನಾನು ಹೇಳಿದ್ದು, "Managing the economy of the State affairs is different from that of the developing the economy." Developing of the economy is totally different. ಅದರ ಬಗ್ಗೆ ಯಾವುದೇ ರೀತಿಯಾದಂತಹ ಪ್ರಸ್ತಾಪ ಇದರಲ್ಲಿ ಇಲ್ಲ. ಇದರಲ್ಲಿ ಯಾವುದೇ ರೀತಿಯಲ್ಲಿ ಅದರ ಬಗ್ಗೆ ಗಮನ ಕೊಟ್ಟಿಲ್ಲ. ಬಹಳ ಮುಖ್ಯವಾಗಿ ಅವರು ಹೇಳಿರತಕ್ಕಂಥಾದ್ದು ರಾಜ್ಯ ತನ್ನ ಆಂತರಿಕ ಉತ್ಪಾದನೆಯಲ್ಲಿ ಹೆಚ್ಚಳವನ್ನು ಕಂಡಿದೆ. 2004–05ರಲ್ಲಿ 11.7 ರಷ್ಟು ವೃದ್ಧಿಯಾಗಿದೆ ಎಂದು ಹೇಳಿದ್ದಾರೆ. ನಿಜ, ಆಗಿದೆ ನಾನು ಇಲ್ಲವೆಂದು ಹೇಳುತ್ತಿಲ್ಲ. ಆ ವೃದ್ಧಿ ಯಾವ ರೀತಿಯಲ್ಲಿ ಆಗಿದೆ? ಯಾವ ಆಧಾರದ ಮೇಲೆ ಆ ವೃದ್ಧಿಯಾಗಿದೆ? ನೀವು ಹೇಳಿರತಕ್ಕಂಥ ಪ್ರಕಾರ ಪ್ರಮುಖವಾದಂತಹ ಮೂರು ಆರ್ಥಿಕ ವಲಯಗಳೇನಿವೆ, ಅದರಲ್ಲಿ ಪ್ರಥಮವಾಗಿ ಕೃಷಿ, ಎರಡನೆಯದಾಗಿ ಕೈಗಾರಿಕೆ, ಮೂರನೆಯದು ಪೂರಕ ವಲಯ; ಸೇವಾ ವಲಯ ಎಂದರೆ ಸರ್ವೀಸ್ ಸೆಕ್ಟಾರ್. ಈ ಅಭಿವೃದ್ಧಿ ನಿಮಗೆ ಕಂಡಿರುವುದು it is in the service sector only. ಅದರಲ್ಲಿ ಬಂದಿರುವಂಥ ಅಭಿವೃದ್ಧಿ ಎಂತಹ ಅಭಿವೃದ್ಧಿ ಎಂದರೆ, ಎಂತಹ ಆರ್ಥಿಕ ಬೆಳವಣಿಗೆ ಎಂದರೆ it is a jobless growth. ಅದು ಉದ್ಯೋಗ–ರಹಿತವಾದಂತಹ ಬೆಳವಣಿಗೆಯಾಗಿದೆ. Jobless growth means the economy cannot survive at all. ಅದಕ್ಕೆ ನೋಬಲ್ ಪ್ರಶಸ್ತಿ ವಿಜೇತ ಪ್ರೊಫೆಸರ್ ಅಮಾರ್ತ್ಯ ಸೇನ್ ಒಂದು ಕಡೆ ಹೇಳುತ್ತಾರೆ. ಅವರು ಯಾವ ರೀತಿ ಹೇಳುತ್ತಾರೆ ಎಂದರೆ "The growth of an economy without jobs is like building a palace on the cards which will crumble down even for a lowest breeze wind." ಅಂದರೆ ಉದ್ಯೋಗರಹಿತವಾದಂತಹ ಯಾವುದೇ ಬೆಳವಣಿಗೆ it will collapse, crumble down like a palace built on the cards. ಆ ರೀತಿಯಾದಂತಹ ಬೆಳವಣಿಗೆಯನ್ನು ಕರ್ನಾಟಕ ರಾಜ್ಯದಲ್ಲಿ ಸಾಧಿಸಿದ್ದೇವೆ ಎಂದು ಹೇಳತಕ್ಕಂಥ ಸಂದರ್ಭದಲ್ಲಿ ನೀವು ಇನ್ನೊಂದು ಎಚ್ಚರಿಕೆ ಮಾತನ್ನು ಕೊಟ್ಟಿದ್ದೀರಿ. ಅದಕ್ಕೆ ಸಂತೋಷಪಡಬೇಕಾಗುತ್ತದೆ. ಆದರೆ ಎಚ್ಚರಿಕೆಯ ಮಾತನ್ನಾಡಿರತಕ್ಕಂಥ ನೀವು, ಆ ಎಚ್ಚರಿಕೆಯ

ಮಾತಿಗೆ ಆಧಾರವಾಗಿ ಕರ್ನಾಟಕ ರಾಜ್ಯದ ಆರ್ಥಿಕ ವ್ಯವಸ್ಥೆಯನ್ನು ಬೆಳೆಸುವುದಕ್ಕೆ ಪ್ರಯತ್ನ ಮಾಡತಕ್ಕಂಥ ಯಾವುದೇ ಕೆಲಸ ಮಾಡಿಲ್ಲ ಎನ್ನುವುದನ್ನು ಬಹಳ ಸ್ಪಷ್ಟವಾಗಿ ನೀವು ಗುರುತಿಸಬೇಕಾಗಿದೆ. ಅದನ್ನು ನೀವು ಗುರುತಿಸಿಲ್ಲ. ಬಹಳ ಪ್ರಮುಖವಾಗಿ ಇವತ್ತು ನೀವು ಬಹಳ ಚೆನ್ನಾಗಿ ಸಮಸ್ಯೆಯನ್ನು ಗುರುತಿಸಿದ್ದೀರಿ. ಹಣಕಾಸು, ಆಡಳಿತ ವ್ಯವಸ್ಥೆಯ ಜೀವದ್ರವ್ಯ. ಸರ್ಕಾರದ ನೀತಿ ನಿಲುವುಗಳಿಗೆ ಪೂರಕವಾಗಿ ಸರ್ಕಾರವು ಎಷ್ಟು ಪ್ರಮಾಣದಲ್ಲಿ ಹಣಕಾಸನ್ನು ಪೂರೈಸಬಲ್ಲದು ಎನ್ನುವುದು ರಾಜ್ಯದ ಹಣಕಾಸು ಆರೋಗ್ಯದ ಮೇಲೆ ಅವಲಂಬನೆ ಆಗಿದೆ, ಎಂದು ಹೇಳತಕ್ಕಂಥಾದ್ದು ನಿಜ ಇದೆ. ಆದರೆ ಇದಕ್ಕೆ ಪೂರಕವಾಗಿ ಬೇಕಾಗಿರತಕ್ಕಂಥ ಯಾವುದೇ ಕಾರ್ಯಕ್ರಮವನ್ನು ಬಜೆಟ್‌ನಲ್ಲಿ ನೀವು ಹೇಳಿಲ್ಲ. ಈ ಮಾತಿಗೆ ಪೂರಕವಾಗಿ ಯಾವುದೇ ರೀತಿಯಾದಂತಹ ಅಧಾರವನ್ನು ಇದರಲ್ಲಿ ನೀವು ಕೊಟ್ಟಿಲ್ಲ. ಮತ್ತೆ ಇನ್ನೊಂದು ಕಡೆ ಏನು ಹೇಳುತ್ತೀರಿ ನೀವು ಸಮಾನರ ನಡುವೆ ಮಾತ್ರ ಸಮಾನತೆ ಇರಲು ಸಾಧ್ಯ ಎನ್ನುವುದು ನನ್ನ ದೃಢವಾದ ನಂಬಿಕೆ. ಯಾರು ಈ ಸಮಾನರು? ಯಾವ ದಾರಿಯಲ್ಲಿ ಇವರು ಸಮಾನರು? ಸಮಾನರ ಮಧ್ಯೆ ಸಮಾನತೆ ಸಾಧಿಸಬೇಕೋ ಸಾಮಾನರು ಮತ್ತು ಅಸಮಾನರ ಮಧ್ಯೆ ಸಮಾನತೆಯನ್ನು ಸಾಧಿಸಬೇಕೋ? ಆರ್ಥಿಕ ವ್ಯವಹಾರ ಯಾವ ದೃಷ್ಟಿಯಲ್ಲಿ ಇರಬೇಕು ಎನ್ನುವುದನ್ನು ನೀವು ಆಲೋಚನೆ ಮಾಡಿ. ಆ ರೀತಿಯಲ್ಲಿ ಮಂಡಿಸಿರತಕ್ಕಂಥ ನಿಮ್ಮ ಬಜೆಟ್ ನಂಬರ್ ಒಂದು; ಕೃಷಿ ವಲಯದ ಬಗ್ಗೆ ನೀವು ಮಾತನಾಡತಕ್ಕಂಥ ಸಂದರ್ಭದಲ್ಲಿ ಏನು ಹೇಳಿದ್ದೀರಿ ಎಂದರೆ ಇವತ್ತು ಕೃಷಿ ವಲಯ ಬಹಳ ಬಡವಾಗಿದೆ. ಏಕೆ ಬಡವಾಗಿದೆ ಎಂದರೆ public investment is going down every day in agrarian sector. ಸಾರ್ವಜನಿಕ ಬಂಡವಾಳ ಹೂಡಿಕೆ ಕೃಷಿ ರಂಗದಲ್ಲಿ ಕಡಿಮೆಯಾಗುತ್ತಿದೆ ಎಂದು ಹೇಳಿದ್ದೀರಿ. ಸಾರ್ವಜನಿಕ ಬಂಡವಾಳ ಹೂಡಿಕೆ ಕೃಷಿ ರಂಗದಲ್ಲಿ ಕಡಿಮೆಯಾದಂತಹ ಸಂದರ್ಭದಲ್ಲಿ ಅದರ ಪರಿಣಾಮಗಳು ಏನಾಗಬಹುದು ಎನ್ನುವುದನ್ನು ನೀವು ಆಲೋಚನೆ ಮಾಡಲಿಲ್ಲ. ಅದನ್ನು ತುಂಬತಕ್ಕಂಥ ಪ್ರಯತ್ನವನ್ನು ಕೂಡ ಮಾಡಬೇಕೆಂದು ಹೇಳಿದ್ದೀರಿ. ನಿಮ್ಮ ಪ್ರಾಮಾಣಿಕತೆಗೆ ನಾನು ಒಪ್ಪುತ್ತೇನೆ. ಆದರೆ ತುಂಬತಕ್ಕಂಥ ಪ್ರಯತ್ನಕ್ಕೆ ಪೂರಕವಾಗಿ ಬೇಕಾದಂತಹ ಹಣವನ್ನು ಏಕೆ ಒದಗಿಸಲಿಲ್ಲ? ಇವತ್ತು ಕೇವಲ ಕೃಷಿ ರಂಗದ ಮೇಲೆ ಆಧಾರವಿದ್ದು, ಜೀವನ ಮಾಡುತ್ತಿರುವಂತವರ ಸಂಖ್ಯೆ, ನಮ್ಮ ದೇಶದ ಒಟ್ಟು ಜನಸಂಖ್ಯೆಯಲ್ಲಿ, ಶೇಕಡ 70ರಷ್ಟು ಜನರು ಇದ್ದಾರೆ. ಶೇಕಡ 70ರಷ್ಟು ಕೃಷಿ ರಂಗದಲ್ಲಿ ಜೀವನ ಮಾಡುವಂಥವರಿಗೆ ಆಯವ್ಯಯದಲ್ಲಿ 7 ಪೈಸೆ ಕೊಟ್ಟಿರುವಂಥಾದ್ದು. ಅಂದರೆ 70% of the population lives on agriculture and you spared only seven paise out of the total income. ಈ ನಿಮ್ಮ ಮಾತಿಗೆ public investment in agrarian sector is coming down ಎನ್ನತಕ್ಕಂಥ ಮಾತಿಗೆ ಹೀಗೆ ಪೂರಕವಾಗುತ್ತದೆಂಬುದನ್ನು ನೀವೇ ಹೇಳಬೇಕಾಗುತ್ತದೆ. ಎರಡನೆಯದಾಗಿ, ಇನ್ನೊಂದು ಕಡೆ ಬಹಳ ಗಂಭೀರವಾದಂತಹ ವಿಚಾರವನ್ನು ಇವರು ಹೇಳಿದ್ದಾರೆ. ಕೃಷಿ ವಲಯದಲ್ಲಿ ಈ ಬಾರಿ

ಸಾಧನೆಯನ್ನು ಮಾಡಿದ್ದೇನೆ. ಇಲ್ಲಿ ಹೆಚ್ಚು ಉತ್ಪಾದನೆ ಆಗಿದೆ. ಆದರೂ ಕೂಡ ರೈತರು ನಷ್ಟಕ್ಕೆ ಸಿಕ್ಕಿ ಹಾಕಿಕೊಂಡಿದ್ದಾರೆಂಬ ವಿಚಾರವನ್ನು ಬಜೆಟ್‌ನಲ್ಲಿ ಒಂದು ಕಡೆ ಹೇಳಿದ್ದಾರೆ. ಈ ಕಾರಣದಿಂದಾಗಿ ಸಂವೃದ್ಧ ಸುಗ್ಗಿಯ ವರ್ಷಗಳಲ್ಲೂ ಸಹ ಕೃಷಿ ಉತ್ಪನ್ನಗಳಿಗೆ ಬೇಡಿಕೆ ಹೆಚ್ಚಾಗದೆ, ರೈತರು ಬೆಲೆ ಕುಸಿತದಿಂದ ತೊಂದರೆಗೆ ಒಳಗಾಗುತ್ತಾರೆಂಬ ವಿಚಾರವನ್ನು ಗುರುತಿಸಿದ್ದಾರೆ. ಇದು ನಿಜ, ಏಕೆ ತೊಂದರೆಗೆ ಒಳಗಾಗುತ್ತಾರೆ? ಕೃಷಿ ಉತ್ಪನ್ನ ಹೆಚ್ಚಾದರೂ ಕೂಡ, ರೈತರು ನಾಶವಾಗಿದ್ದಾರೆಂಬುದಕ್ಕೆ, ನೀವು ಕಾರಣವನ್ನು ಏನೂ ಹೇಳಿಲ್ಲ. ಇದಕ್ಕೆ ನಿಜವಾದಂತಹ ಕಾರಣ ಏನೆಂದರೆ, ಕೃಷಿ ರಂಗದಲ್ಲಿ ಉತ್ಪಾದನೆಯಾಗುವಂತಹ ವಸ್ತುಗಳನ್ನು, ಕೊಂಡುಕೊಳ್ಳುವಂತಹ ಜನರ ಸಂಖ್ಯೆ ಕಡಿಮೆಯಾಗುತ್ತಿದೆ. That means, purchasing power of a common man is coming down everyday in and out. ಯಾವ ರಾಜ್ಯದಲ್ಲಿ, ಯಾವ ದೇಶದಲ್ಲಿ, ಸಾಮಾನ್ಯ ಜನರು ಕೊಂಡು ಕೊಳ್ಳುವಂತಹ ಶಕ್ತಿ ಕಡಿಮೆಯಾಗುತ್ತಾ ಹೋಗುತ್ತದೋ ಆ ರಾಜ್ಯದಲ್ಲಿ ಮತ್ತು ಆ ದೇಶದಲ್ಲಿ ಕೃಷಿ ರಂಗದಲ್ಲಿ ಆಗತಕ್ಕಂಥ ಉತ್ಪನ್ನಗಳಾಗಬಹುದು, ಕೈಗಾರಿಕೆ ರಂಗದಲ್ಲಿ ಆಗತಕ್ಕಂಥ ಉತ್ಪಾದನೆಗಳಾಗಬಹುದು. ಈ ಎರಡೂ ಕೂಡ ಸಂಪೂರ್ಣವಾಗಿ ಸ್ಥಗಿತಕ್ಕೊಳಗಾಗುತ್ತದೆ. ಆಗ ಬೆಲೆ ಕುಸಿತವಾಗುತ್ತದೆ. ಹಾಗಾಗಿ ಕೊಂಡು ಕೊಳ್ಳುವಂತಹ ಶಕ್ತಿ ಸಾಮಾನ್ಯ ಜನರಲ್ಲಿ ಕಡಿಮೆಯಾದಾಗ, ನೀವು ಎಷ್ಟೇ ಉತ್ಪಾದನೆಯನ್ನು ಮಾಡಿದರೂ ಕೂಡ, ಆ ಉತ್ಪಾದನೆ ಅದು ಸ್ಥಗಿತವಾಗುತ್ತದೆ. ಇದು ಸ್ಥಗಿತವಾಗುವ ಪರಿಣಾಮ ಏನು ಆಗುತ್ತದೆಂದರೆ, ಮುಂದಿನ ಉತ್ಪಾದನೆ ಸ್ಥಗಿತವಾಗುತ್ತದೆ. ಈ ಕೊಂಡುಕೊಳ್ಳುವಂತಹ ಶಕ್ತಿ ಸಾಮಾನ್ಯ ಜನರಿಗೆ ಬರಬೇಕಾದರೆ, ಆ ಕೊಂಡು ಕೊಳ್ಳುವಂತಹ ಶಕ್ತಿಯನ್ನು ಹೆಚ್ಚು ಮಾಡುವಂತಹ ಕಾರ್ಯಕ್ರಮಗಳನ್ನು ನೀವು ಬಜೆಟ್‌ನಲ್ಲಿ ಎಲ್ಲಿಯಾದರೂ ಪ್ರಸ್ತಾಪ ಮಾಡಿದ್ದೀರಾ? ಇದಕ್ಕೆ ಪೂರಕವಾದಂತಹ ಕಾರ್ಯಕ್ರಮಗಳನ್ನು ನೀವು ರೂಪಿಸಿದ್ದೀರಾ? ಅಂದರೆ to increase the purchasing power of a common man what is your programme? There is no programme. ಅದಕ್ಕೆ ನೀವು ಬಜೆಟ್‌ನಲ್ಲಿ ಹಿಂದಿನ ಎಲ್ಲಾ ಬಜೆಟ್‌ನಲ್ಲೂ ಕೂಡ, ಬಡತನ ನಿರ್ಮೂಲನಾ ಕಾರ್ಯಕ್ರಮಗಳು ಎಂಬ ಕೆಲವು ಘೋಷಣೆಗಳನ್ನು ಕೊಡುತ್ತಿದ್ದೀರಿ. ಆದರೆ ಈ ಬಜೆಟ್‌ನಲ್ಲಿ ಬಡತನವನ್ನು ನಿರ್ಮೂಲನಾ ಮಾಡತಕ್ಕಂಥ, ಸಾಮಾನ್ಯ ಜನರು ಕೊಂಡು ಕೊಳ್ಳುವಂತಹ ಶಕ್ತಿಯನ್ನು ಹೆಚ್ಚು ಮಾಡುವಂತಹ ಯಾವುದೇ ಕಾರ್ಯಕ್ರಮವನ್ನೂ ನೀವು ಬಜೆಟ್‌ನಲ್ಲಿ ಹೇಳಲಿಲ್ಲ. ನಾನು ಅದಕ್ಕೆ ಹೇಳಿದ್ದು ಇರತಕ್ಕಂಥ ಅರ್ಥ ವ್ಯವಸ್ಥೆಯನ್ನು ಚೆನ್ನಾಗಿ ಮ್ಯಾನೇಜ್ ಮಾಡುತ್ತಿದ್ದೆವೆಂಬುದನ್ನು ಹೇಳಿದ್ದೀರಿ. ನನಗೆ ಗೊತ್ತಿದೆ, ತಾವು ಪ್ರಾಮಾಣಿಕವಾದಂತಹ ಅರ್ಥ ಸಚಿವರು, ಪ್ರಾಮಾಣಿಕವಾದಂತಹ ಕಾಳಜಿ ಇದೆ, ಪ್ರಾಮಾಣಿಕತೆ ಇದೆ. You are having a very good staff with you in the Finance Department as far as my knowledge goes. Your department is well managed. But what is the point? The actual point is, what is

your programme for eliminating the poverty? To eliminate the poverty, you have not given any programme in your budget. ಅದೇ ರೀತಿಯಲ್ಲಿ ಮಾನ್ಯ ಸಿದ್ದರಾಮಯ್ಯನವರಿಗೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಶ್ರೀ ಬಿ.ಎಂ. ದಾಂಡೇಕರ್‌ರವರು ಇವರು ತಮಗೂ ಗೊತ್ತಿರಬಹುದು. ಇವರು ಒಬ್ಬ ಸುಪ್ರಸಿದ್ಧ ಗಾಂಧೀವಾದಿ ಅರ್ಥಶಾಸ್ತ್ರಜ್ಞರು 2003ನೇ ಇಸವಿಯಲ್ಲಿ ಒಂದು ಲೇಖನವನ್ನು ಬರೆಯುತ್ತಾರೆ. ಶ್ರೀ ಬಿ.ಎಂ. ದಾಂಡೇಕರ್ ಬಗ್ಗೆ ಸುಮಾರು ಜನರಿಗೆ ಗೊತ್ತಿದೆ. He is the authority on Indian poverty and he is the only economist in India who can speak authoritatively on the Below Poverty Line. He is the only authority among the Indian economists. ಅವರು ಏನು ಹೇಳುತ್ತಾರೆಂದರೆ, ನಮ್ಮ ದೇಶದಲ್ಲಿರತಕ್ಕಂಥ ಪ್ರತಿಯೊಬ್ಬ ಮನುಷ್ಯನಿಗೂ 1 ವರ್ಷಕ್ಕೆ 4 ಮೀಟರ್ ಬಟ್ಟೆಯನ್ನು ಕೊಂಡು ಕೊಳ್ಳುವಂತಹ ಶಕ್ತಿ ಬಂದರೆ, ನಮ್ಮ ದೇಶದಲ್ಲಿ ಇವತ್ತು ಎಷ್ಟು ಟೆಕ್ಸ್‌ಟೈಲ್ಸ್ ಮಿಲ್ ಇದೆಯೋ, ಅದಕ್ಕೆ 10ರಷ್ಟು ಟೆಕ್ಸ್‌ಟೈಲ್ಸ್ ಮಿಲ್‌ಗಳನ್ನು ಸರ್ಕಾರ ಸ್ಥಾಪನೆ ಮಾಡಬೇಕಾಗುತ್ತದೆಂದು ಹೇಳುತ್ತಾರೆ. ಅಂದರೆ ಇದರ ಅರ್ಥವೇನೆಂದರೆ, ಇವತ್ತು ನಮ್ಮ ದೇಶದಲ್ಲಿರುವಂತಹ ಬಹುಸಂಖ್ಯಾತ ಜನರಿಗೆ ಒಂದು ವರ್ಷಕ್ಕೆ 4 ಮೀಟರ್ ಬಟ್ಟೆಯನ್ನು ಕೊಂಡು ಕೊಳ್ಳುವ ಶಕ್ತಿ ಇಲ್ಲದೇ ಇರುವ ಕಾರಣಕ್ಕೆ ನಮ್ಮ ದೇಶದಲ್ಲಿರುವಂತಹ ಟೆಕ್ಸ್‌ಟೈಲ್ಸ್ ಮಿಲ್‌ಗಳು ಮುಚ್ಚಿ ಹೋಗಿದೆ. ಈ ದಾವಣಗೆರೆ ಟೆಕ್ಸ್‌ಟೈಲ್ಸ್ ಮಿಲ್ಸ್ ಏನಾಯಿತು? Once we were calling it Lancashire of India. ಈ ಬಟ್ಟೆ ಮಿಲ್‌ಗಳು ಏನಾಯಿತು? ಏಕೆ ಮುಚ್ಚಿ ಹೋಯಿತು. ಅಹಮದಾಬಾದ್ ಟೆಕ್ಸ್‌ಟೈಲ್ಸ್ ಮಿಲ್ ಏನಾಯಿತು? ಬಾಂಬೆ ಟೆಕ್ಸ್‌ಟೈಲ್ಸ್ ಮಿಲ್ ಏನಾಯಿತು? ಅಂದರೆ ಇಲ್ಲಿ ಎಲ್ಲರಿಗೂ ಬಟ್ಟೆ ಇದೆಯೆಂದು ಅರ್ಥನಾ? ನಾನು ಏಕೆ ಈ ಉದಾಹರಣೆಯನ್ನು ಕೊಟ್ಟಿದ್ದೇನೆಂದರೆ, ಸಾಮಾನ್ಯ ಜನರ ಕೊಂಡು ಕೊಳ್ಳುವ ಶಕ್ತಿ ಹೆಚ್ಚು ಆಗದೇ, ಯಾವುದೇ ಆರ್ಥಿಕ ವ್ಯವಸ್ಥೆದ ವೃದ್ಧಿಯಾಗುವುದಕ್ಕೆ ಸಾಧ್ಯವಿಲ್ಲ. ಇನ್ನು ಎರಡನೆಯದಾಗಿ ನೀವು ಕೃಷಿ ರಂಗದಲ್ಲಿ ಪ್ರಸ್ತಾಪ ಮಾಡುತ್ತಾ ಏನು ಹೇಳಿದ್ದೀರಿ. ಶೇಕಡಾ ಕೃಷಿ ಯೋಗ್ಯವಾದಂತಹ ಭೂಮಿ, ಕರ್ನಾಟಕ ರಾಜ್ಯದಲ್ಲಿ 70ರಷ್ಟು ಭೂಮಿ ನೀರಾವರಿಗೆ ಒಳಪಡುವುದಕ್ಕೆ ಇದುವರೆಗೂ ಸಾಧ್ಯವಾಗಿಲ್ಲವೆಂದು ಹೇಳಿದ್ದೀರಿ. Right. Correctly identified the issue. Correctly assessed the point. But the point is, ಶೇಕಡ 70ರಷ್ಟು ಕೃಷಿಗೆ ಯೋಗ್ಯವಾದಂತಹ ಭೂಮಿಯನ್ನು ನೀರಾವರಿಗೆ ಒಳಪಡಿಸಬೇಕಾದಂತಹ ನೀರಾವರಿ ಯೋಜನೆಗಳನ್ನು, ಹೊಸ ನೀರಾವರಿ ಯೋಜನೆಗಳನ್ನು ರೂಪಿಸುವಂಥಾದ್ದಕ್ಕೆ ಇದರಲ್ಲಿ ನೀವು ಏನಾದರೂ ಪ್ರಯತ್ನಗಳನ್ನು ಮಾಡಿದ್ದಿರಾ? ನೀವು ಏನು ಹೇಳಿದ್ದೀರಿ, ಹಿಂದಿನ ವರ್ಷದ ಬಜೆಟ್‌ನಲ್ಲಿ, ನೀರಾವರಿ ವಲಯಕ್ಕೆ ಎಷ್ಟು ಹಣವನ್ನು ಕೊಟ್ಟಿದ್ದೇವೊ, ಅದಕ್ಕಿಂತ 500, 600 ಕೋಟಿ ರೂಪಾಯಿಗಳನ್ನು ಹೆಚ್ಚಿಗೆ ಕೊಟ್ಟಿದ್ದೇವೆಂದು ಹೇಳಿದ್ದೀರಿ. ಹೌದು ನಾನು ಇಲ್ಲವೆಂದು ಹೇಳುವುದಿಲ್ಲ. ಅದನ್ನು ಏತಕ್ಕೆ ಕೊಟ್ಟಿದ್ದೀರಾ, To

complete the on-going projects. ಇವತ್ತು ಕರ್ನಾಟಕ ರಾಜ್ಯದಲ್ಲಿ on-going projects and completed projects ಇವೆರಡೂ ಸೇರಿದರೂ ಕೂಡ, ನಿಮ್ಮ ಅಂಕಿ ಸಂಖ್ಯೆಗೆ ತಾಳೆಯಾಗುವುದಿಲ್ಲ. ಇನ್ನು ಶೇಕಡ 70ರಷ್ಟು ಕೃಷಿಗೆ ಯೋಗ್ಯವಾದಂತಹ ಭೂಮಿ ನಿಂತು ಹೋಗಿ ಬಿಡುತ್ತದೆ. ಆ ಶೇಕಡ 70ರಷ್ಟು ಕೃಷಿಗೆ ಯೋಗ್ಯವಾದಂತಹ ಭೂಮಿ ನೀರಾವರಿಗೆ ಒಳಪಡಿಸಬೇಕಾದರೆ, ನೀವು ಹೊಸ ನೀರಾವರಿ ಯೋಜನೆಗಳನ್ನು ಯಾವುದನ್ನೂ ರೂಪಿಸಲಿಲ್ಲ. ಹೊಸ ನೀರಾವರಿ ಯೋಜನೆಗಳಿಗೆ ನೀವು ಹಣವನ್ನು ತೆಗೆದು ಇಡಲಿಲ್ಲ. ಇದು ಮೊದಲನೆಯದು. ಇನ್ನು ಎರಡನೆಯದಾಗಿ ಈ ಶೇಕಡ 70ರಷ್ಟು ಭೂಮಿ ನೀರಾವರಿಯಿಂದ ಹೊರಗಡೆ ಇದೆ. ಆ ಶೇಕಡ 70ರಷ್ಟು ಭೂಮಿಯಲ್ಲಿ ಶೇಕಡ 60ರಷ್ಟು ಸಣ್ಣ ನೀರಾವರಿಗೆ ಒಳಪಡುವಂಥಾದ್ದು. ಆ ಸಣ್ಣ ನೀರಾವರಿಗೆ ಒಳಪಡುವಂತಹ ಆ ಭೂಮಿಯನ್ನು ನೀವು ಈ ಸಣ್ಣ ನೀರಾವರಿಗೆ ಎಷ್ಟು ಹಣವನ್ನು ತೆಗೆದಿಟ್ಟಿರುವಂತಹದ್ದರ ಬಗ್ಗೆ ಆಲೋಚನೆಯನ್ನು ಮಾಡಿ. ಇವತ್ತು ವಾಸ್ತವವಾಗಿ ಕರ್ನಾಟಕ ರಾಜ್ಯದಲ್ಲಿ ಕೃಷಿ ಯೋಗ್ಯವಾದಂತಹ ಭೂಮಿಯನ್ನು ನೀರಾವರಿಗೆ ಒಳಪಡಿಸಬೇಕೆಂಬ ಪ್ರಾಮಾಣಿಕತೆ ನಮ್ಮಲ್ಲಿ ಯಾರಿಗಾದರೂ ಇದ್ದರೆ, ಕರ್ನಾಟಕ ರಾಜ್ಯದಲ್ಲಿ ಸಣ್ಣ ನೀರಾವರಿಯಿಂದಲೇ, ಒಟ್ಟು ಕೃಷಿ ಯೋಗ್ಯವಾದಂತಹ ಭೂಮಿ ಶೇಕಡ 60ರಷ್ಟು ಸಣ್ಣ ನೀರಾವರಿಗೆ ಒಳಪಡುತ್ತದೆ. ನೀವು ಅದನ್ನು ಅಭಿವೃದ್ಧಿ ಪಡಿಸದೇ, ಕೃಷಿ ಯೋಗ್ಯವಾದಂತಹ ಒಟ್ಟು ಭೂಮಿಯನ್ನು ನೀರಾವರಿಗೆ ಒಳಪಡಿಸುವುದಕ್ಕೆ ಸಾಧ್ಯವಾಗುವುದಿಲ್ಲ. ಆದರೆ, ನೀರಾವರಿಗೆ ನೀವು ಹಣವನ್ನು 2004–05ರಲ್ಲಿ 287 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಈಗ 441 ಕೋಟಿ ರೂಪಾಯಿಗಳನ್ನು ಮಾಡಿದ್ದೀರಿ. It is almost, ಇಲ್ಲಿ 150 ಕೋಟಿ ರೂಪಾಯಿಗಳನ್ನು ಜಾಸ್ತಿ ಕೊಟ್ಟಿದ್ದೀರಿ. But what is the percentage of the land which will come under the minor irrigation and what is the percent of the amount you have spared in the budget? ಇದನ್ನು ನೀವು ನೋಡಿದಾಗ, ನಿಮ್ಮ ಕೃಷಿ ವಲಯವನ್ನು ಅಭಿವೃದ್ಧಿಪಡಿಸುವುದಕ್ಕೆ, ಬೇಕಾಗಿರುವಂತಹ ಮೂಲಭೂತ ಅಂಶಗಳನ್ನು ನೀವು ಪರಿಗಣನೆಗೆ ತೆಗೆದುಕೊಂಡಿಲ್ಲ. ಬರಗಾಲ ಬಂತು ಅದಕ್ಕೊಂದಷ್ಟು ದುಡ್ಡು ಹೋಯಿತು. ಇದಕ್ಕೊಂದಷ್ಟು ದುಡ್ಡು ಹೋಯಿತು. This is all managing the economy. But what is the point of developing the economy developing the agriculture? ಬಹಳ ಪ್ರಮುಖವಾಗಿ ಇವತ್ತು ಕೃಷಿ ರಂಗದಲ್ಲಿ ಮೂಲಭೂತವಾದಂಥ ಭೂಮಿ ಪ್ರಶ್ನೆ ಇದೆ. ಭೂಮಿಯ ಪ್ರಶ್ನೆ ಹೇಗೆ ಮೂಲಭೂತವಾಗುತ್ತದೆಂದರೆ, ಭೂಮಿ ಮತ್ತು ನೀರು ಇವೆರಡನ್ನೂ ಸರಿಯಾದ ರೀತಿಯಲ್ಲಿ ಹಂಚಿಕೆಮಾಡದಿದ್ದರೆ ಯಾವುದೇ ದೇಶದ ಕೃಷಿರಂಗ ಅಭಿವೃದ್ಧಿಯಾಗುವುದಕ್ಕೆ ಸಾಧ್ಯವಾಗುವುದಿಲ್ಲ. ಭೂಮಿಯ ಪ್ರಶ್ನೆಯನ್ನು ತೆಗೆದುಕೊಂಡರೆ, ನೀವು ಇವತ್ತಿಗೂ ಕೂಡ ಬಗರ್ ಹುಕುಂ ಸಾಗುವಳಿ ಸಮಿತಿಗಳನ್ನು ರಚನೆ ಮಾಡಲು ಆಗಿಲ್ಲ. ಕೃಷಿ ಕಾರ್ಮಿಕರಿಗೆ ಕೆಲಸ ಒದಗಿಸತಕ್ಕಂಥ ಕಾರ್ಯಕ್ರಮವನ್ನು ರೂಪಿಸಲಿಲ್ಲ. ಅವರು ಗುಳೇ ಹೋಗುತ್ತಿದ್ದಾರೆ. ಇದೆಲ್ಲವನ್ನೂ

ನೀವು ನೋಡುತ್ತಿದ್ದೀರಿ. I am not going to that part of politics. I want only the economic condition of the people. ಹಾಗಾಗಿ, ಕೃಷಿ ವಲಯದಲ್ಲಿರತಕ್ಕಂಥ ಶೇಕಡ 78ರಷ್ಟು ಜನರ ಬದುಕಿಗೆ ಸಂಬಂಧಪಟ್ಟ ಹಾಗೆ ಅದಕ್ಕೆ ಬೇಕಾಗಿರತಕ್ಕಂಥ ಮೂಲಭೂತ ಸೌಕರ್ಯಗಳನ್ನು ಒದಗಿಸತಕ್ಕಂಥ, ಇನ್‌ಫ್ರಾಸ್ಟ್ರಕ್ಚರ್ ಡೆವೆಲಪ್ ಮಾಡತಕ್ಕಂಥ ಕಾರ್ಯಕ್ರಮಗಳನ್ನು ನಿಮ್ಮ ಬಜೆಟ್‌ನಲ್ಲಿ ನೀವು ಇಡಲಿಲ್ಲ. ರೈತರ ಬಡ್ಡಿ ಮನ್ನಾ ಮಾಡುತ್ತಿದ್ದೇವೆ ಎಂದು ಹೇಳಿದಿರಿ. ಅದಕ್ಕೆ ಒಂದು ಕಂಡೀಷನ್ ಹಾಕಿದ್ದೀರಿ. ಹಾಗೆ ಕಂಡೀಷನ್ ಹಾಕಿರುವುದರಿಂದ ಬಹುಸಂಖ್ಯಾತ ರೈತರಿಗೆ ಅದರಿಂದ ಪ್ರಯೋಜನವಾಗುತ್ತಿಲ್ಲ. ಇಷ್ಟನೇ ವರ್ಷದಿಂದ ಇಷ್ಟನೇ ವರ್ಷದವರೆಗೆ ತೆಗೆದುಕೊಂಡಿರತಕ್ಕಂಥ ಸಾಲದ ಬಡ್ಡಿಯನ್ನು, ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುತ್ತೇವೆ ಎಂದು ಹೇಳಿದಿರಿ. 2001ರಿಂದ 2004ನೇ ಮಾರ್ಚ್ 31ಕ್ಕೆ ಕಟ್–ಆಫ್ ಡೇಟ್ ಎಂದು ಇಟ್ಟಿದ್ದೀರಿ. ಆ ರೇಂಜ್‌ನಲ್ಲಿ ಬರತಕ್ಕಂಥ ರೈತರ ಬಡ್ಡಿಯನ್ನು ಮನ್ನಾ ಮಾಡುವುದರಿಂದ, ಬಹುಸಂಖ್ಯಾತ ರೈತರಿಗೆ ಅದರಿಂದೇನೂ ಪ್ರಯೋಜನವಾಗುವುದಿಲ್ಲ. ಒಂದು ವಿಭಾಗದ ರೈತರಿಗೆ, ಅಂದರೆ ಕೆಲವರಿಗೆ ಮಾತ್ರ ಅದರಿಂದ ಪ್ರಯೋಜನವಾಗುತ್ತದೆಯೇ ಹೊರತು ಹೆಚ್ಚಿನ ರೈತರಿಗೆ ಅದರಿಂದ ಯಾವುದೇ ರೀತಿಯಾದಂಥ ಪ್ರಯೋಜನವಾಗುವುದಿಲ್ಲ. ಇನ್ನು, ಬೀಜಗಳ ಬಗ್ಗೆ ಹೇಳುವುದಾದರೆ, ನೀವು 19ನೇ ಪುಟದಲ್ಲಿ ಕ್ರಮ ಸಂಖ್ಯೆ 37ರಲ್ಲಿ "ರೈತರಿಗೆ ಕಡಿಮೆ ಬೆಲೆಯಲ್ಲಿ ಉತ್ತಮ ಕೃಷಿ ಸಲಕರಣೆಗಳನ್ನು, ಗೊಬ್ಬರ ಹಾಗೂ ಬೀಜಗಳನ್ನು ವಿತರಿಸುವ ಅಗತ್ಯವಿದೆ. ಎಂದು ಹೇಳಿದ್ದೀರಿ. ಅಂದರೆ, agricultural equipments including seeds. ಮಾನ್ಯ ಸಿದ್ದರಾಮಯ್ಯನವರೆ, ನೀವು ಕೇಂದ್ರ ಬಜೆಟ್‌ನ ಬಗ್ಗೆ ಇದರಲ್ಲಿ ಮಾತನಾಡಿದ್ದೀರಿ. But unfortunately you have forgotten that the Central Government is bringing the patent Act. Now, that Patent Bill is coming before the Parliament. ಪೇಟೆಂಟ್ ಬಿಲ್‌ನ ಎಲ್ಲಾ ವಿವರಗಳನ್ನು ನಾನು ನಿಮಗೆ ಹೇಳಲು ಹೋಗುವುದಿಲ್ಲ. As far as the ownership of the seed is concerned. ನಾನು ಇವತ್ತು ನಿಮಗೆ ಈ ಸದನದಲ್ಲಿ ಹೇಳುತ್ತಿದ್ದೇನೆ. ನಮ್ಮ ಭಾರತ ದೇಶದಲ್ಲಿ, ಆ ಪೇಟೆಂಟ್ ಬಿಲ್ ಪಾರ್ಲಿಮೆಂಟ್ ಮುಂದೆ ಬಂದು ಆಕ್ಸೆಪ್ಟ್ ಆದರೆ, the whole agricultural economy will collapse like democratic republic of Somalia. ಏಕೆಂದರೆ, ಸೀಡ್ ಟೆಕ್ನಾಲಜಿ ಮೇಲೆ ವಿದೇಶೀ ಬಹುರಾಷ್ಟ್ರೀಯ ಕಂಪನಿಗಳು ಸ್ವಾಮ್ಯವನ್ನು ಪಡೆಯತಕ್ಕಂಥಾದ್ದಕ್ಕೆ ಅವಕಾಶ ಕೊಡತಕ್ಕಂಥಾದ್ದು ಪೇಟೆಂಟ್ ಬಿಲ್‌ನಲ್ಲಿ ಬರತಕ್ಕಂಥ ಬಹಳ ಮುಖ್ಯವಾದ ಅಂಶ. ಅಂದರೆ, ನಮ್ಮ ದೇಶಕ್ಕೆ ಯಾವ ವಸ್ತುಗಳು ಅಗತ್ಯವಿದೆಯೋ, ಅದನ್ನು ಉತ್ಪಾದನೆ ಮಾಡತಕ್ಕಂಥ ಹಕ್ಕನ್ನು ನಾವು ಕಳೆದುಕೊಳ್ಳುತ್ತೇವೆ. ಅಂದರೆ, ನಮ್ಮ ರೈತರು ಪರಂಪರಾಗತವಾಗಿ ಏನು ಬಿತ್ತನೆ ಬೀಜಗಳನ್ನು ತಯಾರು ಮಾಡುತ್ತಿದ್ದರು. ಉಪಯೋಗಿಸುತ್ತಿದ್ದರು, ಹಾಗೆ ಮಾಡುವ ಹಕ್ಕನ್ನೂ ಕೂಡ ರೈತರು ಕಳೆದುಕೊಳ್ಳುತ್ತಾರೆ. ಯಾವ ರೈತನ ಭೂಮಿಯಲ್ಲಿ ಏನು ಬೆಳೆ ಬೆಳೆಯಬೇಕು ಎನ್ನತಕ್ಕಂಥಾದ್ದನ್ನು ನಾಳೆಯ ದಿವಸ

ಬಹುರಾಷ್ಟ್ರೀಯ ಕಂಪನಿಗಳು ತೀರ್ಮಾನ ಮಾಡುತ್ತವೆಯೇ ಹೊರತು ಅದನ್ನು ತೀರ್ಮಾನ ಮಾಡುವವರು ನಮ್ಮ ರಾಜ್ಯದ ರೈತರಲ್ಲ. ಅದನ್ನು ನೀವು ಇಲ್ಲಿ ಪ್ರಸ್ತಾಪವೇ ಮಾಡಲಿಲ್ಲ. ಅದರ ಅಪಾಯದ ಬಗ್ಗೆ ನೀವು ಎಚ್ಚರಿಕೆಯನ್ನೂ ಕೊಡಲಿಲ್ಲ. ಅದರ ಅಪಾಯದ ಬಗೆಗಾದರೂ ನೀವು ಇದರಲ್ಲಿ ಗಮನ ಕೊಡಬೇಕಾಗಿತ್ತು.

ಶ್ರೀ ಸಿದ್ದರಾಮಯ್ಯ:– ಅದು ಇನ್ನೂ ಪಾರ್ಲಿಮೆಂಟಿನಲ್ಲಿ ಇಂಟ್ರೊಡ್ಯೂಸ್ ಆಗಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅದು ಇಂಟ್ರೊಡ್ಯೂಸ್ ಆಗುತ್ತದೆ, ಎಲ್ಲಿಗೂ ಹೋಗುವುದಿಲ್ಲ. ನಾನು ಹೇಳುತ್ತಿರುವುದೇನೆಂದರೆ, ನೀವು ಭವಿಷ್ಯವನ್ನು ನೋಡಬೇಕಾಗಿತ್ತು. ನಂತರ, ಕ್ರಮ ಸಂಖ್ಯೆ 38ರಲ್ಲಿ, 'ಕೃಷಿಯಲ್ಲಿ ಅಂತರರಾಷ್ಟ್ರೀಯ ಸ್ಪರ್ಧೆ ಎದುರಿಸಲು ನಮ್ಮ ರೈತರನ್ನು ಸಜ್ಜುಗೊಳಿಸುವುದು ಅಗತ್ಯವಾಗಿದೆ ಎಂದು ಹೇಳಿದ್ದೀರಿ. ಉದಾಹರಣೆಗೆ, ನಾನು ಒಂದೇ ಒಂದು ಅಂಶವನ್ನು ನಿಮ್ಮ ಗಮನಕ್ಕೆ ತರುತ್ತೇನೆ, ನಾನು ಹೆಚ್ಚು ವಿವರಗಳಿಗೆ ಹೋಗುವುದಿಲ್ಲ. ಅಂತರರಾಷ್ಟ್ರೀಯ ಮಟ್ಟದಲ್ಲಿ ನಮ್ಮ ರೈತರು ಸ್ಪರ್ಧೆ ಮಾಡುವುದು ಅಸಾಧ್ಯವಾದ ಕೆಲಸ. ಏಕೆಂದರೆ, ಬಾಸುಮತಿ ಅಕ್ಕಿಗೆ ಅಮೇರಿಕಾ ದೇಶದಲ್ಲಿ ಪೇಟೆಂಟ್ ರೈಟ್ ಮತ್ತು ಸಬ್ಸಿಡಿ ಇದೆ. ಅಮೇರಿಕಾದಲ್ಲಿ ಉತ್ಪತ್ತಿಯಾಗತಕ್ಕಂಥ ಬಾಸುಮತಿ ಅಕ್ಕಿ ನಮ್ಮ ದೇಶದ ಮಾರುಕಟ್ಟೆಗೆ ಅಥವಾ ನಮ್ಮ ರಾಜ್ಯದ ಮಾರುಕಟ್ಟೆಗೆ ಬಂದರೆ, ಆ ಬಾಸುಮತಿ ಅಕ್ಕಿ ಒಂದು ಕೆ.ಜಿ.ಗೆ 12 ರೂಪಾಯಿಯಂತೆ ಮಾರಾಟವಾಗುತ್ತದೆ. ಆದರೆ ನಮ್ಮ ದೇಶದಲ್ಲಿ ಬೆಳೆಯತಕ್ಕಂಥ ಬಾಸುಮತಿ ಅಕ್ಕಿಯನ್ನು ನಮ್ಮ ದೇಶದ ರೈತರು ಒಂದು ಕೆ.ಜಿ.ಗೆ 12 ರೂಪಾಯಿಗಳಿಗೆ ಮಾರಾಟ ಮಾಡಿದರೆ, ಅವರು ನೇಣು ಹಾಕಿಕೊಳ್ಳದೇ ಬೇರೆ ದಾರಿಯೇ ಇಲ್ಲ. ಏಕೆಂದರೆ, The investment cost in India to grow one Basumathi rice is double than the U.S. cost. This is No. 1. ಎರಡನೆಯದಾಗಿ, ಅಮೇರಿಕಾದ ಸರ್ಕಾರ ಅಲ್ಲಿನ ರೈತರಿಗೆ, ಒಂದು ವರ್ಷಕ್ಕೆ ಒಂದು ಹೆಕ್ಟೇರ್ ಭೂಮಿಗೆ 37 ಸಾವಿರ ಡಾಲರ್ ಹಣವನ್ನು ಸಬ್ಸಿಡಿಯಾಗಿ ಕೊಡುತ್ತದೆ. ಹೀಗಿರುವುದರಿಂದ, ಅಲ್ಲಿನ ರೈತರು ಅಷ್ಟು ಕಡಿಮೆ ದರಕ್ಕೆ ಮಾರಾಟ ಮಾಡಿದರೂ ಕೂಡ ಅವರಿಗೆ ನಷ್ಟವಾಗುವುದಿಲ್ಲ. ಆದರೆ ನಮ್ಮ ದೇಶದಲ್ಲಿ ನೀವು ಏನು ಮಾಡಿದಿರಿ? ಇದ್ದಂಥ ಸಬ್ಸಿಡಿಗಳನ್ನು ಕಿತ್ತು ಹಾಕಿದಿರಿ. ಅಲ್ಲದೆ ನಮ್ಮ ದೇಶದ ರೈತರಿಗೆ ಇನ್‌ವೆಸ್ಟ್‌ಮೆಂಟ್ ಕಾಸ್ಟ್ ಜಾಸ್ತಿಯಾಗುತ್ತದೆ. ಹೀಗಾಗಿ ನಮ್ಮ ರೈತರ ಅವರ ಜೊತೆ ಸ್ಪರ್ಧೆ ಮಾಡಲು ಆಗುವುದಿಲ್ಲ ಅವರು ನೇಣು ಹಾಕಿಕೊಳ್ಳದೇ ಬೇರೆ ದಾರಿಯೇ ಇಲ್ಲ. This is only one example. ಸ್ಪರ್ಧೆ ಮಾಡಲು ತಯಾರು ಮಾಡಬೇಕು ಎಂದು ನೀವು ಹೇಳಿದಿರಲ್ಲಾ, ಅದಕ್ಕೆ ಸಂಬಂಧಪಟ್ಟಂತೆ ನಾನು ಹೇಳುತ್ತಿರುವಂಥ ಒಂದು ವಿಚಾರವಿದು. ಆ ರೀತಿಯಲ್ಲಿ ಸ್ಪರ್ಧೆ ಮಾಡಲು ಸಾಧ್ಯವಿದೆಯೇ? ಅದಕ್ಕೆ ಬೇಕಾದಂಥ ಏನು ತಯಾರಿಯನ್ನು ನಡೆಸಿದ್ದೀರಿ? ಸಂಶೋಧನೆಗೆ ಹೆಚ್ಚು ಹಣವನ್ನು ಅಂದರೆ 20 ಕೋಟಿ ರೂಪಾಯಿಗಳನ್ನು ನಾನು ಕೊಟ್ಟಿದ್ದೇನೆ ಎಂದು ಹೇಳಿದಿರಿ. ಆದರೆ, ನಿಮ್ಮ ಸಂಶೋಧನೆಯೇ ಕಿತ್ತುಕೊಂಡು ಹೋಗುತ್ತಿದೆ. ಅವರು ನಿಮ್ಮ ಹಕ್ಕನ್ನೇ ಕಿತ್ತುಕೊಳ್ಳುತ್ತಾರೆ. ಒಂದು ವೇಳೆ, ಕಿತ್ತುಕೊಳ್ಳಲಿಲ್ಲ. ಅದು ಇನ್ನೂ ಕೇವಲ ಊಹಾಪೋಹಗಳು ಎಂದು ಇಟ್ಟುಕೊಳ್ಳಿ. Right,

agreed. ಅದು ಊಹಾಪೋಹಗಳು ಎಂದು ಆದರೂ ಕೂಡ, 20 ಕೋಟಿ ರೂಪಾಯಿಗಳನ್ನು ಸಂಶೋಧನೆಗೆ ಇಟ್ಟಿದ್ದೇವೆ ಎಂದು ಹೇಳಿದಿರಿ. ಈ ಸಂಶೋಧನೆಗಳಿಂದ ಹೊರ ಬೀಳತಕ್ಕಂಥ ಫಲಿತಾಂಶದ ಮೇಲೆ ನಮ್ಮ ಸರ್ಕಾರಗಳಿಗೆ ಯಾವುದಕ್ಕೂ ಈಗಿರತಕ್ಕಂಥ Trims Act ಪ್ರಕಾರ ಅಧಿಕಾರ ಬರುವುದಿಲ್ಲ. ಅದರ ಪ್ರಯೋಜನ ನಮ್ಮ ರೈತರಿಗೆ ಸಿಗಲಿಕ್ಕೆ ಸಾಧ್ಯವಿಲ್ಲ. ಎರಡನೆಯದಾಗಿ, ಒಟ್ಟಾರೆಯಾಗಿ ಕೃಷಿ ರಂಗದಲ್ಲಿ ಪ್ರಮುಖ ಪಾತ್ರವನ್ನು ವಹಿಸತಕ್ಕಂಥ ಕೃಷಿ ಸಲಕರಣೆಗಳು, ಕೃಷಿ ಉಪಕರಣಗಳ ಬೆಲೆಗಳು ಇವತ್ತು ಸಂಪೂರ್ಣವಾಗಿ ಗಗನಕ್ಕೆ ಹೋಗಿವೆ. ಇದರ ಅರ್ಥ ಏನೆಂದರೆ, the imbalance between the agrarian products and the industrial products has gone up, widen rather. It is not gone up. The imbalance between the agratian products and industrial products is widened ಎಷ್ಟು ವೈಡ್‌ನ್ ಆಗಿದೆ ಎಂದರೆ, ಅದನ್ನು ಊಹೆ ಮಾಡಲಿಕ್ಕೆ ಕೂಡ ಸಾಧ್ಯವಿಲ್ಲ. ಇದಕ್ಕೆ ಒಂದು ಉದಾಹರಣೆಯನ್ನು ಹೇಳುತ್ತೇನೆ. ಇವತ್ತು ಒಬ್ಬ ಸಾಮಾನ್ಯ ರೈತನ ಕುಟುಂಬದಲ್ಲಿರುವ ಒಬ್ಬ ಹುಡುಗ ಕಾಲೇಜಿನಲ್ಲಿ ಓದುತ್ತಿದ್ದರೆ, ಅವನು ಅವನ ಅಪ್ಪನ ಹತ್ತಿರ ಬಂದು, ನನಗೆ ಒಂದು ಜೊತೆ ಶೂ ತೆಗೆದುಕೊಡು ಎಂದು ಕೇಳಿದರೆ, ಆ ರೈತ ಮೂರು ಮೂಟೆ ರಾಗಿ ಮಾರಿದರೆ ಮಾತ್ರ ಅವನಿಗೆ ಒಂದು ಜೊತೆ ಶೂ ಬರುತ್ತದೆ. ಎಲ್ಲರಿಗೂ ಗೊತ್ತಿದೆ, ಅದರ ರೇಟ್ ಏನಿದೆ ಎಂದು. ಅಂದರೆ, ಒಂದು ಜೊತೆ ಶೂ, ಮೂರು ಮೂಟೆ ರಾಗಿಗೆ ಸಮಾನ. This much gap is widened between the industrial products and the agrarian products. ಈ ಗ್ಯಾಪ್ ಅನ್ನು ನೀವು ಕಡಿಮೆ ಮಾಡಬೇಕು. ಇಲ್ಲದಿದ್ದರೆ, ರೈತರನ್ನು ಉಳಿಸಲು ಖಂಡಿತವಾಗಿ ಸಾಧ್ಯವಿಲ್ಲ. ಈ ಗ್ಯಾಪ್ ಅನ್ನು ಕಡಿಮೆ ಮಾಡಲು ನಿಮ್ಮ ಬಜೆಟ್‌ನಲ್ಲಿ ನೀವು ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ? You have not shown any programme at all in your budget to protect or to reduce the gap between the industrial production and the agrarian production. That is the crux of the whole issue. ಇವತ್ತು ರೈತರು ಆತ್ಮಹತ್ಯೆ ಮಾಡಿಕೊಳ್ಳಲು ಇರುವ ಮೂಲಭೂತ ಕಾರಣಗಳಲ್ಲಿ ಇದೂ ಒಂದು. ಸಾಮಾನ್ಯವಾಗಿ, ನಾವೆಲ್ಲಾ ಭಾಷಣ ಮಾಡುವಾಗ ರೈತರ ಬೆಳೆಗಳಿಗೆ ಬೆಲೆ ಇಲ್ಲ, ಬೆಲೆ ಇಲ್ಲ ಎಂದು ಹೇಳುತ್ತೇವೆ. This is exactly the reason, ಏಕೆಂದರೆ, ಈ ಉತ್ಪನ್ನಗಳ ಬೆಲೆಗಳಿಗೂ ಆ ಉತ್ಪನ್ನಗಳ ಬೆಲೆಗಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಇದನ್ನು ರೆಡ್ಯೂಸ್ ಮಾಡಲು ನೀವು ಯಾವುದೇ ರೀತಿಯಾದಂಥ ಕಾರ್ಯಕ್ರಮಗಳನ್ನು ಹಾಕಲಿಲ್ಲ. ಇದು ಪ್ರಥಮ ವಲಯ. ಮುಂದೆ, ನೀವು ಏನು ಹೇಳಿದ್ದೀರಿ. 'it contributes, although it covers large section of the population, it gives less contribution to the growth of the economy' ಎಂದು ಹೇಳಿದ್ದೀರಿ, ಏಕೆ Why? What is the reason? ಆ ಕಾರಣಗಳನ್ನು ತೊಡೆದು ಹಾಕಿ, ಅತಿ ಹೆಚ್ಚು ವಿಶಾಲವಾದಂಥ ಜನಸಂಖ್ಯೆಗೆ ಆದಾರ ಪಟ್ಟಿರತಕ್ಕಂಥ ಈ ಕೃಷಿಯಲ್ಲಿ ಹೆಚ್ಚು ಉತ್ಪಾದನೆ

ಮಾಡಲು ಏನು ಕಾರ್ಯಕ್ರಮ ಹಾಕಬೇಕಾಗಿತ್ತು? ಏಕೆ ಆ ಕಾರ್ಯಕ್ರಮವನ್ನು ಕೊಡಲು ಆಗಲಿಲ್ಲ? ನಿಮ್ಮ ಪ್ರಾಮಾಣಿಕತೆಯನ್ನು ನಾನು ಪ್ರಶ್ನೆ ಮಾಡುತ್ತಿಲ್ಲ ಅಥವಾ ಸಂಶಯ ಪಡುತ್ತಿಲ್ಲ. But you are the victim of the circumstances, victim of the system. ನಿಮಗೆ ಆಸೆ ಇದೆ ಎಂಬುದು ನನಗೆ ಗೊತ್ತಿದೆ. ನಿಮ್ಮ ಭಾವನೆಗಳು ನನಗೆ ಗೊತ್ತಿದೆ. ನಾನು ನಿಮ್ಮನ್ನು ಹತ್ತಿರದಿಂದ ಬಲ್ಲವನು. ಆದರೆ ನಿಮ್ಮ ಕೈಯಲ್ಲಿ ಅದು ಸಾಧ್ಯವಾಗುತ್ತಿಲ್ಲ. Because you are victim of circumstances. ವ್ಯವಸ್ಥೆಯ ಬಲಿಪಶು ಎಂದು ಕ್ಲಿಯರ್ ಆಗಿ ಹೇಳುತ್ತಿದ್ದೇನೆ. ಯಾವ ವ್ಯವಸ್ಥೆ ಎಂದು ಹೇಳುವಂಥದ್ದು ಅದು ಅರ್ಥ ಮಂತ್ರಿಗಳಿಗೆ ಗೊತ್ತಿದೆ. ಇವತ್ತು ಈ ದೇಶದಲ್ಲಿರುವ ಆರ್ಥಿಕ ವ್ಯವಸ್ಥೆ ಹೊರತು ಬೇರೆ ಏನೂ ಅಲ್ಲ. ನಾನು ಬದಲು ಮಾಡಿ ಎಂದು ಅವರಿಗೆ ಹೇಳಲೇ ಇಲ್ಲ. I never said. ಒಂದು ರಾಜ್ಯ ಸರ್ಕಾರಕ್ಕೆ ತನ್ನದೇ ಆದ ಇತಿಮಿತಿಗಳಿವೆ. ದೇಶದ ಅರ್ಥ ವ್ಯವಸ್ಥೆಯನ್ನು ಬದಲಿಸುವ ಹಕ್ಕು ರಾಜ್ಯ ಸರ್ಕಾರಗಳಿಗೆ ಆ ಶಕ್ತಿ ಇಲ್ಲ. ಆ ಅಧಿಕಾರವೂ ಅವರಿಗೆ ಇಲ್ಲ. gap ಅನ್ನು widen ಮಾಡಲಿಕ್ಕೆ ಏನು ಪ್ರಯತ್ನ ಮಾಡಿದಿರಿ ಎಂದು ಅಷ್ಟನ್ನೇ ನಾನು ಅವರಲ್ಲಿ ಕೇಳಿರುವಂಥದ್ದು ಇನ್ನು ಎರಡನೇ ಆದ್ಯತಾ ವಲಯ industries ಆಗಿರುತ್ತದೆ. ಕರ್ನಾಟಕ ರಾಜ್ಯದಲ್ಲಿ ಕಾರ್ಖಾನೆಗಳು ಅದರಲ್ಲೂ ಪ್ರಮುಖವಾಗಿ ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳು ಇವತ್ತು ನಮ್ಮ ರಾಜ್ಯದಲ್ಲಿ ಆಗಬಹುದು ಅಥವಾ ದೇಶದ ಯಾವುದೇ ಭಾಗದಲ್ಲಿ ಆಗಬಹುದು, after the Government, the highest employment opportunity is created by only small scale industries and medium scale industries. ಅತಿ ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಮಾಡುವಂಥದ್ದು after the Government. Government is the major employer. After the Government major employers are small scale industries and medium scale industries. ಆ small scale industries ಗೂ ಮತ್ತು medium scale industries ಅನ್ನು ಕರ್ನಾಟಕದಲ್ಲಿ ನೀವು ಏನು ಮಾಡಿದಿರಿ? ಅದರ ಉತ್ಪಾದನೆ ಎಷ್ಟು? ಅವು ಸೃಷ್ಟಿ ಮಾಡಿರುವ ಉದ್ಯೋಗವಕಾಶಗಳೆಷ್ಟು? ಕರ್ನಾಟಕ ರಾಜ್ಯದಲ್ಲಿರುವ ನಿರುದ್ಯೋಗಿಗಳ ಸಂಖ್ಯೆ ಎಷ್ಟು? ಕರ್ನಾಟಕ ರಾಜ್ಯದಲ್ಲಿ ನೀವು ಒಂದು ವರ್ಷದಲ್ಲಿ ಉದ್ಯೋಗವಕಾಶಗಳನ್ನು ಎಷ್ಟು ಸೃಷ್ಟಿ ಮಾಡಿದಿರಿ? ಇದರ ಬಗ್ಗೆ ಬಜೆಟ್‌ನಲ್ಲಿ ಏನು ಹೇಳಿದ್ದೀರಿ? ಎಲ್ಲಾದರೂ ಒಂದು ಕಡೆ ಈ ಬಜೆಟ್ ಪುಸ್ತಕದಲ್ಲಿ ಹೇಳಿದ್ದೀರಾ? ನಮ್ಮ ಕರ್ನಾಟಕ ರಾಜ್ಯದಲ್ಲಿ ಪ್ರತಿ ವರ್ಷ ಇಷ್ಟು ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಿದೆ. ಈ ಪ್ರಮಾಣದಲ್ಲಿ ನಾವು ಉದ್ಯೋಗಾವಕಾಶಗಳನ್ನು ಸೃಷ್ಟಿಮಾಡಿದ್ದೇವೆ. Whether it is public sector or private sector or Government, whatever it may be ಎಷ್ಟು ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡಿದಿರಿ? ಉದ್ಯೋಗಾವಕಾಶಗಳನ್ನು ಸೃಷ್ಟಿ ಮಾಡದೆ ಕೈಗಾರಿಕಾ ವಲಯದಲ್ಲಿ ನೀವು ಉತ್ಪಾದನೆಯನ್ನು ಹೇಗೆ ನಿರೀಕ್ಷೆ ಮಾಡುತ್ತೀರಿ? ಯಾವ ಆಧಾರದ ಮೇಲೆ ನೀವು ನಿರೀಕ್ಷೆಯನ್ನು ಮಾಡುತ್ತೀರಿ? ಕೈಗಾರಿಕಾ ಉತ್ಪತ್ತಿ ಹೆಚ್ಚಾಗದಿದ್ದರೆ ನೀವು ಕೈಗಾರಿಕಾ ವಲಯದಿಂದ ಹೇಗೆ

ಅಭಿವೃದ್ಧಿಯನ್ನು ಸಾಧಿಸುತ್ತೀರಿ? ನಿಮ್ಮ ಆರ್ಥಿಕ ವ್ಯವಸ್ಥೆಗೆ ಅದರಿಂದ ಹೇಗೆ contribution ಬರುತ್ತದೆ? ಬಹಳ ಪ್ರಮುಖವಾಗಿ ನಿರುದ್ಯೋಗ ಸಮಸ್ಯೆ ನಮ್ಮ ಮುಂದಿದೆ. ನಿರುದ್ಯೋಗ ಸಮಸ್ಯೆ ಪರಿಹಾರ ಮಾಡಲಿಕ್ಕೆ ಯಾವ ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ? ಇದರಲ್ಲಿ ಎರಡು ರೀತಿಯ ನಿರುದ್ಯೋಗ ಸಮಸ್ಯೆಯಿದೆ. ಒಂದನೆಯದು, educated unemplyees. ಇನ್ನೊಂದು uneducated enemployees. Uneducated unemployees ಗೆ ಉದ್ಯೋಗ ಎಲ್ಲಿ ಸಿಗಬೇಕು? ಇವರಿಗೆ ಉದ್ಯೋಗ ಕೃಷಿ ರಂಗದಲ್ಲಿಯೇ, ಕೃಷಿ ವಲಯದಲ್ಲಿಯೇ ಸಿಗಬೇಕು. ಪತ್ರಿಕೆಗಳಲ್ಲಿ ನೀವು ದಿನಾಲು ನೋಡುತ್ತಿದ್ದೀರಿ, ಗುಲ್ಬರ್ಗಾ, ರಾಯಚೂರು, ಬೀದರ್‌ನಿಂದ ಜನರು ಗುಳೆ ಹೋಗುತ್ತಿದ್ದಾರೆಂದು ಪತ್ರಿಕೆಯಲ್ಲಿ ವರದಿ ಮಾಡುತ್ತಿದ್ದಾರೆ. ಆದರೆ ನಮ್ಮ ಕಡೆಯಿಂದ ಗುಳೆ ಹೋಗುವುದನ್ನು ಪತ್ರಿಕೆಯಲ್ಲಿ ಹಾಕುವುದಿಲ್ಲ. ಇಷ್ಟೇ ವ್ಯತ್ಯಾಸ ಇರುವಂಥದ್ದು. ಇವತ್ತು ಇಡೀ ಕರ್ನಾಟಕ ರಾಜ್ಯದ ಹೆಚ್ಚುಕಡಿಮೆ ಎಲ್ಲಾ ಜಿಲ್ಲೆಗಳಿಂದ ಕೃಷಿ ಕಾರ್ಮಿಕರು ಊರನ್ನು ಬಿಟ್ಟು ಹೋಗುತ್ತಿದ್ದಾರೆ. ಕೆಲಸ ಇಲ್ಲದೆ ಊರು ಬಿಟ್ಟು ಹೋಗಿದ್ದಾರೆ. ನಾನು ಈಗ ಹೇಳುವುದನ್ನು ಬಹುಶಃ ಮಾನ್ಯ ಉಪ ಮುಖ್ಯಮಂತ್ರಿಗಳು ಗಮನಿಸಿರಬಹುದು. ನಿನ್ನೆಯ ದಿವಸ ಮಾಂಟೆಕ್ ಸಿಂಗ್ ಅಹ್ಲುವಾಲಿಯರವರು ಕೃಷಿ ವಿಶ್ವವಿದ್ಯಾನಿಲಯದ ಘಟಿಕೋತ್ಸವದಲ್ಲಿ ಭಾಷಣ ಮಾಡುತ್ತಾ ಒಂದು ಅಂಶವನು ಹೇಳಿದ್ದಾರೆ. ಅವರ ವಾದವನ್ನು ನಾನು ಒಪ್ಪುವುದಿಲ್ಲ. ಆದರೆ ಅವರು ಏನು ಹೇಳಿದ್ದಾರೆಂದರೆ 'ಕೃಷಿ ವಲಯದಲ್ಲಿ ಕೆಲಸ ಮಾಡುವ ಕೃಷಿ ಕಾರ್ಮಿಕರ ಒಂದು ವಿಭಾಗವನ್ನು ಪಟ್ಟಣಕ್ಕೆ ಸ್ಥಳಾಂತರಿಸಬೇಕು' ಎನ್ನುವ ಮಾತನ್ನು ಹೇಳಿದ್ದಾರೆ. It is more dangerous to the economy. But point is ಇವತ್ತು ಕೃಷಿ ವಲಯದಲ್ಲಿ ಗುಳೆ ಹೋಗುತ್ತಿದ್ದಾರೆ. ಅವರಿಗೆ ಉದ್ಯೋಗಾವಕಾಶವಿಲ್ಲ. ಅವರಿಗೆ ಉದ್ಯೋಗಾವಕಾಶಗಳನ್ನು ಕೊಡುವ ರೀತಿಯಲ್ಲಿ ಕೃಷಿ ರಂಗದಲ್ಲಿ ನೀವು ಯಾವ ಕಾರ್ಯಕ್ರಮವನ್ನು ಹಾಕಿದ್ದೀರಿ? 'ಕೂಲಿಗಾಗಿ ಕಾಳು ಯೋಜನೆ' ಯಲ್ಲಿ ಏನೇನು ಆಯಿತು, ಏನೇನು ವ್ಯವಸ್ಥೆಯಾಯಿತು. ಏನೇನು ಅವ್ಯವಸ್ಥೆಯಾಯಿತು ಎಂದು ಇದೇ ಸದನದಲ್ಲಿ ಚರ್ಚೆಯಾಗಿದೆ. ಅದಕ್ಕೆ ಪರ್ಯಾಯವಾಗಿ ಏನು ಮಾಡಬೇಕೆಂಬುದರ ಕುರಿತು ಆಲೋಚನೆ ಮಾಡಲೇ ಇಲ್ಲ. 'ಕೂಲಿಗಾಗಿ ಕಾಳು ಯೋಜನೆ' ಯಲ್ಲಿ ಅವ್ಯವಹಾರ ನಡೆದು ಸಾವಿರಾರು ಕೋಟಿ ಹೋಯಿತು. ಅವನು ಲೂಟಿ ಹೊಡೆದ, ಇವನು ನುಂಗಿದ, ಅದು ಹೋಯಿತು ಎಂದು ಚರ್ಚೆ ಮಾಡಿದ್ದೇ ಮಾಡಿದ್ದು. ಇದರಿಂದ ಕಡೆಗೆ ಏನಾಯಿತು? ಸರ್ಕಾರದ ನಿರ್ಧಾರವೇನು? ಅದಕ್ಕೆ ಪರಿಹಾರವೇನು? ಪರ್ಯಾಯವೇನು? ಏನೂ ಇಲ್ಲ. ಇವತ್ತು ಕೂಡ ಜನ ಗುಳೆ ಹೋಗುತ್ತಿದ್ದಾರೆ. ಗುಳೆ ಹೋಗದೆ ಸಾಧ್ಯವೇ ಇಲ್ಲ. ಇನ್ನು What is your food grain production? Record 106 lakh tonnes ಎಂದು ನೀವು ಹೇಳಿದಿರಿ. ಇದು 2004-05ರ ಸಾಲಿನಲ್ಲಿ 106 ಟನ್ಸ್ ಎಂದು ನೀವು ಹೇಳಿದಿರಿ.

ಶ್ರೀ ಸಿದ್ದರಾಮಯ್ಯ:- 2001ರಲ್ಲಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- 2001ರಲ್ಲಿ ಆದರೆ What about today? What is the need of Karnataka? ನಮ್ಮ ಭಾರತ ದೇಶದ Planning Commission ನ

ವರದಿ ಪ್ರಕಾರ ಮತ್ತು ಅವರ assessment ಪ್ರಕಾರ ಕರ್ನಾಟಕ ರಾಜ್ಯದಲ್ಲಿರುವ ಒಟ್ಟು ಜನಸಂಖ್ಯೆಗೆ ಎರಡು ಹೊತ್ತಿನ ಊಟ ಕೊಡಬೇಕಾದರೆ every year we need 1,40,000 million tones of food grains. What is our production? It is according to your own statement, at no point of time, it crossed 110 lakh tones. ಇದು ಒಂದು ಕಡೆ. ಇನ್ನೊಂದು ಕಡೆ 3 ರೂಪಾಯಿಗೆ ಬಡವರಿಗೆ ಅಕ್ಕಿ ಕೊಡುತ್ತೇವೆಂದು ಹೇಳಿದಿರಿ. It is welcome thing. But what is the mechanism you adopt to give it effectively. Since is no effective mechanism. Your good intention is not materialised so far. With all good intention you did it. But the failure of the mechanism to give it to the really needy, it has not materialised so far. ಇವೆಲ್ಲ ಚರ್ಚೆಯಾಯಿತಲ್ಲಾ. ಪಡಿತರ ಚೀಟಿ ಅದು ಇದು ಈ ಲೆಕ್ಕಾಚಾರಗಳೆಲ್ಲಾ ಇನ್ನೂ ಅದು ಹೋಗಿಲ್ಲ. ಇನ್ನು educated unemployment. Where to get employment. ನೀವು ಏನು ಹೇಳಿದಿರಿ? "industrial sector ನಲ್ಲಿ educated unemployees ಅನ್ನು absorb ಮಾಡತಕ್ಕಂಥ ಕಾರ್ಯಕ್ರಮ ಇಲ್ಲ. ಇನ್ನು ಕರ್ನಾಟಕ ರಾಜ್ಯದಲ್ಲಿ ಹೆಮ್ಮೆ ಪಡತಕ್ಕಂಥ ರಾಜ್ಯ ಸರ್ಕಾರವೇ ನಡೆಸುತ್ತಿರಕ್ಕಂಥ ಕೈಗಾರಿಕೆಗಳ ಪರಿಸ್ಥಿತಿ, ಹಣೆಬರಹ ಏನಾಯಿತು? NGEF ಏನಾಯಿತು? Mysore Lamps ಏನಾಯಿತು? Soaps and Detergent company ಏನಾಯಿತು? ಸನ್ಮಾನ್ಯ ಉಪ ಮುಖ್ಯಮಂತ್ರಿಗಳೆ, ನಿಮ್ಮ ಗಮನಕ್ಕೆ ಒಂದು ಬೇಸರದ ಸಂಗತಿಯನ್ನು ತರಲಿಕ್ಕೆ ಇಚ್ಛೆಪಡುತ್ತೇನೆ. Mysore Lamps ಇದರ ಬಗ್ಗೆ ಇಡೀ ದೇಶ ಹೆಮ್ಮೆ ಪಡುತ್ತಿದ್ದಂಥ ಕಾರ್ಖಾನೆಯಾಗಿತ್ತು. ಎಂಥೆಂಥ ಉತ್ಪನ್ನಗಳನ್ನು ತಯಾರಿಸಿದಂಥ ಕಾರ್ಖಾನೆ! ಅದನ್ನು ದಿವಾಳಿಯೆಬ್ಬಿಸಿದ್ದು ಯಾರು ಅದು ಹೇಗಾಯಿತು ಎನ್ನುವುದನ್ನು ನಾನು ಹೇಳಲಿಕ್ಕೆ ಹೋಗುವುದಿಲ್ಲ. ಈಗ ಅದನ್ನು ಮುಚ್ಚಿಸಿಬಿಟ್ಟು 3 ವರ್ಷಗಳಾಗಿವೆ. ಅದಕ್ಕೆ ನೀವು ಒಬ್ಬ ಎಂಡಿಯನ್ನು ನೇಮಕ ಮಾಡಿದ್ದೀರಿ. ಆ ಎಂ.ಡಿ. ಏನು ಮಾಡಿದ್ದಾರೆಂದರೆ, ಆ Mysore Lamps ಕಾರ್ಖಾನೆಯ trade mark ಅನ್ನು Brand ಅನ್ನು 8ರಿಂದ 9 ಕೋಟಿ ರೂಪಾಯಿಗಳನ್ನು ಬೆಲೆ ಬಾಳುವ ಆ trade mark ಅನ್ನು ಇನ್ನೊಂದು Lamp ತಯಾರಿಸುವ ಕಂಪನಿಗೆ ಕೇವಲ ರೂ. 75 ಸಾವಿರ ರೂ.ಗೆ ಮಾರಾಟ ಮಾಡಿದ್ದಾರೆ.

ಶ್ರೀ ಕೆ. ಗೋಪಾಲ ಪೂಜಾರಿ (ಬೈಂದೂರು):– ಮಾನ್ಯ ಉಪಾಧ್ಯಕ್ಷರೆ, ಈ trade mark ಬಗ್ಗೆ ಅವರು ಮಾತನಾಡಿರುವಂಥದ್ದು ನಿಜವಾಗಲೂ ಇದು ನಮ್ಮ ಕರ್ನಾಟಕದಲ್ಲಿ ಈ ಕೈಗಾರಿಕೆ ರಕ್ಷಣೆ ಆಗಬೇಕಾದರೆ ಇದರಲ್ಲಿ ಅಮೂಲಾಗ್ರ ಬದಲಾವಣೆಯಾಗಬೇಕು. ನಾನು ಇದರ ಬಗ್ಗೆ ಬಹಳಷ್ಟು ಇಲ್ಲಿಯ crime branch ನಲ್ಲಿ ಮಾತನಾಡಿದ್ದೇನೆ. ಬಾಂಬೆ, ಡೆಲ್ಲಿ ಮತ್ತು ಚೆನ್ನೈಗೆ ಇರತಕ್ಕಂಥ ಈ trade mark ಅನ್ನು duplicate ಮಾಡುವಂಥ ವ್ಯವಸ್ಥೆಯಲ್ಲಿ ಅಲ್ಲಿ ಒಂದು industry ಯ trade mark ಅನ್ನು duplicate ಮಾಡಿದ ತಕ್ಷಣ ಅಲ್ಲಿ ಕಾನೂನು ಕ್ರಮ ಕೈಗೊಳ್ಳುತ್ತಾರೆ. ಆದರೆ ನಮ್ಮ ಕರ್ನಾಟಕ ರಾಜ್ಯದಲ್ಲಿ ಇಂಥ industry ಗಳ trade mark

ಅನ್ನು duplicate ಮಾಡಿದಾಗ ಇಂಥ crime branch ಗೆ ಹೋದಾಗ trade mark ನ registration ಗೂ ಇದಕ್ಕೂ ಇರತಕ್ಕ ವ್ಯತ್ಯಾಸವೇ crime branch ನವರಿಗೆ ಗೊತ್ತಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ: ಈಗ 80–90 ಕೋಟಿ ರೂಪಾಯಿಗಳಿಗಿಂತ ಅಧಿಕವಾಗಿ ಮಾರಾಟವಾಗುವ ಟ್ರೇಡ್ ಬ್ರಾಂಡ್ ನೇಮ್ ಅನ್ನು ಕೇವಲ 75 ಸಾವಿರ ರೂಪಾಯಿಗಳಿಗೆ ಮಾರಾಟ ಮಾಡಿದ್ದು ಅಷ್ಟೇ ಅಲ್ಲ, ಅದು ಎರಡು ಇನ್‌ಸ್ಟಾಲ್‌ಮೆಂಟ್ಸ್‌ನಲ್ಲಿ ಮೊದಲು 37 ಸಾವಿರ ರೂಪಾಯಿ ಕೊಡುವುದು ಆಮೇಲೆ ಇನ್ನೊಂದು ವರ್ಷಕ್ಕೆ 37 ಸಾವಿರ ರೂಪಾಯಿಗಳನ್ನು ಕೊಡುವುದು ಎಂದು ಹೇಳಿ ಮಾರಾಟ ಮಾಡಿದ್ದಾರೆ. ಯಾರಿಗೆ ಇದನ್ನು ಮಾರಾಟ ಮಾಡಿದ್ದಾರೆಂಬುದು ನಮಗೆ ಗೊತ್ತಾಗುತ್ತದೆ. ಅವನೇ ಮ್ಯಾನೇಜಿಂಗ್ ಡೈರೆಕ್ಟರ್ ಆಗಿರುವ ಅವನದೇ ಇನ್ನೊಂದು ಪ್ರೈವೇಟ್ ಕಾರ್ಖಾನೆ ಇದೆ. ಅವನೇ ಅದರಲ್ಲಿಯೂ ಎಚಿಡಿ. ಆ ಕಂಪನಿಗೆ ಇದನ್ನು ಮಾರಾಟ ಮಾಡಿದ್ದಾರೆ. ಇದು ಸರ್ಕಾರದ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ......

ಶ್ರೀ ಜೆ.ಸಿ. ಮಾಧುಸ್ವಾಮಿ:– ಆ ಕಂಪನಿಯಲ್ಲಿ ಬೇರೆ ಯಾರೂ ಇಲ್ಲ. ಅದರಲ್ಲಿ ಯಾರು ಮ್ಯಾನೇಜರ್ಸ್, ಜನರಲ್ ಮ್ಯಾನೇಜರ್ಸ್ ಇದ್ದರು, ಅವರೇ ಎಲ್ಲಾ ಹೋಗಿ, ಸಿದ್ಧರಾಮಯ್ಯನವರೆ, ಒಂದು ಕಂಪನಿಯನ್ನು ಫ್ಲೋಟ್ ಮಾಡಿದ್ದಾರೆ. ಮ್ಯಾನೇಜಿಂಗ್ ಡೈರೆಕ್ಟರ್ ಒಬ್ಬ ಎಂದು ಹೇಳಿದಿರಿ. ಅದರಲ್ಲಿ ಇವನೇ ಇದ್ದಾನೆ. ನಿಮ್ಮ existing MD reads that company ಇವರೆಲ್ಲಾ Mysore Lamp is still existing ಎಂದು ಹೇಳಿ ಮಾರಾಟ ಮಾಡುತ್ತಿದ್ದಾರೆ. ನಿಮಗೆ ಬರುವ ರಾಯಲ್ಟಿ ಒಂದು ವರ್ಷಕ್ಕೆ 75 ಸಾವಿರ ರೂಪಾಯಿ. ಆ ಕಂಪನಿಯನ್ನು ಮುಚ್ಚಿದ್ದರೂ ಕೂಡ ಇವತ್ತು ಮೈಸೂರು ಲ್ಯಾಂಪ್ಸ್‌ಗೆ ಕೋಟ್ಯಾಂತರ ರೂಪಾಯಿ ಬಿಸಿನೆಸ್ ನಡೆಯುತ್ತಿದೆ. ಆಮೇಲೆ ಆ ಕಂಪನಿಯಲ್ಲಿ ಕೆಲವರನ್ನು ಇಟ್ಟುಕೊಂಡಿದ್ದೀರಿ. ಮೈಸೂರು ಅರಮನೆಗೆ ಲೈನ್ಸ್ ಸಪ್ಲೈ ಮಾಡಲಿಕ್ಕೆಂದು, ಇಲುಮಿನೇಷನ್ಸ್ ಸಪ್ಲೈ ಮಾಡಲಿಕ್ಕೆಂದು ಹೇಳಿ, ಮುಚ್ಚುವುದಕ್ಕಾಗುವುದಿಲ್ಲ, agreement still existing ಎಂದು ಹೇಳಿ, that company exists. ಇನ್ನೊಂದು ಕಡೆ ಮುಚ್ಚಿದ್ದೀರಿ. ಮತ್ತೊಂದು ಕಡೆ ಅದೇ ಮೈಸೂರು ಲ್ಯಾಂಪ್ಸ್ ಕರ್ನಾಟಕದಲ್ಲಿ ಮಾರಾಟವಾಗಿ ಕೋಟ್ಯಾಂತರ ರೂಪಾಯಿ ಸಂಪಾದನೆಯಾಗುತ್ತಿದೆ. ನಿಮಗೆ ರೆವಿನ್ಯೂ ಬರುತ್ತಿಲ್ಲ. ಆ ಕಡೆ ಇದನ್ನೇ ಶ್ರೀರಾಮರೆಡ್ಡಿಯವರು ಹೇಳುತ್ತಿರುವುದು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅಂದರೆ ನೀವು ಯಾವ ರೀತಿ ನಮ್ಮ ಕರ್ನಾಟಕ ರಾಜ್ಯ ಸರ್ಕಾರ ನಿರ್ವಹಿಸುತ್ತಿದ್ದಂಥ ಕಾರ್ಖಾನೆಗಳ ಬಗ್ಗೆ ಗಮನ ಕೊಟ್ಟಿದ್ದೀರಿ. ಅದನ್ನು ಉಳಿಸಿಕೊಳ್ಳುವ ಸಾಧ್ಯತೆ ಇತ್ತು. ಅದನ್ನು ಮುಚ್ಚಿಸಿಬಿಟ್ಟಿರಿ. ಅಂದರೆ ಇಂಥ ವ್ಯವಸ್ಥಾಪಕ ನಿರ್ದೇಶಕರೆಲ್ಲಾ ಅದರಲ್ಲಿ ಸೇರಿಕೊಂಡು ಮಾಡಿದಂಥ ಕೆಲಸ. ಈತ ಮಾಡಿರುವ ಕೆಲಸ ಕಾನೂನು ಬಾಹಿರ. ನಿಮ್ಮ ಸೆಕ್ರೆಟರಿಯವರೇ ಪತ್ರ ಬರೆದಿದ್ದಾರೆ. ನಿಮ್ಮ ಐಎಎಸ್ ಆಫೀಸರ್ ಸುಜಾತರವರು ಡೀಟೇಲ್ ಆಗಿ ನಂಬರ್ ಒನ್, ಡಿಸ್–ಇನ್‌ವೆಸ್ಟ್‌ಮೆಂಟ್ ಡೈರೆಕ್ಟರ್‌ರವರಿಗೆ ಪತ್ರ ಬರೆದಿದ್ದಾರೆ. ಅವರಿಗೆ ಪತ್ರ ಬರೆದಿದ್ದರೂ ಕೂಡ ಕ್ರಮ ತೆಗೆದುಕೊಂಡಿಲ್ಲ. ಏನೆಂದು ಬರೆದಿದ್ದಾರೆ. The brand value is

not assessed before leasing the brand and the royalty amount fixed is arbitrary. ಅವರು ಪಾಯಿಂಟ್ ಮಾಡಿರುವುದು. ಅವರು ಪತ್ರ ಬರೆದಿದ್ದಾರೆ. Transparency in tender process is not followed. ಮಾನ್ಯ ಸಿದ್ದರಾಮಯ್ಯನವರೆ, ಸ್ವಲ್ಪ ಗಮನಿಸಿ. ನೀವು ಮಾನ್ಯ ಚಲುವರಾಯ ಸ್ವಾಮಿ ಕಡೆಗೆ ಗಮನಿಸುತ್ತಿದ್ದೀರಿ. Transparency in tender process is not followed while awarding the tenderd MIL brand to consume maximum refunds to the company. Prior approval of the Board is not obtained. Since the company is under liquidation, the company was to be kept informed, which is not done. This part you have continued to lease of brand name despite the restraining order to the contrary passed by the company court. The Hon'ble Court in its order dated 14.6.2004 in Company Petition No. 23/2000 has passed an order restraining the Mysore Lamp Works from parting any of its assessments including the brands. ಇಷ್ಟೆಲ್ಲಾ ಇದ್ದರೂ ಕೂಡ ಅದನ್ನು ಮಾರಾಟ ಮಾಡಿದರು. ನೀವೇನು ಕ್ರಮ ತೆಗೆದುಕೊಂಡಿದ್ದೀರಿ? The same fate happened to the NGEF. ಸಿಂಧ್ಯರವರು ಒಂದು ಕಡೆ ಹೇಳಿಕೆ ಕೊಡುತ್ತಾರೆ. ಇವನ್ನೆಲ್ಲಾ ರಿವ್ಯೆವ್ ಮಾಡುತ್ತೇವೆ. ಯಾವುದೇ ಕಾರಣಕ್ಕೂ ಕೂಡ ರಾಜ್ಯ ನಿರ್ವಹಿಸುತ್ತಿರುವಂಥ ಕಾರ್ಖಾನೆಗಳನ್ನು ಮಾರಾಟ ಮಾಡುವುದಿಲ್ಲ. ಮುಚ್ಚುವುದಿಲ್ಲ ಅಂತ ಹೇಳಿ ನಿಮ್ಮ ಕೈಗಾರಿಕಾ ಮಂತ್ರಿಗಳು ಆಶ್ವಾಸನೆ ಕೊಡುತ್ತಾರೆ. ಇನ್ನೊಂದು ಕಡೆ ಈ ಬ್ರಾಂಡ್ ನೇಮ್ ಅನ್ನು ಲಿಸ್ಟ್ ಮಾಡುತ್ತಾರೆ. ಲಿಕ್ವಿಡೇಟ್ ಮಾಡುತ್ತಿದ್ದಾರೆ. ಹೀಗಾದರೆ ನೀವು ಹೇಗೆ ಕೈಗಾರಿಕಾ ರಂಗವನ್ನು ಅಭಿವೃದ್ಧಿ ಮಾಡುತ್ತೀರಿ? ನಿಮ್ಮ ದೃಷ್ಟಿಯಲ್ಲಿ ಕೈಗಾರಿಕಾ ರಂಗದ ಅಭಿವೃದ್ಧಿ ಎಂದು ಹೇಳಿದರೆ ಇವತ್ತು ಕರ್ನಾಟಕದಲ್ಲಿ ಇನ್‌ಫೋಸಿಸ್, ವಿಪ್ರೋ ಅಷ್ಟೇ. ಪ್ರೇಂಜಿ, ನಾರಾಯಣ ಮೂರ್ತಿ. ಕರ್ನಾಟಕ ರಾಜ್ಯದಲ್ಲಿ ಇವತ್ತು ಅವರೇ ದೈವಾಂಶ ಸಂಭೂತರು. ಅವರು ದೊರೆಗಳು. ದೊರೆಗಳಾದರೂ ಜನರ ಬಗ್ಗೆ ಬೇರೆ ಆಲೋಚನೆ ಮಾಡುತ್ತಿದ್ದರು. ನೂರಾರು ಕೋಟಿ ರೂಪಾಯಿಗಳ ಕನ್‌ಸೆಷನ್ ಕೊಟ್ಟಿರಿ. ಮಾತೆತ್ತಿದ್ದರೆ ನೀವೇನು ಹೇಳುತ್ತೀರಿ? ನಾವು ಕೃಷಿ ರಂಗಕ್ಕೆ ಸಬ್ಸಿಡಿ ಕೊಡುತ್ತೇವೆಂದು ಹೇಳುತ್ತೀರಿ. ರೈಟ್ ಸ್ವಾಮಿ. ಆ ಬಡಪಾಯಿಗಳಿಗೆ ಕೊಟ್ಟ ತಕ್ಷಣ ನಿಮಗೆ ಸಬ್ಸಿಡಿ ಆಗಿ ಹೋಗಿಬಿಡುತ್ತದೆ. ಇದೇ ಶ್ರೀಮಂತ ಮಹಾರಾಜರುಗಳಿಗೆ ಟ್ಯಾಕ್ಸ್ ಕಡಿಮೆ ಮಾಡಿದಾಗ ಇನ್ಸೆಂಟೀವ್ ಎಂದು ನಿಮಗೆ ಲೆಕ್ಕಕ್ಕೆ ಬರುವುದಿಲ್ಲ. ಅದು ಸಬ್ಸಿಡಿ ಲೆಕ್ಕಕ್ಕೆ ಬರುವುದಿಲ್ಲ. ಅವರಿಗೆ ಬೇಕಾದ ಸವಲತ್ತುಗಳನ್ನು ಒದಗಿಸುವ ಸಂದರ್ಭದಲ್ಲಿ, ಕೈಗಾರಿಕಾ ಮಹಾರಾಜರುಗಳಿಗೆ ಇನ್ಸೆಂಟೀವ್ ಸಬ್ಸಿಡಿ ಎಂದು ಲೆಕ್ಕ ಹಾಕುವುದಿಲ್ಲ. ಇನ್‌ಫೋಸಿಸ್ ನಾರಾಯಣ ಮೂರ್ತಿಯವರಿಗೆ, ವಿಪ್ರೋದವರಿಗೆ ಕಾರು ಹೋಗಲು ರೋಡ್ ಸರಿ ಇಲ್ಲವೆಂದರೆ ನೂರಾರು

ಕೋಟಿ ರೂ ಖರ್ಚು ಮಾಡುವ ನೀವು, ನಮ್ಮ ರೈತ ಹೊಲಕ್ಕೆ ದಾರಿ ಇಲ್ಲದೆ ಬಂಡಿ ಹೊಡೆಯಲು ಸಾಧ್ಯವಿಲ್ಲದೆ ರೋಡ್ ಮಾಡಲಿಕ್ಕೆ ಮಾತ್ರ ನೀವು ತಯಾರಿಲ್ಲ. ಯಾರ ಪರವಾಗಿ ಸರ್ಕಾರ ಮಾಡಲಿಕ್ಕೆ ಹೊರಟಿದ್ದೀರಿ? ನೀವು ಯಾವ ಇಂಡಸ್ಟ್ರೀಸ್ ಅನ್ನು ಬೆಳೆಸಲು ಹೊರಟಿದ್ದೀರಿ? ಯಾವ ಇಂಡಸ್ಟ್ರಿ ಇಲ್ಲಿ ಬೆಳೆದಿದೆ? ಬಿಇಎಲ್‌ನಲ್ಲಿ ಅದು ಇವರ ವ್ಯಾಪ್ತಿಗೆ ಬರುವುದಿಲ್ಲವಾದರೂ ಉದಾಹರಣೆಗೆ ಹೇಳುತ್ತೇನೆ. ಬಿಇಎಲ್‌ನಲ್ಲಿ ರಾಡಾರ್ ಸಿಸ್ಟಂ ಅನ್ನು ತಯಾರು ಮಾಡುವ ಮೇಜರ್ ಪ್ರೊಡಕ್ಷನ್ ಇದೆ. ಅದನ್ನು ಏನು ಮಾಡಿದರು? ಅದನ್ನು ಎಲ್ ಅಂಡ್ ಟಿ ಗೆ ಕೊಟ್ಟರು. ಬಿಇಎಲ್‌ನಲ್ಲಿ ರಾಡಾರ್ ಸೆಕ್ಷನ್ ಅನ್ನು ಮುಚ್ಚುತ್ತಿದ್ದಾರೆ. ಮೈಸೂರ್ ಲ್ಯಾಂಪ್ಸ್ ಅನ್ನು ಏನು ಮಾಡಿದಿರಿ? ಅತ್ಯುನ್ನತವಾಗಿ ಬಲ್ಬ್‌ಗಳನ್ನು ತಯಾರು ಮಾಡುತ್ತಿದ್ದಂಥ ಮೈಸೂರ್ ಲ್ಯಾಂಪ್ಸ್ ಅನ್ನು ದಿವಾಳಿ ಎಬ್ಬಿಸಿದರು. ನೀವು ಬೇಕು ಎಂದು ದಿವಾಳಿ ಎಬ್ಬಿಸಿದ್ದು with an intention ಎನ್‌ಜಿಇಎಫ್ ಉತ್ಪಾದನೆ ಮಾಡುವ ವಿದ್ಯುಚ್ಛಕ್ತಿ ಉಪಕರಣಗಳನ್ನು ಜಗತ್ತಿನಲ್ಲಿ ಯಾರೂ ಮಾಡುತ್ತಿರಲಿಲ್ಲ. ಅಂಥ ಉನ್ನತ ಗುಣಮಟ್ಟದ್ದು ಆಗಿತ್ತು. ಅದು ಜರ್ಮನಿ ಜೊತೆ ಕಾಂಪೀಟ್ ಮಾಡುತ್ತಿತ್ತು. ಅದನ್ನು ಕ್ಲೋಸ್ ಮಾಡಿದಿರಿ. ಕ.ವಿ.ಕಾ. ಏನಾಯಿತು? ಯಾರು ನಿರ್ವಹಣೆ ಮಾಡುತ್ತಿದ್ದರು? ಈ ಕೈಗಾರಿಕೆಗಳೆಲ್ಲಾ ನಾಶವಾಗಲು ಕಾರಣವೇನು? ಇದ್ಯಾವುದನ್ನೂ ರಿವ್ಯೆವ್ ಮಾಡುವ, ಉತ್ಪಾದನೆ ಹೆಚ್ಚು ಮಾಡುವ, ಸ್ವಾವಲಂಬನೆ ಆಗುವ ಯಾವುದೇ ಕಾರ್ಯಕ್ರಮವನ್ನೂ ಬಡ್ಜೆಟ್‌ನಲ್ಲಿ ಹೇಳಿಲ್ಲ. ರಾಜ್ಯದ ಅರ್ಥ ವ್ಯವಸ್ಥೆಯ ಬೆಳವಣಿಗೆಯಲ್ಲಿ ಇದು 2ನೇ ಆದ್ಯತಾ ವಲಯ. ಈ 2ನೇ ಆದ್ಯತಾ ವಲಯದ ಗತಿ ಹೀಗಾಗಿದೆ. ಹೀಗಾದಾಗ, ನೀವು ವಿದ್ಯಾವಂತ ನಿರುದ್ಯೋಗಿಗಳಿಗೆ ಕೆಲಸವನ್ನು ಹೇಗೆ ಕೊಡುತ್ತೀರಿ? ನೀವು ಇವತ್ತು ಉದ್ಯೋಗಾವಕಾಶಗಳ ಸೃಷ್ಟಿ ಎಂದು ಇದರಲ್ಲಿ ಹೇಳಿದ್ದೀರಿ. ಇವು ಯಾವ ಉದ್ಯೋಗಾವಕಾಶಗಳು? ಐಟಿ ಕಂಪ್ಯೂಟರ್‌ನಲ್ಲಿ ಉದ್ಯೋಗಾವಕಾಶ ಸಿಕ್ಕಿದೆ ಎಂದು ಹೇಳಿದ್ದೀರಿ. ಅದರಲ್ಲೂ ಕೂಡ ಇವತ್ತು ಐಟಿ ಇಂಜಿನಿಯರ್ಸ್, ಕಂಪ್ಯೂಟರ್ ಇಂಜಿನಿಯರ್ಸ್ ಕರ್ನಾಟಕ ರಾಜ್ಯದಲ್ಲಿ ಒಂದು ವರ್ಷದಲ್ಲಿ ಎಷ್ಟು ಜನರನ್ನೂ ಉತ್ಪಾದನೆ ಮಾಡುತ್ತಿದ್ದಾರೆ? ಎಷ್ಟು ಜನ ಕಂಪ್ಯೂಟರ್ ಇಂಜಿನಿಯರ್‌ಗಳನ್ನು ಉತ್ಪಾದನೆ ಮಾಡುತ್ತಿದ್ದಾರೆ? ಎಷ್ಟು ಜನರಿಗೆ ಕೆಲಸವನ್ನು ನೀವು ಕೊಟ್ಟಿದ್ದೀರಿ? ಅದರಲ್ಲಿ ಹಳ್ಳಿಗಾಡಿನಿಂದ ಬಂದಿರುವ ಜನರ ಸಂಖ್ಯೆ ಎಷ್ಟು? ಅವರಲ್ಲಿ ಎಷ್ಟು ಜನರಿಗೆ ಸೀಟ್ ಸಿಕ್ಕಿದೆ? ಹೇಗೆ 2ನೇ ವಲಯವನ್ನು ಅಭಿವೃದ್ಧಿ ಮಾಡುತ್ತೀರಿ? ಹೇಗೆ ಕೈಗಾರಿಕಾಭಿವೃದ್ಧಿ ಮಾಡುತ್ತೀರಿ? ಹೇಗೆ ಕೈಗಾರಿಕೆಯಲ್ಲಿ ಉತ್ಪಾದನೆ ಹೆಚ್ಚಿಸುತ್ತೀರಿ? ಹೇಗೆ ನಿರುದ್ಯೋಗ ಸಮಸ್ಯೆಯನ್ನು ಪರಿಹಾರ ಮಾಡುತ್ತೀರಿ? ಇದ್ಯಾವುದನ್ನೂ ಮಾಡದೆ, 2ನೇ ಆದ್ಯತಾ ವಲಯ ಇಂಪ್ರೂವ್ ಆಗಿದೆ, ಆಗುತ್ತಿದೆ, ಆರ್ಥಿಕ ವೃದ್ಧಿಯಾಗುತ್ತಿದೆ ಎಂದು ನೀವು ಹೇಳುವುದಾದರೆ.......

ಶ್ರೀ ಜೆ.ಸಿ. ಮಾಧುಸ್ವಾಮಿ:– ಸನ್ಮಾನ್ಯ ಸಿದ್ದರಾಮಯ್ಯನವರಿಗೆ ಒಂದು ಮನವಿ, ಐಟಿ, ಸಾಫ್ಟ್‌ವೇರ್ ಇದರಲ್ಲೇನಾದರೂ ಕೊಟ್ಟಿರುವ ಜಾಬ್ ಅನ್ನು ಯಾರಿಗೆ ಕೊಟ್ಟಿದ್ದಾರೆ, ಯಾವ

ಆಧಾರದ ಮೇಲೆ ಕೊಟ್ಟಿದ್ದಾರೆಂಬ ಮಾಹಿತಿ ತರಿಸಿಕೊಂಡು ನೋಡಬೇಕು. ಇಲ್ಲಿ ಸಾಮಾಜಿಕ ನ್ಯಾಯವೆಂದು ಹೇಳುತ್ತೇವೆ. ಗ್ರಾಮೀಣ, ನಗರ ಎಂದು ಹೇಳುತ್ತೇವೆ, ಒಂದು ಕಡೆ ಎಲ್ಲಿಯಾದರೂ ಸಾಮಾಜಿಕ ನ್ಯಾಯದ ಕಲ್ಪನೆ, ಅರಿವು ಆ ಸಂಸ್ಥೆಯವರಿಗೆ ಇದೆಯೇ ಎಂಬ ಮಾಹಿತಿ ತರಿಸಿಕೊಂಡು ನೋಡಬೇಕು. ಯಾರಿಗೆ ಕೊಟ್ಟಿದ್ದಾರೆ? ಯಾವ ವರ್ಗಕ್ಕೆ ಅಲ್ಲಿ ಮೀಸಲಾತಿ ನಡೆಯುತ್ತಿದೆ? ಅಲ್ಲಿ ಈ ವರ್ಗವನ್ನು ಬಿಟ್ಟರೆ, ಇನ್ನು ಯಾರಾದರೂ ನಂಬರ್ ತೆಗೆದುಕೊಂಡಿದ್ದಾರೆಯೇ? ಇಲ್ಲವೇ ಎಂದು ಎಲ್ಲಿಯಾದರೂ ಒಂದು ಕಡೆ ಸರ್ಕಾರ ನಡೆಸುವವರು ನೋಡಬೇಕು. ಹಳ್ಳಿಯಿಂದ ಬರುವ ಮಕ್ಕಳ ಗತಿ ಏನು? ಸುಮ್ಮನೆ, ಶ್ರೀರಾಮರೆಡ್ಡಿಯವರು, ನಾವು ಭಾಷಣ ಮಾಡಿ ಹೋಗುವುದಕ್ಕಾಗುತ್ತದೆಯೇ? ಅದೇ ಇಂಜಿನಿಯರಿಂಗ್ ಡಿಗ್ರಿ ಇದ್ದರೂ ಕೂಡ ಅಲ್ಲಿ ಇನ್‌ಫ್ಲುಯೆನ್ಸ್ ಇಲ್ಲದಿದ್ದರೆ ಕೆಲಸವಿಲ್ಲ. ಅಲ್ಲಿ ನಮಗೆ ಯಾರಿಗೂ ಇನ್‌ಫ್ಲುಯೆನ್ಸ್ ಸಿಗುವುದಿಲ್ಲ. ಖಂಡಿತವಾಗಿ ಸಿಗುತ್ತಿಲ್ಲ. ಎಲ್ಲಿಯಾದರೂ ಒಂದು ಕಡೆ ಫಿಕ್ಸ್ ಮಾಡಿ. ಅವರ ಮೇಲೆ ಇಷ್ಟು ಟ್ಯಾಕ್ಸ್ ಹಾಕುತ್ತಿದ್ದೇನೆಂದು ನೀವಿಲ್ಲಿ ಭಾಷಣ ಮಾಡಿದ್ದೀರಿ. ಪ್ರೆಷರ್‌ಗೆ ಯೀಲ್ಡ್ ಆಗಿ ನೀವು ಟ್ಯಾಕ್ಸ್ ವಿಥ್‌ಡ್ರಾ ಮಾಡಿದ್ದೀರಿ. ಇದರ ಜೊತೆಗೆ, ಅವರಿಗೆ 100 ಕೋಟಿ ರೂಪಾಯಿ ಎಕ್ಸ್‌ಟ್ರಾ ಫಂಡ್ ಕೊಟ್ಟಿದ್ದೀರಿ. ಕರ್ನಾಟಕದಿಂದ ಓಡಿ ಹೋಗುತ್ತಾರೆ. ನಾವು ಬಾಗಿಲು ಮುಚ್ಚಬೇಕಾಗುತ್ತದೆಂದು. ಇದೆಲ್ಲಾ ಮಾಡಿ ಯಾರ್‍ಯಾರಿಗೆ ಉದ್ಯೋಗ ಕೊಡುತ್ತಿದ್ದಾರೆ? ಯಾವ ಅರ್ಹತೆ, ಮಾನದಂಡದ ಮೇಲೆ ಕೊಡುತ್ತಿದ್ದಾರೆಂಬುದನ್ನು ತಾವು ತರಿಸಿಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ನಾನೇಕೆ ಈ ವಿಚಾರ ಹೇಳಿದೆ ಎಂದರೆ, ನಮ್ಮ ರೈತರಿಗೇನಾದರೂ ಸಹಾಯ ಮಾಡಲಿಕ್ಕೆ ಬಂದರೆ ಸಬ್ಸಿಡಿ ಎಂದು, ಏನೋ ನಾವು ಇವರಿಗೆ ಸಹಾಯಧನ ಕೊಡುತ್ತಿದ್ದೇವೆಂದು ಹೇಳಿ ಅವರಿಗೆ ಇನ್‌ಸಲ್ಟ್ ಮಾಡುವುದು. ಈ ದೊಡ್ಡ ದೊಡ್ಡ ಜನರಿಗೆ ಇನ್ಸೆಂಟೀವ್ ಕೊಡುತ್ತೀರಲ್ಲಾ in the name of reducing tax, and of providing infrastructure, ಇದೇ ಸಿದ್ದರಾಮಯ್ಯನವರು ವಿಥ್‌ಡ್ರಾ ಮಾಡಿದರು. ಪಾಪ, ವಿಥ್‌ಡ್ರಾ ಮಾಡುವುದಕ್ಕೆ ಸಿದ್ದರಾಮಯ್ಯನವರಿಗೆ ಆಸಕ್ತಿ ಇರಲಿಲ್ಲ. ಅದಕ್ಕೆ ನಾನು ಹೇಳಿದೆ he is the victim of circumstances ಅವರಿಗೆ ಆಸಕ್ತಿ ಇರಲಿಲ್ಲ. ಆದರೆ, ಅವರ ಕೈಗಳನ್ನು ಕಟ್ಟಿ ಹಾಕಿದರು. ಹಾಕಿದ್ದನ್ನು ವಿತ್ ಡ್ರಾ ಮಾಡಿದರು. ಅದರ ಜೊತೆಗೆ ಇನ್ನೂ ಕೊಟ್ಟರು. ಅದರ ಜೊತೆಗೆ ಕೇಂದ್ರದ ಮಂತ್ರಿಗಳು ಓಡಿ ಬಂದರು. ಫ್ಲೈ ಓವರ್ ಮೇಲೆ ಫ್ಲೈ ಓವರ್ ಕಟ್ಟಬೇಕು. ಏಕೆಂದರೆ, ಇನ್‌ಫೋಸಿಸ್‌ನವರು ಕಾರು ತೆಗೆದುಕೊಂಡು ಹೋಗಬೇಕಾದರೆ ಆ ಕಾರುಗಳು ಎಲ್ಲಿಯೂ ನಿಲ್ಲಬಾರದು. ನಮ್ಮ ರೈತರ ಬಂಡಿ ರಸ್ತೆ ಇಲ್ಲದೆ ಬಿದ್ದರೂ ಪರವಾಗಿಲ್ಲ. ಇವರು ಕಾರುಗಳು ಮಾತ್ರ ನಿಲ್ಲಬಾರದು. ಇದಕ್ಕಾಗಿ ನೀವು ನೂರಾರು ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದಿರಿ. ಅವರಿಗೆ ಕೊಟ್ಟರೆ ನೀವು ಅದನ್ನು ಸಬ್ಸಿಡಿ ಎಂದು ಹೇಳುವುದಿಲ್ಲ. ಅದು ಸಬ್ಸಿಡಿ ಲೆಕ್ಕಕ್ಕೆ

ಬರುವುದಿಲ್ಲ. ಇನ್‌ಸೆಂಟೀವ್ ಲೆಕ್ಕಕ್ಕೆ ಬರುವುದಿಲ್ಲ. ಅದನ್ನು ನೀವು ಪ್ರೋತ್ಸಾಹ ಎಂದು ಹೇಳುತ್ತೀರಿ. ಆದರೆ ನಮ್ಮ ರೈತರಿಗೆ ಕೊಟ್ಟಾಗ ಮಾತ್ರ ನೀವು ಸಬ್ಸಿಡಿ ಎಂದು ಹೇಳುತ್ತೀರಿ. ರೈತರಿಗೆ ನೀವು ಎಷ್ಟು ಕೊಡುತ್ತಿದ್ದೀರಿ? ಕೊಟ್ಟಿದ್ದನ್ನೂ ನೀವು ಕಿತ್ತುಕೊಂಡು ಬಿಟ್ಟಿರಿ. ಅಂದರೆ ಈ ಇಂಬ್ಯಾಲೆನ್ಸ್ ಏಕೆ ಆಗುತ್ತಿದೆ? ಏಕೆಂದರೆ, ಇವತ್ತಿನ whole economy is dictated by world Bank and IMF. ಎಲ್ಲಾ ರಾಜ್ಯಗಳ ಈ ದೇಶದ ಅರ್ಥವ್ಯವಸ್ಥೆಯನ್ನು ನಿರ್ದೇಶನ ಮಾಡುವುದು, ಅವರ ಅಭಿಪ್ರಾಯಗಳಿಗೆ ತಕ್ಕಂತೆ ಇಲ್ಲಿ ಅರ್ಥ ವ್ಯವಸ್ಥೆಗಳನ್ನು ರೂಪಿಸುವುದು. ನಮ್ಮ ದೇಶದ ಅವಶ್ಯಕತೆಗೋಸ್ಕರ ಅರ್ಥ ವ್ಯವಸ್ಥೆಯನ್ನು ರೂಪಿಸತಕ್ಕಂಥದ್ದಲ್ಲ, ನಮ್ಮ ದೇಶಕ್ಕೆ ಅನುಗುಣವಾಗಿ ಎಕಾನಾಮಿಕ್ ಪಾಲಿಸಿಯನ್ನು ರೂಪಿಸತಕ್ಕಂಥದ್ದಲ್ಲ. ಅದಕ್ಕೆ ಮತ್ತೊಬ್ಬ ಸುಪ್ರಸಿದ್ಧ ಅರ್ಥಶಾಸ್ತ್ರಜ್ಞ ಮೈಕೇಲ್ ಚೆಸ್ಸೂಡೆವ್ಸ್ಕಿ ಹೇಳುತ್ತಾರೆ. ಬಹುಶಃ ಅದನ್ನು ತಾವು ಯಾರಾದರೂ ಓದಿರಬಹುದು. "Globalisation of poverty" ಎಂದು ಹೇಳತಕ್ಕಂಥ ಒಂದು ಪುಸ್ತಕವನ್ನು ಅವರು ಬರೆದಿದ್ದಾರೆ. ಅದರಲ್ಲಿ ಏನು ಬರೆಯುತ್ತಾರೆಂದರೆ, "The poverty of the third world countries is not created by its own, it is created by the G-7 countries." ಎಂದು ಅವರು ಏಕೆ ಕ್ರಿಯೇಟ್ ಮಾಡುತ್ತಾರೆ. ನಮ್ಮನ್ನು ಸ್ವಾವಲಂಬಿಗಲಾಗುವುದಕ್ಕೆ ಬಿಡುವುದಿಲ್ಲ. ನಮ್ಮ ಕಾಲ ಮೇಲೆ ನಾವು ನಿಂತುಕೊಳ್ಳುವುದಕ್ಕೆ ಬಿಡುವುದಿಲ್ಲ. In the name of technology ನಮ್ಮ ಹತ್ತಿರ ಬನ್ನಿ ಎಂದು ಹೇಳುತ್ತಾರೆ. ನೀವು ಅದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡಬೇಡಿ ಎಂದು ಹೇಳುತ್ತಾರೆ. ಅದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡುವ ಅವಶ್ಯಕತೆ ಇಲ್ಲ. ನಮ್ಮ ಹತ್ತಿರ ಟೆಕ್ನಾಲಜಿ ಇದೆ ತೆಗೆದುಕೊಂಡು ಹೋಗಿ ಅದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡಬೇಡಿ. ನೀವು ಇನ್‌ವೆಸ್ಟ್‌ಮೆಂಟ್ ಮಾಡುವುದಾದರೆ, ನಾವು ಹಣ ಕೊಡುವುದಿಲ್ಲ. ಅಂತ dictation. ಎರಡನೆಯದಾಗಿ, ಮಾನ್ಯ ಸಿದ್ದರಾಮಯ್ಯನವರ ಬಗ್ಗೆ ನಮಗೆ ಬಹಳ ಗೌರವ ಇದೆ. ನಾನು ಅವರನ್ನು ಬಹಳ ವಿನಯದಿಂದ ಪ್ರಾರ್ಥನೆ ಮಾಡುತ್ತಿದ್ದೇನೆ. ಅವರು ಈ ವಿಚಾರದ ಬಗ್ಗೆ ಉತ್ತರ ಕೊಡಬೇಕಾಗುತ್ತದೆ. ಅವರು ಒಂದು ಕಡೆ ಹೇಳಿದ್ದಾರೆ. ರೈತರ ಪಂಪ್ ಸೆಟ್ಟುಗಳಿಗೆ ಮೀಟರ್ ಹಾಕತಕ್ಕಂಥದ್ದು ಖಂಡಿತವಾಗಿ ಹಣ ವಸೂಲಿ ಮಾಡುವುದಕ್ಕೆ ಅಲ್ಲ. ಆದರೆ ಅದನ್ನು ಲೆಕ್ಕ ಇಡುವುದಕ್ಕೆ ಮೀಟರ್ ಹಾಕುತ್ತೇವೆ ಅವರು ಎಷ್ಟು ಖರ್ಚು ಮಾಡುತ್ತಾರೆ ಅದನ್ನು ಅಕೌಂಟ್ ಇಡಲಿಕ್ಕೆ ಎಂದು ಹೇಳಿದ್ದಾರೆ. With all humbleness, I ask Sri Siddaramaiah, to honestly reply, 'Is it not the condition of the World Bank?' Yes, it is the condition of the World Bank. I swear before anybody that it is the condition of the World Bank to measure not only the power consumption, but to fix the rate ultimately. ಹಾಗೇನು ಇಲ್ಲ ಎನ್ನುವುದಾದರೆ, ಪ್ರಾಮಾಣಿಕವಾಗಿ power consumption measure ಮಾಡುವುದಕ್ಕೆ

ಎನ್ನುವ ಒಂದೇ ಉದ್ದೇಶ ಇದ್ದರೆ, ಟ್ರಾನ್ಸ್‌ಫಾರ್ಮ್‌ರ್‌ನಲ್ಲಿ ಮಾಡಿ. ಎಷ್ಟು ಕನ್‌ಸಂಷನ್ ಆಗುತ್ತಿದೆ ಎಂದು ಕಂಡಕ್ಟರ್‌ನಲ್ಲಿ ಮೇಷರ್ ಮಾಡಬಹುದಲ್ಲವೆ? If that is only the intention. ನೀವು ಪವರ್ ಎಷ್ಟು ಕನ್‌ಸಂಷನ್ ಆಗುತ್ತಿದೆ ಎಂದು ಟ್ರಾನ್ಸ್‌ಫಾರ್ಮ್‌ರ್‌ಲ್ಲಿ ಮೇಷರ್ ಮಾಡಬಹುದಲ್ಲವೆ? ಮೀಟರ್ ಹಾಕುವ ಉದ್ದೇಶವೇ, ಒಂದಲ್ಲ ಒಂದು ದಿವಸ ಅದರ ಆಧಾರದ ಮೇಲೆ ದರವನ್ನು ನಿಗದಿಪಡಿಸುವುದು. ಇನ್ನು What are all the reforms? ಏನೇನು ಪವರ್ ಸೆಕ್ಟಾರ್‌ನಲ್ಲಿ ನೀವು ರಿಫಾರ್ಮ್ಸ್ ತರಬೇಕೆಂದು ಹೇಳುತ್ತೀರಿ. ಆ ರಿಫಾರ್ಮ್ಸ್ ಯಾರ ಪರವಾಗಿ ತರುತ್ತೀರಿ? ಯಾರಿಗೋಸ್ಕರ ತರುತ್ತೀರಿ? ನಿನ್ನೆ ದಿವಸ ಇಲ್ಲಿ ಪವರ್ ಪರ್ಚೇಸ್ ಅಗ್ರಿಮೆಂಟ್‌ನಲ್ಲಿ ಇರುವ ವೇರಿಯೇಷನ್ ಬಗ್ಗೆ ಚರ್ಚೆಯಾಯಿತು. ಇವತ್ತು ನೀವು ಪವರ್ ಪ್ರೊಡೆಕ್ಷನ್ ಅನ್ನು, ಟ್ರಾನ್ಸ್‌ಮಿಷನ್ ಅನ್ನು, ಎಲ್ಲವನ್ನೂ ಖಾಸಗಿಯವರಿಗೆ ಕೊಟ್ಟುಬಿಟ್ಟಿರಿ. ಇದರ ಬಗ್ಗೆ ಏನಾಗುತ್ತದೆಂದು ಎಂದಾದರೂ ನೀವು ಆಲೋಚನೆ ಮಾಡಿದಿರಾ? ಮಹಾರಾಷ್ಟ್ರದಲ್ಲಿದ್ದ "ಎನ್ರಾನ್" ಭವಿಷ್ಯ ಏನಾಯಿತು? What happened to it? ಅದು ನಮ್ಮ ಕಣ್ಣು ಮುಂದೆ ಉದಾಹರಣೆ ಇದೆ. ಆದರೂ ನಾವು ಇವತ್ತು ಪಾಠ ಕಲಿಯುವುದಕ್ಕೆ ತಯಾರಿಲ್ಲ. ಇಡೀ ಸರ್ಕಾರಿ ವಲಯವನ್ನು ಸಾರ್ವಜನಿಕ ವಲಯವನ್ನು ಖಾಸಗೀಕರಣ ಮಾಡಲಿಕ್ಕೆ ಹೊರಟಿರತಕ್ಕಂಥ ಷರತ್ತುಗಳನ್ನು ಹಾಕಿರುವುದು ವರ್ಲ್ಡ್ ಬ್ಯಾಂಕ್ ಇಲ್ಲದೇ ಹೋದರೆ, ಕೆ.ಇ.ಬಿ. ಇದ್ದದ್ದನ್ನು ಕೆ.ಪಿ.ಟಿ.ಸಿ.ಎಲ್. ಎಂದು ಮಾಡತಕ್ಕಂಥ ಅವಶ್ಯಕತೆ ಇರಲಿಲ್ಲ. ಕೆ.ಪಿ.ಟಿ.ಸಿ.ಎಲ್. ಎಂದು ಇದ್ದದ್ದನ್ನು, ಬೈಫರ್‌ಕೇಟ್ ಮಾಡಿ, ಬೆಸ್ಕಾಂ, ಮೆಸ್ಕಾಂ, ಹೆಸ್ಕಾಂ, ಜೆಸ್ಕಾಂ, ಎಂದು ಮಾಡುವ ಅವಶ್ಯಕತೆ ಇರಲಿಲ್ಲ. ಇದರ ಜೊತೆಗೆ ಇನ್ನೊಂದು ಕಾಮ್ ಬಂದಿದೆ. ಅದು ಯಾವುದು ಎಂದರೆ, ಚಾಮುಂಡೇಶ್ವರಿ ಎಲೆಕ್ಟ್ರಿಕಲ್ ಸಪ್ಲೈ ಕಂಪನಿ ಎಂದು ಈಗಾಗಲೇ ಅದನ್ನು ಮಾಡಿದ್ದಾರೆ. ಬ್ಯಾಂಕ್ ಗ್ಯಾರಂಟಿ ಏಕೆ? Why you have made this as limited companies? What was the intention? What is the intention? ಕೆ.ಇ.ಬಿ. ಇದ್ದಾಗ ಏನಾಗಿತ್ತು? They created RS. 40,000 crore of assets, when it was K.E.B. Rs. 40,000 crore assets ನ್ನು ಕ್ರಿಯೇಟ್ ಮಾಡಿದಂಥ ನೌಕರರು ಮತ್ತು ಆ ಅಧಿಕಾರಿಗಳು ಇವತ್ತು ಭಿಕಾರಿಗಳಾಗಬೇಕೆ? ಅವರು ಇವತ್ತು ಕಂಪನಿಗಳಿಗೆ ಗುಲಾಮರಾಗಬೇಕೆ? ಅಲ್ಲಿರತಕ್ಕಂಥ ನೌಕರರು ಹಾಗೂ ಅಧಿಕಾರಿಗಳು ಇವತ್ತು ಅಲ್ಲಿ ಸುಮಾರು ನಲವತ್ತು ಸಾವಿರ ಕೋಟಿ ಆಸ್ತಿಯನ್ನು ಸಂಪಾದನೆ ಮಾಡಿ ಇಟ್ಟಿದ್ದಾರೆ, ಆ ನಲವತ್ತು ಸಾವಿರ ಕೋಟಿ ರೂಪಾಯಿ ಅಸೆಟ್ಸ್‌ನ್ನು ಇವತ್ತು ಖಾಸಗಿಯವರಿಗೆ ಕೊಡಲಿಕ್ಕೆ ಮಾಡಿರತಕ್ಕಂಥ ಇದು ಒಂದು ಹುನ್ನಾರ. ಬೇರೆ ಏನಿಲ್ಲ. ಅದಕ್ಕೆ, ಈ ಎಲ್ಲಾ ರಾಜ್ಯದ, ಇದರಲ್ಲಿ ಇನ್‌ಡೈರೆಕ್ಟ್ ಪ್ರಶ್ನೆಯೇ ಇಲ್ಲ. Directly it is known. ಇಡೀ ರಾಜ್ಯದ ಅರ್ಥ ವ್ಯವಸ್ಥೆಯ ಮೇಲೆ ಅವರ ಕರಿ ನೆರಳು ಬಿದ್ದಿದೆ. ಆ ಕರಿ ನೆರಳಿನಲ್ಲಿಯೇ ಈ ಬಜೆಟ್ ತಯಾರಾಗಿರುವುದು, ಅದಕ್ಕೇ ನಾನು ಹೇಳಿದ್ದು, Sri Siddaramaiah is a victim

of circumstances. ಅದರಿಂದ ಹೊರ ಬರಬೇಕಾದರೆ ರಾಜಕೀಯ ಇಚ್ಛಾಶಕ್ತಿ ಇರಬೇಕು. ಪೊಲಿಟಿಕಲ್ ವಿಲ್ ಇರಬೇಕು. ಬೇರೆ ರಾಜ್ಯಗಳ ಉದಾಹರಣೆ ಕೂಡ ನಮ್ಮ ಕಣ್ಣು ಮುಂದೆ ಇದೆ. ನಾನು ಖಾಸಗಿ ಬಂಡವಾಳಕ್ಕೆ ವಿರೋಧ ಇಲ್ಲ. ವಿದೇಶಿ ಬಂಡವಾಳಕ್ಕೆ ನಾನು ವಿರೋಧ ಮಾಡುತ್ತಿಲ್ಲ. Private capital, yes, Privatisation, no. Foreign capital, yes, under our own conditions, not on their own conditions. ಖಾಸಗಿ ಬಂಡವಾಳಕ್ಕೆ ವಿರೋಧ ಮಾಡುವ ಅವಶ್ಯಕತೆ ಇಲ್ಲ. ಆದರೆ ಆ ಖಾಸಗಿ ಬಂಡವಾಳವನ್ನು ಉಪಯೋಗಿಸಿ ನಮ್ಮ ಅರ್ಥ ವ್ಯವಸ್ಥೆಯನ್ನು ಆರೋಗ್ಯಕರವಾಗಿ ಬೆಳೆಸತಕ್ಕಂಥ ವ್ಯವಸ್ಥೆಯನ್ನು ಏಕೆ ಮಾಡಲಿಕ್ಕೆ ಆಗಲಿಲ್ಲ? I am not against private capital, But, I am only against privatisation.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಹಾರಾಷ್ಟ್ರದಲ್ಲಿ ಪವರ್ ಕನ್‌ಸೂಮ್ ಮಾಡುವುದರ ಬಗ್ಗೆ, ಆ ರಾಜ್ಯದ ಮುಖ್ಯ ಕಾರ್ಯದರ್ಶಿಯವರು ಒಂದು ಸುತ್ತೋಲೆಯನ್ನು ಹೊರಡಿಸಿದ್ದಾರೆ. ಮಾನ್ಯ ಸಿದ್ದರಾಮಯ್ಯನವರೇ, ತಮಗೆ ಇದು ಗೊತ್ತಿದೆಯೇ? ಮಹಾರಾಷ್ಟ್ರದ ಮುಖ್ಯ ಕಾರ್ಯದರ್ಶಿಯವರು, 20 ಪರ್ಸೆಂಟ್ ಕಟ್, amongst official category and urban category for utilisation of free power to IP sets, ಎಂದು ಮಾಡಿದ್ದಾರೆ. ನಮಗೆ ಏನಾಗಿದೆ? ಮಹಾರಾಷ್ಟ್ರ ಸರ್ಕಾರದ ಮುಖ್ಯ ಕಾರ್ಯದರ್ಶಿಯವರು ನಿರ್ಧಾಕ್ಷೀಣ್ಯವಾಗಿ, ಎಲ್ಲಾ ಅಧಿಕಾರಿಗಳ ಮನೆಯಲ್ಲಿ ಸರ್ಕಾರಿ ಕಛೇರಿಗಳಲ್ಲಿ 20 ಪರ್ಸೆಂಟ್ ಪವರ್ ಕಟ್ ಮಾಡಿ ಹಳ್ಳಿಗೆ ಕೊಡಿ ಎಂದು ಆದೇಶ ಕೊಡುತ್ತಾರೆ. Wheree are we going?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಅಧ್ಯಕ್ಷರೆ, ವಿದೇಶಿ ಬಂಡವಾಳವನ್ನು ನಾವು ವಿರೋದ ಮಾಡಿ ನಾವು ಬೆಳೆಯುವುದಕ್ಕೆ ಆಗುವುದಿಲ್ಲ. ಖಾಸಗಿ ಬಂಡವಾಳವನ್ನು ನಾವು ವಿರೋದ ಮಾಡಿ ಆಗುವುದಿಲ್ಲ. ಏಕೆ ಎಂದರೆ ನಮ್ಮಲ್ಲಿ ಬಂಡವಾಳವಿಲ್ಲ. This is only the reason they are giving. ಏಕೆ ಖಾಸಗಿ ಬಂಡವಾಳಕ್ಕೆ, ವಿದೇಶಿ ಬಂಡವಾಳಕ್ಕೆ, ಅದು ಸಂಪೂರ್ಣ ಸತ್ಯಾನಾ? ನಾವು ಇದರ ಬಗ್ಗೆ ಪ್ರಾಮಾಣಿಕವಾಗಿ ವಿಶ್ಲೇಷಣೆ ಮಾಡಬೇಕಾಗುತ್ತದೆ. ಮಿಲಿಯನ್ಸ್ ಅಂಡ್ ಮಿಲಿಯನ್ಸ್ ಅಫ್ ಪೀಪಲ್ಸ್‌ನ್ನು ಅವರ ಪರ್ಚೇಸಿಂಗ್ ಕೆಪ್ಯಾಸಿಟಿಯನ್ನು ಸಂಪೂರ್ಣವಾಗಿ ನಾಶ ಮಾಡಿ ನಮ್ಮ ದೇಶದಲ್ಲಿ ಬಂಡವಾಳ ಇಲ್ಲ ಎಂದು ಹೇಳಿದರೆ, ಎಲ್ಲಿಂದ ಬಂಡವಾಳ ಬರುವುದಕ್ಕೆ ಸಾಧ್ಯವಾಗುತ್ತದೆ? ನಿಮ್ಮ ಟ್ಯಾಕ್ಸ್ ಬಗ್ಗೆ ನಂತರ ನಾನು ಹೇಳುತ್ತೇನೆ, ಈಗ ಒಂದು ಉದಾಹರಣೆ ಕೊಡುತ್ತೇನೆ. What is the methodology you adopted for fixation of tax? ನಾನು ಹೋದ ಬಜೆಟ್ ಸಂದರ್ಭದಲ್ಲಿ ಹೇಳಿದೆ, widening of tax base has not at all been thought. Fortunately, you are having good staff like Sudharakar Rao, Dr. Subramanya. I do not know why they have not applied their brain to widen the tax. This is the problem.

ಒಂದು ಕಡೆ ಟ್ಯಾಕ್ಸ್ ಬೇಸ್ ಅನ್ನು ವೈಡನ್ ಮಾಡುವುದಕ್ಕೆ ಪ್ರಯತ್ನ ಮಾಡುವುದಿಲ್ಲ. ಇನ್ನೊಂದು ಕಡೆ purchasing capacity of the commonman increase ಮಾಡಲಿಕ್ಕೆ ಪ್ರಯತ್ನ ಪಡುವುದಿಲ್ಲ. ಇನ್ನೊಂದು ಕಡೆ ಇಂಪ್ಲಾಯ್‌ಮೆಂಟ್ ಅಪರ್ಚುನಿಟಿಯನ್ನು ಕ್ರಿಯೇಟ್ ಮಾಡಲಿಕ್ಕೆ ಪ್ರಯತ್ನ ಮಾಡುವುದಿಲ್ಲ. So, you want to grow the economy. How is it possible? How is it possible? It is impossible, without widening the tax base, without increasing the purchasing power of the commonman. Without providing the employment opportunities, you cannot just imagine the growth of economy at all. If it is a growth, it is a jobless growth, it is a productionless growth. It crumbles down anything. ಇದು ಎರಡನೇ ಆದ್ಯತಾ ವಲಯದ ಪರಿಸ್ಥಿತಿಯಾಗಿದೆ. ಮತ್ತೆ "Service sector contributes 53% for the growth of economy," ಎಂದು ಮಾನ್ಯ ಸಿದ್ದರಾಮಯ್ಯನವರು ಹೇಳಿದ್ದಾರೆ. 53 ಪರ್ಸೆಂಟ್ ಯಾವ ರೀತಿಯಾಗಿ ಕಾಂಟ್ರಿಬ್ಯೂಟ್ ಆಗುತ್ತಿದೆ ಎಂಬುದು ತಾವು ತಿಳಿಸಬೇಕು. ನಾರಾಯಣ ಮೂರ್ತಿ ಹಾಗೂ ವಿಪ್ರೋ ಸಂಸ್ಥೆಗೆ 500 ಕೋಟಿ ರೂಪಾಯಿ ವಾರ್ಷಿಕ ಲಾಭ ಬಂದರೆ ಕರ್ನಾಟಕ ರಾಜ್ಯಕ್ಕೆ ಆದಂಥ ಲಾಭವೇನು? ಮತ್ತೆ ಕರ್ನಾಟಕ ರಾಜ್ಯದ ಅರ್ಥ ವ್ಯವಸ್ಥೆ ಬೆಳೆಯುವುದಕ್ಕೆ ಆದಂಥ ಲಾಭವೇನು? What is the amount you are getting out of that transaction? ಆ ನಿವ್ವಳ ಲಾಭದಲ್ಲಿ ಕರ್ನಾಟಕ ರಾಜ್ಯಕ್ಕೆ ಆಗತಕ್ಕಂಥ ಪ್ರಯೋಜನವೆಷ್ಟು? ನಮ್ಮ ರಾಜ್ಯದ ಅರ್ಥ ವ್ಯವಸ್ಥೇಗೆ ಸರ್ವೀಸ್ ಸೆಕ್ಟಾರ್‌ನಿಂದ 53 ಪರ್ಸೆಂಟ್ ಗ್ರೋಥ್ ಕಾಂಟ್ರಿಬ್ಯೂಷನ್ ಆಗುತ್ತಿದೆ ಎಂದು ತಾವು ಹೇಳಿದ್ದೀರಿ. ಆದ್ದರಿಂದ, ಇದನ್ನು ಯಾವ ಆಧಾರದ ಮೇಲೆ ತಾವು ಹೇಳುತ್ತೀರಿ? Is it production oriented or employment oriented? Even if you take it that it is production oriented like software, it is selling in the international market. ಇವತ್ತಿನ ದಿವಸ ರಫ್ತುನಿಂದ ನಮಗೆ ಆಗಿರತಕ್ಕಂಥ ಲಾಭವೇನು ಎಂಬುದರ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಪ್ರಮಾಣಿಕವಾಗಿ ಉತ್ತರ ಹೇಳಬೇಕು. ಅವರು ಸಾಫ್ಟ್‌ವೇರ್‌ನ್ನು ರಫ್ತು ಮಾಡುತ್ತಿರುವುದರಿಂದ ಅವರಿಗೆ ಲಾಭ ಬರುತ್ತಿದೆ. ಆದರೆ, ಇವತ್ತಿನ ದಿವಸ What is the benefit we got out of it? ಇದರಿಂದ ನಮ್ಮ ರಾಜ್ಯಕ್ಕೆ ಏನೂ ಪ್ರಯೋಜನವಾಗಿಲ್ಲ. ಆದರೆ, ತಾವು ಲೆಕ್ಕದಲ್ಲಿ ತೋರಿಸುವಾಗ ನಮ್ಮ ಎಕಾನಮಿ ಗ್ರೂಥ್‌ಗೆ 53 ಪರ್ಸೆಂಟ್‌ನಷ್ಟು ಕಾಂಟ್ರಿಬ್ಯೂಷನ್ ಮಾಡುತ್ತಿದೆ ಎಂದು ತಾವು ಹೇಳುತ್ತಿದ್ದೀರಿ. ಆ ಕಾಂಟ್ರಿಬ್ಯೂಷನ್ ನಮ್ಮ ಕರ್ನಾಟಕ ರಾಜ್ಯದಲ್ಲಿರುವ ಬಡ ಜನತೆಯ ಜೀವನವನ್ನು ಉತ್ತಮಗೊಳಿಸುವುದಕ್ಕೆ ಇದೇನಾದರೂ ಉಪಯೋಗ–ವಾಗುತ್ತಿದೆಯೇ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಆದ್ದರಿಂದ, ಇದು ಯಾವ ರೀತಿಯಾಗಿ ಕಾಂಟ್ರಿಬ್ಯೂಷನ್ ಆಗುತ್ತದೆ? ಇವತ್ತಿನ ದಿವಸ ಶಿಕ್ಷಣ

ಕೂಡ ಬಹಳ ಪ್ರಮುಖವಾದಂಥ ವಿಚಾರವಾಗಿದೆ. ಶಿಕ್ಷಣದ ಬಗ್ಗೆ ಇವತ್ತಿನ ದಿವಸ ಎಷ್ಟು ಹೇಳಿದರೂ ಕೂಡ ಕಡಿಮೆ ಎಂದು ನನಗನ್ನಿಸುತ್ತದೆ. ಶಿಕ್ಷಣದಲ್ಲಿ ನಮ್ಮ ಆದ್ಯತೆ ಏನು? ಮತ್ತೆ ಯಾವ್ಯಾವ ಶಿಕ್ಷಣಕ್ಕೆ ಎಷ್ಟೆಷ್ಟು ಆದ್ಯತೆಯನ್ನು ನಾವು ಕೊಡುತ್ತಿದ್ದೇವೆ? ಮತ್ತೆ ಇವತಿನ ದಿವಸ ಶಿಕ್ಷಣದ ಆದ್ಯತೆಗಳನ್ನು ಸರಿಯಾಗಿ ಗುರುತಿಸುವುದಕ್ಕೆ ಆಗಿದೆಯೆ? ಪ್ರೈಮರಿ ಮತ್ತು ಹೈಯರ್ ಎಜ್ಯುಕೇಶನ್ ಹಾಗೂ ಟೆಕ್ನಿಕಲ್ ಎಜ್ಯುಕೇಶನ್ ನಮ್ಮಲ್ಲಿವೆ. ಆದರೆ, ಇವತ್ತಿನ ದಿವಸ ನಮ್ಮ ರಾಜ್ಯದಲ್ಲಿ ಆಗುತ್ತಿರುವ ಮತ್ತು ನೋಡುತ್ತಿರುವ ದುರಂತ ಏನೆಂದರೆ, primary education versus higher education ಈ ರೀತಿಯಾದ ಒಂದು ವಾತಾವರಣವನ್ನು ನಾವು ನಿರ್ಮಾಣ ಮಾಡಿದ್ದೇವೆ. ಇವತ್ತಿನ ದಿವಸ ಹೈಯರ್ ಎಜ್ಯುಕೇಷನ್‌ಗೆ ಸರ್ಕಾರ ಇಷ್ಟೊಂದು ಹಣವನ್ನು ಇನ್‌ವೆಸ್ಟ್ ಮಾಡತಕ್ಕಂಥ ಅವಶ್ಯಕತೆ ಇಲ್ಲ. ಇದರ ಪರಿಣಾಮಗಳೇನೆಂದರೆ, ಎಲ್ಲಾ ವಿಶ್ವವಿದ್ಯಾಲಯಗಳನ್ನು ಖಾಸಗಿಯವರಿಗೆ ಕೊಡತಕ್ಕಂಥ ವಿಚಾರ. ಖಾಸಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪನೆ ಮಾಡುವುದರ ಬಗ್ಗೆ ಡೀಮ್ಡ್ ಯೂನಿವರ್ಸಿಟಿ ಕೇಸ್ ಸಂಬಂಧಪಟ್ಟಂತೆ ಸುಪ್ರೀಂ ಕೋರ್ಟ್ ಈಗಾಗಲೇ ತೀರ್ಮಾನ ಕೊಟ್ಟಿದೆ. ಆದರೂ ಸಹ ನಮ್ಮಲ್ಲಿ ಹೇರಳವಾದಂಥ ಖಾಸಗಿ ಕಾಲೇಜುಗಳನ್ನು ಸ್ಥಾಪನೆ ಮಾಡಲಾಗುತ್ತಿದೆ. ಈ ವರ್ಷ 300 ಬಿ.ಎಡ್. ಕಾಲೇಜುಗಳನ್ನು ಸ್ಥಾಪನೆ ಮಾಡುವುದಕ್ಕೆ ಅನುಮತಿ ಕೊಟ್ಟಿದ್ದಾರೆ. ಹಾಗೆಯೇ, ಇಂಜಿನಿಯರಿಂಗ್ ಮತ್ತು ಮೆಡಿಕಲ್ ಕಾಲೇಜ್‌ಗಳಿಗೂ ಅನುಮತಿ ನೀಡಲಾಗಿದೆ. ಆದ್ದರಿಂದ, ಇದರ ಅರ್ಥ ಏನೆಂಬುದನ್ನು ತಿಳಿಸಬೇಕು. So, you want to commercialise the whole higher education. ಮಾನ್ಯ ಸಿದ್ದರಾಮಯ್ಯನವರಿಗೆ ಬಡವರ ಮೇಲೆ ಬಹಳ ಕಾಳಜಿ ಇದೆ. ಆದರೆ, ಕರ್ನಾಟಕ ರಾಜ್ಯದಲ್ಲಿ ಬಡವರ ಮಕ್ಕಳು ಎಷ್ಟು ಜನ ಡಾಕ್ಟರ್ಸ್ ಆಗಿದ್ದಾರೆ ಮತ್ತು ಇಂಜಿನಿಯರ್‌ಗಳು ಎಷ್ಟು ಜನ ಆಗಿದ್ದಾರೆ? ಹಾಗೆಯೇ ಸಿ.ಇ.ಟಿ. ಯಿಂದ ಬಡವರ ಮಕ್ಕಳಿಗೆ ಎಷ್ಟು ಸಹಾಯವಾಗುತ್ತಿದೆ ಎಂಬುದನ್ನು ಮಾನ್ಯ ಸಿದ್ದರಾಮಯ್ಯನವರು ಈ ಸಂದರ್ಭದಲ್ಲಿ ಹೇಳಬೇಕಾಗುತ್ತದೆ. ಮತ್ತೆ ಸಿ.ಇ.ಟಿ. ವ್ಯವಸ್ಥೆಯಿಂದ ಎಷ್ಟು ಜನ ಬಡವರ ಮಕ್ಕಳಿಗೆ ಪ್ರಯೋಜನವಾಗುತ್ತಿದೆ ಎಂಬುದರ ಜೊತೆಗೆ ಇದರಿಂದ ಎಷ್ಟು ಜನ ಬಡವರ ಮಕ್ಕಳಿಗೆ ಓದುವುದಕ್ಕೆ ಸಾಧ್ಯವಾಗುತ್ತಿದೆ ಎಂಬುದು ತಿಳಿಸಬೇಕು. ಈಗಾಗಲೇ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಐ.ಟಿ. ಮತ್ತು ಕಂಪ್ಯೂಟರ್ ಕೋರ್ಸ್‌ಗೆ ಎಷ್ಟು ಜನ ಬಡ ಮಕ್ಕಳಿಗೆ ಅಡ್ಮಿಷನ್ ಸಿಗುತ್ತಿದೆ ಎಂಬುದನ್ನು ತಾವು ಹೇಳಬೇಕಾಗುತ್ತದೆ. ಇವತ್ತಿನ ದಿವಸ ಇವರು ಎಲ್ಲಿಗೆ ಹೋಗಬೇಕು. ಇವತ್ತಿನ ದಿವಸ ಬಡವರ ಮಕ್ಕಳು ಜಾಸ್ತಿ ಎಂದರೆ ಪ್ರೈಮರಿ ಸ್ಕೂಲ್ ಟೀಚರ್ ಆಗಬೇಕಷ್ಟೆ. ಇದನ್ನು ಬಿಟ್ಟು ಬೇರೇನೂ ಊಹೆ ಮಾಡುವುದಕ್ಕೆ ಅವರಿಗೆ ಇವತ್ತಿನ ದಿವಸ ಸಾಧ್ಯವಿಲ್ಲ. ಏಕೆಂದರೆ, ಆ ಮಟ್ಟಕ್ಕೆ ಇವತ್ತಿನ ದಿವಸ ಶಿಕ್ಷಣವನ್ನು ತಂದಿಟ್ಟಿದ್ದೀರಿ.

ಶ್ರೀ ಗೋವಿಂದ್ ಎಂ. ಕಾರಜೋಳ್:– ಸನ್ಮಾನ್ಯ ಉಪಾಧ್ಯಕ್ಷರೆ, ಇವತ್ತಿನ ದಿವಸ ಬಡವರ ಮಕ್ಕಳು ಶಿಕ್ಷಕರಾಗುವುದಕ್ಕೆ ಸಾಧ್ಯವಿಲ್ಲ. ಏಕೆಂದರೆ ಇವತ್ತಿನ ದಿವಸ ಟಿ.ಸಿ.ಹೆಚ್. ಅಡ್ಮಿಷನ್‌ಗೂ ಕೂಡ ಲಕ್ಷಾಂತರ ರೂಪಾಯಿ ಡೊನೇಷನ್ ಕೊಡಬೇಕಾಗುತ್ತದೆ.

ಉಪಾಧ್ಯಕ್ಷರು:– ಮಾನ್ಯ ಶ್ರೀರಾಮರೆಡ್ಡಿಯವರು ಬೇಗ ಮಾತನಾಡಿ ಮುಗಿಸಬೇಕು. ನಿಮಗೆ ಅಲಾಟ್ ಮಾಡಿರತಕ್ಕಂಥ ಸಮಯ ಮುಗಿದಿದೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಶ್ರೀರಾಮರೆಡ್ಡಿಯವರು ಈಗಾಗಲೇ ಹೇಳಿರಕ್ಕಂಥ ವಿಷಯದ ಬಗ್ಗೆ ನಾನು ಹೇಳುವುದೇನೆಂದರೆ, ಇವತ್ತಿನ ದಿವಸ ಕ್ಯಾಂಪಸ್ ರಿಕ್ರೂಟ್‌ಮೆಂಟ್ ಎಂದು ಯಾರು ಯಾವ ಕಾಲೇಜಿಗೆ ಬಂದು ರಿಕ್ರ್ಯೂಟ್‌ಮೆಂಟ್ ಮಾಡಿಕೊಂಡು ಹೋಗುತ್ತಿರುವ ಕಾಲೇಜ್‌ಗೆ ಡಿಮಾಂಡ್ ಬಂದಿರತಕ್ಕಂಥ ಶತಮಾನಕ್ಕೆ ನಾವು ಬಂದಿದ್ದೇವೆ. ಕೇವಲ ಮೂರ್‍ನಾಲ್ಕು ಇಂಜಿನಿಯರಿಂಗ್ ಕಾಲೇಜುಗಳಿಗೆ ಮಾತ್ರ ಅಡ್ಮಿಷನ್ನು ವಿದ್ಯಾರ್ಥಿಗಳು ಕೇಳುತ್ತಾರೆಂದರೆ, ಅಲ್ಲಿ ಕ್ಯಾಂಪಸ್ ರಿಕ್ರೂಟ್‌ಮೆಂಟ್ ಇದೆ. ನಾಲ್ಕು ಅಥವಾ ಐದನೇ ಸೆಮಿಸ್ಟರ್ ಇದ್ದಾಗಲೇ ಹುಡುಗರನ್ನು ಕ್ಯಾಂಪಸ್‌ನಲ್ಲಿ ಆಯ್ಕೆ ಮಾಡುತ್ತಿದ್ದಾರೆ. ಇವತ್ತಿನ ದಿವಸ ಅಲ್ಲಿ ಕ್ಯೂ ನಿಂತುಕೊಂಡಿರತಕ್ಕಂಥ ಮಕ್ಕಳಿಗೆ ಕೆಲಸ ಇಲ್ಲ. ಆದರೆ, ಇಲ್ಲಿ ಮೂರನೇ ಸೆಮಿಸ್ಟರ್ ಓದುತ್ತಿರುವಾಗಲೇ ಸೆಲೆಕ್ಟ್ ಮಾಡತಕ್ಕಂಥ ದಂದೆ ಈಗ ಹೊಸದಾಗಿ ಪ್ರಾರಂಭವಾಗಿದೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಉಪಾಧ್ಯಕ್ಷರೆ, ಪ್ರದೇಶಾಭಿವೃದ್ಧಿ ಕಾರ್ಯಕ್ರಮಗಳ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಇದರಲ್ಲಿ ಹೇಳಿದ್ದಾರೆ.

ಉಪಾಧ್ಯಕ್ಷರು:– ನಿಮಗೆ ಅಲಾಟ್ ಮಾಡಿರತಕ್ಕಂಥ ಸಮಯ ಈಗಾಗಲೇ ಮುಗಿದಿದೆ. ತಮಗೆ ಒಂದು ಗಂಟೆಯವರೆಗೆ ಅವಧಿ ಕೊಡಲಾಗಿತ್ತು. ಈಗಾಗಲೇ ಸಮಯ ಮುಗಿದು ಹೋಯಿತು. ಇನ್ನು ಐದು ನಿಮಿಷದಲ್ಲಿ ತಮ್ಮ ಮಾತನ್ನು ದಯಮಾಡಿ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಉಪಾಧಕ್ಷರೆ, ಇನ್ನು ಐದು ನಿಮಿಷದಲ್ಲಿ ಮಾತನಾಡಿ ಮುಗಿಸುವುದಕ್ಕೆ ಆಗುವುದಿಲ್ಲ. ದಯವಿಟ್ಟು ತಾವು ಕ್ಷಮಿಸಬೇಕು. ಕನಿಷ್ಟ ಇನ್ನು ನನಗೆ 15 ನಿಮಿಷವಾದರೂ ಬೇಕಾಗುತ್ತದೆ.

ಉಪಾಧ್ಯಕ್ಷರು:– ಇನ್ನು 10 ನಿಮಿಷದಲ್ಲಿ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಮಾನ್ಯ ಉಪಾಧ್ಯಕ್ಷರೆ, ಪ್ರದೇಶಾಭಿವೃದ್ಧಿ ಮಂಡಳಿಗಳ ಬಗ್ಗೆ ಮಾನ್ಯ ಸಿದ್ದರಾಮಯ್ಯನವರು ಇದರಲ್ಲಿ ಹೇಳಿದ್ದಾರೆ. ಬಯಲು ಸೀಮೆ ಅಭಿವೃದ್ಧಿ ಮಂಡಳಿಗೆ ಮತ್ತು ಕರಾವಳಿ, ಅಭಿವೃದ್ಧಿ ಮಂಡಳಿಗೆ ಇಷ್ಟೆಂದು ನಿಗದಿ ಮಾಡಿದ್ದಾರೆ. ಹಾಗೆಯೇ ಮೈದಾನ ಅಭಿವೃದ್ಧಿ ಮಂಡಳಿಗೆ 5 ಕೋಟಿ ರೂಪಾಯಿ ನಿಗದಿ ಮಾಡಲಾಗಿದೆ ಎಂದು ಹೇಳಿದ್ದಾರೆ. ನಾನು ಹೇಳತಕ್ಕಂಥದ್ದನ್ನು ಮಾನ್ಯ ಸಿದ್ದರಾಮಯ್ಯರವರು ದಯವಿಟ್ಟು ಗಮನಿಸಬೇಕು. ತಾವು ಕೊಟ್ಟಿರತಕ್ಕಂಥ ಹಣ ಹಳೆಯ ಬಿಲ್‌ಗಳನ್ನು ಕ್ಲಿಯರ್ ಮಾಡುವುದಕ್ಕೂ ಕೂಡ ಸಾಕಾಗುವುದಿಲ್ಲ. ಮಾತನಾಡಿದರೆ ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ನಾವು ಅಭಿವೃದ್ಧಿ ಮಾಡುತ್ತೇವೆಂದು ಜಪ ಮಾಡುತ್ತೀರಿ. ಕರ್ನಾಟಕ ರಾಜ್ಯದಲ್ಲಿ ಇವತ್ತಿನ ದಿವಸ 75 ತಾಲ್ಲೂಕುಗಳು

ಬಯಲು ಸೀಮೆಗೆ ಸೇರುತ್ತವೆ. ಈ 75 ತಾಲ್ಲೂಕುಗಳೂ ಸಹ ಅತಿ ಹಿಂದುಳಿದಿರತಕ್ಕಂಥ ಬಯಲು ಸೀಮೆ ಪ್ರದೇಶಗಳಾಗಿವೆ. ಈ ಬಯಲು ಸೀಮೆ ಪ್ರದೇಶಗಳನ್ನು ಅಭಿವೃದ್ಧಿ ಮಾಡತಕ್ಕಂಥ ಪ್ರಾಮಾಣಿಕ ಪ್ರಯತ್ನ ನಿಮ್ಮಲ್ಲಿದ್ದರೆ ಒಂದೊಂದು ತಾಲ್ಲೂಕಿಗೆ ಒಂದು ವರ್ಷಕ್ಕೆ ಕನಿಷ್ಠ 50 ಲಕ್ಷ ರೂಪಾಯಿಗಳನ್ನಾದರೂ ಕೊಡಬೇಕಾಗುತ್ತದೆ. 75 ತಾಲ್ಲೂಕುಗಳಿಗೆ ಕನಿಷ್ಠವೆಂದರೂ ಕೂಡ ಸುಮಾರು 35 ಕೋಟಿ ರೂಪಾಯಿಗಳಾದರೂ ಕೊಡಬೇಕಾಗಿತ್ತು. ಆದರೆ, ನೀವು ಕೇವಲ 5 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಸನ್ಮಾನ್ಯ ಉಪಾಧ್ಯಕ್ಷರೂ ಕೂಡ ಬಯಲು ಸೀಮೆಗೆ ಸೇರಿದವರಾಗಿದ್ದಾರೆ. ಆದ್ದರಿಂದ, ಈ ಸಂದರ್ಭದಲ್ಲಿ ನಾನು ಹೇಳುವುದೇನೆಂದರೆ ಇವರು ಕೊಟ್ಟಿರಕ್ಕಂಥ 5 ಕೋಟಿ ರೂಪಾಯಿ ಹಳೆಯ ಬಿಲ್‌ಗಳಿಗೆ ಕೊಡುವುದಕ್ಕೆ ಸಾಕಾಗುವುದಿಲ್ಲ. ಈ ರೀತಿಯಾದಾಗ ಬಯಲು ಸೀಮೆ ಅಭಿವೃದ್ಧಿ ಮಂಡಳಿಯಲ್ಲಿ ಹೊಸ ಕಾಮಗಾರಿಗಳನ್ನು ಹೇಗೆ ತೆಗೆದುಕೊಳ್ಳುವುದು? ಇದನ್ನು ಉದಾಹರಣೆಯಾಗಿ ಹೇಳುತ್ತಿದ್ದೇನೆ. ಇವತ್ತಿನ ದಿವಸ ಎಲ್ಲಾ ಬೋರ್ಡ್‌ಗಳಿಗೂ ಇಷ್ಟೇ ಹಣವನ್ನು ಕೊಟ್ಟಿದ್ದೀರಿ. ಆದರೆ, ನಂಜುಂಡಪ್ಪನವರ ವರದಿಯ ಆಧಾರದ ಮೇಲೆ ಅಭಿವೃದ್ಧಿ ಮಾಡುತ್ತಿದ್ದೇವೆಂದು ಹೇಳುತ್ತಿದ್ದೀರಿ. ತಾವು ನಂಜುಂಡಪ್ಪನವರ ವರದಿಯನ್ನು ಆಧಾರವಾಗಿಟ್ಟುಕೊಂಡು ಜಪ ಮಾಡುತ್ತಿದ್ದೀರಿ. ಎಲ್ಲಾ ಮಂಡಳಿಗಳನ್ನು ಅಬಾಲಿಷ್ ಮಾಡಬೇಕೆಂದು ಅವರು ಹೇಳಿದ್ದಾರೆ. ಆದ್ದರಿಂದ ಇವುಗಳನ್ನು ಅಬಾಲಿಷ್ ಮಾಡಿ. ಮತ್ತೆ ಅವರು ನೀಡಿರತಕ್ಕಂಥ ವರದಿಯನ್ನು ಕಾನ್‌ಸ್ಟಿಟ್ಯೂಷನ್ ಎಂದು ತೀರ್ಮಾನ ಮಾಡಿ. ಇದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಮತ್ತೆ ಇದಕ್ಕೆ ನಮ್ಮದೇನೂ ತಕರಾರೂ ಕೂಡ ಇಲ್ಲ. ತಾವು ಇದನ್ನು ಪ್ರಸ್ತಾಪ ಮಾಡಿರುವುದರಿಂದ ಇದನ್ನು ಹೇಳುತ್ತಿದ್ದೇನೆ. ತಾವು ಪ್ರಸ್ತಾಪ ಮಾಡದಿದ್ದರೆ ನಾನು ಇದನ್ನು ಇಲ್ಲಿ ಹೇಳುತ್ತಿರಲಿಲ್ಲ. ನಾನು ಎಲ್ಲದಕ್ಕೂ ಹಣ ಕೊಡುತ್ತೇನೆಂದು ಹೇಳುತ್ತಾ ಇಷ್ಟು ಹಣ ಕೊಡುತ್ತಾ ಹೋದರೆ ಹೇಗೆ? ಇನ್ನು ನನಗೆ ಇಷ್ಟವಾದ ವಿಷಯವಾದ ಗ್ರಾಮೀಣ ನೈರ್ಮಲ್ಯದ ಬಗ್ಗೆ ಹೇಳೋಣವೆಂದರೆ ಮಾನ್ಯ ಸಚಿವರಾದಂಥ ಮಹದೇವಪ್ಪನವರು ಇಲ್ಲಿ ಇಲ್ಲ. ಇವರು ರೂರಲ್ ಡೆವಲಪ್‌ಮೆಂಟ್‌ಗೆ ಕೇವಲ 3 ಪೈಸೆ ಕೊಟ್ಟಿದ್ದಾರೆ. ಅಂದರೆ, ಒಂದು ರೂಪಾಯಿಯಲ್ಲಿ 3 ಪೈಸೆಯಷ್ಟು ಗ್ರಾಮೀಣ ಅಭಿವೃದ್ಧಿಗೆ ಮೀಸಲಾಗಿಟ್ಟಿದ್ದೀರಿ. ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಇವತ್ತಿನ ದಿವಸ ವೈಪರೀತ್ಯತೆ ಮತ್ತು ವಿಪರ್ಯಾಸಗಳು ಯಾವ ರೀತಿ ಇದೇ ಎಂದರೆ, ನೆನ್ನೆ ದಿವಸ ಮಾನ್ಯ ವಾಟಾಳ್‌ನಾಗರಾಜ್‌ರವರು ಇಲ್ಲಿ ಮಾತನಾಡತಕ್ಕಂಥ ಸಂದರ್ಭದಲ್ಲಿ ಶೌಚಾಲಯಗಳ ಬಗ್ಗೆ ಗಂಭೀರವಾದಂಥ ಚರ್ಚೆ ನಡೆಯಿತು. 80% of the population lives in the rural area. ಇದರಲ್ಲಿ 50 ಪರ್ಸೆಂಟ್‌ನಷ್ಟು ಮಹಿಳೆಯರಿದ್ದು, ಇವರಿಗೆ ಶೌಚಾಲಯಗಳು ಇಲ್ಲದೇದ ಇರುವುದರಿಂದ ಆಗತಕ್ಕಂಥ ಅವಸ್ಥೆಗಳ ಬಗ್ಗೆ ಚರ್ಚೆಯಾಯಿತು. ಶೌಚಾಲಯಗಳಿಗೆ ನೀರಿಲ್ಲ ಮತ್ತು ಅನೇಕ ರೀತಿಯ ಸೌಲಭ್ಯಗಳನ್ನು ಕಲ್ಪಿಸಿಲ್ಲ ಎಂಬುದರ ಬಗ್ಗೆ ಚರ್ಚೆಯಾಯಿತು. ನಾನು ಮತ್ತೆ ಇದನ್ನು ರಿಪೀಟ್ ಮಾಡುವುದಕ್ಕೆ ಹೋಗುವುದಿಲ್ಲ. ಮತ್ತೆ ಈ ವಿಷಯವನ್ನು ರಿಪೀಟ್

ಮಾಡಿ ಅವರಿಗೆ ಅವಮಾನ ಮಾಡುವುದಕ್ಕೆ ನಾನು ತಯಾರಿಲ್ಲ. ಆದರೆ ಒಂದು ಕಾಂಟ್ರಾಸ್ಟ್ ಮಾನ್ಯ ಸಿದ್ಧರಾಮಯ್ಯನವರೆ, ನಾನು ಒಂದು ವರ್ಷದ ಹಿಂದೆ ಒಬ್ಬ ಐಎಎಸ್ ಆಫೀಸರ್ ಫ್ರೆಂಡ್ ಮನೆಗೆ ಹೋಗಿದ್ದೆ. ಅವರು ಮನೆಯನ್ನು ಬಹಳ ಚೆನ್ನಾಗಿ ಕಟ್ಟಿಸಿದ್ದರು. ಅವರು ಮನೆಯನ್ನು ತೋರಿಸಿದರು. ಆದರೆ ಅವರ ಹೆಸರನ್ನು ಹೇಳುವುದು ಬೇಡ. ಅವರು ಈ ರಾಜ್ಯದ ಐ.ಎ.ಎಸ್. ಆಫೀಸರ್, ಅವರು, ಮಾಜಿಗಳು, ಅವರು ಈಗ ಬದುಕಿಲ್ಲಾ ಬಿಡಿ. ಅವರು ಸತ್ತುಹೋಗಿದ್ದಾರೆ. ಅವರ ಹೆಸರನ್ನು ಹೇಳುವುದು ಬೇಡ. ಮನೆಯನ್ನು ತೋರಿಸಿದರು ನಂತರ ಬಾತ್‌ರೂಂನ್ನು ತೋರಿಸಿದರು. It is called master-bathroom. ಈಗ ಮಾಸ್ಟರ್ ಬಾತ್‌ರೂಂ ಮಾಸ್ಟರ್ ಬೆಡ್‌ರೂಂ ಎಂದು ಮಾಡಿದ್ದಾರೆ. ನಿಮಗೆ ಗೊತ್ತಿದೆಯೋ ಅಥವಾ ಇಲ್ಲವೊ? That master-bathroom. ಮಾನ್ಯ ರಾಯರೆಡ್ಡಿಯವರೆ, ಮಾನ್ಯ ಉಪಮುಖ್ಯಮಂತ್ರಿಗಳನ್ನು ಸ್ವಲ್ಪ ಕೇಳುವುದಕ್ಕೆ ಬಿಡಿ. ಅವರನ್ನು ಮಾತನಾಡಿಸಬೇಡಿ. It costs Rs. 21/2 lakhs. ಇದು ಈ ರಾಜ್ಯದಲ್ಲಿ ಒಂದು ಕಡೆಗೆ,

ಶ್ರೀ ಆರಗ ಜ್ಞಾನೇಂದ್ರ:– ಅಂತಹ ಬಾತ್‌ರೂಮ್‌ನಲ್ಲಿ ಹೋಗಿ ಏನು ಮಾಡುವುದು?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅದು ನನಗೆ ಗೊತ್ತಿಲ್ಲ. ಅದನ್ನು ಅವರನ್ನೇ ಕೇಳಬೇಕು. ಎರಡೂವರೆ ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿ ಬಾತ್‌ರೂಮ್ ಕಟ್ಟಿಸತಕ್ಕಂಥದ್ದು ಒಂದು ಕಡೆ, ಟಾಯಿಲೆಟ್ ಇಲ್ಲದೆ ಚಂಬು ಹಿಡಿದುಕೊಂಡು ಬೀದಿಗೆ ಹೋಗತಕ್ಕಂಥದ್ದು ಇನ್ನೊಂದು ಕಡೆಗೆ. ಇಂತಹ ವಿಪರ್ಯಾಸಗಳು ಈ ರಾಜ್ಯದಲ್ಲಿ ಇದ್ದು ಗ್ರಾಮೀಣಾಭಿವೃದ್ಧಿಗೆ 3 ಪರ್ಸೆಂಟ್ ಹಣವನ್ನು ಇಟ್ಟು ಶೌಚಾಲಯಗಳ ಬಗ್ಗೆ ಇಲ್ಲಿ ನಾವು ಭಾಷಣವನ್ನು ಹೊಡೆಯುತ್ತಿದ್ದೇವೆ. ನಮಗೆ ಏನು ಅನಿಸುವುದೇ ಇಲ್ಲ. ನಮಗೆ ಆತ್ಮಸಾಕ್ಷಿ ಇಲ್ಲ.

ಶ್ರೀ ಡಿ.ಆರ್. ಪಾಟೀಲ:– ಮಾನ್ಯ ಅಧ್ಯಕ್ಷರೆ, ಇರಿಗೇಷನ್‌ಗೆ, ಪವರ್‌ಗೆ, ಪಂಚಾಯತ್ ರಾಜ್‌ಗೆ ಹಣವನ್ನು ಖರ್ಚು ಮಾಡುತ್ತಾರಲ್ಲಾ ಅದು ಗ್ರಾಮೀಣಾಭಿವೃದ್ಧಿಗೆ ಅಲ್ಲವೆ? ಅದು ಏನು ಎನ್ನುವುದು ನಮಗೆ ಸ್ವಲ್ಪ ಗೊತ್ತಾಗಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ಅದಕ್ಕೂ ಇದಕ್ಕೂ ಏನು ಸಂಬಂಧವಿಲ್ಲ. ಆ ವಿಪರ್ಯಾಸಕ್ಕೆ ಈ ಗ್ಯಾಪ್ ಇದೆಯಲ್ಲಾ;

ಶ್ರೀ ಜೆ.ಸಿ. ಮಾಧುಸ್ವಾಮಿ (ಚಿಕ್ಕನಾಯಕನಹಳ್ಳಿ):– ತಾವು ಆಯ್ಕೆ ಅಂಶಗಳನ್ನು ತೆಗೆದುನೋಡಬೇಕು. ಒಂದು ಕೆರೆಯನ್ನು ಕಟ್ಟುವುದಕ್ಕೆ ಸುಮಾರು 10 ರಿಂದ 30 ಲಕ್ಷ ರೂಪಾಯಿಗಳನ್ನು ಖರ್ಚು ಮಾಡಿದರೆ, beneficiaries will be 3 to 5 families. ಅದು ಸೋಷಿಯಲ್ ಜಸ್ಟೀಸ್ ಅಲ್ಲ. ನಾವು ಹಾಗೆ ಏಕ್‌ದಂ ಆ ರೀತಿಯಾಗಿ ಹೇಳುವುದಕ್ಕಾಗುವುದಿಲ್ಲ. ಇರಿಗೇಷನ್‌ಗೆ 3 ಸಾವಿರ ಕೋಟಿ ರೂ ಕರ್ನಾಟಕಕ್ಕೆ ಕೊಡುತ್ತೇವೆಂದು ನೀವು ಹೇಳಿದಿರಿ. ನಾವು 12 ಜಿಲ್ಲೆಯವರು ನರಳುತ್ತಿದ್ದೇವೆ. ಬೋರ್‌ವೆಲ್‌ಗಳನ್ನು ಹಾಕಿಸಿಕೊಂಡೂ ನೀರು ಬೀಳುವುದಿಲ್ಲ. ಕರೆಂಟ್ ಇಲ್ಲವೆಂದು ನರಳುತ್ತಿದ್ದೇವೆ. How can we take it as rural development

when we are deprived of that benefit? 3 ಸಾವಿರ ಕೋಟಿ ರೂ ಹಣವನ್ನು ನೀವು ಒಂದು ಕಡೆ ಖರ್ಚು ಮಾಡಿ ಅಲ್ಲಿಂದ ಗ್ರಾಮೀಣ ಅಭಿವೃದ್ಧಿ at whose cost and where? ನೀವು ಅದರೊಳಗೆ ಎಷ್ಟು ಜನ ಪಾಪ್ಯುಲೇಷನ್‌ನ್ನು ಕವರ್ ಮಾಡಿದ್ದೀರಿ? ನಾನು ಕಳೆದ ಅಧಿವೇಶನದಲ್ಲಿ ಅವರಿಗೆ ಹೇಳಿದೆ. ಯಾವುದೇ ಮೀಡಿಯಂ ಹಾಗೂ ಮೇಜರ್ ಇರಿಗೇಷನ್‌ನಲ್ಲಿ ಅಗ್ರಿಕಲ್ಚರ್ ಅಂಡ್ ಸರ್‌ಪ್ಲಸ್ ವಾಟರ್ ಮ್ಯಾನೇಜ್‌ಮೆಂಟ್ ಆಗುವುದಿಲ್ಲ. ಮೈನರ್ ಇರಿಗೇಷನ್‌ಗೆ ಏನಾದರೂ ಸ್ಟ್ರೆಸ್ ಕೊಟ್ಟು ಮಾಡಿದ್ದರೆ ಇವತ್ತಿನ ದಿವಸ ಗ್ರಾಮೀಣ ಪ್ರದೇಶಗಳು ಬದುಕುತ್ತಿದ್ದವು. ನೀವು ಮೇಜರ್ ಇರಿಗೇಷನ್‌ನ್ನು ಎಲ್ಲಿ ಮಾಡುತ್ತಿದ್ದೀರಿ? What is the percentage of population covered out of that amount? Is it 4% or 6% or 10%. Can it be treated as rural development?

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಮಾನ್ಯ ಉಪಾಧ್ಯಕ್ಷರೆ, ನಾನು ಅದನ್ನೇ ಹೇಳಿದೆ, ಇವರು ಹೊಸ ನೀರಾವರಿ ಯೋಜನೆಗಳ ಬಗ್ಗೆ ಹೇಳಿದರು. ನೇತ್ರಾವತಿ ತಿರುವಿನ ಬಗ್ಗೆ ಹಿಂದಿನ ಸರ್ಕಾರವು ಸರ್ವೆಗೆಂದು 5 ಕೋಟಿ ರೂಪಾಯಿಗಳನ್ನು ಇಟ್ಟಿದ್ದರು. ಈ ವರ್ಷ 12 ಕೋಟಿ ರೂಪಾಯಿಗಳು ಬೇಕೆಂದು ನಾವೆಲ್ಲರೂ ದಮ್ಮಯ್ಯ ಹಾಕಿದೆವು. ನೀವು ಒಂದು ಪೈಸೆಯನ್ನು ಇಟ್ಟಿರುವುದಿಲ್ಲ. ಹೊಸ ನೀರಾವರಿ ಯೋಜನೆಗಳಲ್ಲಿ 70 ಪರ್ಸೆಂಟ್ ಭೂಮಿಯನ್ನು ಕೃಷಿಗೆ ಒಳಪಡಿಸುತ್ತೇವೆಂದು ಹೇಳಿದ್ದೀರಿ. ನಿಮಗೆ ನಾವೆಲ್ಲರೂ ದಮ್ಮಯ್ಯ ಹಾಕಿದೆವು. 12 ಕೋಟಿ ರೂಪಾಯಿಗಳನ್ನು ಸರ್ವೆಗೆಂದು ತೆಗೆದಿಡಿ ಎಂದು ಹೇಳಿದೆವು. ಅದು ನಿಮ್ಮ ಕೈಯಲ್ಲಿ ಆಗಲಿಲ್ಲ. ಹಿಂದಿನ ಎಸ್.ಎಂ. ಕೃಷ್ಣರವರ ಸರ್ಕಾರವು ಅದಕ್ಕಾಗಿ 5 ಕೋಟಿ ರೂಪಾಯಿಗಳನ್ನು ತೆಗೆದಿಟ್ಟಿದ್ದರು. ಅದು ಸಾಕಾಗುವುದಿಲ್ಲ. ಇನ್ನು 12 ಕೋಟಿ ರೂಪಾಯಿಗಳು ಬೇಕೆಂದು ನಾವೆಲ್ಲರೂ ದಮ್ಮಯ್ಯ ಹಾಕಿದರೂ ಕೂಡ ನೀವು ಕೊಡಲಿಲ್ಲ. ಹೇಗೆ ನೀವು ಕೃಷಿ ಅಭಿವೃದ್ಧಿ ಮಾಡುತ್ತೇವೆಂದು ಹೇಳುತ್ತೀರಿ? ಅದನ್ನು ರೂರಲ್ ಡೆವಲಪ್‌ಮೆಂಟ್ ಎಂದು ನೀವು ಕರೆಯುತ್ತೀರಾ? ಜನರಿಗೆ ನೀರು ಕೊಟ್ಟಿದ್ದೇವೆಂದು ಹೇಳುತ್ತೀರಾ? ಅಲ್ಲಲ್ಲಾ Between man and man and between human-beings ಕಾಂಟ್ರಡಕ್ಷನ್ ಇರುತ್ತದೆ. ಅದು ಬೇರೆ ವಿಚಾರ. ಅಂದರೆ ಈ ಕಾಂಟ್ರಡಕ್ಷನ್ ಈ ಕಾಂಟ್ರಸ್ಟ್ ಇದೆಯಲ್ಲಾ, ಇದಕ್ಕೆ ನಿಮ್ಮ ಹತ್ತಿರ ಉತ್ತರವೇನು? ಸರ್ವೆಗೆ ನಾವು 12 ಕೋಟಿ ರೂಪಾಯಿಗಳನ್ನು ಕೊಡಿ ಎಂದು ಕೇಳಿದೆವು ನೀವು ಕೊಟ್ಟಿದ್ದೀರಾ? ಈಗಲೇ ಕೊಡುತ್ತಿದ್ದೀರಿ ನಾನು ಅದಕ್ಕಾಗಿ ಹೇಳುತ್ತಿರುವುದು. You have well-managed, but not developed.

ಶ್ರೀ ಎಸ್.ಎಸ್. ಪಾಟೀಲ್:- ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ತಮ್ಮ ಭಾಷಣವನ್ನು ಮುಂದುವರಿಸುವುದಿದ್ದರೆ ಅವರು ಮಧ್ಯಾಹ್ನ ತಮ್ಮ ಭಾಷಣವನ್ನು ಮುಂದುವರಿಸಲಿ. ಈಗ 2 ಗಂಟೆ ಸಮಯವಾಗಿದೆ ಮಾತನಾಡುವುದು ಇದ್ದರೆ ತಪ್ಪೇನೂ ಇಲ್ಲ. ಅವರು ಬೇಕಾದರೆ ತಮ್ಮ ಭಾಷಣವನ್ನು ಮಾಡಲಿ.

ಉಪಾಧ್ಯಕ್ಷರು:- ಮಾನ್ಯ ಶ್ರೀರಾಮರೆಡ್ಡಿಯವರೆ, ಇನ್ನು 5 ನಿಮಿಷದಲ್ಲಿ ಕನ್‌ಕ್ಲೂಡ್ ಮಾಡಿ ತಾವು ಮುಗಿಸಬೇಕು.

ಶ್ರೀ ಎಸ್.ಎಸ್. ಪಾಟೀಲ್:- ನಾನು ಅವರು ಮಾತನಾಡುವುದು ಬೇಡವೆನ್ನುವುದಿಲ್ಲ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ತಾವು ಮುಗಿಸಿ ಎಂದರೆ ಇನ್ನು 10 ನಿಮಿಷದಲ್ಲಿ ನಾನು ಮುಗಿಸುತ್ತೇನೆ. ಇಲ್ಲವೆಂದರೆ ತಾವು ಬ್ರೇಕ್ ಮಾಡುವುದಾಗಿದ್ದರೆ ಮಾಡಬಹುದು.

ಶ್ರೀ ಅರಗ ಜ್ಞಾನೇಂದ್ರ:- ಮಾನ್ಯ ಉಪಾಧ್ಯಕ್ಷರೆ, ತಾವು ಟೈಮ್‌ನ್ನು ಅಲಾಟ್ ಮಾಡಿದ್ದೀರಿ. ಅಷ್ಟು ಹೊತ್ತು ಮಾತನಾಡುವುದಕ್ಕೆ ಎಲ್ಲರಿಗೂ ಅವಕಾಶ ಕೊಡುತ್ತಾ ಹೋದರೆ ಆಯಿತು. ತಾವು ಎಲ್ಲರಿಗೂ ಟೈಮ್ ಅಡ್ಜಸ್ಟ್ ಮಾಡಬೇಕು.

ಉಪಾಧ್ಯಕ್ಷರು:- ಮಾನ್ಯ ಶ್ರೀರಾಮರೆಡ್ಡಿಯವರಿಗೆ ಮಾಡನಾಡುವುದಕ್ಕೆ ಒಂದು ಗಂಟೆ ಅವಕಾಶವನ್ನು ಕೊಟ್ಟಿದ್ದು, ಇನ್ನು 5 ನಿಮಿಷದಲ್ಲಿ ತಾವು ಮುಗಿಸಬೇಕು. ಮಧ್ಯಾಹ್ನ ಬೇಡ. ಒಂದೈದು ನಿಮಿಷದಲ್ಲಿ ತಮ್ಮ ಭಾಷಣವನ್ನು ಕನ್‌ಕ್ಲೂಡ್ ಮಾಡಿ ಮುಗಿಸಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:- ಗ್ರಾಮೀಣಾಭಿವೃದ್ಧಿ ಬಗ್ಗೆ ಮಾತನಾಡತಕ್ಕಂತಹ ನಾವು ಇದು ನಿಜವಾಗಿಯೂ ಎಲ್ಲಿಂದ ಆಗಬೇಕು? ಗ್ರಾಮ ನೈರ್ಮಲ್ಯ ಎಲ್ಲಿಂದ ಆಗಬೇಕು. ಅದಕ್ಕೆ ಹಣ ಎಷ್ಟು ಕೊಡಬೇಕು ಎಂಬುದರ ಬಗ್ಗೆ ನಾವು ವೈಜ್ಞಾನಿಕವಾಗಿ ಲೆಕ್ಕವನ್ನು ಹಾಕಬೇಕು. ಆಶ್ರಯ ಯೋಜನೆಗೆ 20 ಸಾವಿರ ರೂ ಮನೆಗೆ ನೀವು ಹಣವನ್ನು ಕೊಟ್ಟು ನೀವು ಮನೆಯನ್ನು ಕಟ್ಟುತ್ತಿದ್ದೇವೆಂದು ಹೇಳಿದರೆ ಆ ಮನೆಗಳು ಇರುವುದಕ್ಕೆ ಸಾಧ್ಯವಿಲ್ಲ. ಅಲ್ಲಿ ನೈರ್ಮಲ್ಯ ಬರುವುದಕ್ಕೆ ಸಾಧ್ಯವಿಲ್ಲ. ಇನ್ನು ಹಣಕಾಸಿನ ಬಗ್ಗೆ ಹೇಳುವುದಾದರೆ ಈ ವರ್ಷದ ಆಯವ್ಯಯದಲ್ಲಿ 2005-05ನೇ ಸಾಲಿಗೆ 34,592 ಕೋಟಿ ರೂಪಾಯಿಗಳ ನಿರೀಕ್ಷೆ ಇದೆ. 35,615 ಕೋಟಿ ರೂಪಾಯಿಗಳು ಖರ್ಚು ಆಗುತ್ತಿರುವುದು. ಇದರಲ್ಲಿ ಒಂದು ಸಾವಿರ ಕೋಟಿ ರೂಪಾಯಿಗಳು ಹೆಚ್ಚು ಕಡಿಮೆ ಇದೆ. ಆ ಎರಾಟಾ ನಮಗೆ ಬಂದಿರುವುದಿಲ್ಲ. ಅದು ಆಯಿತು. ನೀವು ಇನ್ನೊಂದು ಕಡೆ ಏನು ಹೇಳುತ್ತೀರಿ? ಇಲ್ಲಿ ತೆರಿಗೆಯೇತರ ರಾಜಸ್ವ ನಾನ್ ಟ್ಯಾಕ್ಸ್ ರೆವಿನ್ಯೂ 2004-05ನೇ ಸಾಲಿನಲ್ಲಿ 4486 ಕೋಟಿ ರೂಪಾಯಿಗಳು, 2004-05, 3768 ಕೋಟಿ ರೂಪಾಯಿಗಳು, 2005-06ಕ್ಕೆ 4090 ಕೋಟಿ ರೂಪಾಯಿಗಳಾಗುತ್ತದೆ ಎಂದು ಹೇಳುತ್ತೀರಿ. ಇದಕ್ಕೆ ಏನು ಆಧಾರವಿದೆ? ಇದು ಎಕ್ಸ್‌ಪೆಕ್ಟೆಡ್. What is the base? How are you going to get it? ಅದು ಎಲ್ಲಿ ಹೇಗೆ ಬರುತ್ತದೆಂದು ತಾವು ಇದರಲ್ಲಿ ತೋರಿಸಿಯೇ ಇಲ್ಲ. ನೀವು ಅದನ್ನು ಹೇಗೆ ಎಕ್ಸ್‌ಪೆಕ್ಟ್ ಮಾಡುತ್ತಿದ್ದೀರಿ? ಟ್ಯಾಕ್ಸಬಲ್ ರೆವಿನ್ಯೂ, ನಾನ್ ಟ್ಯಾಕ್ಸಬಲ್ ರೆವಿನ್ಯೂ reduce ಆದರೆ Where is revenue surplus? ಮತ್ತೆ ವಿತ್ತಿಯ ಕೊರತೆ ಫೈನಾನ್‌ಷಿಯಲ್ ಡೆಫಿಸಿಟ್ 800 ಕೋಟಿ ರೂಪಾಯಿಗಳು ಅಂತಿಮವಾಗಿ ಆಗುತ್ತದೆಂದು ಹೇಳುವಾಗ ಈಗ ಇವರ ಪ್ರಕಾರ ಅಷ್ಟೇ ಹೇಳಿರುವಂತಹದ್ದು. ಅದು ಅಷ್ಟಕ್ಕೇ ನಿಲ್ಲುವುದಿಲ್ಲ. ಏಕೆಂದರೆ, ಪ್ಲಾನ್ ಎಕ್ಸ್‌ಪೆಂಡಿಚರ್‌ಗೂ ಮತ್ತು ನಾನ್ ಪ್ಲಾನ್ ಎಕ್ಸ್‌ಪೆಂಡಿಚರ್‌ಗೂ ಅದರಲ್ಲಿ ಲಾಟ್ ಆಫ್ ಗ್ಯಾಪ್ ಇದೆ. Non-plan

expenditure is swallowing so much. ಪ್ಲಾನ್ ಎಕ್ಸ್‌ಪೆಂಡಿಚರ್, ನೀವೇನು ಮಾಡಿದ್ದೀರೆಂದರೆ ಎಕ್ಸ್‌ಪೆಂಡಿಚರ್‌ನ್ನು ಕಡಿಮೆ ಮಾಡಿದ್ದೇವೆಂದು ಹೇಳಿದ್ದೀರಿ ಸಿದ್ದರಾಮಯ್ಯನವರೆ, ನೀವು ಯಾವ ಲೆಕ್ಕದಲ್ಲಿ ಕಡಿಮೆ ಮಾಡಿರುವುದೆಂದರೆ ಇರತಕ್ಕಂತಹ ಉದ್ಯೋಗ ಅವಕಾಶಗಳನ್ನು ಕಡಿಮೆ ಮಾಡಿಬಿಟ್ಟು ಸರ್ವೀಸ್ ಸೆಕ್ಟಾರ್‌ನಲ್ಲಿರತಕ್ಕಂತಹ ಎಲ್ಲಾ ಎಂಪ್ಲಾಯಿ–ಮೆಂಟ್‌ಗಳನ್ನು ತೆಗೆದುಬಿಟ್ಟು ನಾನು ಅದನ್ನು ಇವತ್ತು ಉಳಿತಾಯ ಮಾಡಿದ್ದೇವೆ. Service sector ನಲ್ಲಿ ಇರತಕ್ಕಂತಹ ಉದ್ಯೋಗವಕಾಶವನ್ನು ಕಡಿಮೆ ಮಾಡಿಬಿಟ್ಟು 17 ಪರ್ಸೆಂಟ್ ನಾನು ಇನ್‌ಕ್ರೀಸ್ ಮಾಡಿದ್ದೇನೆಂದು ಹೇಳುತ್ತೀರಿ, ಹೇಗೆ ಎಕಾನಮಿ ಗ್ರೋಥ್ ಆಗುತ್ತದೆ? ತೋಟಗಾರಿಕೆಗೆ ನಿಮ್ಮ ಡ್ರೀಮ್, ಸಿರಿಕಲ್ಚರ್ ಬಡಪಾಯಿಗಳು ಇಲ್ಲಿ ಕುಳಿತಿದ್ದಾರೆ ಇನ್ನೊಂದು ಬಡಪಾಯಿ ಇಲ್ಲಿ ಇಲ್ಲ. 6 ಕೋಟಿ ರೂಪಾಯಿಗಳನ್ನು ತೆಗೆದಿಟ್ಟು ನಿನ್ನೆ ಅವರನ್ನು ಇಕ್ಕಟ್ಟಿಗೆ ಸಿಕ್ಕಿ ಹಾಕಿಸಿ ಬಿಟ್ಟಿದ್ದೀರಿ. ರೇಷ್ಮೆಯಿಂದ ಇವತ್ತು ಸಾವಿರಾರು ಕುಟುಂಬಗಳು ಅದನ್ನು ನಂಬಿ ಬದುಕುತ್ತಿದ್ದೇವೆ. ಅವರಿಗೆ ಕೊಟ್ಟಿರತಕ್ಕಂತಹ ಹಣವೆಷ್ಟು? ತೋಟಗಾರಿಕೆಗೆ 6 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಮಾಧುಸ್ವಾಮಿಯವರು ಪ್ರಶ್ನೆಗಳನ್ನು ಕೇಳಿಬಿಟ್ಟರು. 20 ಕೋಟಿ ರೂಪಾಯಿಗಳು ಸಬ್ಸಿಡಿ ಬಾಕಿ ಇದೆ. 6 ಕೋಟಿ ರೂಪಾಯಿಗಳನ್ನು ತೋಟಗಾರಿಕೆಗೆ ಕೊಟ್ಟಿದ್ದೀರಿ. ನೀವು ಸಿರಿಕಲ್ಚರ್‌ಗೆ ಎಷ್ಟು ಕೊಟ್ಟಿದ್ದೀರಿ?

ಶ್ರೀ ಜೆ.ಸಿ. ಮಾಧುಸ್ವಾಮಿ:– ಇವರು ಹೇಳಿಬಿಟ್ಟಿದ್ದಾರೆ. ಜೂನ್ ಒಂದರಿಂದ ಇಷ್ಟಿಷ್ಟು ರೇಟ್ ಕೊಟ್ಟುಬಿಟ್ಟಿದ್ದೇನೆ. ನಾನು ಇಲ್ಲಿ ಪ್ರತಿಜ್ಞೆ ಮಾಡಿದ್ದೇನೆಂದು ನಿಮ್ಮ ಸಿರಿಕಲ್ಚರ್ ಮಿನಿಸ್ಟರ್ ಈ ಸಭೆಯ ಮುಂದೆ ಹೇಳಿದ್ದಾರೆ ಆದರೆ ಅವರು ನಿಮ್ಮನ್ನು ಕೇಳಿ ಹೇಳಿದ್ದಾರೋ ಏನೋ ಗೊತ್ತಿಲ್ಲ. ಆ ರೇಟ್‌ನಲ್ಲಿ ಬೋನಸ್ ಅನ್ನು ಕೊಟ್ಟುಬಿಟ್ಟರೆ ನಿಮ್ಮ ಸರ್ಕಾರವೇ ಇರುವುದಿಲ್ಲ. ದಯಮಾಡಿ ಕರೆಸಿ ಅವರನ್ನು ಕೂರಿಸಿಕೊಂಡು ನಿಮ್ಮ ಅಲೋಕೇಷನ್‌ನ್ನು ಸ್ವಲ್ಪ ಜಾಸ್ತಿ ಮಾಡಬೇಕು.

ಶ್ರೀ ಸಿ. ಚೆನ್ನಿಗಪ್ಪ (ರೇಷ್ಮೆ ಸಚಿವರು):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಾದ ಮಾಧುಸ್ವಾಮಿಯವರ ಕನಸು, ಈ ಸರ್ಕಾರ ಕೊಡುತ್ತದೆಯೋ ಅಥವಾ ಬಿಡುತ್ತದೆಯೋ ಎಂದು ನಮ್ಮ ಹಣಕಾಸು ಸಚಿವರು ಒಂದು ಸಲ ಅನೌನ್ಸ್ ಮಾಡಿಬಿಟ್ಟರೆ ಯಾರೇ ಮಂತ್ರಿಯಾದರೂ ಕೂಡ ಅವರನ್ನು ಜ್ಞಾಪಿಸಿಕೊಳ್ಳಬೇಕು. ರೈತರ ಪರವಾಗಿ ಈ ಸರ್ಕಾರ ಎಂದೂ ಹಿಂದೆ ಹೋಗಿಲ್ಲ.

ಶ್ರೀ ಜೆ.ಸಿ. ಮಾಧುಸ್ವಾಮಿ:– ನಾವು ರೈತರ ಪರವಾಗಿದ್ದೇವೆ, ತಾವು ಘೋಷಣೆ ಮಾಡಿದಾಗ ಮಾನ್ಯ ಹಣಕಾಸು ಸಚಿವರು ಇಲ್ಲಿ ಇರಲಿಲ್ಲ.

ಶ್ರೀ ಸಿ. ಚೆನ್ನಿಗಪ್ಪ:– ನಾವು ಅವರನ್ನು ಕೇಳಿಯೇ ಮಾಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಕೇಳಿಯೇ ಮಾಡಿದ್ದರೆ ಅದು ಸರಿಯಾಗಿದೆ. ಅದಕ್ಕೆ ನಮ್ಮದೇನೂ ತಕರಾರು ಇಲ್ಲ. ಕೇಳಿ ಮಾಡಿದ್ದರೆ ಅಷ್ಟೇ ಸಾಕು ಇದು ಅಸೆಂಬ್ಲಿ.

ಶ್ರೀ ಸಿ. ಚೆನ್ನಿಗಪ್ಪ:– ಮಾನ್ಯ ಮಾಧುಸ್ವಾಮಿಯವರೆ, ಯಾವುದೇ ವಿಚಾರದ ಬಗ್ಗೆ ನಮ್ಮ ಸರ್ಕಾರ ನಮ್ಮ ಮುಖ್ಯಮಂತ್ರಿಗಳು ಹಾಗೂ ಉಪಮುಖ್ಯಮಂತ್ರಿಗಳು ಪ್ರಾಮಾಣಿಕವಾಗಿ ಇವತ್ತು ಹಣಕಾಸಿನ ಸಚಿವರಾಗಿ ಕೆಲಸನ್ನು ಮಾಡಿದ್ದರೆ ಈ ರಾಜ್ಯದಲ್ಲಿ ಅಂದರೆ he is the only person in the state after 1947. ಇದರ ಬಗ್ಗೆ ತಾವು ದಯಮಾಡಿ ಯೋಚನೆ ಮಾಡಬೇಕು. ನೀವು ನಮ್ಮ ಜಿಲ್ಲೆಯಲ್ಲಿ ಪ್ರಾಮಾಣಿಕವಾಗಿ ಕೆಲಸ ಮಾಡತಕ್ಕಂತಹ ಸ್ನೇಹಿತರಾದ ಶಾಸಕರಾಗಿದ್ದೀರಿ. ಸಿರಿಕಲ್ಚರ್‌ಗೆ ಬರೀ 3 ಕೋಟಿ ರೂಪಾಯಿಗಳು ಇತ್ತು. ಬುಕ್‌ನಲ್ಲಿ ಹೆಸರು ಬಂದಿರಲಿಲ್ಲ. ಇಲಾಖೆಯ ಹೆಸರೂ ಸಹ ಇರಲಿಲ್ಲ. ಈ ವರ್ಷ ಅದಕ್ಕಾಗಿ 39 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದಾರೆ. ಇನ್ನೂ 28 ಕೋಟಿ ರೂಪಾಯಿಗಳು ಈಗ ಕೊಡುವವರಿದ್ದಾರೆ. ಹೌದು. ಅವರ ಹೆಸರ ಮೇಲೆಯೇ ನಾವು ಅನೌನ್ಸ್ ಮಾಡಿರುವುದು. ಮಾನ್ಯ ಸಿದ್ದರಾಮಯ್ಯನವರ ಹೆಸರ ಮೇಲೆ ಇವತ್ತು 10 ರೂಪಾಯಿಯನ್ನು ಇವತ್ತು ರೈತರಿಗೆ ಎಕ್ಸ್‌ಟ್ರಾ ಇನ್‌ಕ್ರೀಮೆಂಟ್ ಕೊಡತಕ್ಕಂಥದ್ದು ಅವರ ಆದೇಶದ ಮೇಲೆ ಎಂದು ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ:– ನಿಮಗೆ ಹೆಚ್ಚು ಹಣವನ್ನು ಕೊಟ್ಟರೆ ಬಹಳ ಸಂತೋಷ. ನಾವೂ ಅದನ್ನು ಕೇಳುತ್ತಿದ್ದೇವೆ. ಮತ್ತೆ ನಾವು ಮಾನ್ಯ ಸಿದ್ದರಾಮಯ್ಯನವರ ಪ್ರಾಮಾಣಿಕತೆಯನ್ನು ಪ್ರಶ್ನೆಯೇ ಮಾಡಲಿಲ್ಲ. ನೀವು ಏಕೋ ಅದನ್ನು ಕನ್‌ಪ್ಯೂಸ್ ಮಾಡಿಕೊಂಡಿದ್ದೀರಿ. ಇನ್ನು ಕಡೆಯದಾಗಿ ಹೇಳುವುದಾದರೆ, ರವೀಂದ್ರನಾಥ್ ಟ್ಯಾಗೂರ್‌ರವರ ಮಾತನ್ನು ಕೋಟ್ ಮಾಡಿದ್ದಾರೆ. ಮಾನ್ಯ ಸಿದ್ದರಾಮಯ್ಯನವರು,

> "ಎಲ್ಲಿ ಮನಸ್ಸು ಭೀತಿ ಇಲ್ಲದೆ ಸ್ವಾಭಿಮಾನದಿಂದ ತಲೆ ಎತ್ತಿ ನಿಲ್ಲುತ್ತದೋ
> ಅಂತಹ ಸ್ವರ್ಗ ಸೀಮೆಗೆ ಹೋಗಲು ನನ್ನ ರಾಷ್ಟ್ರ ಎಚ್ಚರಗೊಳ್ಳಲಿ ಎಂದು"

ಇದು ಭಾರಿ ಒಳ್ಳೆಯದು. ಆದರೆ ಅದಕ್ಕೆ ಪೂರಕವಾಗಿ ಬೇಕಾಗಿರುವಂತಹ ಏನಾದರೂ ಒಂದು ಪರ್ಸೆಂಟ್ ತಯಾರು ಇದೆಯಾ? ಆದರೆ ತಯಾರಿ ಇಲ್ಲದೆಯೇ ರವೀಂದ್ರನಾಥ್ ಟ್ಯಾಗೂರ್‌ರವರನ್ನು ಕೋಟ್ ಮಾಡಿಬಿಟ್ಟರೆ ಅದರಿಂದ ಯಾರಿಗೂ ಸಂತೋಷವಾಗುವುದಿಲ್ಲ. ನಾವು ನಮ್ಮ ಸರ್ಕಾರವನ್ನು ನಡೆಸುತ್ತಿದ್ದೇವೆ. ಒಂದು ಕಡೆ ರಾಷ್ಟ್ರಕವಿ ಕುವೆಂಪುರವರು ಹೇಳುತ್ತಾರೆ. ಇದನ್ನು ತಾವು ಓದಿದ್ದೀರಿ ನನಗೆ ಗೊತ್ತಿದೆ.

> "ಕರಿಯವರದೋ, ಬಿಳಿಯವರದೋ ಯಾರದಾದರೆ ಏನು, ಸಾಮ್ರಾಜ್ಯಗಳ ಸುಳಿಗೆ, ರೈತರಿಗೆ, ವಿಜಯನಗರವೋ ಮೊಗಲರ ಆಳ್ವಿಕೆಯೋ, ಇಂಗ್ಲೀಷರೋ, ಎಲ್ಲರೂ ಜಿಗಣೆಗಳೆ ನನ್ನ ನೆತ್ತರಿಗೆ ಕತ್ತಿ ಪರದೇಶಿಯನ್ನಾದರೆ ಮಾತ್ರ ನೋವೆ, ನಮ್ಮವರದು ಹದ ಹಾಕಿದರೆ ತಿವಿದರೆ ಹೂವೆ" ಎಂದು

ಇಷ್ಟು ಹೇಳಿ ನಾನು ನನ್ನ ಮಾತನ್ನು ಮುಗಿಸುತ್ತೇನೆ.

ಉಪಾಧ್ಯಕ್ಷರು:– ಈಗ ಸದನವನ್ನು ಮಧ್ಯಾಹ್ನ 3–15ರವರೆಗೆ ಮುಂದೂಡಲಾಗಿದೆ.

(ಸದನವು ಭೋಜನ ವಿರಾಮಕ್ಕೆ 2 ಗಂಟೆ 12 ನಿಮಿಷಕ್ಕೆ ಮುಂದೂಡಲ್ಪಟ್ಟುಗೊಂಡು ಪುನಃ 3 ಗಂಟೆ 15 ನಿಮಿಷಕ್ಕೆ ಸಮಾವೇಶಗೊಳ್ಳಲು ತೀರ್ಮಾನಿಸಿತು.)

ವಿತ್ತೀಯ ಕಾರ್ಯಕಲಾಪಗಳು

2005–06ನೇ ಸಾಲಿನ ಆಯವ್ಯಯ ಭಾಷಣದ ಮೇಲಿನ ಮುಂದುವರಿದ ಚರ್ಚೆ

(ಸದನವು ಪುನಃ ಮಧ್ಯಾಹ್ನ 3 ಗಂಟೆ 41 ನಿಮಿಷಕ್ಕೆ ಸಮಾವೇಶಗೊಂಡಿತು ಅಧ್ಯಕ್ಷರು (ಶ್ರೀ ಕೃಷ್ಣರವರು) ಅಧ್ಯಕ್ಷ ಪೀಠದಲ್ಲಿದ್ದರು)

ಶ್ರೀ ಎಸ್. ರಾಜೇಂದ್ರನ್ (ಕೆಜಿಎಫ್):– ಸನ್ಮಾನ್ಯ ಅಧ್ಯಕ್ಷರೆ, ಆಯವ್ಯಯದ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕೆ ತಮಗೆ ಧನ್ಯವಾದಗಳು. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಆಯವ್ಯಯ ಪುಸ್ತಕದಲ್ಲಿ ಬಹಳ ಚೆನ್ನಾಗಿ ಒಳ್ಳೆಯ ರೀತಿಯಲ್ಲಿ ಸುನಾಮಿ ಬಗ್ಗೆ ಹೇಳಿದ್ದಾರೆ. The recent Tsunami disaster has shown how small human beings are. ಸುನಾಮಿ ಮನುಷ್ಯನಿಗೆ ಒಳ್ಳೆಯ ಪಾಠ ಕಲಿಸಿದೆ. ಪಾಠ ತೋರಿಸಿದೆ, ಎಂದು ಹಾಳಲಾಗಿದೆ, ಏನು ಪಾಠ ತೋರಿಸಿದೆ ಎಂದು ಹೇಳಲಿಲ್ಲ? ಅಥವಾ ಏನು ಪಾಠವನ್ನು ಅದರಿಂದ ಇವರು ಕಲಿತರು, ಅದೂ ಇಲ್ಲ. ಆಯವ್ಯಯದ ಮೇಲೆ ಅನೇಕ ಸದಸ್ಯರು ಮಾತನಾಡಿದ್ದಾರೆ. ತಾವು ಸುನಾಮಿ ಜನಕ್ಕೆ ಪಾಠ ತೋರಿಸಿದೆ ಎಂದು ಹೇಳಲಾಗಿದೆ, ಏನು ಪಾಠ ಅಂತ ಹೇಳಿಲ್ಲ.

ಶ್ರೀ ಸಿದ್ದರಾಮಯ್ಯ (ಉಪ ಮುಖ್ಯಮಂತ್ರಿ): – ನಿಮಗೆ ಸರಿಯಾಗಿ ಅರ್ಥ ಆಗಿಲ್ಲ.

ಶ್ರೀ ಎಸ್. ರಾಜೇಂದ್ರನ್:– ಅರ್ಥ ಸರಿಯಾಗಿ ಅಗಿದೆ. Tsunami disaster has shown how small human beings are. ಮನುಷ್ಯ ಎಷ್ಟು ಚಿಕ್ಕವನು ಎನ್ನುವ ಪಾಠ ಕಲಿಸಿದೆ. ಸುನಾಮಿ ಯಾವ ರೀತಿಯಲ್ಲಿ ಬಂದಿದೆ ನಮಗೆ ಗೊತ್ತಿಲ್ಲ. ಅದು ಪ್ರಕೃತಿ. ಮನುಷ್ಯರು ಸುನಾಮಿಗಿಂತ ಮೋಸವಾಗಿದ್ದಾರೆ. ಸುನಾಮಿಯಾದರೂ ಒಂದೆರಡು ನಿಮಿಷ ಬಂದು ಹೋಗುತ್ತದೆ. ಮನುಷ್ಯ ಸುನಾಮಿಗಿಂತ ವರ್ಸ್ಟ್ ಆಗಿದ್ದಾನೆ. ಈ ಬಜೆಟ್ ಮೇಲೆ ಪ್ರತಿಯೊಬ್ಬರೂ ಸಜೆಸನ್ಸ್ ಕೊಟ್ಟು, ನಾನು ಸಜೆಸನ್ಸ್ ಕೊಟ್ಟರೆ ಕೊನೆಗೆ ಈ ಪುಸ್ತಕವೇ ಇರುವುದಿಲ್ಲ. ಉದಾಹರಣೆಗೆ, ಒಂದು ಫಿಶ್ ಸ್ಟಾಲ್‌ನಲ್ಲಿ ಒಂದು ಬೋರ್ಡ್‌ನ್ನು ಹಾಕಿದ್ದಾರೆ. ಇಲ್ಲಿ ಮೀನು ಸೇಲ್ಸ್ ಮಾಡಲಾಗುತ್ತದೆ ಎಂದು ಹಾಕಿರುತ್ತಾರೆ. ಸಜೆಸನ್ಸ್ ಕೊಡುವುದಕ್ಕೆ ಒಬ್ಬನು ಹೋಗಿದ್ದಾನೆ. ಏನಪ್ಪ 'ಇಲ್ಲಿ' ಎಂದು ಏತಕ್ಕೆ ಬರೆಯುತ್ತೀರಿ, ಮೀನು ಸೇಲ್ಸ್ ಎಂದು ಬರೆದರೆ ಸಾಕು ಎಂದು ಹೇಳಿದ. ಅಂಗಡಿಯವನು ಇಲ್ಲಿ ಎನ್ನುವುದನ್ನು ತೆಗೆದುಬಿಟ್ಟಿದ್ದಾನೆ. ಮರುದಿವಸ ಇನ್ನೊಬ್ಬರು, ಅಂಗಡಿಗೆ ಹೋದರು. ಏನ್ರಿ ಮೀನು ಸೇಲ್ಸ್ ಎಂದಿದೆ, ಸೇಲ್ಸ್ ಏತಕ್ಕೆ ಹಾಕುತ್ತೀರಿ ಎಂದಾಗ ಆ ಸೇಲ್ಸ್ ಎನ್ನುವ ಪದ ತೆಗೆದುಬಿಟ್ಟರು. ಮೂರನೆಯ ದಿವಸ ಇನ್ನೊಬ್ಬರು ಅಂಗಡಿಗೆ ಹೋದರು. ಇಲ್ಲಿ ವಾಸನೆಯಿಂದಲೇ ಇದು ಮೀನಿನ ಅಂಗಡಿ ಎಂದು ಗೊತ್ತಾಗುತ್ತದೆ. ಏತಕ್ಕೆ ಮೀನು ಎಂದು

ಬರೆಯಬೇಕು. ವಾಸನೆಯಿಂದಲೇ ಗೊತ್ತಾಗುತ್ತದೆ ಎಂದು ಹೇಳಿದ ತಕ್ಷಣ, ಮೀನು ಎನ್ನುವ ಪದವನ್ನು ತೆಗೆದುಬಿಟ್ಟರು. ಕೊನೆಗೆ ಅಲ್ಲಿ ಬೋರ್ಡ್ ಇಲ್ಲ. ಆ ರೀತಿಯಾಗಿ ತಾವು ಕೊಟ್ಟಿರುವ ಆಯವ್ಯಯ ಪುಸ್ತಕದ ಮೇಲೆ ನಾವು ಸಜೆಸನ್ಸ್ ಕೊಡುತ್ತಾ ಹೋದರೆ, ಪ್ರತಿಯೊಂದು ಚೇಂಜ್ ಮಾಡಬೇಕೆಂದರೆ, ಬಜೆಟ್ ಪುಸ್ತಕವೇ ಇರುವುದಿಲ್ಲ. ತಾವು ಜನಕ್ಕೆ ಅನುಕೂಲವಾಗಲೆಂದು ಏನು ಕೊಟ್ಟಿದ್ದೀರಿ? ಒಳ್ಳೆಯ ಹೆಸರಿದೆ, ಸಿದ್ದ ಗ್ರಾಮೀಣ ರಾಮಯ್ಯ. ಹಳ್ಳಿಯ ಜನರೆಲ್ಲಾ ನಮ್ಮ ಹಣಕಾಸು ಮಂತ್ರಿಗಳು ಈ ರೀತಿ ಮಾಡಿದ್ದಾರೆಂದು ಬಹಳ ಸಂತೋಷಪಡುತ್ತಾರೆ. ಮುಂದಿನ ಆಯವ್ಯಯವನ್ನು ತಾವು ಮಂಡಿಸುವಾಗ, ಸಿಟಿರಾಮಯ್ಯ ಎಂದು ಬರಬೇಕು. ಸಿಟಿ ಕಡೆಯೂ ಸ್ವಲ್ಪ ಬೆಳೆಸಿ. You are here not only for one group of people but universally. People are having high opinion on you. ತಮ್ಮ ಬಜೆಟ್‌ನಲ್ಲಿ ಯಾವ ರೀತಿಯ ಬಜೆಟ್ ಕೊಟ್ಟಿದ್ದೀರೆಂಬುದನ್ನು ತಾವು ನೋಡಿ. ಎಲ್ಲೆಲ್ಲಿ, ಯಾವ ರೀತಿಯಾಗಿ ಹಣ ಬರುತ್ತದೆ. ಎಲ್ಲವನ್ನು ಕೊಟ್ಟು ಜೊತೆಗೆ, borrowings 17 paise.

ಒಂದು ಕಡೆ ಸೇಲ್ಸ್ ಟ್ಯಾಕ್ಸ್‌ನಿಂದ 52 ಪೈಸೆ ಬರುತ್ತದೆ. ಪಬ್ಲಿಕ್ ಅಕೌಂಟ್‌ನಲ್ಲಿ 2 ಪೈಸೆ, ಷೇರ್ ಸೆಂಟ್ರಲ್ ಟ್ಯಾಕ್ಸ್ 10 ಪೈಸೆ. State Loans Non Tax 11 paise; Grants from Central Government 8 paise: Balance is 17 paise.

ಈ 17 ಪೈಸೆಯನ್ನು ನಾವು ಎಲ್ಲಿಂದ ತೆಗೆದುಕೊಳ್ಳುತ್ತೇವೆ. Borrowing; may be from World Bank etc it is left to you.

ಈ 17 ಪೈಸೆ ಕ್ರೆಡಿಟ್ ಅನ್ನು ಯಾರು ರಿಟರ್ನ್ ಮಾಡಬೇಕು; ಕರ್ನಾಟಕದಲ್ಲಿರುವ ಎಲ್ಲಾ ಜನರು ಕೊಡಬೇಕು. 22% of Scheduled Caste people are in this State; 2% of Upper Castes are there. ತಾವು ಚಿಂತನೆ ಮಾಡಿ, ಈ 17 ಪೈಸೆ ಕ್ರೆಡಿಟ್ ಅನ್ನು ಕರ್ನಾಟಕದ ಜನರೆಲ್ಲಾ ಕೊಡಬೇಕು. ಅದರಲ್ಲಿ 22% of Scheduled Castes/Scheduled Tribes; 6.7% of minorities Backward Class you can say. 2% of Brahmins. Like this, out of 48 posts like Chief Secretary, Principal Secretary, BDA, BWSSB. Who are all from city? No doubt 2% of people who are sitting in the Administration luxuriously, well and sound. 2 ಪರ್ಸೆಂಟ್ ಇರುವವರು 17 ಪೈಸೆ ಕ್ರೆಡಿಟ್‌ಗೆ ಎಷ್ಟು ಕೊಡುತ್ತಾರೆ. 22 ಪರ್ಸೆಂಟ್ ಇರುವವರು ಎಷ್ಟು ಕೊಡುತ್ತಾರೆಂಬುದನ್ನು ವಿಚಾರ ಮಾಡಿ. ಅಂತಹ ಕಮ್ಯುನಿಟಿಯವರಿಗೂ ತಾವು, you have given only 4 paise for the development of scheduled castes, from 1952 till now. According to the ratio of population, you have not distributed money for the development of Scheduled Castes/Scheduled Tribes. ಇರಿಗೇಷನ್‌ಗೆ ಎಷ್ಟು

ಕೊಡುತ್ತೀರಿ. 9 ಪರ್ಸೆಂಟ್. 9 ಪರ್ಸೆಂಟ್ ಇರಿಗೇಷನ್‌ನಲ್ಲಿ only the landlords will be utilising it, not by the poor agriculturists. ಒಂದೆರಡು ಎಕರೆ ಜಮೀನು ಇಟ್ಟುಕೊಂಡಿರುವವನು 15 ಕಿಲೋಮೀಟರ್ ದೂರದಲ್ಲಿದ್ದಾನೆ. What is the development you have given for Scheduled Castes/Scheduled tribes? ತಾವು ಚಿಂತನೆ ಮಾಡಿ, ಏತಕ್ಕೆ ಈ ರೀತಿ ಮಾಡಿದ್ದೀರಿ ಎಂದು ಪುನಃ ಪರಿಶೀಲನೆ ಮಾಡಿ, give more development opportunity for SC/STs. ಅದರ ಜೊತೆಗೆ ಶೆಡ್ಯೂಲ್ಡ್ ಕ್ಯಾಸ್ಟ್‌ಗೆ 65 ಕೋಟಿ ರೂಪಾಯಿಗಳನ್ನು ಸಮಾಜಕಲ್ಯಾಣ ಅಭಿವೃದ್ಧಿಗೆ ಕೊಟ್ಟಿದ್ದೇವೆ ಎಂದು ಹೇಳಿದ್ದೀರಿ. At least, had you provided Rs. 100 crores for SC people, definitely that would have been useful for the community. ಅವರಿಗೆ ಅನುಕೂಲವಾಗುತ್ತದೆ. ತಾವು ಅದನ್ನು ಕೊಟ್ಟಿಲ್ಲ. Only heinous criminal waste of money. ಸಮಾಜ ಕಲ್ಯಾಣ ಇಲಾಖೆ ಮಂತ್ರಿಗಳು ತಾವು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು; It is a suggestion. I can only plead and give suggestion. We are spending Rs. 40 lakhs per month for C.R.E. Cell. There is no awareness created the atrocities on the SC/STs, in the State. ಎಷ್ಟು ನಾವು ಖರ್ಚು ಮಾಡುತ್ತಿದ್ದೇವೆಂದರೆ 44 ಲಕ್ಷ ರೂಪಾಯಿಗಳು. ಅಡಿಷನಲ್ ಡಿಜಿಪಿ, ಐಜಿ, ಸಬ್‌ಇನ್‌ಸ್ಪೆಕ್ಟರ್, ಎಸಿಪಿ, ಇವರೆಲ್ಲಾ ಇದ್ದಾರೆ, ಅವರಿಗೇನು ಅಧಿಕಾರವೆಂದರೆ, ಪೋಸ್ಟ್ ಮ್ಯಾನ್ ಅಧಿಕಾರವೂ ಇಲ್ಲ. ಪಿಟಿಕ್ಷನ್ ಏನಾದರೂ ಬಂದರೆ ಹೋಗಿ ಅವರನ್ನು ವಿಚಾರಣೆ ಮಾಡಬೇಕು. ವಿಚಾರಣೆ ಮಾಡಿದ ಮೇಲೆ ಅವರು ಬಂದು ಪೋಲೀಸ್ ಸ್ಟೇಷನ್‌ಗೆ ಹೇಳಬೇಕು. ಪೋಲೀಸ್‌ನವರು 'ಬಿ' ರಿಪೋರ್ಟ್ ಮಾಡಬೇಕು. ಇದಕ್ಕೆ ನಾವು ಎಷ್ಟು ಖರ್ಚು ಮಾಡುತ್ತಿದ್ದೇವೆಂದರೆ, 44 ಲಕ್ಷ ರೂಪಾಯಿಗಳನ್ನು ಪ್ರತಿ ತಿಂಗಳಿಗೆ ಖರ್ಚು ಮಾಡುತ್ತಿದ್ದೇವೆ. In what way that is useful for the Social Welfare Department? ಆ ಹಣವನ್ನು ಎಷ್ಟು ಕೇವಲವಾಗಿ ಉಪಯೋಗ ಮಾಡಿಕೊಂಡಿದ್ದೀರಿ? You must close down that Cell and utilise that Rs. 44 lakhs. ಆ 44 ಲಕ್ಷ ರೂಪಾಯಿಗಳನ್ನು ಶೆಡ್ಯೂಲ್ಡ್ ಕಾಸ್ಟ್ ಕಾಲೋನಿಯಲ್ಲಿರುವ ಜನರಿಗೆಲ್ಲಾ ಡ್ರೈನೇಜ್, ವಾಟರ್ ಸೌಲಭ್ಯವನ್ನು ಒದಗಿಸಬಹುದು. It is heinous criminal waste. ತಾವು ಅದನ್ನು ಸೇರಿಸಿಕೊಂಡು ತಮ್ಮ ಆಯವ್ಯಯದಲ್ಲಿ 100 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ, At least you would have given for the community the opportunity of development. ಆಂಧ್ರಪ್ರದೇಶದಲ್ಲಿ ಶೆಡ್ಯೂಲ್ಡ್ ಕಾಸ್ಟ್ ಹಾಸ್ಟೆಲ್‌ನಲ್ಲಿರುವ ಹುಡುಗರಿಗೆ 900 ರೂಪಾಯಿಗಳನ್ನು ಕೊಡುತ್ತಿದ್ದಾರೆ. They are paying scholarship. ಒರಿಸ್ಸಾದಲ್ಲಿ 800 ರೂಪಾಯಿ ಕೊಡುತ್ತಿದ್ದಾರೆ. ತಮಿಳುನಾಡಿನಲ್ಲಿ ಶೆಡ್ಯೂಲ್ಡ್ ಕಾಸ್ಟ್ ಹೆಣ್ಣು ಮಕ್ಕಳಿಗೆಲ್ಲಾ ಒಂದು ಬೈಸಿಕಲ್ ಫ್ರೀ ಕೊಡುತ್ತಾರೆ. ನಮ್ಮ ಕರ್ನಾಟಕದಲ್ಲಿ ಎಷ್ಟು ಕೊಟ್ಟಿದ್ದಾರೆಂದರೆ

400 ರೂಪಾಯಿನಿಂದ 450 ರೂಪಾಯಿ. ಎಷ್ಟು ಅಪಾರವಾದ ಪ್ರೀತಿ ಶೆಡ್ಯೂಲ್ಡ್ ಕಾಸ್ಟ್‌ನವರ ಮೇಲೆ ಇದೆ! If I am wrong or right, my appeal to my Deputy Chief Minister, ಶೆಡ್ಯೂಲ್ಡ್ ಕಾಸ್ಟ್ ಜನಕ್ಕೆ 900 ರೂಪಾಯಿ ಆಂಧ್ರ ಪ್ರದೇಶದಲ್ಲಿ ಕೊಡುತ್ತಿದ್ದಾರೆ. ಒಡಿಸ್ಸಾದಲ್ಲಿ 800 ರೂಪಾಯಿ ಕೊಡುತ್ತಿದ್ದಾರೆ. ನಮ್ಮ ಕರ್ನಾಟಕದಲ್ಲಿ 450 ರೂಪಾಯಿ ಕೊಡುತ್ತಿದ್ದಾರೆ. So, at least you can increase. 400 ರೂಪಾಯಿನಿಂದ 450 ರೂಪಾಯಿಯಾದರೂ ಕೊಡಿ.

ಶ್ರೀ ಎ. ಕೃಷ್ಣಪ್ಪ:- ಮಾನ್ಯ ರಾಜೇಂದ್ರ ಅವರೇ, ಒಂದು ನಿಮಿಷ; ಬರೇ ದುಡ್ಡೇ ನೋಡುತ್ತೀರಾ ಅಥವಾ ಇನ್ನೂ ಏನಾದರೂ ಹಾಸ್ಟೆಲ್‌ಗೆ ಕೊಟ್ಟಿರುವುದನ್ನು ತಿಳಿದುಕೊಂಡಿದ್ದೀರಾ? ತಮಿಳುನಾಡು, ಒರಿಸ್ಸಾ, ಆಂಧ್ರ ಪ್ರದೇಶ 800 ರೂ, 900 ರೂ ಕೊಡುತ್ತಾರೆ ಎಂದು ಹೇಳಿದಿರಿ. ಬೇರೆ ಮಕ್ಕಳಿಗೆ ಮೂಲಭೂತ ಸೌಕರ್ಯಗಳೇನಾದರೂ ಕೊಟ್ಟಿದ್ದಾರಾ? ಅದನ್ನು ಏನಾದರೂ ಹೇಳುತ್ತೀರಾ? ಅದರ ಬಗ್ಗೆ ಬೆಳಕು ಚೆಲ್ಲುತ್ತೀರಾ?

ಶ್ರೀ ಎಸ್. ರಾಜೇಂದ್ರನ್:- ಹೆಣ್ಣು ಮಕ್ಕಳಿಗೆ ತಮಿಳುನಾಡಿನಲ್ಲಿ ಬೈಸಿಕಲ್ ಫ್ರೀ ಆಗಿ ಕೊಟ್ಟಿದ್ದಾರೆ ಎಂದು ಹೇಳಿದ್ದೇನೆ.

ಶ್ರೀ ಎ. ಕೃಷ್ಣಪ್ಪ:- ಬೈಸಿಕಲ್ ಆಯಿತು. ಆಮೇಲೆ.

ಶ್ರೀ ಎಸ್. ರಾಜೇಂದ್ರನ್:- ನೀವು ಟಿವಿಎಸ್ ಕೊಡಿ. ಮಾರುತಿ ಕಾರ್ ಕೊಡಿ.

ಶ್ರೀ ಎ. ಕೃಷ್ಣಪ್ಪ:- ಟಿ.ವಿ. ಕೊಟ್ಟಿದ್ದಾರಾ? ಲೈಬ್ರರಿ ಕೊಟ್ಟಿದ್ದಾರಾ?

SRI. S. RAJENDRAN:- It is purely my appeal to the Deputy Chief Minister for the Scheduled Caste development. It is my bounden duty. I am elected for that from the reserved constituency.

ಶ್ರೀ ಎ. ಕೃಷ್ಣಪ್ಪ:- ಶ್ರೀ ರಾಜೇಂದ್ರ ಅವರೇ, ಕಂಪ್ಯೂಟರ್ ಕೊಟ್ಟಿದ್ದಾರಾ? ಲೈಬ್ರರಿ ಕೊಟ್ಟಿದ್ದಾರಾ? ಆಮೇಲೆ ಮಕ್ಕಳಿಗೆ ಶಿಕ್ಷಣದ ಗುಣಮಟ್ಟ ಜಾಸ್ತಿ ಮಾಡಲಿಕ್ಕೆ ಇನ್ನು ಏನಾದರೂ ಇನ್‌ಫ್ರಾಸ್ಟ್ರಕ್ಚರ್ ಕೊಟ್ಟಿದ್ದಾರಾ? ಗ್ಯಾಸ್‌ನಲ್ಲಿ ಅಡಿಗೆ ಮಾಡಿ ಇಡುತ್ತಾರಾ? ಗ್ಯಾಸ್‌ನಿಂದ ಅಡಿಗೆ ಮಾಡಿ ಇಡುವುದು. ಸೌದೆಯಿಂದ ಅಲ್ಲ.

ಶ್ರೀ ಎಸ್. ರಾಜೇಂದ್ರನ್:- ನಾನು ಒನ್ ಬೈ ಒನ್ ಬರುತ್ತಿದ್ದೇನೆ. ಮಿಡ್ ಡೇ ಮೀಲ್ಸ್‌ಗೆ ಎಗ್ ಅನ್ನೂ ಕೊಡುತ್ತಿದ್ದಾರೆ. ನಾನು ಏತಕ್ಕೆ ತಮ್ಮ ನೋಟೀಸ್‌ಗೆ ತೆಗೆದುಕೊಂಡು ಬರುತ್ತೇನೆ ಅಂದರೆ.. You also can increase ನಮ್ಮ ಮಾಜಿ ಮಂತ್ರಿಗೆ ಏನೂ ಸಿಟ್ಟು ನನ್ನ ಮೇಲೆ ಇಲ್ಲ. ಕೊಡಬಾರದು ಎಂದು ಹೇಳಿದರೆ ಡೈರೆಕ್ಟಾಗಿ ಬೇಡ ಬೇಡ ಸಾಕು. ಶೆಡ್ಯೂಲ್ಡ್ ಕಾಸ್ಟ್ ಜನಕ್ಕೆ ಕೊಡಬಾರದು ಎಂದು ಹೇಳಿ ಬಿಟ್ಟರೆ ಸಂತೋಷ. ಅದಲ್ಲ. I am just bringing to your notice. These are all I can appeal.

(ಮಾನ್ಯ ಉಪಾಧ್ಯಕ್ಷರು ಅಧ್ಯಕ್ಷ ಪೀಠವನ್ನು ಅಲಂಕರಿಸಿದರು)

ಶೆಡ್ಯೂಲ್ಡ್ ಕಾಸ್ಟ್‌ಗೆ ಸೋಶಿಯಲ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನವರು ನಾವು ಈಗೇನು ಡೆವಲಪ್‌ಮೆಂಟ್ ಮಾಡುತ್ತಿದ್ದೇವೆ ಎಂದು ಹೇಳುತ್ತಿದ್ದೀರಿ, ಅದಕ್ಕೆಲ್ಲಾ ಇದನ್ನು ಉದಾಹರಣೆ ಕೊಟ್ಟುಕೊಂಡು ಬಂದೆ. ಅವರು ಮೇಲೆ ಬರಬೇಕು. ಡ್ರೈನೇಜ್ ಅಂಡ್ ವಾಟರ್‌ಗೆ ಟೂ ಪೈಸೆ ಏನು ಕೊಟ್ಟಿದ್ದೀರಿ. You ar well aware. ಎರಡು ಪೈಸೆ ತಾವು ಡ್ರೈನೇಜ್ ಮತ್ತು ವಾಟರ್‌ಗೆ ಕೊಡುತ್ತೀರಿ. ಎಲ್ಲಾದರೂ ಶೆಡ್ಯೂಲ್ಡ್ ಕಾಸ್ಟ್ ಕಾಲೋನಿಗಳಲ್ಲಿ, ಏರಿಯಾದಲ್ಲಿ ರೋಡುಗಳು ಇವೆಯಾ? ಡ್ರೈನೇಜ್ ಇಲ್ಲ. For example, I brought to your notice also when I was speaking earlier. ನನ್ನ ಕ್ಷೇತ್ರ ಮುಚ್ಚಿದೆ. ಕುಡಿಯುವ ನೀರಿಲ್ಲ. ಶೌಚಾಲಯಗಳು ಇಲ್ಲ. ಅಲ್ಲಿ ಎಂಪ್ಲಾಯ್‌ಮೆಂಟ್ ಇಲ್ಲ. The majority, 90% of population is Scheduled Caste, ಬಜೆಟ್‌ನಲ್ಲಿ ಏನು ಕೊಟ್ಟಿದ್ದೀರಿ? ಆಶ್ವಾಸನೆ ಕೊಡುತ್ತೀರಿ. ನಾವು ನಿಮಗೆ ವೋಟ್ ಮಾಡುತ್ತೇವೆ. ಫಸ್ಟ್ ಟರ್ಮಿನಿಂದಲೂ ನಮಗೆ ಆಶ್ವಾಸನೆಯೇ. ಆದರೆ ಬಜೆಟ್ ಪ್ರಾವಿಜನ್ಸ್ ಇಲ್ಲವೇ? ಶೆಡ್ಯೂಲ್ಡ್ ಕಾಸ್ಟ್ ಜನರು ಏನು ಅನ್ಯಾಯ ಮಾಡಿದ್ದಾರೆ? They are the vote-bank. ನಿಮ್ಮದು ಪೋಸ್ಟರ್ ಹಾಕುವುದು, ಬ್ಯಾನರ್ ಹಾಕುವುದು ಅವನೇ. ಇಷ್ಟೆಲ್ಲಾ ಬೆಳೆಸಿ ಮೇಲೆ ತಮ್ಮನ್ನು ಡೆಪ್ಯುಟಿ ಸಿಎಂ ಮಾಡಿದ್ದಾರೆ. ನಾಳೆ ಮುಖ್ಯಮಂತ್ರಿ ಆಗುತ್ತೀರಿ. ಡೆಫನೆಟ್ ಇವತ್ತಲ್ಲ ಅಂದರೆ ನಾಳೆ ಮುಖ್ಯಮಂತ್ರಿ ಆಗುತ್ತೀರಿ. ಏನು ಪ್ರಯೋಜನ ಇದೆ ಹೇಳಿ ಸ್ವಾಮಿ? At least for the future, reserved constituency ಎಲ್ಲೆಲ್ಲಿ ಇದೆ, ಅವರನ್ನು ಚಿಂತನೆಯಲ್ಲಿಟ್ಟುಕೊಂಡು ನೀವು ಬರೆಯುವ ಟೈಮಿನಲ್ಲಿ ಹೇಗೆ ರವೀಂದ್ರ ನಾಥ ಟ್ಯಾಗೂರ್ ನಿಮ್ಮ ಮೈಂಡಿನಲ್ಲಿ ಬಂದರು? ಆ ತರಹ ನೀವು ಬರೆಯುವ ಟೈಮಿನಲ್ಲಿ ಶೆಡ್ಯೂಲ್ಡ್ ಕಾಸ್ಟ್‌ನವರು, ಡಾ: ಬಾಬಾ ಸಾಹೇಬ್ ಅವರು ನಿಮ್ಮ ಮೈಂಡ್‌ನಲ್ಲಿ ಬಂದರೆ ನಿಜವಾಗಿಯೂ ಅವರಿಗೆ ಅಭಿವೃದ್ಧಿ ಮಾಡುತ್ತೀರಿ. I am appealing to you. ಅದರ ಜೊತೆಗೆ ತಾವು ಫಾರೆಸ್ಟ್ ಪೀಪಲ್ ಬಗ್ಗೆ ಹೇಳಿದ್ದೀರಿ. ಕುರಿ ಮೇಯಿಸುವವರಿಗೆ ಒಂದು ಒಳ್ಳೆಯ ಸಲಹೆ ಮಾಡಿದ್ದೀರಿ. Bold decision, you have taken. It is appreciable. No doubt. ಕುರಿಗೂ ಇನ್‌ಶ್ಯೂರೆನ್ಸ್ ಇದೆ. ಕುರಿ ಮೇಯಿಸುವವನಿಗೂ ಇನ್‌ಶ್ಯೂರೆನ್ಸ್ ಇದೆ. ಆದರೆ ಅಗ್ರಿಕಲ್ಚರಿಸ್ಟ್‌ಗೂ ಮಾಡಬಹುದಲ್ಲಾ. ಕ್ರಾಪ್‌ಗೆ ಇನ್‌ಶ್ಯೂರೆನ್ಸ್ ಇದೆ. ಅಗ್ರಿಕಲ್ಚರಿಸ್ಟ್‌ಗೆ ಇನ್‌ಶ್ಯೂರೆನ್ಸ್ ಇಲ್ಲವೇ? ಒಂದು, ಎರಡು, ಮೂರು, ನಾಲ್ಕು ಎಕರೆ ಇಟ್ಟುಕೊಂಡಿರುವವನು. ಆ ಜಮೀನಿನಲ್ಲಿ ಕೆಲಸ ಮಾಡಿಕೊಂಡಿರುವ ಟೈಮಿನಲ್ಲಿ ಸ್ನೇಕ್ ಬೈಟ್ ಆದರೆ ಅವನಿಗೆ ಯಾರು ಇನ್‌ಶ್ಯೂರೆನ್ಸ್ ಕೊಡುವವರು? ಅವನನ್ನೂ ಸೇರಿಸಿ ಮಾಡಿದ್ದರೆ ಸಂತೋಷ ತಾನೇ? You are not only for a particular group of people. You are for everybody. Everybody is concentrating on you. They are felicitating on one side. They are appreciating. ನಮ್ಮ ಸಿದ್ಧರಾಮಯ್ಯನವರು ಚೆನ್ನಾಗಿ ಮಾಡುತ್ತಿದ್ದಾರೆ. ಅವರು ನೆಕ್ಸ್ಟ್ ಮುಖ್ಯಮಂತ್ರಿ ಆಗಿ ಬಂದರೆ ಚೆನ್ನಾಗಿರುತ್ತೇನೋ ಎಂದು ಎಷ್ಟೋ ಜನರ ಭಾವನೆ.

ಶ್ರೀಮಾನ್ ವಾಟಾಳ್ ನಾಗರಾಜ್ ಅವರು ನಿಮ್ಮ ಬಗ್ಗೆ ಗೌರವವಾಗಿ ಮಾತನಾಡಿದರು. He speaks always reality. ಇದ್ದರೂ ನಿಮ್ಮ ಮೇಲೆ ಗೌರವ ಇದೆ ಎಂದು ಹೇಳುವುದು. We have a faith on you. ಆದ್ದರಿಂದ ತಾವು ಆ ರೈತರಿಗೂ ಅನುಕೂಲ ಮಾಡಬೇಕು. ಬರೇ ಕ್ರಾಪ್ಸ್‌ಗೆ ಮಾತ್ರ ಮಾಡಿದರೆ ಸಾಲದು. ಆ ರೈತನಿಗೂ ಸೇರಿಸಿ ಇನ್‌ಶ್ಯೂರೆನ್ಸ್ ಮಾಡಿದರೆ ಇವತ್ತು ಎಂಟೈರ್ ಅಗ್ರಿಕಲ್ಚರಿಸ್ಟ್ ರೈತರುಗಳು ನಮಗೂ ಇನ್‌ಶ್ಯೂರೆನ್ಸ್ ಇದೆ. ನಾಳೆ ನಾನು ಜಮೀನಿನಲ್ಲಿ ಹೋಗಿ ಕೆಲಸ ಮಾಡುತ್ತೇನೆ. ನಾನೇನದರೂ ಸರಿ. ನನ್ನ ಫ್ಯಾಮಿಲಿಗೆ ಆ ಇನ್‌ಶ್ಯೂರೆನ್ಸ್ ಹೋಗುತ್ತದೆ ಎಂದು ಅವನಿಗೂ ಒಂದು ಧೈರ್ಯ ಬಂದಿರಬಹುದಲ್ಲವೇ? ಅದನ್ನು ಏಕೆ ತಾವು ಬಿಟ್ಟಿದ್ದೀರಿ? ಅದರ ಬಗ್ಗೆ ಸ್ವಲ್ಪ ನೀವು ಚಿಂತನೆ ಮಾಡಬೇಕು. ಜೊತೆಗೆ ವಿಮೆನ್ ಅಂಡ್ ಚೈಲ್ಡ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್‌ನಲ್ಲಿ ನಾವು ಅವರಿಗೆ ಬಹಳ ಚೆನ್ನಾಗಿ ಮಾಡಿದ್ದೇವೆ. ವಿಮೆನ್ಸ್‌ಗೆ ಇಂತಹ ಫೆಸಿಲಿಟೀಸ್ ಕೊಟ್ಟಿದ್ದೇವೆ ಎಂದು ಹೇಳುತ್ತೀರಿ. ಬಜೆಟ್‌ನಲ್ಲಿ ಕೊಟ್ಟಿದ್ದೀರಿ. ಚೈಲ್ಡ್‌ಗೆ ಏನು ಮಾಡಿದ್ದೀರಿ? ವಿಮೆನ್ ಅಂಡ್ ಚೈಲ್ಡ್ ವೆಲ್‌ಫೇರ್ ಡಿಪಾರ್ಟ್‌ಮೆಂಟ್ ಅದರಲ್ಲಿ ಇಂದಿನ ಮಕ್ಕಳೇ ನಾಳಿನ ಪ್ರಜೆಗಳು. ಆ ಮಕ್ಕಳಿಗೆ ಏನು ಮಾಡಿದಿರಿ? ಇಲ್ಲಿ ಬೆಂಗಳೂರಿನಲ್ಲಿ ಒಂದು ಇದೆ. ಬಾಲ ಭವನ ಇದೆ. ಈ ಬಾಲ ಭವನನ ನೋಡುವುದಕ್ಕೆ ಮೈಸೂರು ಕಡೆಯಿಂದ ಬರಬೇಕು. ಬಿಜಾಪುರ ಕಡೆಯಿಂದ ಬರಬೇಕು. ಕೋಲಾರದಿಂದ ಸ್ಟೂಡೆಂಟ್ಸ್ ಎಲ್ಲಾ ಬಸ್‌ನಲ್ಲಿ ಬಂದು ಎಕ್ಸಿಬಿಷನ್ ತರಹ ನೋಡಿಕೊಂಡು ಹೋಗುತ್ತಾರೆ. If you are really interested about the child, if you are really thinking about the future, ಪ್ರತಿ ಒಂದು ಡಿಸ್ಟ್ರಿಕ್ಟ್‌ನಲ್ಲೂ ಸಹ ಬಾಲ ಭವನ ಏಕೆ ಮಾಡಬಾರದು? ಮಾಡಿದರೆ ಮಕ್ಕಳಿಗೆ ಅನುಕೂಲ ತಾನೇ? ಸ್ಟೂಡೆಂಟ್ಸ್‌ಗೆ ಅನುಕೂಲ ತಾನೇ? ಹೆಣ್ಣು ಮಕ್ಕಳ ಮೇಲೆ ಅಪಾರವಾದ ಪ್ರೀತಿ ಏಕೆ ಇರುತ್ತದೆ? ಕೊಯಿಲೇಷನ್ ಗವರ್ನ್‌ಮೆಂಟ್‌ನಲ್ಲಿ ಕಾಂಗ್ರೆಸ್‌ನವರಿಗೆದ ಇರುತ್ತದಾ ಅಥವಾ ದಳದವರಿಗೆ ಇರುತ್ತದಾ ಎಂಬುದು ನನಗೆ ಇನ್ನೂ ಅರ್ಥ ಆಗಿಲ್ಲ. ಹೆಣ್ಣು ಮಕ್ಕಳ ಬಗ್ಗೆ ಎಷ್ಟು ಗೌರವ. ನನ್ನನ್ನೂ ಕೆಲವರು ಹೆಣ್ಣು ಮಕ್ಕಳು ಕೇಳಿದರು. ಮಾನ್ಯ ವಾಟಾಳ್ ನಾಗರಾಜ್ ಅವರು ಬಹಳ ಚೆನ್ನಾಗಿ ಮಾತನಾಡಿದರು. ಬಹಳ ವಿಷಯಗಳನ್ನು ಎಲ್ಲಾ ಹೇಳಿದರು. ಅದರ ಜೊತೆಗೆ ಒಂದು ವಿಷಯ ಹೇಳಿದರು. ಹೆಣ್ಣು ಮಕ್ಕಳ ಬಗ್ಗೆ ಅವರು ಅಷ್ಟೊಂದು ಮಾತನಾಡಲಿಲ್ಲ. ಕಡಿಮೆ ಮಾತನಾಡಿದ್ದಾರೆ ಎಂದು ನಾನು ನಿಜವಾಗಲೂ ಹೇಳುತ್ತಿದ್ದೇನೆ. ಆದ್ದರಿಂದ ನಾನು ಈಗ ಫುಲ್‌ಫಿಲ್ ಮಾಡಬೇಕು ಎಂದರೆ ಹೆಣ್ಣು ಮಕ್ಕಳ ಮೇಲೆ ಯಾರಿಗೆ ಪ್ರೀತಿ ಇರುತ್ತದೆ ಎಂದರೆ ನಿಜವಾಗಿ ನನಗೆ ಗೊತ್ತಿದೆ. ಕಾಂಗ್ರೆಸ್‌ನವರಿಗೆ ಪ್ರೀತಿ ಇರುತ್ತದೆ ಎಂದು ಏಕೆಂದರೆ ಮೈನಾರಿಟಿಯವರು ಇಬ್ಬರು ಮಂತ್ರಿಗಳು ಕಾಂಗ್ರೆಸ್‌ನಲ್ಲಿ ಆಗಿದ್ದಾರೆ. ದಳದಲ್ಲಿ ಇಬ್ಬರು ಮೈನಾರಿಟಿ ಮಿನಿಸ್ಟರ್‌ಗಳು ಆಗಿದ್ದಾರೆ. ವಿಮೆನ್ ಅಂಡ್ ಚೈಲ್ಡ್ ವೆಲ್‌ಫೇರ್ ಮಿನಿಸ್ಟರ್ ಹೆಣ್ಣು ಮಕ್ಕಳ ಮೇಲೆ ಇರುವ ಪ್ರೀತಿಗೆ ಕಾಂಗ್ರೆಸ್‌ನವರು ಕೊಟ್ಟಿದ್ದಾರೆ. ದಳದಲ್ಲಿ ಏತಕ್ಕೆ ಕೊಡಬಾರದು? ಅಲ್ಲಿಯೂ ಹೆಣ್ಣು ಮಕ್ಕಳು ಇದ್ದಾರಲ್ಲವಾ? ಯುವರಾಜ ಸ್ಥಾನ ಇಲ್ಲ ಎಂದರೆ ಅಟ್‌ಲೀಸ್ಟ್ ಯುವರಾಣಿ ಸ್ಥಾನವಾದರೂ ಇರಬೇಕಲ್ಲವಾ?

ಅಲ್ಲಿ ಮಹಾರಾಣಿ ಸ್ಥಾನವೂ ಇಲ್ಲ. ಯುವರಾಣಿ ಸ್ಥಾನವೂ ಇಲ್ಲ. ಯಾರಿಗೆ ಪ್ರೀತಿ ಇದೆ? ನಿಜವಾಗಿಯೂ ಕಾಂಗ್ರೆಸ್‌ನವರಿಗೆ ಹೆಣ್ಣು ಮಕ್ಕಳ ಮೇಲೆ ಅಪಾರವಾದ ಪ್ರೀತಿ ಇದೆ ಎಂದು ಕಾಣಿಸುತ್ತಿದೆ. That is left to you, your party, But, ನಿಜವಾಗಲೂ ಈಕ್ವಲ್ ರೈಟ್ಸ್ ಎಂದರೆ ಹೆಣ್ಣು ಮಕ್ಕಳಿಗೆ ಅಲ್ಲಿ ಈಕ್ವಲ್ ಸಿಗಲಿಲ್ಲ. ಅದು ತಾವು ಹೇಗೆ ಸರಿಪಡಿಸುತ್ತೀರೋ ಗೊತ್ತಿಲ್ಲ. ಬಜೆಟ್‌ನಲ್ಲಿ ಇದನ್ನು ಮಾಡಲಿಕ್ಕೆ ಆಗುವುದಿಲ್ಲ. ಆದರೆ ಮಾನಸಿಕವಾಗಿ on humanitarian grounds ಮಾಡಬೇಕು. ಆದ್ದರಿಂದ ಚೈಲ್ಡ್ ಫೆಸಲಿಟೀಸ್ ನಿಜವಾಗಲೂ ಕೊಡಬೇಕು. ಎಲ್ಲಾ ಕಡೆ ಒಂದೊಂದು ಡಿಸ್ಟ್ರಿಕ್ಟ್‌ನಲ್ಲಿ ಒಂದೊಂದು ಬಾಲ ಭವನ ಮಾಡಿದರೆ children will be very happy. ಅವತ್ತು ಹೇಳುತ್ತಾರೆ. ನೀರು ಮಾಮ, ನೀರು ಮಾಮ ಎಂದು ಹೇಳುತ್ತಾರೆ. ನೆಹರೂ ಚಾಚಾ ನೆಹರೂ ಚಾಚಾ ಎಂದು ಹೇಳುತ್ತಾರಲ್ಲವಾ? ಆ ತರಹ ಸಿದ್ದು ಚಾಚಾ, ಸಿದ್ದು ಚಾಚಾ ಎಂದು ಹೇಳುತ್ತಾರೆ. ನಿಜವಾಗಿಯೂ ಅದನ್ನು ನೋಡುವವರೆಲ್ಲಾ ಹೇಳುತ್ತಾರೆ. It is welcome to the children. ಅದನ್ನು ತಾವು ಯೋಚನೆ ಮಾಡಬೇಕು. ಇನ್ನು ಪಾಪಗಳಿಗೆ ಕರ್ಮ. ಕರ್ಮ ಯಾವಾಗಲೂ ಬಿಡುವುದಿಲ್ಲ. ಅದರಲ್ಲೂ ಹೆಣ್ಣು ಮಕ್ಕಳಿಗೆ ಮಾಡಿರುವ ಕರ್ಮಗಳು ಯಾವಾಗಲೂ ಬಿಡುವುದಿಲ್ಲ. ಅದು ಜನ್ಮ ಜನ್ಮಾಂತರಕ್ಕೂ ಬರುತ್ತದೆ. ಉದಾಹರಣೆಗೆ ಒಂದು ಹೇಳುತ್ತೇನೆ. ಯಾವದೋ ಒಬ್ಬ ಸನ್ಯಾಸಿ ಒಂದು ಮನೆಯ ಹತ್ತಿರ ಹೋಗಿ ಅಮ್ಮ ತಾಯಿ ಸ್ವಲ್ಪ ಊಟ ಕೊಡಿ. ಊಟ ತಿಂದ ಮೇಲೆ ಮಲಗಿಕೊಂಡು ನಾಳೆ ಹೋಗುತ್ತೇನೆ. ತಸಿಂಬಾ ದೂರ ನಾನು ಹೋಗಿ ದೇವರಿಗೆ ನಮಸ್ಕಾರ ಹಾಕಬೇಕು. ಈಗ ಕತ್ತಲು ಆಗಿದೆ. ನಾನು ಇಲ್ಲಿಯೇ ಇರುತ್ತೇನೆ ಎಂದು ಹೇಳಿದ್ದಾನೆ. ಆ ಹೆಂಗಸು ಇವರನ್ನು ನೋಡಿದ ತಕ್ಷಣ ಅಹಾ ಇವನು ಎಂತಹ ಸುಂದರವಾಗಿದ್ದಾನೆ. ಅವನ ಮೇಲೆ ಅಪಾರ ಪ್ರೀತಿ ಇಟ್ಟುಕೊಂಡು, ನೀವು ಇಂತಹ ಸುಂದರವಾಗಿದ್ದೀರಿ, ನಾನು ನಿಮ್ಮ ಪ್ರೇಮಿ ಆಗಿದ್ದೇನೆ. ನೀವು ನನ್ನ ಜೊತೆಯಲ್ಲಿರಬೇಕು ಎಂದಳು. ಅವನು ಸನ್ಯಾಸಿ, ಅಯ್ಯಯ್ಯೋ ನಾನು ಹಾಗಿಲ್ಲಮ್ಮಾ ನಾನು ದೇವರನ್ನು ನೋಡುವುದಕ್ಕೆ ಹೋಗಬೇಕು. ಕತ್ತಲಾಗಿದೆ ಎಂದು ಇಲ್ಲಿ ಬಂದಿದ್ದೇನೆ. ನನಗೆ ಜಾಗ ಕೊಟ್ಟರೆ ನಿದ್ರೆ ಮಾಡುತ್ತೇನೆ. ಇಲ್ಲದಿದ್ದರೆ ನಾನು ಹೋಗೇ ಬಿಡುತ್ತೇನೆ. ನೀವು ಈ ಮಾತುಗಳನ್ನೆಲ್ಲಾ ಹೇಳಬಾರದು, ನಾನು ಒಬ್ಬ ಸನ್ಯಾಸಿ ಎಂದು ಹೇಳಿದ್ದಾನೆ. ಆ ಹೆಂಗಸು ಇಲ್ಲ ಇಲ್ಲ ನಿಮ್ಮನ್ನು ನೋಡಿದ ತಕ್ಷಣ ನನಗೆ ಪ್ರೇಮ ಬಂದಿದೆ. ನನ್ನ ಯಜಮಾನರು ಒಳಗಡೆ ಇದ್ದಾರೆ. ನಾನು ನಿಮ್ಮ ಪ್ರೇಮಿ ಆಗಿದ್ದೇನೆ ಎಂದು ಹೇಳುತ್ತಾಳೆ. ಅವರು ಅಯ್ಯೋ ನೀನು ಮದುವೆ ಆಗಿರುವವಳು, ಗಂಡ ಇದ್ದಾರೆ. ನೀವು ಈ ಮಾತುಗಳನ್ನು ಹೇಳಬಾರದು ಎಂದು ಹೇಳಿದ ತಕ್ಷಣ ಇವಳು ಒಳಗಡೆ ಹೋಗಿ ಆ ಗಂಡನನ್ನು ಕತ್ತರಿಸಿ ಬಿಟ್ಟಳು. ಕತ್ತರಿಸಿ ಬಂದು ಹೇಳುತ್ತಿದ್ದಾಳೆ. ನನ್ನ ಗಂಡನನ್ನು ಕತ್ತರಿಸಿದ್ದೇನೆ. ಈಗ ನನ್ನ ಮೇಲೆ ಪ್ರೇಮ ಇಟ್ಟುಕೊಳ್ಳಬೇಕು ಎಂದಳು. ಆ ಸನ್ಯಾಸಿ ಆ ಬ್ಲಡ್, ಕಲರ್ ಎಲ್ಲಾ ನೋಡಿದ ತಕ್ಷಣ ಬಹಳ ಭಯ ಆಗಿ ಆ ಸನ್ಯಾಸಿ ಓಡುವುದಕ್ಕೆ ಶುರು ಮಾಡಿ ಬಿಟ್ಟರು. ಇವಳು ಬಿಡಲಿಲ್ಲ ಅವನ ಹಿಂದುಗಡೆ ಹೋಗುತ್ತಾಳೆ. ಸ್ವಾಮಿ, ಬನ್ನಿ ಬನ್ನಿ ನಿಮ್ಮ ಮೇಲೆ

ನಾನು ಅಪಾರವಾದ ಪ್ರೀತಿ ಇಟ್ಟುಕೊಂಡಿದ್ದೇನೆ ಎನ್ನುತ್ತಾಳೆ. ಓಡಿದರೂ ಆ ಸನ್ಯಾಸಿಯನ್ನು ಹಿಡಿಯಲಿಕ್ಕೆ ಆಗಲಿಲ್ಲ. ಕೊನೆಗೆ, ಅವಳು ರಸ್ತೆಗಳು ಕೂಡುವ ಜಾಗದಲ್ಲಿ ನಿಂತುಕೊಂಡು "ಅಯ್ಯಯ್ಯೋ" ಎಂದು ಕೂಗಾಡಿದಾಗ ಸುತ್ತಲೂ ಜನರೆಲ್ಲಾ ನೆರೆಯುತ್ತಾರೆ. "ಏನಮ್ಮ, ಏತಕ್ಕೆ ಆ ರೀತಿ ಕೂಗಾಡುತ್ತಿದ್ದೀಯಾ?" ಎಂದು ಜನರು ಕೇಳುತ್ತಾರೆ. ಆಗ ಅವಳು ತಕ್ಷಣವೇ ಈ ಮುಂದಿನ ಮಾತನ್ನು ಹೇಳುತ್ತಾಳೆ. ಏನೆಂದರೆ, "ಅಯ್ಯೋ, ಈ ಸನ್ಯಾಸಿ ನಮ್ಮ ಮನೆಗೆ ಬಂದು ಊಟ ಕೇಳಿದರು. ಊಟ ಕೇಳಿ ಸನ್ಯಾಸಿ ನನ್ನನ್ನು ನೋಡಿದ ತಕ್ಷಣವೇ, ನನ್ನನ್ನು ಕುರಿತು "ನಿಮ್ಮ ಮೇಲೆ ನನಗೆ ಅಪಾರ ಪ್ರೀತಿಯುಂಟಾಗಿದೆ" ಎಂದರು. ಆಗ ನಾನು "ಅಯ್ಯೋ ಬೇಡ ಸ್ವಾಮಿ, ನೀವು ಹಾಗೆಲ್ಲಾ ಮಾತನಾಡಬಾರದು. ನಾನು ಮದುವೆಯಾಗಿರುವವಳು" ಎಂದು ನನ್ನ ಯಜಮಾನನ್ನೂ ಈ ಸನ್ಯಾಸಿಗೆ ತೋರಿಸಿದೆ. ಆಗ ತಕ್ಷಣವೇ ಸನ್ಯಾಸಿ ನನ್ನ ಯಜಮಾನನ್ನು ಕೊಲೆ ಮಾಡಿ "ನಿನ್ನ ಮೇಲೆ ನನಗೆ ಪ್ರೀತಿ ಇದೆ" ಎಂದು ಹೇಳಿದರು. ನಾನು ಭಯಪಟ್ಟುಕೊಂಡು ಓಡಿ ಬಂದಿದ್ದೇನೆ. ನೋಡಿ ಈ ಸನ್ಯಾಸಿ ಈಗ ನನ್ನ ಹಿಂದೆಯೇ ಬರುತ್ತಿದ್ದಾನೆ" ಎಂದು ಅವಳು ಹೇಳಿದ ತಕ್ಷಣ, ಜನರೆಲ್ಲರೂ ಸೇರಿ ಸನ್ಯಾಸಿಯನ್ನು ಹಿಡಿದು, ಸಿಕ್ಕಾಪಟ್ಟೆ ಏಟು ಕೊಟ್ಟು, ಆ ದೇಶದ ರಾಜನ ಹತ್ತಿರ ಸನ್ಯಾಸಿಯನ್ನು ಕರೆದುಕೊಂಡು ಹೋಗಿ ಒಪ್ಪಿಸುತ್ತಾರೆ. "ಈ ಸನ್ಯಾಸಿ ದೊಡ್ಡ ತಪ್ಪು ಮಾಡಿದ್ದಾನೆ" ಎಂದು ಜನರು ರಾಜನಿಗೆ ಹೇಳಿದ ಬಳಿಕ, ರಾಜ ಆ ಸನ್ಯಾಸಿಗೆ ಏನು ಶಿಕ್ಷೆ ವಿಧಿಸಿದನೆಂದರೆ, "ಒಬ್ಬ ಸನ್ಯಾಸಿಯಾಗಿರುವ ನೀನು ಇಂತಹ ಕೆಲಸ ಮಾಡಬಹುದೇ? ನಿನ್ನನ್ನು ನಾನು ಗಲ್ಲಿಗೇರಿಸಬಹುದು. ಆದರೆ, ನೀನು ಸನ್ಯಾಸಿಯಾಗಿದ್ದುಕೊಂಡು ಇಂತಹ ತಪ್ಪು ಮಾಡಿರುವ ಕಾರಣಕ್ಕೋಸ್ಕರವಾಗಿ ನಿನ್ನ ಎರಡೂ ಕೈಗಳನ್ನು ಕತ್ತರಿಸುತ್ತೇನೆ" ಎಂದು ಆಜ್ಞೆ ಮಾಡುವ ಮೂಲಕ ಸನ್ಯಾಸಿಯ ಎರಡೂ ಕೈಗಳನ್ನು ಕತ್ತರಿಸಿಬಿಟ್ಟನು. ಪಾಪ! ಸನ್ಯಾಸಿ ಏನೂ ಹೇಳಲಿಲ್ಲ. ಇದರಲ್ಲಿ ಸನ್ಯಾಸಿಯ ತಪ್ಪೇನೂ ಇಲ್ಲ. ಒಂದು ವೇಳೆ ಸನ್ಯಾಸಿಯ ತಪ್ಪಿದ್ದರೂ ಏನು ಹೇಳುವುದಕ್ಕಾಗುತ್ತದೆ? ಸನ್ಯಾಸಿ ಸುಮ್ಮನಿದ್ದ. ಮಾರನೇ ದಿವಸ ಸನ್ಯಾಸಿ ದೇವಸ್ಥಾನಕ್ಕೆ ತೆರಳಿ ದೇವರಿಗೆ ನಮಸ್ಕರಿಸುತ್ತಾ, "ದೇವರೇ, ನನ್ನ ಗತಿ ನೋಡು, ನಾನು ಯಾವ ತಪ್ಪೂ ಮಾಡಿಲ್ಲ. ಆದರೂ ನನ್ನನ್ನು ಕರೆದುಕೊಂಡು ಹೋಗಿ ನನ್ನ ಎರಡೂ ಕೈಗಳನ್ನು ಕತ್ತರಿಸಿ ಹಾಕಿದ್ದಾರೆ. ನಾನೀಗ ಏನು ಮಾಡುವುದು?" ಎಂದು ಆತ ಮೊರೆಯಿಟ್ಟ ತಕ್ಷಣ, ಆ ದೇವಸ್ಥಾನದ ಪೂಜಾರಿಯ ಕನಸಿನಲ್ಲಿ ದೇವರು ಪ್ರತ್ಯಕ್ಷನಾಗಿ "ಈಗ ಬರುತ್ತಿರುವವನು ಬಹಳ ಒಳ್ಳೆಯ ವ್ಯಕ್ತಿ, ಅವನು ಮಾಡಿದ ಕರ್ಮದಿಂದ ಅವನಿಗೆ ಆ ಗತಿ ಬಂದಿದೆ. ಆದ ಕಾರಣ, ರತ್ನಗಂಬಳಿ ಹಾಸಿ, ವಾದ್ಯಗಳನ್ನು ನುಡಿಸುವ ಮೂಲಕ ಅವನನ್ನು ಗೌರವದಿಂದ ಕರೆದುಕೊಂಡು ಬಂದು ಪೂಜೆ ಮಾಡು" ಎಂದು ಹೇಳಿ ಅದೃಶ್ಯನಾಗುತ್ತಾನೆ. ಅದರಂತೆಯೇ ಪೂಜಾರಿ ಸನ್ಯಾಸಿಯನ್ನು ಆದರದಿಂದ ಸ್ವಾಗತಿಸುತ್ತಾನೆ. ದೇವರಿಗೆ ಎಲ್ಲಾ ರೀತಿಯ ಅಲಂಕಾರ ಮಾಡಿರುತ್ತಾರೆ. ಸನ್ಯಾಸಿ ದೇವರನ್ನು ಕುರಿತು, "ಇಷ್ಟು ಸುಂದರವಾಗಿರುವ ದೇವರೇ, ನಿನಗೆ ನಮಸ್ಕರಿಸಲು ಇಂತಹ ಸಂದರ್ಭದಲ್ಲಿ ನನಗೆ ಕೈಗಳಿಲ್ಲವೇ? ನನ್ನ ಎರಡೂ ಕೈಗಳನ್ನು

ಕತ್ತರಿಸಿಬಿಟ್ಟಿದ್ದಾರೆ. ಇದಕ್ಕೇನು ಕಾರಣ? ನಾನೇನು ತಪ್ಪು ಮಾಡಿದ್ದೇನೆ?" ಎಂದು ಕೇಳುತ್ತಾನೆ. ಆಗ ದೇವರು "ಏನೂ ಚಿಂತಿಸಬೇಡ. ಹೋದ ಜನ್ಮದಲ್ಲಿ ನೀನು ಕರ್ಮ ಮಾಡಿದ್ದರಿಂದ ಈ ಜನ್ಮದಲ್ಲಿ ಇಂದು ನಿನಗೆ ಈ ದುರ್ಗತಿ ಬಂದಿದೆ. ಹಿಂದಿನ ಜನ್ಮದಲ್ಲಿ ಪಂಡಿತನಾಗಿದ್ದ ನೀನು ಒಂದು ಊರಿನ ದೇವಸ್ಥಾನದಲ್ಲಿ ಪೂಜೆ ಮಾಡಿಕೊಂಡಿದ್ದ ಸಂದರ್ಭದಲ್ಲಿ, ಒಂದು ಹಸು ಅತ್ತ ಕಡೆ ಹೋಯಿತು. ಹಸುವನ್ನು ಹಿಂಬಾಲಿಸಿಕೊಂಡು ಬರುತ್ತಿದ್ದ ಹಸು ಕೊಯ್ಯುವವನಿಗೆ ಆ ಹಸು ಯಾವ ದಿಕ್ಕಿನತ್ತ ಹೋಯಿತೆಂದು ಎಂದು ಗೊತ್ತಾಗದ ಕಾರಣ ಆತ ನಿನ್ನ ಬಳಿ ಬಂದು, "ಇತ್ತ ಕಡೆ ಹಸು ಹೋಯಿತೇ?" ಎಂದು ಕೇಳಿದಾಗ, ನೀನು ಎರಡೂ ಕೈಗಳನ್ನು ಮೇಲೆಕ್ಕೆತ್ತಿ ಹಸು ಹೋದ ದಾರಿಯನ್ನು ತೋರಿಸಿದೆ. ಆಗ ಅವನು ನೀನು ತೋರಿಸಿದ ದಾರಿಯಲ್ಲಿ ಹೋಗಿ ಹಸುವನ್ನು ಹಿಡಿದುಕೊಂಡು ಬಂದು ಕತ್ತಿರಿಸಿದ. ಆ ಹಸುವೇ ಹೆಣ್ಣು ಮಗಳು, ಕತ್ತರಿಸಿದವನು ಅದರ ಯಜಮಾನ. ಹಿಂದಿನ ಜನ್ಮದಲ್ಲಿ ನೀನು ಪಂಡಿತನಾಗಿದ್ದರೂ, ನೀನು ಅಂತಹ ತಪ್ಪು ಮಾಡಿದ್ದೆಯಲ್ಲ!? ಆತ ನಿನ್ನ ಬಳಿ ಬಂದು, 'ಹಸು ಎಲ್ಲಿ ಹೋಯಿತು?' ಎಂದು ಕೇಳಿದಾಗ ನೀನು ಸುಮ್ಮನೆ ಇದ್ದಿದ್ದರೆ, ಆಗ ಅವನು ಹಸುವನ್ನು ಹಿಡಿದು ಕೊಲ್ಲುವುದಕ್ಕಾಗುತ್ತಿರಲಿಲ್ಲ. ಆದರೆ, ಹಸು ಹೋದ ದಾರಿಯನ್ನು ನೀನು ತೋರಿಸಿದ ಕಾರಣಕ್ಕೋಸ್ಕರ, ಮತ್ತು ಅದು ನಿನ್ನ ಕಡೆಯ ಜನ್ಮವಾಗಿದ್ದರಿಂದ ನಿನ್ನ ಎರಡೂ ಕೈಗಳನ್ನು ಕತ್ತರಿಸಬೇಕಾಯಿತು. ಒಬ್ಬ ಹೆಣ್ಣು ಮಗಳು ಹಸುವಿನ ರೂಪದಲ್ಲಿದ್ದಳು. ಹಿಂದಿನ ಜನ್ಮದಲ್ಲಿ ಮಾಡಿದ ಪಾಪ ನಿನ್ನನ್ನು ಸುಮ್ಮನೆ ಬಿಟ್ಟಿಲ್ಲ. ಆ ಪಾಪ ಈ ಜನ್ಮದಲ್ಲಿ ನಿನಗೆ ಈ ರೀತಿಯಾಗಿ ತಟ್ಟಿದೆ" ಎಂದು ದೇವರು ಹೇಳುತ್ತದೆ. ಎಷ್ಟು ಜನ್ಮ ತಾಳಿದರೂ ಆ ಹೆಣ್ಣು ಮಗಳ ಶಾಪ ತಟ್ಟುತ್ತದೆ. ಆದ ಕಾರಣ, ಹೆಣ್ಣು ಮಕ್ಕಳ ಬಗ್ಗೆ ತಾವು ಅಪಾರ ಪ್ರೀತಿ ಇಟ್ಟುಕೊಂಡಿದ್ದೇವೆಂದು ಬಜೆಟ್ ಪುಸ್ತಕದಲ್ಲಿ ಅವರಿಗೆ ಒದಗಿಸಿರುವ ಸೌಲಭ್ಯಗಳ ಕುರಿತು ಹೇಳಿದರೆ, How many hostels have been constructed for women in this state? ಯಾವ್ಯಾವ ಜಿಲ್ಲೆಗಳಲ್ಲಿ ಎಷ್ಟೆಷ್ಟು ಹಾಸ್ಟೆಲ್‌ಗಳನ್ನು ಮಹಿಳೆಯರಿಗಾಗಿ ನೀವು ನಿರ್ಮಿಸಿದ್ದೀರಿ? ಹೆಣ್ಣು ಮಕ್ಕಳಿಗೋಸ್ಕರ ಯಾವ ರೀತಿಯಾದ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದೀರಿ? ನೀವು ಭಾಷಣ ಮಾಡುವ ಸಮಯದಲ್ಲಿ, ಚುನಾವಣೆ ಸಮಯದಲ್ಲಿ ಮತ್ತು ಬಜೆಟ್‌ನಲ್ಲಿ ಏನು ಹೇಳುತ್ತೀರೋ, Who will implement?

ಇದರ ಜೊತೆಗೆ ಶಿಕ್ಷಣದ ಬಗ್ಗೆ ಹೇಳಿದ್ದೀರಿ, ಶಿಕ್ಷಣಕ್ಕೆ ನಾವು ಪೂರ್ಣ ಮಹತ್ವ ಕೊಡುತ್ತೇವೆಂದು ಹೇಳುತ್ತೀರಿ. ಇದಕ್ಕೊಂದು ಉದಾಹರಣೆ ಕೊಡುವುದಾದರೆ, ಸದನದಲ್ಲಿ ಈಗ ನಮ್ಮ ಜಿಲ್ಲಾ ಮಂತ್ರಿಗಳಿಲ್ಲ. ಅವರು ಇದ್ದಿದ್ದರೆ, ಈ ಕುರಿತಂತೆ ನಾನು ಪ್ರಸ್ತಾಪಿಸಬಹುದಾಗಿತ್ತು. ನನ್ನ ಜಿಲ್ಲೆಯಲ್ಲಿ ಸುಮಾರು 75 ಜೂನಿಯರ್ ಕಾಲೇಜುಗಳಿವೆ. ಅಲ್ಲಿರುವ P.U.ಗೆ ಒಬ್ಬರು DDPI ಇದ್ದಾರೆ. ಇವರಿಗೆ ಕುಳಿತುಕೊಳ್ಳಲು ಒಂದು ಕುರ್ಚಿಯಿಲ್ಲ. ಆಫೀಸ್ ಸಹ ಇಲ್ಲ. ಆದರೂ ನಿಮ್ಮ ಸರ್ಕಾರ ಶಿಕ್ಷಣಕ್ಕೆ ಬಹಳ ಮಹತ್ವ ಕೊಡುತ್ತದೆ! ಇದು ಬಹಳ shame on the part of the government. ಇದರ ಬಗ್ಗೆ ಕೇವಲ ಬಜೆಟ್ ಪುಸ್ತಕದಲ್ಲಿ ಮಾತ್ರ ಪ್ರಸ್ತಾಪಿಸಿದರಷ್ಟೇ ಸಾಲದು.

ಈ ದಿಸೆಯಲ್ಲಿ ನಿಮ್ಮ ಅಧಿಕಾರಿಗಳು ಕೆಲಸ ಮಾಡುತ್ತಿದ್ದಾರಾ? ಇಲ್ಲವೇ, ನಿಮ್ಮ ಅಧಿಕಾರಿಗಳು ಇದರ ಬಗ್ಗೆ ಚಿಂತನೆ ಮಾಡಿದ್ದಾರಾ? ಹೈಸ್ಕೂಲಿಗೆ ಸಂಬಂಧಿಸಿದ ಡಿ.ಡಿ.ಪಿ.ಐ.ನವರು ಒಂದು ಜೀಪ್ ಇಟ್ಟುಕೊಂಡು ಓಡಾಡುತ್ತಾರೆ. ಅವರಿಗಿಂತ ಕೆಳಗಡೆ ಇರುವ BEO ಅವರಿಗೂ ಜೀಪ್ ಇದೆ. ಆದರೆ, ಸುಮಾರು 75 ಜೂನಿಯರ್ ಕಾಲೇಜುಗಳಿಗೆ ಸಂಬಂಧಿಸಿದಂತೆ DDPI ಆಗಿರುವವರಿಗೆ, ಪಿ.ಯು.ಸಿ. ಓದಿ ಡಿಗ್ರಿಗೆ ಹೋಗುವಂತಹ ಕಾಲೇಜಿನ DDPIಗೆ ಒಂದು ಆಫೀಸೂ ಇಲ್ಲ. ಟೆಲಿಫೋನೂ ಇಲ್ಲ. ಜೀಪ್ ಇಲ್ಲ. ನಾಳೆ ಪರೀಕ್ಷೆ ಸಮಯದಲ್ಲಿ ಒಂದು ಪ್ರಶ್ನೆ ಪತ್ರಿಕೆ ಏನಾದರೂ ಲೀಕ್ ಆದರೆ ಅವರಿಗೊಂದು ಬೈಸಿಕಲ್ ವ್ಯವಸ್ಥೆಯನ್ನಾದರೂ ಮಾಡಿಕೊಟ್ಟಿದ್ದೀರಾ? ಸೈಕಲ್‌ನಲ್ಲಾದರೂ ಅವರು ಹೋಗಿ ಬರಬಹುದು. ಬಜೆಟ್‌ನಲ್ಲಿ ಶಿಕ್ಷಣಕ್ಕೆ ನಾವು ಸಾಕಷ್ಟು ಮಹತ್ವ ಕೊಟ್ಟಿದ್ದು, ಇಂತಿಷ್ಟು ಕೋಟಿ ರೂಪಾಯಿಗಳನ್ನು ಒದಗಿಸಲಾಗಿದೆಯೆಂದು ಹೇಳುತ್ತೇವೆ. ಆದರೆ, ಇವತ್ತು ಕನಿಷ್ಠ ಪಕ್ಷ ಅವರಿಗೆ ಟಿಪ್ಪೂ ಸುಲ್ತಾನ್ ಕಾಲದ ಜೀಪನ್ನಾದರೂ ನೀವು ಒದಗಿಸಿಕೊಟ್ಟಿದ್ದೀರಾ? ಅದನ್ನು ಅವರು ಕೈಯಲ್ಲಾದರೂ ತಳ್ಳಿಕೊಂಡು ಹೋಗಬಹುದಾಗಿತ್ತು. ಅದನ್ನೂ ಕೊಟ್ಟಿಲ್ಲ. ಮತ್ತೆ ಅಭಿವೃದ್ಧಿ ಎಲ್ಲಿದೆ? ನಾನು ಸತ್ಯಾಂಶ ಹೇಳುತ್ತಿದ್ದೇನೆ. ತಾವು ಇದರ ಬಗ್ಗೆ ವಿಚಾರ ಮಾಡಬೇಕು. ತಾವೇನು ಕೋಟ್ಯಾತರ ರೂಪಾಯಿಗಳನ್ನು ಒದಗಿಸಿಕೊಟ್ಟಿದ್ದೀರಿ. ಅದನ್ನು ಅಧಿಕಾರಿಗಳು ಎಲ್ಲಿ ಖರ್ಚು ಮಾಡುತ್ತಾರೆ? Who will monitor them? ನನ್ನ ಜಿಲ್ಲೆಯಲ್ಲೇ ಹೀಗಿರುವಾಗ, ಇನ್ನು ಪ್ರತಿಯೊಂದು ಜಿಲ್ಲೆಗಳಲ್ಲೂ ಶಿಕ್ಷಣದ ಪರಿಸ್ಥಿತಿ ಹೇಗಿರಬಹುದು? So, whatever the budget which you have provided, that shows, it is not sufficient ಎಂದಾಗುತ್ತದೆಯೇ ಇಲ್ಲವೇ misuse ಎಂದು ಆಗುತ್ತದೆಯೇ ಎಂಬ ಬಗ್ಗೆ ತಾವು ಚಿಂತನೆ ಮಾಡಬೇಕು.

ಇದರ ಜೊತೆಗೆ reservations in private sectors. ಖಾಸಗಿ ವಲಯಗಳಿಗೆ ತಾವು ಎಷ್ಟು ಮಹತ್ವ ಕೊಡುತ್ತೀರಿ? IT parks ಬಗ್ಗೆ ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಬಹಳ ಗಂಭೀರವಾಗಿ ಮಾತನಾಡಿದರು. Foreign investors ಬರುತ್ತಿದ್ದು, 'ಕರ್ನಾಟಕ ರಾಜ್ಯದಲ್ಲಿ ನಿಮಗೆ ಮಹತ್ವ ಕೊಡುತ್ತೇವೆ, ಇನ್‌ಫೋಸಿಸ್‌ಗೆ ಕೊಡುತ್ತೇವೆ. ಲಾರ್ಸೆನ್ ಅಂಡ್ ಟೂಬ್ರೊಗೆ ಕೊಡುತ್ತೇವೆ. ಅವರಿಗೆ ಎಷ್ಟು ಜಮೀನು ಬೇಕೋ ಅಷ್ಟನ್ನೂ ಒದಗಿಸಿಕೊಡುತ್ತೇವೆ. ಜೊತೆಗೆ, ವಿದ್ಯುತ್ ಮತ್ತು ನೀರಿನ ಸೌಲಭ್ಯ ಒದಗಿಸಿಕೊಡುತ್ತೇವೆ' and you are giving Rs. 100 crore incentive also for them to develop. ಈ ರಾಜ್ಯವನ್ನು ಅಭಿವೃದ್ಧಿಪಡಿಸಬೇಕೆಂದು ನೀವು ಇಷ್ಟೆಲ್ಲಾ ಸೌಲಭ್ಯಗಳನ್ನು ಒದಗಿಸಿಕೊಡುತ್ತಿದ್ದೀರಿ. ಇವೆಲ್ಲವನ್ನೂ ಇನ್‌ಸೆಂಟಿವ್ ಆಗಿ ಕೊಡುತ್ತಿದೀರಿ. ಇಷ್ಟೆಲ್ಲಾ ಸೌಲಭ್ಯ ಸವಲತ್ತುಗಳನ್ನು ಅವರಿಗೆ ಕಲ್ಪಿಸಿಕೊಟ್ಟ ಬಳಿಕವೂ ಪರಿಶಿಷ್ಟ ಜಾತಿಯವರಿಗೆ ಅದರಲ್ಲಿ ಮೀಸಲಾತಿ ನೀತಿ ತಂದಿದ್ದೀರಾ? ಸಾಮಾಜಿಕ ಮತ್ತು ಆರ್ಥಿಕ ಅಭಿವೃದ್ಧಿ ಯಾರಿಗೋಸ್ಕರ? ಯಾರು ಅಭಿವೃದ್ಧಿಯಾಗಿಲ್ಲವೋ, who are under

developed. ಅವರನ್ನು ಅಭಿವೃದ್ಧಿಪಡಿಸುವುದು ಸರ್ಕಾರದ ಕೆಲಸವಾಗಬೇಕು. ನೀವು ಸುಮ್ಮನೆ ಕುಳಿತುಕೊಂಡು, ಇಂತಹ ಇಷ್ಟೊಂದು ಪಾರ್ಕುಗಳು ಬಂದಿದೆ, ಇಂತಹ ಲೈಟ್ ಬಂದಿದೆ, ಚೆನ್ನಾಗಿರುವ ಬೆಂಜ್ ಕಾರು ಬಂದಿದೆ. ರೋಲ್ಸ್‌ರಾಯ್ ಕಾರು ಬಂದಿದೆ, ಅದರಲ್ಲಿ ಓಡಾಡಲು ಅವರುಗಳಿಗೆ ರಸ್ತೆಗಳು ಚೆನ್ನಾಗಿರಬೇಕು. ಅವರುಗಳಿಗೆ ಹಾಸ್ಟೆಲ್‌ಗಳು ಚೆನ್ನಾಗಿರಬೇಕು. ಕ್ರಿಕೆಟ್ ಆಟ ನೋಡಲು ಅವರಿಗೆ ಕುಳಿತುಕೊಳ್ಳುವುದಕ್ಕೆ ಸಪರೇಟ್ ಬಾಕ್ಸ್ ಬೇಕು. ಅವರು ಇಪ್ಪತ್ತು ಜನರು ಬಂದರೆ, ಅವರಿಗೆ ಊಟ–ತಿಂಡಿ ಮತ್ತಿತರ ವ್ಯವಸ್ಥೆಗಳನ್ನು ಮಾಡುವುದಕ್ಕೆ 5–10 ಲಕ್ಷ ರೂಪಾಯಿಗಳು ಇರಬೇಕು. ಈ ರೀತಿಯಾಗಿ ಇದೆಲ್ಲವನ್ನೂ ನೀವು ಹೇಳಿಕೊಂಡು foreign investors ಗೆ ಮಹತ್ವ ಕೊಡುವ ಸಮಯದಲ್ಲಿ, ನೀವು ಸುಮಾರು ಮೀಟಿಂಗ್‌ಗಳನ್ನು ಮಾಡಿದರೆ, are you really interested about the Scheduled Caste people in the budget to provide reservation policy for them? Show me in the budget whether anywhere you have provided facilities.

ಅಧ್ಯಕ್ಷರು:– ಮಾನ್ಯ ರಾಜೇಂದ್ರನ್‌ರವರೆ, ತಾವು ಮಾತನಾಡಲು ಆರಂಭಿಸಿ ಆಗಲೇ ಅರ್ಧ ಗಂಟೆಯಾಯಿತು. ದಯವಿಟ್ಟು ಬೇಗ ಮುಗಿಸಬೇಕು.

ಶ್ರೀ ಎಸ್. ರಾಜೇಂದ್ರನ್:– ನನ್ನ ಮಾತು ಇಂಟರೆಸ್ಟ್ ಆಗಿಲ್ಲದಿದ್ದರೆ ನಾನುಕುಳಿತುಕೊಳ್ಳುತ್ತೇನೆ. ಈಗ ಉಳಿದಿರುವುದು ಎರಡೇ ವಿಷಯಗಳು. ಇನ್ನು ನಾನು ಲ್ಯಾಂಡ್ ರಿಫಾರ್ಮ್ಸ್ ಕುರಿತಂತೆ ಮಾತನಾಡಬಯಸುತ್ತೇನೆ. ಇದು ತಾವು ಕೊಟ್ಟಿರುವ ಬಜೆಟ್ ಆಗಿದೆ. ಸುಪ್ರೀಂ ಕೋರ್ಟ್ ತನ್ನ ಆರ್ಡರ್‌ನಲ್ಲಿ ಏನು ಹೇಳಿದೆ "ಮೂವತ್ತು ವರ್ಷಕ್ಕೆ ಮುಂಚೆ ಪರಿಶಿಷ್ಟ ಜಾತಿಯವರು ಯಾರ್‍ಯಾರು ಲ್ಯಾಂಡ್ಸ್ ಸೇಲ್ ಮಾಡಿದ್ದಾರೋ, ಅದೆಲ್ಲವನ್ನೂ ರಿಟರ್ನ್ ಮಾಡಬೇಕು" ಎಂದು ತಾವು ಕೊಟ್ಟಿದ್ದೀರಿ. O.K. Well, I will appreciate. ಅಸಿಸ್ಟೆಂಟ್ ಕಮೀಷನರ್ ಮುಖಾಂತರ ಕೊಡಬೇಕು ಎಂದು ಇದೆ. ಎಲ್ಲಿ ಕೊಟ್ಟಿದ್ದೀರಿ? ರಿಜಿಸ್ಟರ್‌ನಲ್ಲಿ, ಪೇಪರ್‌ನಲ್ಲಿ ಕೊಟ್ಟಿದ್ದೀರಿ, ಫೀಸಿಕಲ್ ಆಗಿ ಅವರಿಗೆ ನೀವು hand over ಮಾಡಿಕೊಟ್ಟಿದ್ದೀರಾ? Physically have you brought this land and handed over to the people? ಅವನು ಎಲ್ಲಿಗೆ ಹೋಗಬೇಕು? ಯಾರನ್ನು ಕೇಳುವುದು? The landlords are muscle-powered personalities, money-powered personalities political-powered personalities. ಇಂತಹ ಬಡವರಿಗೆ ಬಜೆಟ್‌ನಲ್ಲಿ ಮಾತ್ರ ನೀವು ಕೊಟ್ಟಿದ್ದರೆ, ಫಿಸಿಕಲ್ ಆಗಿ ಅವರಿಗೆ ನೀವು ಲ್ಯಾಂಡ್ ಅನ್ನು ಹ್ಯಾಂಡ್ ಓವರ್ ಮಾಡಿದ್ದೀರಾ? ಇದರ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ? What next step you are going to take? How are you going to hand over it? ಅದು ಇದರಲ್ಲಿ ಇಲ್ಲವೇ? ತಾವೆಲ್ಲರೂ ಅದರ ಬಗ್ಗೆ ಸ್ವಲ್ಪ ಚಿಂತನೆ ಮಾಡಬೇಕು. ಈ policy matter ಮೇಲೆ ತಾವು ಕೊಟ್ಟಿದ್ದರೆ, ಅದರಿಂದ

ನಮಗೂ ಅನುಕೂಲವಾಗುತ್ತದೆ. ತಾವು ಅದೆಲ್ಲವನ್ನೂ ಕೊಟ್ಟಿಲ್ಲ. ಅವರಿಗೆ ಫಿಸಿಕಲ್ ಪೊಸಿಷನ್ ಅನ್ನು ಸಹ ಮಾಡಿಕೊಟ್ಟಿಲ್ಲ.

ಇನ್ನು ಅಟ್ರಾಸಿಟಿ ಬಗ್ಗೆ ಹೇಳುವುದಾದರೆ, Atrocity case is a powerful case. ಕಾನೂನು ಇಲಾಖೆಯವರು ಅದರ ಮೇಲೆ ಏನೇನು ಕ್ರಮ ತೆಗೆದುಕೊಂಡಿದ್ದಾರೆ? ಅವರು "Lower court ಸಹ ಅವರಿಗೆ bail ಕೊಡಬಹುದು" ಎಂದು ತೀರ್ಪು ಕೊಟ್ಟರು. Why the Government has not taken any steps to question this in the Supreme Court to get the power? ಹಾಗಾದರೆ, ನೀವು ಪರಿಶಿಷ್ಟ ಜಾತಿಯವರ ಮೇಲೆ ಪ್ರೀತಿ ಇಟ್ಟುಕೊಂಡಿರುವವರೇ? It is non-bailable all atrocity cases are non-bailable. Earlier High Court Judge Mr. Suldhana ಪರಿಶಿಷ್ಟ ಜಾತಿಯವರ ಮೇಲೆ ದೌರ್ಜನ್ಯವಾಗುತ್ತದೆಂದು ನೀವು ಅವರನ್ನು ಕಾಪಾಡುವವರೇ? ಈ ಬಜೆಟ್‌ನಲ್ಲಿ ಆ ಕುರಿತಂತೆ ಎಲ್ಲಿ ಪ್ರಸ್ತಾಪಿಸಿದ್ದೀರಿ? ತೋರಿಸಿ. Nowhere you have shown, and you are talking Himalaya. You are talking Himalaya, heaven, tall talk. ಇದರ ಬಗ್ಗೆದ ರೂಲ್ಸ್ ಇದೆ ರೂಲ್ಸ್ ಏನಿದೆ? Atrocity cased is non-bailable. 307ರಲ್ಲಿ ಕೇಸ್ ಹಾಕಿದ್ದರೆ, ಕನಿಷ್ಠ ಅದು Sessions Courtಗೆ ಹೋಗಬೇಕು. Not to the lower court. ಈ ರೀತಿ most strong ಆಗಿ ಇರುವುದನ್ನೇ, you have just vanished. Lower Court ನಲ್ಲಿ ಇದನ್ನು ತೆಗೆದುಕೊಂಡು ಹೋದರೆ ನೀವು ಹೇಗೆ ಅವನನ್ನು ಅಟ್ರಾಸಿಟಿಯಿಂದ ಸೇವ್ ಮಾಡುತ್ತೀರಿ? ಎಲ್ಲಿ ಅವನಿಗೆ ನೀವು ರಕ್ಷಣೆ ಕೊಡುತ್ತೀರಿ? ಅವನು ಷೆಡ್ಯೂಲ್ಡ್ ಕ್ಯಾಸ್ಟ್‌ನವನನ್ನು ಬಯ್ಯುತ್ತಾನೆ, ಹೊಡೆಯುತ್ತಾನೆ, lower court ಗೆ ಹೋಗುತ್ತಾನೆ. Why the Law Minister has not taken care to give more power to take up the case at the sessions court level. ತಾವು ಪ್ರಯತ್ನ ಮಾಡಬೇಕು. ಮಾಡಲೇಬೇಕು.

ಶ್ರೀ ಬಸವರಾಜ ಎಸ್. ಹೊರಟ್ಟಿ:– ಮಾನ್ಯ ಅಧ್ಯಕ್ಷರೆ, ಪೊಲೀಸರು ಕೇಸ್ ಹಾಕಿದ ನಂತರ ಅದು ಕೋರ್ಟ್‌ಗೆ ಹೋಗುತ್ತದೆ. ಕೋರ್ಟಿನಲ್ಲಿ ಅದು bailable ಅಥವಾ non bailable ಎನ್ನುವುದನ್ನು ಜಡ್ಜ್‌ರವರು ತೀರ್ಮಾನ ಮಾಡಬೇಕಾಗುತ್ತದೆ. ಅದು ಸರ್ಕಾರದ ಕೆಲಸವಲ್ಲ. ಸರ್ಕಾರ ಏನಿದ್ದರೂ ಪೊಲೀಸರ ಮೂಲಕ ಕೇಸ್ ರಿಜಿಸ್ಟರ್ ಮಾಡಿಸುತ್ತದೆ. ಕೇಸ್ ರಿಜಿಸ್ಟರ್ ಆದ ನಂತರ ಅದು ಕೋರ್ಟ್‌ಗೆ ಹೋಗುತ್ತದೆ. It is left to the judge.

ಶ್ರೀ ಜೆ.ಸಿ. ಮಾಧುಸ್ವಾಮಿ:– ಆಕ್ಟ್ ಮಾಡುವವರು ನಾವೇ. ಜಡ್ಜ್ ಆಕ್ಟ್ ಮಾಡುವುದಿಲ್ಲ. Judge will interpret the act.

ಮಾನ್ಯ ಸದಸ್ಯರು:– ಸರ್ಟಿಫಿಕೇಟ್ ಕೊಡುವವವರು ತಹಶೀಲ್ದಾರರು. ಅವರು ಸರ್ಟಿಫಿಕೇಟ್ ಕೊಡತಕ್ಕಂಥ ಸಂದರ್ಭದಲ್ಲಿ ಅದನ್ನು ಸರಿಯಾದ ರೀತಿಯಲ್ಲಿ ನೋಡಿ ಸರ್ಟಿಫಿಕೇಟ್ ಕೊಟ್ಟರೆ ಇಂತಹ ಸಮಸ್ಯೆ ಉದ್ಭವವಾಗುವುದಿಲ್ಲ.

ಶ್ರೀ ಎಸ್. ರಾಜೇಂದ್ರನ್:– ನಾನು ಜುಡಿಷಿಯಲ್ ಬಗ್ಗೆ ಏನೂ ಹೇಳಲಿಲ್ಲ. ನಾನು ಹೇಳಿದ್ದು ಏನೆಂದರೆ, bailable and non-bailable ಏನಿದೆ, 506–ಬಿ ಅಂದರೆ session court, non-bailable. 506 ಎಂದರೆ ಮುನ್ಸಿಫ್ ಕೋರ್ಟ್‌ನಲ್ಲಿ ತೆಗೆದುಕೊಳ್ಳುತ್ತಾರೆ. 307 ಎಂದರೆ session court ನಲ್ಲಿ ತೆಗೆದುಕೊಳ್ಳುತ್ತಾರೆ. ಆ ಕೇಸ್ ಸ್ಟ್ರಾಂಗ್ ಆಗಿ ಇರಲಿ, ಭಯ ಬರಲಿ ಎನ್ನುವುದಕ್ಕೋಸ್ಕರ ಇದನ್ನು ಮಾಡಿದ್ದಾರೆ. ಲಾ ಮಿನಿಸ್ಟರ್ ಇದರ ಮೇಲೆ ಕ್ರಮ ಕೈಗೊಂಡು you should make an appeal to Supreme Court to scratch this to get more power to arrest in atrocity cases. ಅದನ್ನು ಸ್ವಲ್ಪ ಚಿಂತನೆ ಮಾಡಿದರೆ ನಮಗೆ ಬಹಳ ಅನುಕೂಲವಾಗುತ್ತದೆ. ಜೊತೆಗೆ, I conclude my speech. ಅಧ್ಯಕ್ಷರೆ, ತಮಗೆ ನನ್ನ ಮೇಲೆ ಕೋಪ ಬರಬಾರದು ಟೂರಿಸಂ ಡೆವಲಪ್‌ಮೆಂಟ್ ಬಗ್ಗೆ ಗಂಭೀರವಾಗಿ ಹೇಳಿದ್ದೀರಿ. Tourism Development ಆಗಬೇಕು. ಸುಮಾರು 50 ಜಾಗಗಳಲ್ಲಿ ನಾವು tourism development ಮಾಡುವುದಾಗಿ ಹೇಳಿದ್ದೀರಿ? ಎಲ್ಲೆಲ್ಲಿ tourism development ಮಾಡಬೇಕು? ಫಾರಿನ್‌ಗೆ ಹೋಗಿ ಬಂದ ತಕ್ಷಣ ಕೆಲವರು ಮಾತನಾಡುವುದೇನೆಂದರೆ, we went underground and had a cup of tea. 100 ಫೀಟ್‌ಗೆ ಹೋಗಿ ನಾವು ಒಂದು ಕಪ್ ಟೀ ಕುಡಿದೆವು. ಬಹಳ ಚೆನ್ನಾಗಿತ್ತೆಂದು ಹೇಳುತ್ತಾರೆ. ಇಲ್ಲಿ ನೀವು tourism develop ಮಾಡುವುದಾಗಿ ಹೇಳಿಕೊಂಡಿರುತ್ತೀರಿ. ನಮ್ಮ KGF ನಲ್ಲಿ BGML ಮುಚ್ಚಿದೆ.....

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಈ ಅಸೆಂಬ್ಲಿ ಸ್ಟಾರ್ಟ್ ಅದಾಗಿನಿಂದ ಟೂರಿಸಂ ಮಿನಿಸ್ಟರ್ ಕಾಣುತ್ತಿಲ್ಲ. ಅವರು ಏನಾದರೂ ಇದ್ದಾರೆಯೇ? ಇಲ್ಲವೇ? ಏನಾದರೂ ಚಾರ ಪಟ್ಟಿ ಹಾಕಿಸಬೇಕೇ? ಹೇಳಿ ಸಾರ್. He has never come to the assembly. ಅವರು ಈ ಸೆಷನ್‌ನಲ್ಲಿ ಬಂದಿಲ್ಲ.

ಶ್ರೀ ಸಿದ್ದರಾಮಯ್ಯ:– ಮಾನ್ಯ ಅಧ್ಯಕ್ಷರೆ, ಅವರು ತಮ್ಮ ಅನುಮತಿ ತೆಗೆದುಕೊಂಡು ಜರ್ಮನಿಯ ಬರ್ಲಿನ್‌ಗೆ ಹೋಗಿದ್ದರು. ಈಗ ಬಂದಿದ್ದಾರೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಅವರು ತಮ್ಮ ಅನುಮತಿ ತೆಗೆದುಕೊಂಡಿದ್ದಾರಾ ಸಾರ್?

ಅಧ್ಯಕ್ಷರು:– ಅವರು ನನ್ನ ಪರ್ಮಿಶನ್ ತೆಗೆದುಕೊಂಡು ಹೋಗಿದ್ದಾರೆ. ಮಾನ್ಯ ರಾಜೇಂದ್ರನ್‌ರವರೆ, ತಾವು ಬೇಗ ಮುಗಿಸಬೇಕು.

ಶ್ರೀ ಎಸ್. ರಾಜೇಂದ್ರನ್:– ಆಯಿತು ಸಾರ್. ನಾನು ಈಗ tourism development ಬಗ್ಗೆ ಮಾತನಾಡುತ್ತಿದ್ದೇನೆ. ಅದಾದ ನಂತರ ಸ್ಪೋರ್ಟ್ಸ್ ಬಗ್ಗೆ

ಮಾತನಾಡುತ್ತೇನೆ. ನಾನು ಇದುವರೆಗೂ ಟೂರ್ ಹೋಗಿಲ್ಲ ಸ್ವಾಮಿ. ನಾವು ಟೂರಿಗೆ ಹೋಗುವ ಸಮಯದಲ್ಲಿ ನಮ್ಮ ವಾಟಾಳ್ ನಾಗರಾಜ್ ಮುಂತಾದ ಸದಸ್ಯರೆಲ್ಲರೂ ಸೇರಿಕೊಂಡು ಅಲ್ಲಿ ಸುನಾಮಿ ಇದೆಯೆಂದು ನಮ್ಮನ್ನೆಲ್ಲಾ ಟೂರಿಗೆ ಕರೆದುಕೊಂಡು ಹೋಗಲಿಲ್ಲ. At least, we are standing here. ಏನಾದರೂ ನಾವು ಅದೇ ಡೇಟ್ ಫಿಕ್ಸ್ ಮಾಡಿಕೊಂಡು ಟೂರ್‌ಗೆ ಹೋಗಿದ್ದರೆ ನಾವು ಸುನಾಮಿಗೆ ಸಿಕ್ಕಿಹಾಕಿಕೊಳ್ಳುತ್ತಿದ್ದೆವು. ಆ ಡೇಟ್ ಬೇಡವೆಂದು ಒಳ್ಳೆಯ ರೀತಿಯಿಂದ ಅವರು ನಮ್ಮನ್ನು ಸ್ಟಾಪ್ ಮಾಡಿದರು. ಆದುದರಿಂದ ನಾವು ಟೂರ್ ಹೋಗಲಿಲ್ಲ. Tourism Development Minister ಸುಮಾರು 50 ಜಾಗಗಳನ್ನು ಟೂರಿಸಂ ಪ್ಲೇಸಸ್ ಎಂದು ಗುರ್ತಿಸಿದ್ದಾರೆ. ನಮ್ಮ ಜಾಗದಲ್ಲಿ underground coffee ಕುಡಿಯುವುದಕ್ಕೆ ಚೆನ್ನಾಗಿದೆ. Atleast you can go 1000 feet underground. Beautiful underground is there. It is second largest in the world. ಅದನ್ನು ಉಪಯೋಗಿಸಿಕೊಳ್ಳಬಹುದು. ಅಲ್ಲಿ ಟೂರಿಸಂ ಡೆವಲಪ್‌ಮೆಂಟ್ ಮಾಡಬಹುದೇ ಎಂಬ ಬಗ್ಗೆ ಯೋಚಿಸಿ. ಬಜೆಟ್‌ನಲ್ಲಿ ಏನು 50 ಜಾಗಗಳ ಹೆಸರುಗಳನ್ನು ಕೊಟ್ಟಿದ್ದಾರೋ, ಆ ಜಾಗಗಳ ಜೊತೆಗೆ ಅಂತಹ ಸಂದರ್ಭ ಬಂದರೆ ನಮ್ಮ ಕೆಜಿಎಫ್ ಅನ್ನೂ ಕೂಡ ಅದರಲ್ಲಿ ಸೇರಿಸಬೇಕೆಂದು ನಾನು ಮಾನ್ಯ ಉಪ ಮುಖ್ಯಮಂತ್ರಿಗಳನ್ನು ಕೋರುತ್ತೇನೆ. ತಮ್ಮ ಕಾಲದಲ್ಲಿ ನಮ್ಮ ಊರು ಡೆವಲಪ್ ಆಗಲಿಲ್ಲವೆಂದರೆ ಇನ್ಯಾರ ಕಾಲದಲ್ಲಿ ಆಗಬೇಕು? ನಾನು well developed ನಿಮ್ಮ ಆಶೀರ್ವಾದ ಇದ್ದು ಆ ಟೂರಿಸಂ ಡೆವಲಪ್‌ಮೆಂಟ್‌ನಲ್ಲಿ ನಮ್ಮ ಕೆಜಿಎಫ್ ಅನ್ನೂ ಸೇರಿಸಿದ್ದಲ್ಲಿ ಚೆನ್ನಾಗಿರುತ್ತದೆ. ಮಾನ್ಯ ಕ್ರೀಡಾ ಸಚಿವರು ತಾಲ್ಲೂಕಿಗೊಂದು ಸ್ಟೇಡಿಯಂ ಮಾಡುವುದಾಗಿ ಹೇಳಿದ್ದಾರೆ. ಒಬ್ಬನು ನೂರು ಮೀಟರ್ ಓಡಬೇಕೆಂದರೆ ಅವನು tired ಆಗಿ 100 ಮೀಟರ್ಸ್ ಓಡುವುದಕ್ಕಾಗುವುದಿಲ್ಲ ಹಳ್ಳಿಯಲ್ಲಿರುವವನು ತಾಲ್ಲೂಕಿಗೆ ಬಂದು ಪ್ರಾಕ್ಟಿಸ್ ಮಾಡುವುದಕ್ಕಾಗುವುದಿಲ್ಲ. ಒಂದೊಂದು ಕ್ಷೇತ್ರದಲ್ಲಿ ಒಂದೊಂದು ಸ್ಟೇಡಿಯಂ ಕೊಡಿ. ಹೈದರಾಬಾದ್‌ನಲ್ಲಿ ಒಂದು ಹೆಣ್ಣು ಮಗಳು ಟೆನ್ನಿಸ್‌ನಲ್ಲಿ ಹೆಸರು ತೆಗೆದುಕೊಂಡಿದ್ದರಿಂದ ಈ ಇಂಡಿಯಾ ದೇಶ ಗೊತ್ತಾಗಿದೆ.

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ (ಯುವಜನಸೇವೆ ಅಲ್ಪಸಂಖ್ಯಾತರ ಕಲ್ಯಾಣ): – ಮಾನ್ಯ ಅಧ್ಯಕ್ಷರೆ, ಅದೇ ದೃಷ್ಟಿಯಿಂದ ಪ್ರತಿಯೊಂದು ಜಿಲ್ಲೆಗೆ ಈಗ ನಾವು ಕ್ರೀಡಾಂಗಣ ಮಾಡಲು ನಿರ್ಧರಿಸಿದ್ದೇವೆ. ಜಿಲ್ಲೆಗೊಂದರಂತೆ ಅಷ್ಟೇ ಅಲ್ಲ. ಇಡೀ ರಾಜ್ಯಾದ್ಯಂತ ಪ್ರತಿ ತಾಲ್ಲೂಕಿಗೊಂದರಂತೆ 75 ಕಡೆಗಳಲ್ಲಿ ಕ್ರೀಡಾಂಗಣ ನಿರ್ಮಾಣದ ಕೆಲಸ ಶುರು ಮಾಡಿದ್ದೇವೆ. ಉತ್ತರ ಕರ್ನಾಟಕದಲ್ಲಿ 37 ಕ್ರೀಡಾಂಗಣಗಳನ್ನು ಶುರು ಮಾಡಿದ್ದೇವೆ. ಅದಕ್ಕಾಗಿ ನಾನು ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ವಿ. ಸೋಮಣ್ಣ:– ಮಾನ್ಯ ಅಧ್ಯಕ್ಷರೆ, ತಾವು ಮಾಡಿದ್ದೀರಿ. ಇಲ್ಲಿಯವರೆಗೆ ಏನು ಅರ್ಧಂಬರ್ಧವಾಗಿದೆಯೋ ಮೊದಲು ಅವುಗಳನ್ನು ಕಂಪ್ಲೀಟ್ ಮಾಡಿಸಿ, ಬಹುತೇಕ ಕಡೆಗಳಲ್ಲಿ ಎಲ್ಲಾ ಕೆಲಸಗಳು ಅರ್ಧಂಬರ್ಧವಾಗಿ ಮಕ್ಕಳು ಆಟವಾಡತಕ್ಕ ಜಾಗವೂ ಹೋಯಿತು. ಜೊತೆಗೆ

ಕ್ರೀಡಾಂಗಣಗಳು ಪೂರ್ತಿಯಾಗಲಿಲ್ಲ ಎನ್ನುವಂತಾಗಿದೆ. ದಯವಿಟ್ಟು ನೀವು 75 ಅಥವಾ 225 ಕಡೆಗಳಲ್ಲಿ ಕ್ರೀಡಾಂಗಣಗಳನ್ನು ನಿರ್ಮಿಸುವ ಬದಲು ಎಲ್ಲೆಲ್ಲಿ ಕೆಲಸ ಶುರು ಮಾಡಿದ್ದೀರೋ ಮೊದಲು ಆ ಕಡೆಗಳಲ್ಲಿ ಕಂಪ್ಲೀಟ್ ಮಾಡಿ, ಹೊಸದಾಗಿ ಯಾವುದನ್ನಾದರೂ ತೆಗೆದುಕೊಂಡು ಅದಕ್ಕೆ 5–10 ಲಕ್ಷ ರೂ ಕೊಡುವ ಬದಲು ಅರ್ಧಂಬರ್ಧವಾಗಿರುವುದಕ್ಕೆ ದುಡ್ಡು ಕೊಟ್ಟು ಕಂಪ್ಲೀಟ್ ಮಾಡಿಸಿ. ಅಂತಹವು ಒಂದು ಇಪ್ಪತ್ತನ್ನಾದರೂ ಕಣ್ಣಿಗೆ ಕಾಣುವಂತೆ ಮಾಡಿ. ನೀವು ನೂರು ಮಾಡುತ್ತೇನೆಂದು ಹೇಳಿ. ತಿರುಪತಿಯಲ್ಲಿ ವೆಂಕಟರಮಣಸ್ವಾಮಿ ದೇವಸ್ಥಾನಕ್ಕೆ ಹೋದಾಗ ತಲೆಯನ್ನು ಪೂರ್ಣ ಬೋಳಿಸುವ ಮೊದಲು ಅಲ್ಲೊಂದು ಚೂರು ಇಲ್ಲೊಂದು ಚೂರು ಬೋಳಿಸಿದಂತೆ ಎಲ್ಲವನ್ನೂ ಅರ್ಧಂಬರ್ಧ ಮಾಡಬೇಡಿ. ಮಾಡತಕ್ಕಂಥ ಕೆಲಸವನ್ನು ನೀಟ್ ಆಗಿ ವ್ಯವಸ್ಥಿತವಾಗಿ ಅದು ಮಕ್ಕಳಿಗೆ ಉಪಯೋಗವಾಗುವ ರೀತಿಯಲ್ಲಿ ಮಾಡಿ. ಕಡಿಮೆ ಸಂಖ್ಯೆಯಲ್ಲಿದ್ದರೂ ಪರವಾಗಿಲ್ಲ ಇರುವ ಕ್ರೀಡಾಂಗಣಗಳನ್ನು ಮೊದಲು ಪೂರ್ತಿಗೊಳಿಸುವ ಕಡೆ ದಯವಿಟ್ಟು ಗಮನಹರಿಸಿ.

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ:– ಈಗಾಗಲೇ 54 ಕ್ರೀಡಾಂಗಣಗಳ ನಿರ್ಮಾಣ ಕಾರ್ಯ ಮುಗಿಯುತ್ತಾ ಬಂದಿದೆ. ಉಳಿದಿದ್ದನ್ನೂ ನಾವು ಮಾಡಿಯೇ ಮಾಡುತ್ತೇವೆ.

ಶ್ರೀ ವಿ. ಪಾಪರೆಡ್ಡಿ (ರಾಯಚೂರು):– ಮಾನ್ಯ ಅಧ್ಯಕ್ಷರೆ, ನಮ್ಮ ರಾಯಚೂರು ನಗರದಲ್ಲೊಂದು ಬಹಳ ದೊಡ್ಡ ಸ್ಟೇಡಿಯಂ ಇದೆ. ಇದು ಇವೊತ್ತು ಶಿಥಿಲ ಸ್ಥಿತಿಯಲ್ಲಿದೆ. ಅದು ಇವೊತ್ತು ಬಿದ್ದು ಹೋಗುವ ಪರಿಸ್ಥಿತಿಯಲ್ಲಿದೆ. ನಗರ ಕೇಂದ್ರವಾದ ನನ್ನ ಕ್ಷೇತ್ರದಲ್ಲಿ ದೊಡ್ಡದಾದ ಈ ಮಹಾತ್ಮಗಾಂಧಿ ಕ್ರೀಡಾಂಗಣ ಕಟ್ಟಿದ್ದಾರೆ. ಅದರ ಪಕ್ಕ ಕುಳಿತರೆ ಅದು ಎಲ್ಲಿ ಬಿದ್ದುಹೋಗುತ್ತದೆನ್ನುವ ಭಯದ ವಾತಾವರಣವಿದೆ. 26 ಲಕ್ಷ ರೂಪಾಯಿಗಳ ವೆಚ್ಚದಲ್ಲಿ ಅದನ್ನು ರಿಪೇರಿ ಮಾಡಿಸುತ್ತೇವೆಂದು ಮಾನ್ಯ ಮಂತ್ರಿಗಳು ಹೇಳಿದ್ದರು. ಆದರೆ, ಎರಡು ವರ್ಷಗಳಾದರೂ ಆ 26 ಲಕ್ಷ ರೂಪಾಯಿಗಳು ಬಿಡುಗಡೆಯಾಗಲಿಲ್ಲ. ಆ ಸ್ಟೇಡಿಯಂ ರಿಪೇರಿಯಾಗಲಿಲ್ಲ. ಆದ ಕಾರಣ, ಮಾನ್ಯ ಮಂತ್ರಿಗಳು ತಕ್ಷಣ ಅದರ ರಿಪೇರಿ ಮಾಡಬೇಕೆಂದು ನಾನು ತಮ್ಮ ಮೂಲಕ ಅವರನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ:– ಮಾನ್ಯ ಸದಸ್ಯರು ಇದೀಗ ವಿಚಾರವನ್ನು ನನ್ನ ಗಮನಕ್ಕೆ ತಂದಿದ್ದಾರೆ. ನಾನು ಅದನ್ನು ರಿಪೇರಿ ಮಾಡಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಎಸ್. ರಾಜೇಂದ್ರನ್:– ಮಾನ್ಯ ಅಧ್ಯಕ್ಷರೆ, ಈಗ ತಾವು ಸ್ಪೋರ್ಟ್ಸ್ ಬಗ್ಗೆ ಏನು ಹೇಳಿದ್ದೀರೆಂದರೆ, ಸ್ಪೋರ್ಟ್ಸ್ ಎನ್ನುವುದು ಹೇಗಿರಬೇಕೆಂದು ತಮಗೆ ಗೊತ್ತಾಗಬೇಕು. ಸ್ವಾತಂತ್ರ್ಯ ಬಂದು 50 ವರ್ಷಗಳಾದರೂ ಸಹ ನನ್ನ ಊರಿನಲ್ಲಿ ಸರ್ಕಾರದ್ದು ಒಂದು ಸ್ಟೇಡಿಯಂ ಇಲ್ಲ. ಟೋಕಿಯೋ ಒಲಂಪಿಕ್ಸ್‌ನಲ್ಲಿ ಪಾರ್ಟಿಸಿಪೇಟ್ ಮಾಡಿರುವ Keny Paul ಎಂಬುವವನು ಕೆಜಿಎಫ್‌ನವನು. ರಷ್ಯನ್ ಫುಟ್‌ಬಾಲ್‌ನಲ್ಲಿ ಪಾರ್ಟಿಸಿಪೇಟ್ ಮಾಡಿರುವವನು ನಟರಾಜ್ ಎಂಬುವವರು. It is famous in my constituency. ಅದಕ್ಕೋಸ್ಕರವೇ ನಾನು

ಹೇಳುವುದು. ಇದನ್ನು ಎಲ್ಲಾ ಕಡೆ ಮಾಡುತ್ತೇವೆಂದರೆ, ಇದಕ್ಕೊಂದು ಉದಾಹರಣೆ ಹೇಳುತ್ತೇನೆ. Football tournament ಒಂದಕ್ಕೆ ಆ ವಿಲೇಜ್‌ನಲ್ಲಿರುವ ದೊಡ್ಡ ಮನುಷ್ಯನೊಬ್ಬನನ್ನು ಚೀಫ್ ಗೆಸ್ಟ್ ಆಗಿ ಕರೆದಿದ್ದರು. "ಫುಟ್‌ಬಾಲ್ ನೋಡಲು ತಾವು ಬನ್ನಿ ಸಾರ್." ಎಂದು ಊರಿಗೆ ದೊಡ್ಡವರಾದ ಅವರನ್ನು ಕರೆದಿದ್ದರು. ಅವರು ಜೀವನದಲ್ಲಿ ಫುಟ್‌ಬಾಲ್ ಎಂದರೆ ಏನೆಂದು ನೋಡಿರಲಿಲ್ಲ. ಅವರು ಪಾಪ ಒಳ್ಳೆಯ ಮನುಷ್ಯ. ಅವರದ್ದು ಒಳ್ಳೆಯ ಗುಣ. ಅವರು ಬಹಳ ಗೌರವಯುತವಾದ ವ್ಯಕ್ತಿಯಾಗಿದ್ದರು. ಅವರು ಬಂದು ಚೀಫ್ ಗೆಸ್ಟ್ ಆಗಿ ಕುಳಿತುಕೊಂಡಿದ್ದರು. ಫುಟ್‌ಬಾಲ್ ಮ್ಯಾಚ್ ನೋಡಿದರು. ಇಂಟರ್‌ವೆಲ್ ಸಮಯದಲ್ಲಿ ಒಂದು ಹತ್ತು ನಿಮಿಷ ಮಾರುಕಟ್ಟೆಗೆ ಹೋಗಿ ಬರುವುದಾಗಿ ಹೋದರು. ಅವರು ಮಾರುಕಟ್ಟೆಗೆ ಹೋಗಿ ಎಲ್ಲರಿಗೂ ಒಂದೊಂದು ಫುಟ್‌ಬಾಲ್ ತೆಗೆದುಕೊಂಡು ಬಂದು, ಗ್ರೌಂಡ್‌ನಲ್ಲಿರುವವರಿಗೆ "ಕೇವಲ ಒಂದು ಫುಟ್‌ಬಾಲ್‌ಗೆ ಏಕೆ ಎರಡೂ ತಂಡಗಳವರು ಕಿತ್ತಾಡುತ್ತೀರಿ? ಆಳಿಗೊಂದು ಫುಟ್‌ಬಾಲ್ ತೆಗೆದುಕೊಳ್ಳಿ" ಎಂದರು. ಆ ತರಹ ಇದೆ ನೀವು ಹೇಳುವುದು!

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ:– ಮಾನ್ಯ ಅಧ್ಯಕ್ಷರೆ, ನಾನು 18 ವರ್ಷಗಳ ಕಾಲ ಶಿಕ್ಷಕನಾಗಿ ಕೆಲಸ ಮಾಡಿ ಈ ಎಲ್ಲಾ ಆಟಗಳನ್ನು ಆಡಿಸಿಯೇ ಇಲ್ಲಿಗೆ ಬಂದಿದ್ದೇನೆ. ಎಲ್ಲಾ ಆಟ, ಇಂತಹ ಆಟ ಅಂತಲ್ಲ. ನೀವು ಫುಟ್‌ಬಾಲ್ ಆಟವನ್ನೇ ನೋಡಿರಬಹುದು. ನಾನು 18 ವರ್ಷಗಳ ಕಾಲ ಪ್ರೈಮರಿ ಸ್ಕೂಲ್ ಟೀಚರ್ ಆಗಿದ್ದೆ. ಯಾವ ರೀತಿಯ ಆಟವಾಡಿಸಬೇಕೆಂಬುದು ನನಗೆ ಗೊತ್ತಿದೆ. ಆದುದರಿಂದಲೇ ನನಗೆ ಈ ಖಾತೆ ಸಿಕ್ಕಿದೆ.

ಶ್ರೀ ಎಸ್. ರಾಜೇಂದ್ರನ್:– ತಮ್ಮ ಮೇಲೆ ನನಗೆ ಅಪಾರ ಗೌರವವಿದೆ. ಎಲ್ಲಾ ಆಟವೆಂದರೆ ಯಾವ್ಯಾವ ಆಟ?

ಅಧ್ಯಕ್ಷರು:– ಮಾನ್ಯ ರಾಜೇಂದ್ರನ್‌ರವರೆ, ನೀವು ಬಜೆಟ್ ಮೇಲೆ ಮಾತನಾಡಿ.

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ:– ನೀವು ಮಾಡಿರುವಂಥ ಸ್ಪೀಚ್ ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ಸಂಬಂಧಪಟ್ಟಿರುವಂಥಾದ್ದಾಗಿದೆ. ಬೇಕಾದರೆ ನೀವು ನನ್ನನ್ನು ಸಪರೇಟ್ ಆಗಿ ಕರೆಯಿರಿ. ನಾನು ನಿಮಗೆ ಎಲ್ಲಾ ಆಟಗಳ ಬಗ್ಗೆ ತಿಳಿಸಿಕೊಡುತ್ತೇನೆ.

ಅಧ್ಯಕ್ಷರು:– ಮಾನ್ಯ ರಾಜೇಂದ್ರನ್‌ರವರೆ, ನೀವೇನು ಇಲ್ಲಿ ಫುಟ್‌ಬಾಲ್ ಆಡಲು ನಿಂತುಬಿಟ್ಟಿರಲ್ಲಾ. ಬಜೆಟ್ ಮೇಲೆ ಮಾತನಾಡಿ.

ಶ್ರೀ ಅಪ್ಪಾಜಿ ಎಸ್. ನಾಡಗೌಡ:– ಅಧ್ಯಕ್ಷರೆ, ಇಲ್ಲಿ ಎರಡು ಆಟಗಳಿವೆ. ರಾಜೇಂದ್ರನ್‌ರವರೆ, ನಿಮಗೆ ಹಗಲಿನ ಆಟ ಬೇಕೋ? ರಾತ್ರಿ ಆಟ ಬೇಕೋ? ಅದರು ಅದನ್ನು ಕೇಳುತ್ತಿದ್ದಾರೆ.

ಶ್ರೀ ಎಸ್. ರಾಜೇಂದ್ರನ್:– ರಾತ್ರಿ ಆಟ ಫ್ಲಟ್ ಲೈಟ್; ಹಗಲು ಆಟ ಸನ್ ಲೈಟ್. ಇದಕ್ಕೂ ಮೇಲ್ಪಟ್ಟು ಇನ್ನೊಂದು ಆಟವಿದೆ. I represent India in attletics ಅದರಲ್ಲಿ ಎಲ್ಲಾ ಇವೆಟ್ಸ್ ಇದೆ.

ಶ್ರೀ ಜಬ್ಬಾರ್‌ಖಾನ್ ಹೊನ್ನಳ್ಳಿ:– ನನಗೆ ಆ ಆಟವೆಲ್ಲಾ ಗೊತ್ತಿಲ್ಲ. ಮಕ್ಕಳಿಗೆ ಯಾವ ರೀತಿ ಕಲಿಸುವ ಆಟಗಳಿವೆಯೋ, ಅದೇ ರೀತಿ ದೊಡ್ಡವರಿಗೂ ಕಲಿಸುವ ಆಟಗಳಿವೆ. ರಾತ್ರಿ ಮತ್ತು ಹಗಲು ಆಟಗಳ ಬಗ್ಗೆ ನನಗೆ ಗೊತ್ತಿಲ್ಲ.

ಶ್ರೀ ಎಸ್. ರಾಜೇಂದ್ರನ್:– ಮಾನ್ಯ ಅಧ್ಯಕ್ಷರೆ, ಅದನ್ನು ನಾನು ಹೇಳಲಿಲ್ಲ. ನಮ್ಮ ಸಹೋದ್ಯೋಗಿ ಸದಸ್ಯರು ಹೇಳಿದ್ದು.

ಶ್ರೀ ಅಪ್ಪಾಜಿ ಎಸ್. ನಾಡಗೌಡ:– ಸರ್ಕಸ್ ಆಟ ಆಡುವುದು ರಾತ್ರಿ ತಾನೇ?

ಶ್ರೀ ಎಸ್. ರಾಜೇಂದ್ರನ್:– ಅದು ನನಗೇನು ಗೊತ್ತು? ರಾತ್ರಿ ವೇಳೆ ಫೆಟ್ ಲೈಟ್ ಹಾಕಿ ಕ್ರಿಕೆಟ್ ಆಡುತ್ತಾರೆ. ಅವೆಲ್ಲಾ ಫೆಟ್ ಲೈಟ್ ಟೂರ್ನಮೆಂಟ್. ಅದನ್ನೇ ನಾನು ಹೇಳಿದ್ದು. ಸನ್ ಲೈಟ್ ಬಂದಿದೆ. ಮತ್ತೊಂದು ಫೆಟ್ ಲೈಟ್. ತಾವು ಸೀನಿಯರ್ ಆಗಿರುವುದರಿಂದ ತಮಗೆ ಎಲ್ಲಾ ರೀತಿಯ ಆಟಗಳೂ ಗೊತ್ತಿವೆ. ನಾನು ಇನ್ನೂ ಜೂನಿಯರ್ ಆಗಿರುವುದರಿಂದ ನನಗೆ ಅಷ್ಟು ಆಟಗಳು ಗೊತ್ತಿಲ್ಲ.

ಅಧ್ಯಕ್ಷರೆ, ನಾನು ತಮ್ಮ ಮೂಲಕ ಕೇಳಿಕೊಳ್ಳುವುದೇನೆಂದರೆ, ತಾವು ದೊಡ್ಡ ಮನಸ್ಸು ಮಾಡಿ ನನ್ನ ಊರಿಗೆ 200 ಮೀಟರ್ ಟ್ರಾಕ್‌ನ ಒಂದು ಸ್ಟೇಡಿಯಂ ಒದಗಿಸಿಕೊಟ್ಟರೆ ಅನುಕೂಲವಾಗುತ್ತದೆ. ಈಗ ಕೊನೆಯ ವಿಷಯ ಪ್ರಸ್ತಾಪಿಸಿ, ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ. ಅಧ್ಯಕ್ಷರೆ, ನನ್ನ ಮೇಲೆ ತಮಗೆ ಕೋಪ ಬೇಡ. ನನಗೆ ಮಾತನಾಡಲು ತಾವು ಯಾವಾಗಲೂ ಸಮಯ ಕೊಡುತ್ತೀರಿ. ನನ್ನ ಹಿರಿಯ ಸಹೋದ್ಯೋಗಿಗಳು ಮಾತನಾಡಲು 2–3 ಗಂಟೆಗಳ ಕಾಲ ಸಮಯಾವಕಾಶ ತೆಗೆದುಕೊಂಡಿರುವ ಸಂದರ್ಭದಲ್ಲಿ, ತಾವು ಅಪಾರ ಗೌರವದಿಂದ ನಮಗೆಲ್ಲರಿಗೂ ಮಾತನಾಡಲು ಹೆಚ್ಚು ಸಮಯಾವಕಾಶ ಒದಗಿಸಿಕೊಟ್ಟಿದ್ದೀರಿ. ನಾನೂ ಕೂಡ ಇನ್ನು ಹೆಚ್ಚು ಸಮಯ ತೆಗೆದುಕೊಳ್ಳದೆ 5–10 ನಿಮಿಷಗಳನ್ನು ಮಾತ್ರ ತೆಗೆದುಕೊಳ್ಳುತ್ತೇನೆ. ನಾನು ನಿಮ್ಮ ಆಶೀರ್ವಾದದಿಂದ ಮಾತನಾಡುತ್ತಿದ್ದೇನೆ. ತಾವು (ವಾಟಾಳ್ ನಾಗರಾಜ್) ನನ್ನ ಪಕ್ಕದಲ್ಲಿರುವುದರಿಂದ ನನಗೆ ಒಂದು ರೀತಿಯ ಧೈರ್ಯವಿದೆ. ತಾವು ನನಗೆ ಒಂದು ವಿಟಮಿನ್ ಇದ್ದಂತೆ.

ಕೊನೆಯದಾಗಿ, ತೋಟಗಾರಿಕೆ ಕುರಿತಂತೆ ತಾವು ಆಯವ್ಯಯದಲ್ಲಿ ಪ್ರಸ್ತಾಪಿಸಿದ್ದೀರಿ. ಇದೊಂದು ದೊಡ್ಡ ಇಲಾಖೆಯಾಗಿದೆ. ಈ ಇಲಾಖೆಯ ಅಭಿವೃದ್ಧಿಗೆ ತಾವು ಸಾಕಾಗುವಷ್ಟು ಹಣ ಒದಗಿಸಿಕೊಡಬೇಕು. ಆದರೆ, ನಮ್ಮ ಜಿಲ್ಲಾ ಮಂತ್ರಿಗಳು ತೋಟಗಾರಿಕೆ ಖಾತೆ ವಹಿಸಿಕೊಂಡಿರುವುದರಿಂದ ತಾವು ಉದ್ದೇಶಪೂರ್ವಕವಾಗಿ ಆ ಇಲಾಖೆಗೆ ಹಣ ಕಡಿಮೆ ಒದಗಿಸಿದ್ದೀರೋ ಏನೋ ಗೊತ್ತಿಲ್ಲ. ನಮ್ಮ ಜಿಲ್ಲೆಯ ಪರಿಸ್ಥಿತಿ ಹೀಗಿರುವುದರಿಂದ ಇಲಾಖೆಗೆ ಒಳ್ಳೆಯದನ್ನು ಮಾಡಬೇಕು. ಸುಮಾರು 2000 ಎಕರೆಗಳಷ್ಟು ಜಮೀನಿನಲ್ಲಿ 2000 ಜನರಿಗೆ ಉದ್ಯೋಗಾವಕಾಶ ಕಲ್ಪಿಸಿಕೊಡಬೇಕೆಂಬ ಕುರಿತು ಪಾಪ! ಅವರಲ್ಲಿ enthusiasm ಇದೆ. ಈಗ ತೋಟಗಾರಿಕೆ ಇಲಾಖೆಯ ವ್ಯಾಪ್ತಿಗೊಳಪಡುವ ಜೈಲು ಇದ್ದ ಹಳೆಯ ಜಾಗವನ್ನು ಮುಚ್ಚಿದ್ದು,

ಬೇರೆಡೆ ಹೊಸ ಜೈಲನ್ನು ನಿರ್ಮಿಸಿದ್ದಾರೆ. ಜೈಲಿದ್ದ ಆ ಜಮೀನನ್ನು ಹಾಗೆ ಬಿಟ್ಟರೆ ರೇಸ್‌ಕೋರ್ಸ್ ತರಹ ಎನ್‌ಕ್ರೋಚ್‌ಮೆಂಟ್ ಮಾಡಿಬಿಡುತ್ತಾರೆ. ಅದನ್ನೊಂದು ಲಾಲ್‌ಬಾಗ್ ರೀತ್ಯ ಮಾಡಬಹುದಲ್ಲವೇ? ಬೆಂಗಳೂರನ್ನು ನಾವು 'ಗಾರ್ಡನ್ ಸಿಟಿ' ಎಂದು ಕರೆಯುತ್ತೇವೆ. ಆದ್ದರಿಂದ, ಅದನ್ನೂ ಸಹ ಮಾಡಬಹುದು. ಅದರ ಜೊತೆಗೆ ತೋಟಗಾರಿಕಾ ಇಲಾಖೆಯಲ್ಲಿರುವ ಫುಡ್ ಮ್ಯಾನ್ಯುಫ್ಯಾಕ್ಚರಿಂಗ್‌ಗೆ ಒಂದು ಸಪರೇಟ್ ಹೆಡ್ ಇದೆ. ತಾವೇಕೆ ಮರ್ಜ್ ಮಾಡಬಾರದು? ಆ ಹಣವನ್ನು ತೋಟಗಾರಿಕೆ ಇಲಾಖೆಗೆ ಏಕೆ ಸೇರಿಸಬಾರದು? ಒಂದೊಂದು ಇಲಾಖೆಯು ಪ್ರತ್ಯೇಕವಾಗಿ ಒಂದೊಂದು ಹೆಡ್ ಇಟ್ಟುಕೊಂಡು ಹೋದರೆ ತೋಟಗಾರಿಕೆ ಇಲಾಖೆಯ ಮಹತ್ವವನ್ನು ಕಡಿಮೆ ಮಾಡಿದಂತಾಗುತ್ತದೆ.

ಶ್ರೀ ಬಿ.ಸಿ. ಪಾಟೀಲ್:– ಅಧ್ಯಕ್ಷರೆ, ತೋಟಗಾರಿಕೆ ಇಲಾಖೆಗೆ ಕಡಿಮೆ ಬಜೆಟ್ ಬಂದಿದೆ. ಚೀಟಿಕೊಟ್ಟು ಜಾಸ್ತಿ ಮಾಡುವಂತೆ......

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಪಾಟೀಲ್‌ರೆ, ಇದು ಪ್ರಿವಿಲೇಜ್‌ಗೆ ಅಮೌಂಟ್ ಆಗುತ್ತದೆ. ತಾವು ಆ ರೀತಿ ಮಾತನಾಡಬಾರದು. It amounts to privilege. ಅವರು ಚೀಟಿ ಕೊಟ್ಟಿರುವಂತೆ ನಾವು ಇಲ್ಲಿ ಭಾಷಣ ಮಾಡುತ್ತಿದ್ದೇವೆಯೇ? What is he talking in the House? ತಾವು ಹೊಸಬರಾಗಿದ್ದೀರಿ. ಇಲ್ಲಿನ ಬಿಸಿನೆಸ್ ನಿಮಗೆ ಗೊತ್ತಿಲ್ಲ. ತಾವು ಹೇಳಿರುವ ಮಾತು ಕಡತಕ್ಕೆ ಹೋಗಿದ್ದರೆ ನಾವು ತಕ್ಷಣ ಪ್ರಿವಿಲೇಜ್ ಮೂವ್ ಮಾಡುತ್ತೇವೆ. ಆದುದರಿಂದ, ಅಧ್ಯಕ್ಷರೆ, ಅವರು ತಮ್ಮ ಮಾತನ್ನು ಮೊದಲೇ ವಿತ್‌ಡ್ರಾ ಮಾಡಿಕೊಳ್ಳಬೇಕು. ದಯವಿಟ್ಟು ಅವರು ವಿತ್‌ಡ್ರಾ ಮಾಡಬೇಕು. ಇಲ್ಲದಿದ್ದರೆ, ಪ್ರಿವಿಲೇಜ್‌ಗೆ ತೆಗೆದುಕೊಳ್ಳಬೇಕು.

ಶ್ರೀ ಬಿ.ಸಿ. ಪಾಟೀಲ್:– ಆಯಿತು.

ಅಧ್ಯಕ್ಷರು:– ತಾವು ಕುಳಿತುಕೊಳ್ಳಿ. ರಾಜೇಂದ್ರನ್‌ರವರೆ, ತಾವು ಮುಂದುವರೆಸಿ.

ಶ್ರೀ ಎಸ್. ರಾಜೇಂದ್ರನ್:– ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಗೊತ್ತಾಗಬೇಕು. ಯಾರೋ ಮಂತ್ರಿಗಳು ನನಗೆ ಬರೆದುಕೊಡುವ ಅವಶ್ಯಕತೆಯಿಲ್ಲ. Why I am interested particularly about that? Because, the minister has taken interest about my constituency to provide 2000 employment in this programmed. I must support my minister. ಸದಸ್ಯರಾದವರು ಬಾಯಿಗೆ ಬಂದಂತೆ ಮಾತನಾಡುವ ಅವಶ್ಯಕತೆ ಇಟ್ಟುಕೊಳ್ಳಬಾರದು. ತೋಟಗಾರಿಕೆ ಇಲಾಖೆಗೆ ಸಂಬಂಧಪಟ್ಟ ಕಾಗದ ಪತ್ರಗಳು ನನ್ನ ಕೈಯಲ್ಲಿಟ್ಟುಕೊಂಡು ತಮ್ಮ ಮುಂದೆ ಭಾಷಣ ಮಾಡುತ್ತಿದ್ದೇನೆ. ಅವರು ಹೇಳಿದಂತೆ ಅವರಿಂದ ಚೀಟಿ ತೆಗೆದುಕೊಂಡು ಭಾಷಣ ಮಾಡುವುದಕ್ಕಾಗುತ್ತದೆಯೇ? ತೋಟಗಾರಿಕೆ ಇಲಾಖೆಗೆ ಏನೇನು ಸೌಲಭ್ಯಗಳನ್ನು ಒದಗಿಸಿಕೊಡಬೇಕೆಂಬ ಕುರಿತು ಹೇಳುವುದಾದರೆ, ತೋಟಗಾರಿಕೆಗೆ ಸಂಬಂಧಿಸಿದಂತೆ ಒಂದು ವಿಶ್ವವಿದ್ಯಾನಿಲಯವನ್ನು ಪ್ರಾರಂಭಿಸಬೇಕು. 2–3 ವಿಶ್ವವಿದ್ಯಾನಿಲಯಗಳನ್ನು ತೆರೆದರೆ, ನನ್ನ ಜಿಲ್ಲೆಗೊಂದು ಸಿಗುತ್ತದೆ. ಇದಕ್ಕೆ it is my bounden

duty to bring it to the notice of my deputy C.M. ಆ ಮಾನ್ಯ ಸದಸ್ಯರನ್ನು ಉದ್ದೇಶಿಸಿ, 'ಅವರು ಹೊಸಬರು, ಆ ಮಾತನ್ನು ವಾಪಸ್ಸು ತೆಗೆದುಕೊಳ್ಳಬೇಕು' ಎಂದು ನಮ್ಮ ಮಾಧುಸ್ವಾಮಿಯವರು ಒಂದೇ ಮಾತಿನಲ್ಲಿ ಹೇಳಿಬಿಟ್ಟರು. ಅವರು ತಮ್ಮ ಮಾತನ್ನು ವಾಪಸ್ಸು ತೆಗೆದುಕೊಳ್ಳುತ್ತಾರೆ. ತೋಟಗಾರಿಕೆ ಇಲಾಖೆ ಬಗ್ಗೆ ತಾವು ಚಿಂತನೆ ಮಾಡಬೇಕು. ಈಗಾಗಲೇ Israel pattern ಅನೌನ್ಸ್ ಮಾಡಿರುವುದರಿಂದ ನಮ್ಮ ಜಿಲ್ಲೆಯ ಜನರೆಲ್ಲರೂ ಬಹಳ ಖುಷಿಯಿಂದಿದ್ದಾರೆ. ಆದರೆ ಹಣವಿಲ್ಲ. Honey ಎಂದು ಪೇಪರ್‌ನಲ್ಲಿ ಬರೆದುಬಿಟ್ಟರೆ ಅದು ಸುರಿಯುತ್ತದೆಯೇ? ಅದನ್ನು ಟಂಗ್ ಮೇಲಿಡಬೇಕು ತಾನೇ? ಅದನ್ನು ತಾವು ಯಾವಾಗ ಇಡುತ್ತೀರಾ? ಇವೆಲ್ಲವನ್ನೂ ಸೇರಿಸಿಕೊಂಡು ಬಜೆಟ್‌ನಲ್ಲಿ small scale industries ಗೆ ಯಾವುದೇ ಪ್ರಾವಿಜನ್ ಮಾಡಿಲ್ಲ. ನಮ್ಮ ಊರಿನ ಬಗ್ಗೆ ಚಿಂತನೆ ಇಲ್ಲ. ಇದರ ಬಗ್ಗೆ ಬಜೆಟ್‌ನಲ್ಲಿ ಇಲ್ಲ. ಬಜೆಟ್‌ನಲ್ಲಿ ಇಲ್ಲವೆಂದೂ ಸಿದ್ದರಾಮಯ್ಯ, ಸಿದ್ದರಾಮಯ್ಯನವರೇ, Deputy Chief Minister is equivalent to Chief Minister. ಆದರೆ, ಒಬ್ಬ ಕಾನ್‌ಸ್ಟೇಬಲ್ ಮತ್ತು ಸಬ್ ಇನ್ಸ್‌ಪೆಕ್ಟರ್ ಟ್ರಾನ್ಸ್‌ಫರ್‌ಗೂ ಉಪ . ಮುಖ್ಯಮಂತ್ರಿಯವರ ಹತ್ತಿರ ಹೋಗುವುದಕ್ಕಾಗುವುದಿಲ್ಲ. ಆದರೆ, ಒಂದು ಕಾರ್ಪೋರೇಷನ್‌ಗೆ ಹೋಗುವುದಕ್ಕಾಗುವುದಿಲ್ಲ. Power distribution ಏನೆಂಬುದು ನಮಗೆ ಗೊತ್ತಿಲ್ಲ. ಇದ್ದರೂ ನಿಮ್ಮ ಮೇಲಿರುವ ಗೌರವ. ದಿವಂಗತ ಶ್ರೀಮಾನ್ ಜೆ.ಹೆಚ್. ಪಟೇಲರ ಕಾಲದಲ್ಲಿ ತಾವು ಎಷ್ಟು ಗಂಭೀರವಾಗಿ ನಮ್ಮ ಊರಿನ ಅಭಿವೃದ್ಧಿಗೆ ಏನೇನು ಸೌಲಭ್ಯಗಳನ್ನು ಒದಗಿಸಿಕೊಟ್ಟಿದ್ದಿರೋ, ಈ ವಿಧಾನಸಭೆಯಲ್ಲಿ ತಾವೇಕೆ ಎಷ್ಟು silent ಆಗಿದ್ದೀರೆಂಬುದು ನನಗೆ ಅರ್ಥವಾಗಿಲ್ಲ. ತಾವು ಸ್ವಲ್ಪ ಧೈರ್ಯ ತಂದುಕೊಂಡು ನಮ್ಮ ಕ್ಷೇತ್ರಕ್ಕೆ ಈ ಬಜೆಟ್‌ನಲ್ಲಿ ಇಲ್ಲವೆಂದರೂ ತಾವು ಮನಸ್ಸಿಟ್ಟುಕೊಂಡು 90% of people living there are under poverty. ಎಲ್ಲಿಯೋ ಇಥಿಯೋಪಿಯ ತೋರಿಸುವುದು. ಮಾನ್ಯ ಸದಸ್ಯರಾದ ಶ್ರೀರಾಮರೆಡ್ಡಿಯವರು ಸೋಮಾಲಿ–ಯವನ್ನು quote ಮಾಡಿ ಮಾತನಾಡಿದರು. ಕೆಜಿಎಫ್‌ನ ಪರಿಸ್ಥಿತಿ ಸೋಮಾಲಿಯಾಕ್ಕಿಂತಲೂ worst ಆಗಿರುವುದು ಅವರಿಗೆ ಗೊತ್ತಿದೆ. ಸುಮಾರು 10,000 people traveling day by day to Bangalore. Population is growing. ನಾವು ನಕ್ಸಲೈಟ್ಸ್ ಬಗ್ಗೆ ಮಾತನಾಡುತ್ತೇವೆ. ಏನು ಕಾರಣ? Because you have not given socio-economic development equality to the people. You have not developed. There are educated 16,000 graduates in my place. ಅವರು ಡಿಪ್ರೆಸ್ಟ್ ಆಗಿ ನಾಳೆ ನಕ್ಸಲೈಟ್ ಆದಾಗ ಅವರನ್ನೆಲ್ಲಾ ನೀವು ಒಳಗಡೆ ಹಾಕುತ್ತೀರಿ. ನಮ್ಮ ಜಿಲ್ಲಾ ಮಂತ್ರಿಗಳಿಗೂ ಗೊತ್ತಿದೆ. ಸ್ವಾಮಿ, ನಮ್ಮ ಪರಿಸ್ಥಿತಿ ಹೀಗಿದೆ. ನಾವು ಸುಮಾರು ಸಲ ಕೂಗಾಡುತ್ತೇವೆ. ತಾವು ಅದನ್ನು ಕೇಳಿಕೊಂಡು silent ಆಗಿ ಹೋಗಿಬಿಟ್ಟರೆ ಈ ಸದನದಲ್ಲಿ ಶಾಸಕನಾಗಿರುವ ನನ್ನ ಗೌರವ ಕಡಿಮೆಯಾಗುತ್ತದೆ. ಬೇಡವೆಂದರೆ, ಹೇಳಿ, ಮುಂದಿನ ಅಧಿವೇಶನಕ್ಕೆ ನಾನು ಬರುವುದಿಲ್ಲ. ಬೇಕಿದ್ದರೆ ನಿಮ್ಮ ಜೊತೆಯಲ್ಲಿಟ್ಟುಕೊಳ್ಳಿ.

ಏನಾದರೂ ಪ್ರಯತ್ನ ಮಾಡಿ ಬಜೆಟ್‌ನಲ್ಲಿ ಕೆಜಿಎಫ್‌ಗೆ ಪ್ರಾವಿಜನ್ ಇಲ್ಲವೆಂದರೂ you must give full fledged support to my constituency development. My taluk should develop. ಅಡ್ಮಿನಿಸ್ಟ್ರೇಷನ್ ಪರಿಸ್ಥಿತಿ ಏನಾಗಿದೆಯೆಂದರೆ, ಒಂದು ರಸ್ತೆಯಾಗುವುದಕ್ಕೆ ಎಷ್ಟು ಕಷ್ಟ ಇದೆ? You just think about the administration in the State. ತಾವು ಬಜೆಟ್‌ನಲ್ಲಿ ಡೆವಲಪ್‌ಮೆಂಟ್‌ಗೆ ಏನೇನೋ ಕೊಟ್ಟಿದ್ದೀರಿ. ಹಣ ಬಿಡುಗಡೆ ಮಾಡಿದ್ದೀರಿ. But, that should be implemented properly in time. ಅದನ್ನು ಮಾನಿಟರ್ ಮಾಡಬೇಕು. ಮಾನಿಟರ್ ಮಾಡಿದರೆ ನಿಮಗೆ ನಿಮವಾಗಿಯೂ ಒಳ್ಳೆಯ ಹೆಸರು ಸಿಗುತ್ತದೆ. ಉದಾಹರಣೆಗೆ, 3 ಕಿಲೋಮೀಟರ್‌ಗಳಷ್ಟು ರಸ್ತೆಗೆ ಟೆಂಡರ್ ಕಾಲ್‌ಫರ್ ಮಾಡಿದ್ದರು. ಯಾರೂ ಟೆಂಡರ್ ಹಾಕಲಿಲ್ಲ. 2ನೇ ಸಲವೂ ಕಾಲ್‌ಫರ್ ಮಾಡಿದಾಗಲೂ ಯಾರೂ ಬರಲಿಲ್ಲ ಕಾರಣವೇನೆಂದರೆ, 'ಇಡೀ ಜಿಲ್ಲೆಗೆ ನಮಗೆ ಎಂಟು ಕೋಟಿ ರೂಪಾಯಿಗಳಷ್ಟು ಹಣವಿದೆ. ನಾವು ಟೆಂಡರ್ ಹಾಕಿದರೂ ಯಾರೂ ಹಣ ಕೊಡುವುದಿಲ್ಲ. ನಾವು ಟೆಂಡರ್ ಹಾಕಿ ಪ್ರಯೋಜನವೇನು?' ಎನ್ನುತ್ತಾರೆ. ಆದ ಕಾರಣ, ಟೆಂಡರ್ ಅನ್ನು ಯಾರೂ ಹಾಕಲಿಲ್ಲ; ರಸ್ತೆ ಯಾವಾಗ ಅಭಿವೃದ್ಧಿಯಾಗುತ್ತದೆ ಎಂದು ಜನರು ನನ್ನನ್ನು ಕೇಳುತ್ತಾರೆ. ನಾನು ಯಾರೋ ಒಬ್ಬ ಟೆಂಡರ್‌ದಾರರನ್ನು ಕರೆದುಕೊಂಡು ಬಂದು, 'ನೀನು ಟೆಂಡರ್ ಹಾಕಪ್ಪಾ' ಎಂದು ಹೇಳಿ ಹಾಕಿಸಿದೆ. ಆತ ರಸ್ತೆ ಕಾಮಗಾರಿ ಶುರು ಮಾಡಿದ್ದಾನೆ. ರಸ್ತೆಯಲ್ಲಿರುವ ಕರೆಂಟ್ ಪೋಲ್ ತೆಗೆಯಲು ಪಿಡಬ್ಲ್ಯೂಡಿಗೆ ಪತ್ರ ಬರೆದಿದ್ದಾನೆ. ಆದರೆ, ಹಣ ಕಟ್ಟಬೇಕೆಂದು ಪಿಡಬ್ಲ್ಯೂಡಿಯವರು ಬೆಸ್ಕಾಂ ಅವರಿಗೆ ಪತ್ರ ಬರೆದಿದ್ದಾರೆ. ಇವರು ಹಣ ಕಟ್ಟಲಿಲ್ಲ. ಅವರು ಕರೆಂಟ್ ಪೋಲ್ ತೆಗೆದಿಲ್ಲ. ಅಧಿಕಾರಿಗಳಲ್ಲಿರುವ ಗೊಂದಲ ಹೇಗಿದೆಯೆಂದರೆ, 'let him pay' ಎನ್ನುತ್ತಾರೆ ಬೆಸ್ಕಾಂ ಇಂಜಿನಿಯರ್‌ರವರು. No, No. The Government has to take decision. Government to Government not to pay ಎಂದು ಇಬ್ಬರೂ ಇಂಜಿನಿಯರುಗಳು ಹೇಳುತ್ತಾರೆ. ಶಾಸಕನಾಗಿರುವ ನಾನು peon ಕೆಲಸ ಮಾಡಬೇಕು! ಈ ಆಫೀಸಿಗೆ ಹೋದರೆ ಇವರು ಕಟ್ಟುವುದಿಲ್ಲ ಎಂದು ಹೇಳುತ್ತಾರೆ. ಆ ಆಫೀಸಿಗೆ ಹೋದರೆ ಕಟ್ಟಿದರೆ ತೆಗೆಯುತ್ತಾರೆ. ಮತ್ತು ಮರ ಕತ್ತರಿಸಬೇಕೆಂದರೆ ನಾನು ಫಾರೆಸ್ಟ್ ಅಧಿಕಾರಿ ಬಳಿಗೆ ಹೋಗಬೇಕು. What a shame administration in your Government. ಮಾನ್ಯ ಮುಖ್ಯಮಂತ್ರಿಗಳೇ ತಾವು ಇದನ್ನು ಗಮನಿಸಿದ್ದೀರೋ ಇಲ್ಲವೋ? KEB & BESCOM ಗೂ ಮಿನಿಸ್ಟರ್ ಶ್ರೀಮಾನ್ ರೇವಣ್ಣನವರೇ, ಪಿಡಬ್ಲ್ಯೂಡಿ ಮಿನಿಸ್ಟರ್ ಸಹ ಅವರೇ ಆಗಿದ್ದಾರೆ. ಹಣ ಕಟ್ಟಿದರೆ ಕರೆಂಟ್ ಪೋಲ್ ತೆಗೆಯಲಾಗುವುದೆಂದು ಈ ಚೀಫ್ ಇಂಜಿನಿಯರ್ ಹೇಳುತ್ತಾರೆ. ಆದರೆ, ಹಣ ಕಟ್ಟುವ ಅವಶ್ಯಕತೆಯಿಲ್ಲವೆಂದು ಪಿಡಬ್ಲ್ಯೂಡಿ ಚೀಫ್‌ರವರು ಹೇಳುತ್ತಾರೆ. ಇಬ್ಬರೂ ಹಾಗೆಯೇ ಚಾಲೆಂಜ್ ಮಾಡಿಕೊಂಡು ಸುಮಾರು ಇಪ್ಪತ್ತು ದಿವಸಗಳ ಕಾಲ that work has been stopped. ಮರ ಕತ್ತರಿಸಬೇಕೆಂದರೆ Forest Department Minister ಕಾಣಬೇಕು. Can't they do

it within five minutes over the phone? ಸರ್ಕಾರದ್ದು ಸರ್ಕಾರವೇ ತಾನೇ ಮಾಡುವುದು. What a shame in your administration, in this Government. ಅದರ ಮಾನಿಟರ್ ಮಾಡಬೇಕಾದರೆ ತಾವು ನಿಜವಾಗಿಯೂ ಗೌರವದಿಂದ you must take them to task. ಅವರು ಯಾರ ಕೆಲಸ ಮಾಡುತ್ತಾರೆ? ಖಾಸಗಿ ಜಮೀನಿಗೆ ಸಂಬಂಧಿಸಿದಂತೆ ಅವರು ಮಾಡುತ್ತಾರೆಯೇ? ಅದು ಸರ್ಕಾರದ ರಸ್ತೆ. ನಿಮ್ಮ ಡಿಪಾರ್ಟ್‌ಮೆಂಟ್ ಈ ರೀತಿ ಹೇಳಿಕೊಂಡು ಹೋದರೆ peon ತರಹ ನಾನು ಇಪ್ಪತ್ತು ಸಲ ಕೋಲಾರದಿಂದ ಕೆಜಿಎಫ್‌ಗೆ ಅವರ ಆಫೀಸಿಗೂ ಇವರ ಆಫೀಸಿಗೂ ಹೋಗಿ ಬಂದಿರುವ ಡೀಸೆಲ್ ಬಿಲ್ಲಿನ ಚಾರ್ಜ್ ಸುಮಾರು ಐದು ಸಾವಿರ ರೂಪಾಯಿಗಳಾಗಿದೆ. ಇವರಿಗೆ ಒದಗಿಸುವ ಕಾರು ಸರ್ಕಾರದ್ದು. ಕಾರಿಗೆ ಪೂರೈಸುವ ಡೀಸೆಲ್ ಸರ್ಕಾರದ್ದು. ಇವರ ಸ್ಟೈಲ್ ಎ.ಸಿ. ಇವರಿಗೆ ಸೆಲ್‌ಫೋನ್‌ಗಳು. ಇಷ್ಟೆಲ್ಲಾ ಸೌಲಭ್ಯಗಳನ್ನು ಒದಗಿಸಿಕೊಟ್ಟು ಅವರು ಕೆಲಸ ಮಾಡಲಿಲ್ಲವೆಂದರೆ ಇಂತಹ ಅಧಿಕಾರಿ ಮೇಲೆ you must take them to task. You must suspend them it they are inefficient. ಎಂದು ಹೇಳುತ್ತಾ ಇಷ್ಟು ಹೊತ್ತು ಮಾತನಾಡಲು ಅವಕಾಶ ಕಲ್ಪಿಸಿಕೊಟ್ಟ ಮಾನ್ಯ ಅಧ್ಯಕ್ಷರಾದ ತಮಗೆ ನಮಸ್ಕಾರಗಳನ್ನು ತಿಳಿಸುತ್ತಾ ನನ್ನಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಆರ್. ಪಾಟೀಲ್ (ಗದಗ್): – ಮಾನ್ಯ ಅಧ್ಯಕ್ಷರೆ, ಇಡೀ ರಾಷ್ಟ್ರದಲ್ಲಿ ಅತಿ ಹೆಚ್ಚಿನ ಯೋಜನಾ ವೆಚ್ಚದ ಬಜೆಟನ್ನು ಮಂಡಿಸಿದ್ದಾರೆ. ಅದು ಸಹಿತ ರೆವಿನ್ಯೂ ಸರ್ಪ್ಲಸ್ ತೋರಿಸಿ ಒಳ್ಳೆಯ ಆಯವ್ಯಯ ಮಂಡಿಸಿದ್ದಕ್ಕೆ ನಾನು ಸಿದ್ದರಾಮಯ್ಯನವರಿಗೆ ಕೃತಜ್ಞತೆಗಳನ್ನು ಅರ್ಪಿಸುತ್ತೇನೆ. ಅದರ ಜೊತೆ ಒಂದು ದೊಡ್ಡ ಬದಲಾವಣೆಯನ್ನು ಈ ಬಜೆಟ್ ಮುಖಾಂತರ ಗ್ರಾಮೀಣ ಪ್ರದೇಶಗಳಲ್ಲಿ ತಾವು ತಂದಿರಿ. ರಾಜ್ಯ ವಲಯದಿಂದ ಜಿಲ್ಲಾ ವಲಯಕ್ಕೆ 170 ಕಾರ್ಯಕ್ರಮಗಳನ್ನು ಟ್ರಾನ್ಸ್‌ಫರ್ ಮಾಡಿದ್ದೀರಿ. ಸುಮಾರು 960 ಕೋಟಿ ರೂಪಾಯಿ ಯೋಜನಾ ವೆಚ್ಚವನ್ನು 25,000 ಕೋಟಿ ರೂಪಾಯಿಗೆ ಹೆಚ್ಚಿಸಿ ಅವರ ಜವಾಬ್ದಾರಿಯನ್ನು ಸಾಕಷ್ಟು ಹೆಚ್ಚು ಮಾಡಿದ್ದೀರಿ. ನಮ್ಮ ಸ್ನೇಹಿತರು ಗ್ರಾಮ ಪಂಚಾಯಿತಿಯಲ್ಲಿ ಆ ಜವಾಬ್ದಾರಿ ಹೊರುವಂತಹ ಸಿಬ್ಬಂದಿ ಇಲ್ಲ. ಗ್ರಾಮ ಪಂಚಾಯಿತಿ ಸದಸ್ಯರಿಗೆ ಆ ಶಕ್ತಿ ಇಲ್ಲ ಎನ್ನುವಂತಹ ಅನುಮಾನವನ್ನು ಹೊಂದಿದ್ದಾರೆ. ಸಿಬ್ಬಂದಿ ಇಲ್ಲ ಒಪ್ಪಲೇಬೇಕು. ಬೇಕಾದ ಸಿಬ್ಬಂದಿಯನ್ನು ಕೊಡುವ ಕೆಲಸ ಸರ್ಕಾರ ಮಾಡಬೇಕಾಗಿದೆ. ಕಾರ್ಯದರ್ಶಿ ಪದವಿಯನ್ನು ಉನ್ನತೀಕರಣಗೊಳಿಸಬೇಕು. ಈಗಿರುವಂತಹ ಗ್ರಾಮ ಪಂಚಾಯಿತಿ ಕಾರ್ಯದರ್ಶಿ ಹುದ್ದೆಯನ್ನು ಸ್ವಲ್ಪ ನೀವು ಶಿರಸ್ತೇದಾರ್ ಮಟ್ಟಕ್ಕೆ ಅದನ್ನು ಉನ್ನತೀಕರಣಗೊಳಿಸಿದರೆ ಸ್ವಲ್ಪ ಜವಾಬ್ದಾರಿಯಿಂದ ಕೆಲಸ ಮಾಡುವವರು ಸಿಗಬಹುದು. ಆದರೆ ಒಂದು ಖಾತರಿ ಇದೆ. ಸಮಾಜದಲ್ಲಿ ದುಡ್ಡು ಬರುತ್ತದೆ ಎಂದು ಗೊತ್ತಾಯಿತು ಎಂದರೆ, ಕೆಲಸ ಚಾಲು ಮಾಡಿಸುವ ಜನ ಗ್ರಾಮೀಣ ಪ್ರದೇಶಗಳಲ್ಲಿ ಇದ್ದಾರೆ. ನಮ್ಮಲ್ಲಿ ಗುಡಿ ಕಟ್ಟಿಸಲಿಕ್ಕೆ ಕೆರೆ ಕಟ್ಟಿಸಲು ಅಥವಾ ನಮ್ಮ ನಮ್ಮ ಸ್ವಂತ ಮನೆ ಕಟ್ಟಿಸಲಿಕ್ಕೆ ಯಾವ ಅಧಿಕಾರಿಗಳು ಸಹಾಯ ನೀಡುವುದಿಲ್ಲ. ಅದನ್ನೆಲ್ಲಾ ಚಲೋನೇ ಕಟ್ಟಿಸಿರುತ್ತೇವೆ. ಸಮಾಜದ ಜನ ಕೂಡಿ ಕೆಲಸ ಮಾಡುವ

ಒಂದು ವಾತಾವರಣ ಗ್ರಾಮೀಣ ಪ್ರದೇಶಗಳಲ್ಲಿ ನಾವು ಸೃಷ್ಟಿ ಮಾಡಬೇಕಾಗಿದೆ. ಪ್ರತಿ ಗ್ರಾಮದಲ್ಲಿ ಸುದೈವದಿಂದ ಬಹಳಷ್ಟು ರಿಟೈರ್ಡ್ ಅಧಿಕಾರಿಗಳು ಇರುತ್ತಾರೆ. ಶಿಕ್ಷಕರು ಇರುತ್ತಾರೆ, ಅಧಿಕಾರಿಗಳು ಇರುತ್ತಾರೆ. ಅವರೆಲ್ಲರ ಸೇವೆಯನ್ನು ಉಪಯೋಗ ಮಾಡಿಕೊಳ್ಳುವ ಒಂದು ವಾತಾವರಣ ಇವತ್ತು ನಾವು ಸೃಷ್ಟಿ ಮಾಡಬೇಕು. ಎಲ್ಲಾ ಸರ್ಕಾರ ಮಾಡಬೇಕೆಂದು ಅಪೇಕ್ಷೆ ಪಡುವುದು ಬೇಡ. ಒಬ್ಬ ಶಾಸಕರು ಒಂದೊಂದು ಗ್ರಾಮ ಪಂಚಾಯಿತಿಯಲ್ಲಿ ಅವರಿಗೆ ಮಾರ್ಗದರ್ಶನ ಮಾಡುವ ಮನಸ್ಸು ನಾವು ಮಾಡಿದರೆ ಏನೇನು ಬದಲಾವಣೆಯನ್ನು ತರುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದರ ಅನುಭವ ನಮಗೆ ಬರುತ್ತದೆ. ಆ ಸಮಸ್ಯೆಗಳನ್ನು ಎದುರಿಸಲಿಕ್ಕೆ ಅನುಕೂಲ ಆಗುವಂತೆ ಸರ್ಕಾರದ ನೀತಿ ನಿಯಮಗಳನ್ನು ತಿದ್ದಲಿಕ್ಕೆ ಏನು ಕ್ರಮ ಕೈಗೊಳ್ಳಬೇಕು ಎನ್ನುವುದನ್ನು ಆ ಅನುಭವದ ಹಿನ್ನೆಲೆಯಲ್ಲಿ ನಾವು ಹೇಳುವುದಕ್ಕೆ ಸರಿಯಾಗುತ್ತದೆ. ಅದಕ್ಕೆ ದಯವಿಟ್ಟು ಒಂದು ವರ್ಷ ಕಾಲ ನಾವೆಲ್ಲರೂ ಹೆಚ್ಚು ಮುತವರ್ಜಿ ವಹಿಸಿ ಗ್ರಾಮ ಪಂಚಾಯಿತಿಗಳನ್ನು ಸಬಲೀಕರಣ ಮಾಡುವಂಥ ಪ್ರಯೋಗ ಏನು ನಡೆಯುತ್ತಿದೆ. ಇದರಲ್ಲಿ ಸಕ್ರಿಯವಾಗಿ ಪಾಲ್ಗೊಳ್ಳಬೇಕು. ಗ್ರಾಮ ಸಭೆಗಳನ್ನೂ ಸಹಿತ ಬಹಳಷ್ಟು ಅರ್ಥಪೂರ್ಣವಾಗಿ ನಡೆಯುವಂತೆ ನಾವು ಮಾಡಬೇಕು. ಗ್ರಾಮ ಸಭೆ ಈಗ ಅಷ್ಟು ಸರಿಯಾಗಿ ನಡೆಯದೆ ಇರುವುದನ್ನು ನಾವು ಒಪ್ಪಿಕೊಳ್ಳಬೇಕು. ಅದಕ್ಕೆ ದಯವಿಟ್ಟು ಗ್ರಾಮ ಸಭೆ ಅರ್ಥಪೂರ್ಣವಾಗಿ ನಡೆಯಬೇಕು. ಅಲ್ಲಿಯ ನಡವಳಿಕೆ ಗ್ರಾಮ ಸಭೆ ಠರಾವಿನಲ್ಲಿ ಬರಬೇಕೆನ್ನುವ ಇಚ್ಛೆ ಇದ್ದರೆ ದಯವಿಟ್ಟು ಪ್ರತಿಯೊಂದು ಗ್ರಾಮ ಸಭೆಯನ್ನು ವೀಡಿಯೋಗ್ರಾಫ್ ಮಾಡುವ ಹಾಗೆ ಆರ್‌ಡಿಪಿಆರ್ ಇಲಾಖೆಗೆ ಆದೇಶ ನೀಡುವ ಹಾಗೆ ಕ್ರಮ ಕೈಗೊಳ್ಳಬೇಕು. ಇನ್ನೊಂದು ವಿಚಾರ ನಾವು ಸ್ನೇಹಿತರು ಕೂಡಿ ಮಾತನಾಡುತ್ತಿದ್ದೆವು. ಏನು ಮಾಡಿದರೆ ನಾವು ಗ್ರಾಮ ಸಭೆಗೆ ಹೆಚ್ಚು ಜನರು ಬರುವ ಹಾಗೆ ಮಾಡಬಹುದು ಎಂದು. ಹೆಣ್ಣು ಮಕ್ಕಳು, ಸ್ತ್ರೀ ಶಕ್ತಿ ಸಂಘ ಎಲ್ಲಾ ಕೂಡಿ ಸಂಘಟನೆ ಬಲದಿಂದ ಮಾತನಾಡುವುದಕ್ಕೆ, ತಮ್ಮ ಸಮಸ್ಯೆಗಳನ್ನು ಸಂಬಂಧಪಟ್ಟವರ ಗಮನಕ್ಕೆ ತರುವುದಕ್ಕೆ ಪ್ರಯತ್ನ ಪಡುತ್ತಿದ್ದಾರೆ. ಅವರು ಗ್ರಾಮ ಸಭೆಗಳಲ್ಲಿ ಭಾಗವಹಿಸುವ ಹಾಗೆ ಅವರಿಗೆ ಏನಾದರೂ ಸಿಟ್ಟಿಂಗ್ ಫೀ ಗ್ರಾಮ ಸಭೆಗಳಲ್ಲಿ ಕೊಡುವುದಕ್ಕೆ ಸಾಧ್ಯ ಆದರೆ, ಹೆಚ್ಚು ಜನ ಹೆಣ್ಣು ಮಕ್ಕಳು ಭಾಗವಹಿಸಿದರೆ ಗಂಡು ಮಕ್ಕಳು ಸ್ವಲ್ಪ ಕಂಟ್ರೋಲ್‌ನಲ್ಲಿ ಇರುತ್ತಾರೆ. ಆ ಗ್ರಾಮ ಸಭೆಯೊಳಗೆ ಗಂಡು ಮಕ್ಕಳು ಕಂಟ್ರೋಲ್‌ನಲ್ಲಿ ಬಂದರೆ ಗ್ರಾಮೀಣ ಸಮಸ್ಯೆಗಳನ್ನು ಸುಧಾರಿಸಬಹುದು. ಅದಕ್ಕೆ ಹೆಚ್ಚು ತುತ್ತಾದವರು ನಮ್ಮ ಸಹೋದರಿಯರು. ಅವರು ತಮ್ಮ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಬಹಳಷ್ಟು ಯಶಸ್ವಿ ಆಗುತ್ತಾರೆ ಎನ್ನುವ ಭರವಸೆ ನಮಗೆ ಇದೆ. ಅದಕ್ಕೆ ದಯವಿಟ್ಟು ಈ ಸಲಹೆಗಳನ್ನು ಸರ್ಕಾರದವರು ಪರಿಶೀಲನೆ ಮಾಡಬೇಕು. ಎನ್ನುವ ಮಾತನ್ನು ಒತ್ತಾಯ ಪೂರ್ವಕವಾಗಿ ಹೇಳುತ್ತೇನೆ. ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಗೆ ಸಾಕಷ್ಟು ಒತ್ತುಕೊಟ್ಟಿದ್ದೀರಿ, ಕೊಟ್ಟಿಲ್ಲವೆಂದು ನಾನು ಹೇಳುವುದಿಲ್ಲ. ಆದರೆ ಬಹುತೇಕ ನೀವು ನೀರಾವರಿ ಪ್ರದೇಶಗಳಿಂದ ಬಂದವರು ಎಂದು ಕಾಣುತ್ತದೆ. ಹಾಗಾಗಿ ಮಳೆ ಆಗದೆ ಇರುವ ಕೃಷಿಕರ ಕಡೆ ತಮ್ಮ ಲಕ್ಷ್ಯ ಬಿದ್ದಿಲ್ಲ ಎಂಬುದು ನನ್ನ ಭಾವನೆ. ನೀವು ನೀರಾವರಿ

ಪ್ರದೇಶಗಳಿಗೆ ಸುಮಾರು 3,900 ಕೋಟಿ ರೂಪಾಯಿಗಳು ಈ ಬಜೆಟ್‌ನಲ್ಲಿ ಇಟ್ಟಿದ್ದೀರಿ. ಪ್ರತಿ ವರ್ಷ ಬಜೆಟ್‌ನಲ್ಲಿ ಇಷ್ಟು ಕೊಡುತ್ತಾರೆ. ಅದರಿಂದ ಸಾಧನೆ ಆಗುವುದು ಎಷ್ಟು? ಸುಮಾರು 25 ರಿಂದ 30 ಪರ್ಸೆಂಟ್ ನೀರಾವರಿಗೆ ಒಳಪಡುತ್ತದೆ. ಉಳಿದ 70 ಪರ್ಸೆಂಟ್ ಮಳೆ ಆಶ್ರಯಿತ ಕೃಷಿ ಆಗಬೇಕು. ಮಳೆ ನೀರನ್ನು ಹಿಡಿದು ಇಡುವ ಕೆಲಸಕ್ಕೆ ನೀರಾವರಿಗೆ ನೀವು ಎಷ್ಟು ಆದ್ಯತೆ ಕೊಡುತ್ತೀರಿ, ಎಷ್ಟು ಆದ್ಯತೆ ಕೊಟ್ಟು ಹಣಕಾಸನ್ನು ಜೋಡಿಸುವ ಕೆಲಸ ಮಾತ್ರ ದುರ್ದೈವದಿಂದ ಯಾವ ಸರ್ಕಾರದಿಂದಲೂ ಆಗುತ್ತಿಲ್ಲ. ಬಹಳಷ್ಟು ಜನ ಶಾಸಕರು ನಾವು ಇಲ್ಲಿಂದಲೇ ಬರುತ್ತೇವೆ. ಬಹಳಷ್ಟು ಜನ ಮಂತ್ರಿಗಳು ಇಲ್ಲಿಂದಲೇ ಬರುತ್ತಾರೆ. ಆದರೂ ಸಹ ಆದ್ಯತೆ ವಿಚಾರ ಬಂದಾಗ ಮಾತ್ರ ಯಾರು ಸಬಲರು ಇದ್ದಾರೆ ಅವರ ಕಡೆ ಒಲವು ಹೆಚ್ಚು. ಕೃಷಿಯಲ್ಲಿ ನೋಡಿ, ನೀರಾವರಿ ಕೃಷಿಕರಿಗೆ ಹೆಚ್ಚು ಒಲವು ಇರುತ್ತದೆ. ಮಳೆ ಆಶ್ರಯಿತ ಕೃಷಿಕರಿಗೆ ಕಡಿಮೆ ಒಲವು ಇರುತ್ತದೆ. ಹಣಕಾಸನ್ನು ಕೊಡುವುದರಲ್ಲಿ ಸಹಿತ ನಮ್ಮ ಮಾನ್ಯ ಶ್ರೀರಾಮರೆಡ್ಡಿಯವರು ಹೇಳಿದರು ಐಟಿ ಸೆಕ್ಟಾರ್‌ನವರಿಗೆ ರೋಡ್ ಮಾಡುವ ಸಲುವಾಗಿ ಸುಮಾರು 450 ಕೋಟಿ ರೂಪಾಯಿ ಖರ್ಚು ಮಾಡುತ್ತೇವೆ ಎಂದು ಕೇಂದ್ರದ ಭೂ ಸಾರಿಗೆ ಸಚಿವರಾದ ಮುನಿಯಪ್ಪನವರು ಬಂದು ಅಡಿಗಲ್ಲು ಇಟ್ಟರು ಎಂದು ಕಾಣುತ್ತದೆ. 9 ಕಿಲೋ ಮೀಟರ್ ರೋಡ್‌ಗೆ 450 ಕೋಟಿ ರೂಪಾಯಿ ಖರ್ಚು ಮಾಡುತ್ತಾರೆ. ಮಾಡಬೇಡಿ ಎಂದು ನಾನು ಹೇಳುವುದಿಲ್ಲ. ಆದರೆ ಒಂದು ಲಕ್ಷಕ್ಕೆ ಹೆಚ್ಚು ಕಿಲೋಮೀಟರ್ ಇರುವಂತಹ ಗ್ರಾಮೀಣ ಪ್ರದೇಶಗಳಿಗೆ ಅದರ ಅರ್ಧ ಸಹಿತ ಇಲ್ಲ. ನಮ್ಮ ಆದ್ಯತೆಗಳ ಬಗ್ಗೆ ಸ್ವಲ್ಪ ನಾವು ಯಾವುದಕ್ಕೆ ಆದ್ಯತೆ ಕೊಡಬೇಕೆನ್ನುವುದರ ಬಗ್ಗೆ ವಿಷದವಾಗಿ ಇಲ್ಲಿ ಚರ್ಚೆ ಆಗಬೇಕೆಂದು ನನಗನ್ನಿಸುತ್ತದೆ. ಹೇಳುವ ಮುಂದೆ ಎಲ್ಲರೂ ಮಾತನಾಡುತ್ತೇವೆ. ಅವಕಾಶ ಸಿಕ್ಕಾಗ ಆ ರೀತಿ ಶಿಫ್ಟ್ ಏಕೆ ನಾವು ಮಾಡುವುದಿಲ್ಲ ಏಕೆ ಅವುಗಳಿಗೆ ಆದ್ಯತೆ ಕೊಡುವುದಿಲ್ಲ. ಹಣಕಾಸನ್ನು ಏಕೆ ಒದಗಿಸುವುದಿಲ್ಲ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಬಹಳ ಜನ ಗ್ರಾಮೀಣ ಪ್ರದೇಶಗಳಿಂದ ಬಂದವರೇ ಇರುತ್ತಾರೆ. ಆದರೂ ಆ ಗ್ರಾಮೀಣ ವಲಯದ ಹಿತರಕ್ಷಣೆ ಮಾಡುವುದರಲ್ಲಿ ಎಲ್ಲೋ ವ್ಯವಸ್ಥೆ ಅವರಿಗೆ ಅವಕಾಶ ಕೊಡುವುದಿಲ್ಲ. ವ್ಯವಸ್ಥೆಗೆ ಬಲಿ ಆಗುತ್ತಾರೆಂದು ಶ್ರೀರಾಮರೆಡ್ಡಿಯವರು ಹೇಳಿದರು. ವ್ಯವಸ್ಥೆಗೆ ಬಲಿ ಆಗುವವರು ಹೊಸಬರು ಬಲಿ ಆಗಬಹುದು. ಸಿದ್ದರಾಮಯ್ಯನವರಂತಹವರು ವ್ಯವಸ್ಥೆಗೆ ಬಲಿ ಆಗಬಾರದು. ತಮ್ಮ ಕೈಯಲ್ಲಿ ಇರುವಂತಹ ಎಲ್ಲಾ ಅವಕಾಶಗಳನ್ನು ಉಪಯೋಗಿಸಿಕೊಂಡು ಈ ಗ್ರಾಮೀಣ ಭಾಗದ ಜನಗಳಿಗೆ ಇನ್ನೂ ಏನು ಅನ್ಯಾಯವಾಗುತ್ತಿದೆ. ಕೃಷಿ ವಲಯ ಇರಲಿ, ಇನ್‌ಫ್ರಾಸ್ಟ್ರಕ್ಚರ್ ಇರಲಿ, ಅದು ರೆಗ್ಯುಲೇಟೆಡ್ ಮಾರುಕಟ್ಟೆಯಲ್ಲಿ ಆಗುವಂತಹ ಶೋಷಣೆ ಇರಲಿ, ಅದು ನಿಮ್ಮ ಕ್ರೆಡಿಟ್ ಸಿಸ್ಟಂನಲ್ಲಿ ಆಗುವಂತಹ ಬದಲಾವಣೆ ಸಹಿತ ಇವತ್ತು ನೀವು ಆರು ಪರ್ಸೆಂಟ್ ಬಡ್ಡಿ ಕೊಟ್ಟರೆ ಎಷ್ಟು ಜನ ರೈತರಿಗೆ ಸಿಗುತ್ತದೆ? ಆರು ಪರ್ಸೆಂಟ್ ಬಡ್ಡಿ ಸವಲತ್ತು ಗ್ರಾಮೀಣ ಪ್ರದೇಶಗಳಲ್ಲಿ ನಮ್ಮಂತಹ ದೊಡ್ಡವರಿಗೆ ಹೆಚ್ಚು ಸಿಗುತ್ತದೆ. ಅದು ಬಡವರಿಗೆ ಹಿಂದುಳಿದ ವರ್ಗದವರಿಗೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರಿಗೆ ಸಿಗುವುದಿಲ್ಲ. ಅದಕ್ಕೆ ದಯವಿಟ್ಟು ಈ ವರ್ಷ ಸಹಕಾರಿ ಚಳುವಳಿ

ಶತಮಾನೋತ್ಸವನ್ನು ಆಚರಿಸುವಂತಹ ವರ್ಷ, 100 ವರ್ಷ ಆದರೂ ಸಹ ಪ್ರತಿ ಶತ 20 ರೈತರಿಗೆ ನಾವು ಈ ಕೋ-ಆಪರೇಟಿವ್ ಕ್ರೆಡಿಟ್ ಸೆಕ್ಟಾರ್ ಮುಖಾಂತರ ಹಣಕಾಸಿನ ಸಹಾಯ ಮಾಡುತ್ತೇವೆ. ಇನ್ನೂ 70 ಪ್ರತಿಶತ ಜನ ಎಲ್ಲಾ ಬೇರೆ ಮೂಲಗಳಿಂದ ಹಣಕಾಸಿನ ವ್ಯವಸ್ಥೆಯನ್ನು ಮಾಡಿಕೊಳ್ಳಬೇಕಾಗುತ್ತದೆ. ನೀವು ಆರು ಪರ್ಸೆಂಟ್ ಕೊಡುವುದು ಇವರಿಗೆ ಅನುಕೂಲ, ನೀವು 450 ಕೋಟಿ ರೂಪಾಯಿ ಕೊಡುವುದೂ ಇವರಿಗೇ ಅನುಕೂಲ. ದಯವಿಟ್ಟು ಒಂದು ಕೆಲಸ ಮಾಡಿ ನೀವು ಅರ್ಥ ಸಚಿವರೂ ಇದ್ದೀರಿ ಎಲ್ಲಾ ಗ್ರಾಮೀಣ ಪ್ರದೇಶಗಳಲ್ಲೂ ಇರುವಂತಹ ಹರಿಜನ, ಗಿರಿಜನ ರೈತ ಬಾಂಧವರು ಅದಕ್ಕೆ ಸದಸ್ಯರಾಗುವ ಹಾಗೆ ಮಾಡಿ. ಎಲ್ಲಾ ಹಿಂದುಳಿದ ವರ್ಗದವರು ಅದಕ್ಕೆ ಸದಸ್ಯರಾಗುವ ಹಾಗೆ ಮಾಡಿ. ಸರ್‌ಪ್ಲಸ್ ಬಜೆಟ್ 45 ರಿಂದ 50 ಕೋಟಿ ರೂ. ಇಟ್ಟಿದ್ದೀರಿ. ಅದನ್ನು ಈ ಕೆಲಸಕ್ಕೆ ಕೊಡಿ. ಮೇ ಎಂಟನೇ ತಾರೀಖು ಶತಮಾನೋತ್ಸವ ಆಚರಣೆ ಮಾಡುತ್ತೇವೆ. ಆ ಮೇ ಎಂಟನೇ ತಾರೀಖಿಗೆ ಪ್ರತಿಯೊಬ್ಬರೂ ಸದಸ್ಯರಾಗಬೇಕು. ಮುಂದಿನ ಬೆಳೆ ಸಾಲ ಅವರಿಗೆ ಆರು ಪರ್ಸೆಂಟ್‌ನಲ್ಲಿ ಸಿಗುವ ಹಾಗೆ ಮಾಡಿದರೆ ಈ ಶತಮಾನೋತ್ಸವ ಅವರಿಗೆ ಸಂತೋಷ ಕೊಡುವ ಹಾಗಾಗುತ್ತದೆ. ಇಲ್ಲವೆಂದರೆ ಬರೀ ನಮ್ಮಂತಹವರಿಗೆ ಅನುಕೂಲವಾಗುತ್ತದೆ. ದಯವಿಟ್ಟು ಈ ಬದಲಾವಣೆಯನ್ನು ಸಿದ್ದರಾಮಯ್ಯನವರು ತರಲೇಬೇಕೆಂದು ಹೇಳುತ್ತೇನೆ. ತಾವು ಕೆಲವು ಹೊಸ ಯೋಜನೆಗಳನ್ನು ಕುಗ್ರಾಮ, ಸುಗ್ರಾಮ ಮತ್ತು ಬಹುತೇಕ ಸ್ವಚ್ಛ ಗ್ರಾಮ ಯೋಜನೆ ನೀವು ಏನು ಮಾಡುತ್ತಿದ್ದೀರಿ ಅದೇ ಕುಗ್ರಾಮ ಸುಗ್ರಾಮ ಯೋಜನೆಯಲ್ಲಿ ನೀವು ಮಾಡುತ್ತೀರಿ ಎಂದು ಕಾಣಿಸುತ್ತದೆ. ನಮ್ಮ ಹೊಲ ನಮ್ಮ ತೋಟ ಇದರ ವಿವರವಾದ ಮಾಹಿತಿ ನಮ್ಮಲ್ಲಿ ಇಲ್ಲ. ನಮ್ಮ ಹೊಲ ನಮ್ಮ ತೋಟ ನೀವು ಹೇಗೆ ಮಾಡಬೇಕೆಂದು ಅಪೇಕ್ಷೆ ಪಟ್ಟೀರಿ ಗೊತ್ತಿಲ್ಲ. ಕೊಡುವುದಿದ್ದರೆ ನೀರಾವರಿ ಜಮೀನು ಸಿಗುವ ಹಾಗೆ ಮಾಡಿ. ನೀರಾವರಿ ಸೌಲಭ್ಯ ಸಿಗುವ ಹಾಗೆ ಮಾಡಿ. ನಿಮ್ಮ ಸರ್ಕಾರೀ ಜಮೀನು ಹಳೆಯ ಮೈಸೂರು ಕಡೆ ಇರಬಹುದು. ನಮ್ಮ ಬಾಂಬೆ ಕರ್ನಾಟಕದಲ್ಲಿ ಸರ್ಕಾರೀ ಜಮೀನು ಇಲ್ಲ. ಖರೀದಿ ಮಾಡಿ ಕೊಡಬೇಕಾಗುತ್ತದೆ. ಅದಕ್ಕೆ ಅದನ್ನು ಯಾವ ರೀತಿ ವಿವರವಾಗಿ ಮಾಡುತ್ತೀರಿ ನೀರು ಕೊಡಲಿಲ್ಲವೆಂದು ಇದು ಉಪಯೋಗವಾಗುವುದಿಲ್ಲ. ಕೃಷಿ ಬೆಳವಣಿಗೆ ಆಗಬೇಕಾದರೆ ನೀರು, ಫಲವತ್ತಾದ ಮಣ್ಣು ಬೇಕು, ನೀರು ಮಳೆ ನೀರನ್ನು ಹಿಡಿದು ಇಡುವ ಕೆಲಸಕ್ಕೆ ಹೆಚ್ಚು ದುಡ್ಡು, ಎಲ್ಲಿಂದ ಆದರೂ ನೀವು ಕ್ರೋಢೀಕರಿಸಿ, ಅಥವಾ ವರ್ಲ್ಡ್ ಬ್ಯಾಂಕ್ ಮುಂದೆ ಸಾಲ ತಂದರೂ ಅಡ್ಡಿ ಇಲ್ಲ. ಅವುಗಳನ್ನು ಮುಂದಿನ ನಾಲ್ಕು ವರ್ಷದ ಆವಧಿಯಲ್ಲಿ ಮಾಡಿ ಈ ಸರ್ಕಾರದ ಅವಧಿ ಇನ್ನು ನಾಲ್ಕು ವರ್ಷ ಇದೆ. ಈ ನಾಲ್ಕು ವರ್ಷದ ಅವಧಿ ಒಳಗೆ ಎಲ್ಲಾ ಮಳೆ ಆಶ್ರಯಿತ ಕೃಷಿ ಜಮೀನು ಮಳೆ ನೀರು ಹಿಡಿದು ಇಡುವಂತಹ ಕೆಲಸ ಆಗುವ ಹಾಗೆ ತಾವು ಕ್ರಮ ಕೈಗೊಳ್ಳಬೇಕು. ಮಳೆ ಆಶ್ರಯದ ಕೃಷಿ ಜಮೀನಿನಲ್ಲಿ ನೀರು ಹಿಡಿದು ಇಡುವ ಕೆಲಸಕ್ಕೆ ನನ್ನ ಹೊಲದಲ್ಲಿ ಹಿಡಿಯುವುದಾಗಲಿ, ನನ್ನ ಹಳ್ಳದಲ್ಲಿ ಹಿಡಿಯುವುದಾಗಲಿ, ನನ್ನ ಕೆರೆಯಲ್ಲಿ ಹಿಡಿಯುವುದಾಗಲಿ ನೀವು ಹೇಗೆ ಸಣ್ಣ ನೀರಾವರಿಗೆ ಆದ್ಯತೆ ಕೊಡುತ್ತೀರಿ. ಪ್ರತಿ ವರ್ಷ 3 ರಿಂದ

ನಾಲ್ಕು ಸಾವಿರ ಕೋಟಿ ರೂಪಾಯಿ ಕೊಡುತ್ತೀರಿ. ಹಾಗೆಯೇ ನಮಗೆ ವರ್ಷ ಒಂದು 2,000 ಕೋಟಿ ರೂಪಾಯಿ ಕೊಡಿ. ಮುಂದಿನ ನಾಲ್ಕು ವರ್ಷದ ಅವಧಿಯಲ್ಲಿ ನಾನು ಇದನ್ನು ಮಾಡಿದೆ ಎನ್ನುವ ಸಮಾಧಾನ ನಿಮಗೂ ಇರಬೇಕು. ನಮಗೆ ಸಹ ಸಿದ್ದರಾಮಯ್ಯನವರು ಅರ್ಥ ಮಂತ್ರಿ ಆದಾಗ ಗ್ರಾಮೀಣ ಮಳೆ ಆಶ್ರಯಿತ ಕೃಷಿಕರ ಬದುಕಿನಲ್ಲಿ ಒಂದು ಮಹತ್ತರವಾದ ಬದಲಾವಣೆ ಮಾಡಿ ಒಂದು ತಿರುವನ್ನು ತಂದು ಕೊಟ್ಟರು ಎಂದು ಆಗಬಹುದು. ನೀರು ಸಿಕ್ಕರೆ ರೈತ ಬಹಳ ಕಷ್ಟಪಟ್ಟು ತನ್ನ ಉತ್ಪಾದನೆ ಹೆಚ್ಚು ಮಾಡುವುದಕ್ಕೆ ಪ್ರಯತ್ನ ಮಾಡುತ್ತಾನೆ. ತಾವು ಹೇಳಿದಿರಿ, ಅವನ ಉತ್ಪಾದನೆ ಹೆಚ್ಚು ಆದರೂ ಸಹಿತ ವರಮಾನ ಹೆಚ್ಚು ಆಗುವುದಿಲ್ಲವೆನ್ನುವಂತಹ ಅನುಭವದ ಮಾತನ್ನು ತಾವು ಹೇಳಿದಿರಿ. ಕಾರಣ ಇದೆ. ರೈತರೂ ಸಹಿತ ಬದಲಾಗಬೇಕಾಗಿದೆ. ಒವ್ವೊತ್ತು ರೈತರಾದ ನಾವು ನಮ್ಮ ಇನ್‌ಪುಟ್ ಕಾಸ್ಟ್‌ನ್ನು ಹೆಚ್ಚು ಮಾಡಿಕೊಳ್ಳುತ್ತಿದ್ದೇನೆ. ಆ ರಾಸಾಯನಿಕ ಗೊಬ್ಬರ, ಕ್ರಿಮಿನಾಶಕ, ಇವುಗಳನ್ನು ಉಪಯೋಗ ಮಾಡಿ, ಮಾಡಿ ಮಾಡಿ ನಮ್ಮ ಮಣ್ಣಿನ ಫಲವತ್ತತೆಯನ್ನು ನಾವು ಕಡಿಮೆ ಮಾಡಿಕೊಳ್ಳುತ್ತಿದ್ದೇವೆ. ಆದರೂ ಸಹಿತ ಸರ್ಕಾರ ಕೂಡ ಅದೇ ಪ್ಯಾಕೇಜ್ ಆಫ್ ಪ್ರಾಕ್ಟೀಸಸ್‌ನ್ನು ಹೇಳುತ್ತದೆ. ನಾವು ಕೂಡ ಇಷ್ಟು ಕಹಿ ಅನುಭವ ನಮಗೆ ಆಗಿದ್ದರೂ ಕೂಡ ನಾವು ಅದನ್ನೇ ಮುಂದುವರಿಸಿಕೊಂಡು ಹೋಗುತ್ತೇವೆಯೇ ಹೊರತು ನಾವು ಬದಲಾವಣೆ ಮಾಡುತ್ತಿಲ್ಲ. ಸಾವಯವ ಕೃಷಿಯನ್ನು ಅಲ್ಲಲ್ಲಿ ರೈತರು ಯಶಸ್ವಿಯಾಗಿ ಜಾರಿಗೊಳಿಸುತ್ತಿದ್ದಾರೆ. ಅದನ್ನು ಆಚರಣೆಗೆ ತರುತ್ತಿದ್ದಾರೆ. ಮಾನ್ಯ ಆರಗ ಜ್ಞಾನೇಂದ್ರರವರ ಕ್ಷೇತ್ರದಲ್ಲಿ ಸಾವಯವ ಕೃಷಿಯನ್ನು ಬಹಳ ಯಶಸ್ವಿಯಾಗಿ ಪ್ರಯೋಗ ಮಾಡುತ್ತಿದ್ದಾರೆ. ಆ ಪ್ರಯೋಗ ರೈತರನ್ನು ಪಟಾಯಿಸುವುದಕ್ಕೆ ಹತ್ತಿದೆ. ಆದರೆ ಅವರಿಗೆ ಸರ್ಕಾರದಿಂದ ಅನುಕೂಲ ಸಿಗುತ್ತಿಲ್ಲ. ಸಾವಯವ ಕೃಷಿಯನ್ನು ಅನುಷ್ಠಾನಗೊಳಿಸುವುದಕ್ಕೆ ರೈತರಿಗೆ ಸ್ವಲ್ಪ ಅನುಕೂಲತೆ ಬೇಕು. ಈಗ ನೀವು ರಾಸಾಯನಿಕ ಗೊಬ್ಬರಕ್ಕೆ ಸಬ್ಸಿಡಿಯನ್ನು ಕೊಡುತ್ತೀರಿ. ನೀವು ಅಲ್ಲ. ಕೇಂದ್ರ ಸರ್ಕಾರದವರು ಸಬ್ಸಿಡಿಯನ್ನು ಕೊಡುತ್ತಾರೆ. ನೀವು ದಯವಿಟ್ಟು ಅವರಿಗೆ ತಿಳಿಹೇಳಬೇಕು. ರಾಸಾಯನಿಕ ಗೊಬ್ಬರಕ್ಕೆ ಕೊಡುವಂಥ ಸಬ್ಸಿಡಿಯನ್ನು ಬಂದ್ ಮಾಡಿ ಅದನ್ನು ಸಾವಯವ ಕೃಷಿ ಸಲುವಾಗಿ ನಾವೇನು ಕಾಂಪೋಸ್ಟ್ ಪಿಟ್ ಮಾಡುತ್ತೇವೆ. ಕಾಂಪೋಸ್ಟ್ ಗೊಬ್ಬರವನ್ನು ಮಾಡುತ್ತೇವೆ. ಅದಕ್ಕೆ ಬೇಕಾಗುವಂಥ ಮತ್ತು ಅದಕ್ಕೆ ಬೇಕಾಗುವಂಥ ದನಕರುಗಳನ್ನು ಕಟ್ಟುವುದಕ್ಕೆ ಅನುಕೂಲವಾಗುವಂಥ ವ್ಯವಸ್ಥೆಯನ್ನು ರೂಪಿಸುವುದಕ್ಕೆ ಸಬ್ಸಿಡಿ, ಈ ರೀತಿಯಾಗಿ ಸಿಗುವಂತೆ ತಾವು ಮಾಡಿದ್ದೇ ಆದರೆ ನಮ್ಮ ಇನ್‌ಪುಟ್ ಕಾಸ್ಟ್ ಕಡಿಮೆಯಾಗುತ್ತದೆ. ನಮ್ಮ ಮಣ್ಣಿನ ಫಲವತ್ತತೆ ಹೆಚ್ಚಾಗುತ್ತದೆ. ನೀರು ಹಿಡಿದಿಡುವಂಥ ಕೆಲಸವನ್ನು ಮಾಡುವುದರಿಂದ ನಮ್ಮ ಉತ್ಪಾದನೆ ಕೂಡ ಹೆಚ್ಚಾಗುತ್ತದೆ. ನಮಗೂ ಸಹ ಸ್ವಲ್ಪ ಸರ್‌ಪ್ಲಸ್ ಜನರೇಟ್ ಆಗುತ್ತದೆ. ಆಗ ಉತ್ಪಾದನೆ ಹೆಚ್ಚಾದರೂ ಕೂಡ ಅದರಂತೆ ವರಮಾನವೂ ಹೆಚ್ಚಾಗುವುದಕ್ಕೆ ಸಾಧ್ಯವಾಗುತ್ತದೆ. ದಯವಿಟ್ಟು ನೀವು ಈ ರೀತಿಯಲ್ಲಿ ಇಂಟಿಗ್ರೇಟೆಡ್ ಸ್ಟೆಪ್ಸ್ ತೆಗೆದುಕೊಂಡರೆ ಬಹಳ ಅನುಕೂಲ ಆಗುತ್ತದೆ. ಇದರ ಜೊತೆಗೆ ಮಾರುಕಟ್ಟೆಯಲ್ಲಿ ರೈತರು ಮಾರಾಟ ಮಾಡುವಾಗ ಏನು ಶೋಷಣೆ

ಆಗುತ್ತದೆಯೋ ಆ ಶೋಷಣೆಯನ್ನು ನಿಲ್ಲಿಸುವಂಥ ಒಂದು ವ್ಯವಸ್ಥೆಯನ್ನು ತಾವು ಮಾಡಲೇಬೇಕು. ರೈತರು ಬಹಳ ಉತ್ಪಾದನೆ ಮಾಡಿದಾಗ ರೇಟ್ ಬಿದ್ದುಹೋಗುತ್ತದೆ. ಆ ರೇಟ್ ಬಿದ್ದಾಗ ಉತ್ಪಾದನೆಯನ್ನು ಹಿಡಿದಿಡುವಂಥ ಶಕ್ತಿಯನ್ನು ಸರ್ಕಾರ ಮಾಡಬೇಕು. ಈಗೇನೋ ಸರ್ಕಾರ ಖರೀದಿ ಮಾಡುತ್ತದೆ ಆದರೆ ಅದನ್ನು ಮಾರಾಟ ಮಾಡುವುದಿಲ್ಲ. ಲುಕ್ಸಾನು ಮಾಡಿಕೊಳ್ಳುತ್ತೀರಿ. ಅದಕ್ಕೋಸ್ಕರ ಏನಾದರೂ ಮಾಡಿ ಆ ಆವರ್ತ ನಿಧಿಯನ್ನು ವೇರ್ ಹೌಸಿಂಗ್‌ಗೂ ತಂದು ಉತ್ಪನ್ನಕ್ಕೆ ಮಾರುಕಟ್ಟೆಯಲ್ಲಿ ಒಳ್ಳೆಯ ದರ ಬಂದಾಗ ನಾವು ಮಾರಾಟ ಮಾಡಲು ಅನುಕೂಲವಾಗುವಂತೆ ವ್ಯವಸ್ಥೆಯನ್ನು ಮಾಡಲು ಸರ್ಕಾರ ಇದಕ್ಕಾಗಿ ಸಮಗ್ರವಾಗಿ ರೂಪುರೇಷೆಯನ್ನು ಮಾಡಿದರೆ ತುಂಬಾ ಅನುಕೂಲ ಆಗುತ್ತದೆ. ಈ ಪ್ರಯೋಗವನ್ನು ಸರ್ಕಾರ ಅಲ್ಲಲ್ಲೇ ಕೆಲವು ಜಿಲ್ಲೆಗಳಲ್ಲಿ ಮಾಡಿದರೆ ಸರ್ಕಾರಕ್ಕೂ ಇದರ ಅನುಭವ ದೊರಕಿದಂತಾಗುತ್ತದೆ. ಮುಂದಿನ ವರ್ಷಗಳಲ್ಲಿ ನೀವು ಇದನ್ನು ಟ್ಯಾಕಲ್ ಮಾಡಲು ಅನುಕೂಲವಾಗುತ್ತದೆ. ಇನ್ನು ತಮ್ಮ ಆಯವ್ಯಯವನ್ನು ನೋಡಿದಾಗ ಅವಕಾಶ ವಂಚಿತರ ಸಲುವಾಗಿ, ಅವರುಗಳು ಪರಿಶಿಷ್ಟ ಜಾತಿಯವರೇ ಇರಲಿ, ಪರಿಶಿಷ್ಟ ಪಂಗಡದವರೇ ಇರಲಿ, ಹಿಂದುಳಿದ ವರ್ಗದವರೇ ಇರಲಿ, ಅಲ್ಪಸಂಖ್ಯಾತರೇ ಇರಲಿ, ಅವರುಗಳಿಗೆ ಬೇಕದಂಥ ಬಹಳಷ್ಟು ಕೆಲಸಗಳಿಗೆ ಬೇಕಾದಂಥ ಹಣಕಾಸಿನ ವ್ಯವಸ್ಥೆಯನ್ನು ತಾವು ಮಾಡಿದ್ದೀರಿ. ಗಂಗಾ ಕಲ್ಯಾಣ ಯೋಜನೆಗೆ ಅನುದಾನದ ಹಣವನ್ನು ದುಪ್ಪಟ್ಟು ಮಾಡಿದಿರಿ. ಬಹಳ ಸಂತೋಷ. ಆದರೆ ಎಲ್ಲೆಲ್ಲಿ ಈ ಯೋಜನೆಯಡಿಯಲ್ಲಿ ಬೋರ್‌ವೆಲ್‌ನ್ನು ಕೊರೆಯಲಾಗುತ್ತದೆಯೋ ಅಲ್ಲಿ ತಕ್ಷಣ ವಿದ್ಯುತ್ ಸಂಪರ್ಕ ಸಿಗುವ ಹಾಗೆ ಒಂದು ವ್ಯವಸ್ಥೆಯನ್ನು ತಾವು ಮಾಡಬೇಕು. ಅದು ಆಗುತ್ತಿಲ್ಲ. ಕಳೆದ ವರ್ಷ ಅಥವಾ ಈ ಸರ್ಕಾರ ಬಂದ ಮೇಲೆ ಎಂದು ಕಾಣಿಸುತ್ತದೆ. 25 ಸಾವಿರ ರೂಪಾಯಿ ತುಂಬಿದ ಕೂಡಲೇ ಸರ್ಕಾರವೇ ಮಾಡಬೇಕು ಎಂದು ಕೆ.ಪಿ.ಟಿ.ಸಿ.ಎಲ್ ಗೆ ಡೈರೆಕ್ಷನ್ ಬಂದಿರುವುದರಿಂದ ವಿದ್ಯುತ್ ಸಂಪರ್ಕ ಪ್ರಾರಂಭ ಮಾಡಿದ್ದಾರೆ. ಇದನ್ನು ಮಾಡಿರಲಿಲ್ಲವೆಂದರೆ ಬೋರ್‌ವೆಲ್ ಆದ ಮೇಲೂ ಎರಡ್ಮೂರು ಪೀಕ್ ಹೋಗುವ ತನಕವೂ ವಿದ್ಯುತ್ ಸಂಪರ್ಕವನ್ನು ಅವರು ಕೊಡುತ್ತಿರಲಿಲ್ಲ. ನೀರು ಬಿದ್ದಿರುತ್ತದೆ. ರೈತರು ಬಹಳ ಪರಿತಪಿಸುತ್ತಾರೆ. ಆ ರೈತರುಗಳಿಗೆ ನೀರು ಬಿದ್ದ ಕೂಡಲೇ ಒಂದು ತಿಂಗಳೊಳಗೆ ವಿದ್ಯುಚ್ಛಕ್ತಿ ಸಂಪರ್ಕ ಸಿಗುವ ಹಾಗೆ ತಾವು ಮಾಡಿದರೆ ಪೀಕ್ ತೆಗೆದುಕೊಳ್ಳುತ್ತಾರೆ. ಅದರಿಂದ ಅವರ ಕುಟುಂಬಕ್ಕೆ ಬಹಳಷ್ಟು ಅನುಕೂಲವಾಗುತ್ತದೆ. ಈ ರೀತಿಯ ಆದೇಶವನ್ನು ತಾವು ಕೆ.ಪಿ.ಟಿ.ಸಿ.ಎಲ್. ಅಧಿಕಾರಿಗಳಿಗೆ ಕೊಟ್ಟು ಆದ್ಯತೆಯ ಮೇರೆಗೆ ಈ ಗಂಗಾ ಕಲ್ಯಾಣ ಯೋಜನೆಯೊಳಗೆ ಅದು ಹರಿಜನ, ಗಿರಿಜನರಿಗೇ ಇರಲಿ, ಅಥವಾ ಹಿಂದುಳಿದ ವರ್ಗದವರೇ ಇರಲಿ, ಅಥವಾ ಅಲ್ಪಸಂಖ್ಯಾತರದೇ ಇರಲಿ ಗಂಗಾ ಕಲ್ಯಾಣ ಯೋಜನೆಯೊಳಗೆ ನಾವೇನು ನೀರಾವರಿ ಸೌಲಭ್ಯವನ್ನು ಮಾಡಿಕೊಡುತ್ತೇವೆಯೋ ಅಲ್ಲಿ ವಿದ್ಯುಚ್ಛಕ್ತಿ ಕೂಡಲೇ ಸಿಗುವ ಹಾಗೆ ವ್ಯವಸ್ಥೆಯನ್ನು ತಾವು ರೂಪಿಸಿಬೇಕೆಂದು ನಾನು ಒತ್ತಿ ಹೇಳಬಯಸುತ್ತೇನೆ. ಇನ್ನು ತಾವು ಶಾಸಕರಿಗೆ 50 ಲಕ್ಷ ರೂಪಾಯಿಗಳನ್ನು ಸಾರ್ವಜನಿಕ ಕೆಲಸಗಳಿಗೆ ಕೊಡುವ ಸಲುವಾಗಿ ನಮಗೆ

ಕೊಡುವಂಥ ಕೆಲಸವನ್ನು ಮಾಡಿದ್ದೀರಿ. ಸಂತೋಷ. ಹಿಂದಿನ ಸರ್ಕಾರ ಇದ್ದಾಗ ನಮಗೆ 40 ಲಕ್ಷ ರೂಪಾಯಿಗಳನ್ನು ಕೊಡುತ್ತೀವೆಂದು ಘೋಷಣೆಯನ್ನು ಮಾಡಿದ್ದರು. ಆದರೆ ಆ ವರ್ಷದಲ್ಲಿ ಬರಗಾಲ ಬಂದಿದ್ದರಿಂದ ಅದು ನಮಗೆ ಸಿಗಲಿಲ್ಲ. ಈ ವರ್ಷ ಕೂಡ ನಮಗೆ ಹಣ ಸಿಗದ ಹಾಗೆ ಮಾಡಬೇಡಿ. ಏಕೆಂದರೆ ಈಗಾಗಲೇ 50 ಲಕ್ಷ ರೂಪಾಯಿಗಳನ್ನು ಕೊಡುತ್ತೇವೆಂದು ಘೋಷಣೆ ಮಾಡಿರುವುದರಿಂದ ಈ ವಿಷಯವನ್ನು ಈಗಾಗಲೇ ಜನರು ಓದಿರುವುದರಿಂದ ಈಗಾಗಲೇ ಆ ಜನರುಗಳಿಂದ ಸಾರ್ವಜನಿಕ ಕೆಲಸಗಳಿಗೆ ಹಣ ಕೊಡಬೇಕು ಎಂಬ ಬೇಡಿಕೆಗಳು ನಮ್ಮ ಕಡೆಗೆ ಬರಲು ಪ್ರಾರಂಭವಾಗಿಬಿಟ್ಟಿದೆ. ಆದುದರಿಂದ ಆ ಜನರಿಗೆ ಹಣವನ್ನು ನಾವು ಕೊಡಲು ನಮಗೆ ಅನುಕೂಲವಾಗುವಂತೆ ತಾವು ದಯವಿಟ್ಟು ಅನುಕೂಲ ಮಾಡಿಕೊಡಬೇಕು.

ಶ್ರೀ ಶಿವರಾಜ್ ಸಜ್ಜನರ್:– ಒಂದು ಕೋಟಿ ರೂ ಕೊಡಬೇಕೆಂದು ಹೇಳಿ.

ಶ್ರೀ ಡಿ.ಆರ್. ಪಾಟೀಲ್:– ಈ ವರ್ಷ 50 ಲಕ್ಷ ರೂಪಾಯಿಗಳನ್ನು ಮೊದಲು ಕೊಡಲಿ. ಮುಂದಿನ ವರ್ಷ ಒಂದು ಕೋಟಿ ರೂಪಾಯಿಗಳನ್ನು ಇಡಲಿ. ಸಜ್ಜನರ್‌ರವರೆ, ನಿಮಗೆ ಇನ್ನೂ ಅನುಭವ ಕಡಿಮೆ ಇದೆ. ಘೋಷಣೆಯಾಗಿದ್ದು ಬಂದರೆ ನಮಗೆ ಬಹಳ ಖುಷಿ ಆಗುತ್ತದೆ. ಏಕೆಂದರೆ ಈಗ ಇಲ್ಲಿ ಇವರು ಒಂದು ಕೋಟಿ ರೂ ಎಂದು ಬಿಟ್ಟು ಆಮೇಲೆ ಐವತ್ತು ಲಕ್ಷಕ್ಕೆ ರೂ.ಗೆ ಬಂದರೆ ನಮಗೆ ನಂತರ ಬಹಳ ತಾಪತ್ರಯವಾಗುತ್ತದೆ. ಆ ರೀತಿಯಾಗುವುದೇನೂ ಬೇಡ. ಗ್ರಾಮೀಣ ಪ್ರದೇಶದೊಳಗೆ ಕೇಂದ್ರ ಸರ್ಕಾರದ ಏನು ಯೋಜನೆಗಳಿವೆ. ಉದ್ಯೋಗ ಭರವಸೆ ಯೋಜನೆಯಡಿಯಲ್ಲಿ ಉದ್ಯೋಗ ಒದಗಿಸುವಂಥ ಕೆಲಸ ಏನು ಆಗುತ್ತದೆ ಅದು ಈ ನೀರು ಹಿಡಿದಿಡುವ ಕೆಲಸಕ್ಕೆ ಉಪಯೋಗವಾಗುತ್ತದೆ ಎನ್ನುವ ರೀತಿ ಇದೆ. ತಾವು ಆರ್.ಡಿ.ಪಿ.ಆರ್. ಡಿಪಾರ್ಟ್‌ಮೆಂಟ್ ಮುಖಾಂತರ ಅದನ್ನು ಮಾಡಿಸುವುದಕ್ಕೆ ವಿಶೇಷವಾಗಿ ಕ್ರಮ ತೆಗೆದುಕೊಳ್ಳಬೇಕು.

ಶ್ರೀ ಸಿ.ಬಿ. ನಾಡಗೌಡ ಅಪ್ಪಾಜಿ:– ಮಾನ್ಯ ಪಾಟೀಲ್‌ರವರೆ, ಒಂದು ನಿಮಿಷ. ತಾವು ಪದೇ ಪದೇ ನೀರು ಹಿಡಿದಿಡುವ ಯೋಜನೆ ಬಗ್ಗೆ ಪ್ರಸ್ತಾಪ ಮಾಡುತ್ತಿರುತ್ತೀರಿ. ಜಿಲ್ಲಾ ಪಂಚಾಯತಿಯಲ್ಲಿ ನಮ್ಮ ಅನುಭವ ಎಂದರೆ ಆ ಅನುಭವ ತಮಗೂ ಆಗಿರಬಹುದೇನೋ, ನನಗೆ ಗೊತ್ತಿಲ್ಲ. ಇರತಕ್ಕಂಥ ಜಲಾನಯನ ಯೋಜನೆ ಮ್ಯಾಕ್ರೊ ಶೆಡ್ ಏರಿಯಾದೊಳಗೆ ಮೈಕ್ರೊ ಶೆಡ್ ಏರಿಯಾಸ್ ಬರಬೇಕು. ಈ ಡಿಡಿಪಿ ಯೋಜನೆ. ಅಲ್ಲಿ ಏನು ಮಾಡುತ್ತಾರೆಂದರೆ ಜಿಲ್ಲಾ ಪಂಚಾಯತಿಯಲ್ಲಿ ಮೆಂಬರ್ಸ್ ಕುಳಿತುಕೊಂಡು ಇಷ್ಟಿಷ್ಟು ಬಂದಿದೆಯಪ್ಪಾ ನಾನೊಂದು ಎರಡು ತೆಗೆದುಕೊಳ್ಳುತ್ತೇನೆ. ನೀನೊಂದು ಎರಡು ತೆಗೆದುಕೊಳ್ಳಪ್ಪಾ ಎಂದು ರೆಸಲ್ಯೂಶನ್ ಮಾಡುತ್ತಾರೆ. And that does not become a part of macroshed area. ತಮ್ಮ ಮನಸ್ಸಿಗೆ ಇಚ್ಛೆ ಬಂದ ಹಾಗೆ ಆ ಹಳ್ಳಿಗೆ ಕೊಟ್ಟೇ ಈ ಸಲ, scattered ಈ ಸಲ ಇಲ್ಲಿ ಕೊಡುವುದು. ಮುಂದೆ ಮತ್ತೊಂದು ಕಡೆ ಕೊಡುವುದು ಆಗುತ್ತಿದೆ. ಇದರ ಬಗ್ಗೆ ಬಹಳಷ್ಟು ನಾನು ಒತ್ತಡವನ್ನು ಹಿಂದೆ ಸರ್ಕಾರದ ಮೇಲೆ ತಂದೆ. ಅದರಿಂದ ಏನೂ ಪ್ರಯೋಜನವಾಗಲಿಲ್ಲ. ಈಗ ಇಲ್ಲಿ ಉಪ

ಮುಖ್ಯಮಂತ್ರಿಗಳು ಇದ್ದಾರೆ. ಆರ್.ಡಿ.ಪಿ.ಆರ್. ಮಂತ್ರಿಗಳು ಈಗ ಇಲ್ಲಿ ಇಲ್ಲ. ತಮ್ಮ ಗೈಡ್‌ಲೈನ್ಸ್ ಏನಿದೆ ಆ ಪ್ರಕಾರ ಜಿಲ್ಲಾ ಪರಿಷತ್ತುಗಳಿಗೆ ನೀವೇನು ನಿರ್ದೇಶನಗಳನ್ನು ಕೊಡುತ್ತೀರಿ ಅದನ್ನು ಬಹಳ ಸ್ಟ್ರಿಕ್ಟ್ ಆಗಿ ಅದನ್ನು ಪರಿಪಾಲನೆ ಮಾಡುವಂತೆ ತಿಳಿಸಬೇಕು. ಅಲ್ಲಿರತಕ್ಕಂಥ ಸಿ.ಇ.ಓ. ರವರಿಗೆ ಆದೇಶವನ್ನು ಮಾಡಿಯಾರು ಸರ್ಕಾರದ ಗೈಡ್‌ಲೈನ್ಸ್‌ನ್ನು ಉಲ್ಲಂಘನೆ ಮಾಡಿ ಜಿಲ್ಲಾ ಪಂಚಾಯತಿಯಲ್ಲಿ ಏನು ರೆಸುಲೂಷನ್‌ಗಳನ್ನು ಮಾಡುತ್ತಾರೋ ಆ ರೆಸುಲೂಷನ್‌ಗೆ ಯಾವ ಮಾನ್ಯತೆಯನ್ನು ನೀಡಬಾರದು ಎಂದು ಹೇಳುವಂಥ strictly let them adhere to the guidelines. ಎಂದು ತಿಳಿಸಬೇಕು. ಈಗ ಎಸ್.ಜಿ.ಆರ್.ವೈ. fund ತೆಗೆದುಕೊಳ್ಳಿ. ಇದರಲ್ಲಿ piece meal ಮಾಡಿಕೊಳ್ಳುತ್ತಾರೆ. ಒಂದೂ ಕನೆಕ್ಟ್‌ವಿಟಿ ಇರುವುದಿಲ್ಲ ಆ ರೋಡ್‌ನಲ್ಲಿ. ಇದರಿಂದಾಗಿ ಇಲ್ಲಿಂದ ಹೋಗತಕ್ಕಂಥ ದುಡ್ಡು ಏನಿದೆ ಅದು ನೇರವಾಗಿ ಜನರಿಗೆ ಮುಟ್ಟಬೇಕಾದರೆ ಅಲ್ಲಿ ಅದನ್ನು ಎಕ್ಸ್‌ಕ್ಯೂಟ್ ಮಾಡತಕ್ಕಂಥವರು ಸರಿಯಾಗಿ ಅದನ್ನು ಇಂಪ್ಲಿಮೆಂಟ್ ಮಾಡಬೇಕು. ಅದಕ್ಕಾಗಿ ಆ ನಿಟ್ಟಿನಲ್ಲಿ ನಿರ್ದೇಶನ ನೀಡುವುದು ಬಹಳ ಅವಶ್ಯ ಇದೆ ಎಂಬುದು ನನ್ನ ಅಭಿಪ್ರಾಯ.

ಶ್ರೀ ಡಿ.ಆರ್. ಪಾಟೀಲ್:- ನಮ್ಮ ಮಾನ್ಯ ನಾಡಗೌಡರು ಹೇಳುವುದರೊಳಗೆ ಅರ್ಥವಿದೆ. ಈ ಟ್ರಾನ್ಸ್‌ಫರೆನ್ಸಿ ಆಕ್ಟ್‌ನೊಳಗೆ ನಾವು 5 ಲಕ್ಷದವರೆಗೆ ಆ ಮಿತಿಯನ್ನು ಎಕ್ಸ್‌ಂಪ್ಟ್ ಏನು ಮಾಡಿದ್ದೇನಲ್ಲಾ ಅದೇ ಈ ಎಲ್ಲಾ ಸಮಸ್ಯೆಗಳಿಗೆ ಮೂಲ. ದಯವಿಟ್ಟು ಮಾನ್ಯ ಸಿದ್ಧರಾಮಯ್ಯನವರೆ, ಪಂಚಾಯತ್ ರಾಜ್ ವ್ಯವಸ್ಥೆಯೊಳಗೆ, ಅದು ಜಿಲ್ಲಾ ಪಂಚಾಯತಿಯೇ ಇರಲಿ, ತಾಲ್ಲೂಕು ಪಂಚಾಯತಿಯೇ ಇರಲಿ, ಗ್ರಾಮ ಪಂಚಾಯತಿಯೇ ಇರಲಿ, ಯಾವುದೇ ಕೆಲಸವನ್ನು ಕಾಂಪಿಟಿಟೀವ್ ಬಿಡ್ಡಿಂಗ್‌ಗೆ ಒಳಪಡಿಸಿಯೇ ಆಗಬೇಕು ಎನ್ನುವ ರೀತಿಯಲ್ಲಿ ತಾವು ಆದೇಶ ಕೊಡಿ. ಇಲ್ಲದಿದ್ದರೆ ಏನಾಗುತ್ತದೆಂದರೆ ವ್ಯವಸ್ಥೆಯಲ್ಲಿ ಸದಸ್ಯರು ಅನುದಾನವನ್ನು ಹಂಚಿಕೊಳ್ಳುತ್ತಾರೆ. ತಮಗೆ ಬೇಕಾದವರಿಗೆ ಆ ಕೆಲಸವನ್ನು ಮಾಡುವುದಕ್ಕೆ ಕೊಡುತ್ತಾರೆ. ಆ ಕೆಲಸ ಹೇಗಾಗುತ್ತದೆಯೋ, ಏನಾಗುತ್ತದೆಯೋ ಎಂಬ ಬಗ್ಗೆ ನಮಗೆ ಎಲ್ಲರಿಗೂ ಸ್ವಲ್ಪ ಈ ಕಹಿ ಅನುಭವವೂ ಇದೆ. ಈ ಕಹಿ ಅನುಭವ ನಿಲ್ಲಬೇಕು ಎಂದರೆ ಟೆಂಡರ್ ಕರೆದೇ ಪ್ರತಿ ಕೆಲಸವೂ ಆಗುವ ಹಾಗೆ ನಾವು ಮಾಡಲಿಲ್ಲವೆಂದರೆ....

ಶ್ರೀ ಗೋವಿಂದ ಎಂ. ಕಾರ್‌ಜೋಳ್:- ಮಾನ್ಯ ಅಧ್ಯಕ್ಷರೆ, ಮಾನ್ಯ ನಾಡಗೌಡರು ಏನು ಹೇಳಿದರೋ ಆ ಅನುಭವ ಪ್ರತಿಯೊಬ್ಬ ಶಾಸಕರಿಗೂ ಆಗಿರುತ್ತದೆ. ಬಹುಶಃ ತಮಗೂ ಈ ಅನುಭವ ಆಗಿರಬೇಕು. ಈಗ ಡಿ.ಆರ್. ಪಾಟೀಲ್‌ರವರು ಮಾತನಾಡುವಾಗ ಟ್ರಾನ್ಸ್‌ಫರೆನ್ಸಿ ಆಕ್ಟ್ ಕೆಳಗಡೆ ಬಿಡ್ಡಿಂಗ್ ಮಾಡೇ ಮಾಡಬೇಕು, ಟೆಂಡರ್ ಕರೆದೇ ಮಾಡಬೇಕು ಎಂದು ಹೇಳಿದರು. ನೀವು ಗ್ರಾಮ ಪಂಚಾಯತಿ ಮಟ್ಟದಲ್ಲಿ ಟೆಂಡರ್ ಕರೆದು ಟೆಂಡರ್ ಹಾಕಿಸಿ ಕೆಲಸ ಮಾಡಿಸುವುದಾದರೆ ಅವರು ಟೆಂಡರ್ ಹಾಕುವುದಕ್ಕೆ ಕೊಡುವುದಿಲ್ಲ. ಈಗೇನು ಹೇಳಿದಂಥ ಸದಸ್ಯರು ಹಂಚಿಕೊಳ್ಳುವಂಥ ಕೆಲಸ ಮಾಡುತ್ತಾರಲ್ಲಾ ಅವರು ಟೆಂಡರ್ ಹಾಕುವುದಕ್ಕೆ

ಕೊಡುವುದಿಲ್ಲ. ಅದಕ್ಕಾಗಿ ನಾನೇನು ಸಲಹೆ ಮಾಡುತ್ತೇನೆಂದರೆ ಈ ಕ್ರಿಯಾ ಯೋಜನೆಯನ್ನೇನು ತಯಾರು ಮಾಡುತ್ತಾರಲ್ಲಾ ಆ ಕ್ರಿಯಾ ಯೋಜನೆಗೆ ಯಾರಾದರೂ ಎಂ.ಎಲ್.ಎ. ಯೋ, ಎಂ.ಪಿ.ಯೋ ಸ್ವಲ್ಪ ವೆರಿಫೈ ಮಾಡುವ ಹಾಗೆ ಮತ್ತು ಅದಕ್ಕೆ ಒಪ್ಪಿಗೆ ಕೊಡುವ ಹಾಗೆ ಅವಕಾಶವನ್ನು ಸರ್ಕಾರ ಮಾಡಿಕೊಟ್ಟರೆ ಅದು ಅನುಕೂಲವಾಗುತ್ತದೆ. ಇಲ್ಲದಿದ್ದರೆ ಏನಾಗುತ್ತದೆಂದರೆ ಆ ಸದಸ್ಯರೊಳಗಡೆಯೇ ಹಂಚಿಕೊಂಡು ಬಿಡುತ್ತಾರೆ. ಈಗ ಹಂಚಿಕೊಳ್ಳುವ ಪದ್ಧತಿ ಈಗಾಗಲೇ ಶುರುವಾಗಿಬಿಟ್ಟಿದೆ. ತಾವು ಬೇಕಾದರೆ ದಯಮಾಡಿ ಒಂದು ಸದನ ಸಮಿತಿಯನ್ನು ಮಾಡಿ ಈಗಾಗಲೇ ಏನು ಇಂಪ್ಲಿಮೆಂಟ್ ಮಾಡಿದಂಥ ಯೋಜನೆಗಳು ಏನಿದೆ ಅದರ ಬಗ್ಗೆ ತಾವು ನಾಲ್ಕಾರು ತಾಲ್ಲೂಕುಗಳಲ್ಲಿ ನೋಡಬಹುದು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಪಾಟೀಲ್‌ರವರೆ, ಒಂದು ವಿಷಯ ಹೇಳುತ್ತೇನೆ. ಒಂದು ಕಡೆ ಟ್ರಾನ್ಸ್‌ಪರೆನ್ಸಿ ಆಕ್ಟ್, ಒಂದು ಕಡೆ ಟೆಂಡರ್, ಇನ್ನೊಂದುಕಡೆ ನಮ್ಮದು ಚೋಟಾ ಸೈನ್ ತೆಗೆದುಕೊಳ್ಳದೆ ಟೆಂಡರ್ ಫಾರಂ ಹೇಗೆ ಇಶ್ಯೂ ಮಾಡಿದಿರಿ ಎಂದು ಕ್ಯಾಬಿನೆಟ್ ಮುಂದೆ ಗಲಾಟೆ ಮಾಡುವುದು. ಟೆಂಡರ್ ಫಾರಂ ಅನ್ನು ಏತಕ್ಕೆ ಕೊಡಲಿಲ್ಲ ಎಂದು ಹೇಳಿದಂತಹ ಅಧಿಕಾರಿಗೆ ತಾವೇ ಮೆಚ್ಚಿಕೊಂಡು ಅಧಿಕಾರಿಗೆ ಷೋಕಾಸ್ ನೋಟೀಸ್ ಕೊಡುವುದು. ಇದೆಲ್ಲಾವನ್ನು ಇಲ್ಲಿ ಕುಳಿತುಕೊಂಡು ನಾವು ನೋಡಬೇಕಲ್ಲ. ಟೆಂಡರ್ ಫಾರಂ ಅನ್ನು ಜಿಲ್ಲಾ ಉಸ್ತುವಾರಿ ಸಚಿವರಿಗೆ ತೋರಿಸದೆ ಕೊಟ್ಟಿದ್ದು ಏಕೆ? ನಮ್ಮ ಸೈನ್ ತೆಗೆದುಕೊಂಡು ನೀವು ಟೆಂಡರ್ ಫಾರಂ ಇಶ್ಯೂ ಮಾಡಬೇಕು ಎಂದು ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿರುವಂತಹ ಈ ರಾಜ್ಯದಲ್ಲಿ ಟ್ರಾನ್ಸ್‌ಪರೆನ್ಸಿ ಆಕ್ಟ್ ಬಗ್ಗೆ ಇಲ್ಲಿ ಕುಳಿತುಕೊಂಡು ಚರ್ಚೆ ಮಾಡಬೇಕೆಂದರೆ, ಇದು ನಮಗೆ ಅರ್ಥವಾಗಲಿಲ್ಲ. ತಾವು ಯಾರಾದರೂ ಎದ್ದು ನಮಗೆ ಬೆಳಕು ಚೆಲ್ಲಬೇಕು. ಈ ವಿಚಾರ ಚರ್ಚೆಗೆ ಕ್ಯಾಬಿನೆಟ್ ಮುಂದೆ ಬಂದಿದೆ ಎನ್ನುವುದನ್ನು ಓದಿದ್ದೇವೆ. ಟೆಂಡರ್ ಫಾರಂ ಅನ್ನು ನಮಗೆ ತೋರಿಸದೆ ಇರುವುದಕ್ಕೆ ಆ ಅಧಿಕಾರಿಗೆ ನೀವು ಶೋಕಾಸ್ ನೋಟೀಸ್ ಕೊಡಬೇಕೆಂದು ಬಳಿಗಾರ್‌ರವರ ಬಗ್ಗೆ ಕ್ಯಾಬಿನೆಟ್‌ನಲ್ಲಿ ಚರ್ಚೆ ಆಗುವುದು. ಆದರೆ ನಿಮ್ಮ ಪರವಾಗಿ ಮಾತನಾಡತಕ್ಕಂಥ ಮಾನ್ಯ ಪಾಟೀಲ್‌ರವರು ಹೇಳುತ್ತಾರೆ. ಟ್ರಾನ್ಸ್‌ಫರೆನ್ಸಿ ಆಕ್ಟ್ ಇದೆ ಎಲ್ಲಾ ಟೆಂಡರ್ ಮೂಲಕ ಆಗುತ್ತದೆ ಎಂದು. ಇದನ್ನು ಡೀಸೆಂಟ್ರಲೈಸ್ ಮಾಡಿಬಿಡಿ. ಏಕೆ ಜಿಲ್ಲಾ ಮಂತ್ರಿಗಳಿಗೆ ತೋರಿಸಬೇಕು? ಎಲ್ಲಾ ಎಂಎಲ್‌ಎ ಗಳಿಗೆ ತೋರಿಸಬೇಕು. ತಾಲ್ಲೂಕು ಪಂಚಾಯತ್‌ಗಳಿಗೆ, ಸೈನ್ ಹಾಕಿದವರಿಗೆ ಕೊಡಬೇಕು, ಜಿಲ್ಲಾ ಪಂಚಾಯತ್ ಸದಸ್ಯರಿಗೆ, ಸೈನ್ ಹಾಕಿದವರಿಗೆ ಟೆಂಡರ್ ಫಾರಂ ಕೊಡಬೇಕು ಎಂದು ಸರ್ಕಾರದವರು ನಿಯಮವನ್ನು ಮಾಡಿಬಿಡಿ. ಆಗಲಾದರೂ ಯಾರಾದರೂ ಕೆಲಸ ಕಾರ್ಯ ಮಾಡುವುದಕ್ಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಯಾವುದೋ ಒಂದು ಘಟನೆಗೆ ನಾವು ಅಷ್ಟು ನಿರಾಶೆಗೊಳ್ಳುವುದು ಬೇಡ, ಮಾನ್ಯ ಮಾಧುಸ್ವಾಮಿಯವರೇ ಪರಿಸ್ಥಿತಿ ಸುಧಾರಣೆ

ಆಗಬೇಕೆಂದರೆ ಇದೆಲ್ಲಾ ಆಗುತ್ತವೆ. ಅವುಗಳನ್ನು ಮರೆತು ಬಿಟ್ಟು, ಈ ರೀತಿ ಮುಂದೆ ಆಗದ ಹಾಗೆ ವ್ಯವಸ್ಥೆ ಮಾಡಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ:– ತಾವು ಟ್ರಾನ್ಸ್‌ಪರೆನ್ಸಿ ಆಕ್ಟ್ ವಿಚಾರ ಇಲ್ಲಿ ಮಾತನಾಡಿದ್ದಕ್ಕೆ ಮಾತ್ರ ನಾವು ಕೇಳುತ್ತಿದ್ದೇವೆ. ಟೆಂಡರ್ ಫಾರಂ ಅನ್ನು ಜಿಲ್ಲಾ ಉಸ್ತುವಾರಿ ಸಚಿವರ ಸೈನ್ ಇಲ್ಲದೆ ಕೊಟ್ಟಿದ್ದು ತಪ್ಪು ಎಂದು ಕ್ಯಾಬಿನೆಟ್‌ನಲ್ಲಿ ಚರ್ಚೆಯಾಗಿರುವಂತಹ ಈ ರಾಜ್ಯದಲ್ಲಿ How can talk about Transparency Act. You must withdraw either this or that. ಎರಡರಲ್ಲಿ ಒಂದನ್ನು ನೀವು ವಾಪಸ್ಸು ತೆಗೆದುಕೊಳ್ಳಬೇಕು. ಇಲ್ಲವೆಂದರೆ ಟ್ರಾನ್ಸ್‌ಪರೆನ್ಸಿ ಆಕ್ಟ್ ಇಟ್ಟುಕೊಂಡು ನಾವು ಟೆಂಡರ್ ಕರೆಯುತ್ತೇವೆ. ಕೆಲಸ ಮಾಡುತ್ತೇವೆ ಎಂದು ಹೇಳಬೇಕು. ಇಲ್ಲವೆಂದರೆ ಮಂತ್ರಿಗಳು ಹೇಳಿದ್ದು ಅಷ್ಟೇ ಕೇಳಿಕೊಂಡು ಕೆಲಸ ಮಾಡುತ್ತೇವೆಂದು ಹೇಳಬೇಕು.

ಶ್ರೀ ಸಿದ್ದರಾಮಯ್ಯ:– ಟ್ರಾನ್ಸ್‌ಪರೆನ್ಸಿ ಆಕ್ಟ್ ಪ್ರಕಾರವೇ ನಡೆಯುವುದು.

ಶ್ರೀ ಜೆ.ಸಿ. ಮಾಧುಸ್ವಾಮಿ:– ಆದರೆ ನಾವು ಪೇಪರ್‌ನಲ್ಲಿ ಓದಿದ್ದೇವಲ್ಲಾ. ಜಿಲ್ಲಾ ಉಸ್ತುವಾರಿ ಸಚಿವರಿಗೆ ಟೆಂಡರ್ ಫಾರಂ ತೋರಿಸದೆ.....

ಶ್ರೀ ಪಿ.ಜಿ.ಆರ್. ಸಿಂಧ್ಯ:– ಮಾನ್ಯ ಮಾಧುಸ್ವಾಮಿಯವರೆ, ಪತ್ರಿಕೆಗಳಲ್ಲಿ ಬಂದಿದ್ದೆಲ್ಲಾ ಸುಳ್ಳು ಎಂದು ನಾವು ಹೇಳುವುದಕ್ಕೆ ಹೋಗುವುದಿಲ್ಲ. ಆದರೆ ಜಿಲ್ಲಾ ಉಸ್ತುವಾರಿ ಮಂತ್ರಿಗಳು ನನಗೆ ಕೇಳದೆ ಟೆಂಡರ್ ಕರೆದರು. ನನಗೆ ಟೆಂಡರ್ ಫಾರಂ ತೋರಿಸಲಿಲ್ಲ. ಏಕೆ ನೀವು ಕೊಟ್ಟಿರಿ ಎಂದು ನೀವು ಹೇಳಿದಂತಹ ಸುದ್ದಿ ಏನಿದೆ, ಅದು ಸತ್ಯಕ್ಕೆ ದೂರವಾಗಿರತಕ್ಕಂಥ ವಿಚಾರ. ಇದು ಮೊದಲನೆಯದು. ಇನ್ನು ಎರಡನೆಯದಾಗಿ, ಯಾವ ಜಿಲ್ಲಾ ಉಸ್ತುವಾರಿ ಮಂತ್ರಿಗಳೂ ಕೂಡ ನಾವು ಹೇಳಿದ ಹಾಗೆ ಟೆಂಡರ್ ಕರೆಯಬೇಕು ಎಂದು ಹೇಳಿಲ್ಲ. ನಿಮಗೆ ಪ್ರಾಮಾಣಿಕವಾಗಿ ಹೇಳುತ್ತಿದ್ದೇನೆ. ನಮ್ಮ ಜಿಲ್ಲೆಗಳಲ್ಲಿ ಎಲ್ಲಿ ಟೆಂಡರ್ ಕರೆಯುತ್ತಾರೆ. ಯಾರು ಕೆಲಸ ತೆಗೆದುಕೊಳ್ಳುತ್ತಾರೆ. ಏನು ಮಾಡುತ್ತಾರೆ ಎನ್ನುವುದರ ಮುಖನೂ ಸಹ ಗೊತ್ತಿಲ್ಲ ನಾವು ನೋಡಿಲ್ಲ. ಅದರ ಬಗ್ಗೆ ನೀವೇನಾದರೂ ಇದ್ದರೆ ಹೇಳಬೇಕು. ಈ ರೀತಿಯಾಗಿದೆ ಎಂದು, ಇನ್ನು ಇದರ ಬಗ್ಗೆ ಸಚಿವ ಸಂಪುಟದ ಸಭೆಯಲ್ಲಿ ಚರ್ಚೆಯಾಗಲಿಲ್ಲ. ಸಚಿವ ಸಂಪುಟದ ಅಜೆಂಡಾವನ್ನು ಬೇಕಾದರೆ ತಮಗೆ ತಂದು ನಾನು ತೋರಿಸುತ್ತೇನೆ. ಅದು ಖಾಸಗಿ, ಆದರೂ ಕೂಡ ಅದರ ಅಜೆಂಡಾವನ್ನು ಅಲ್ಲಿ ಏನಾಯಿತು ಎನ್ನುವುದನ್ನು ತಂದು ತೋರಿಸುತ್ತೇನೆ. ಸುಮ್ಮನೆ ಇದರ ಬಗ್ಗೆ ಚರ್ಚೆಯಾಯಿತು ಎಂದು ಹೇಳುವುದಕ್ಕೆ ಹೋಗಬೇಡಿ. ಆದರೆ, ಬಳಿಗಾರ್ ಅವರು ಕೊಟ್ಟಿರತಕ್ಕಂಥ ಹೇಳಿಕೆಗಳ ಬಗ್ಗೆ ಚರ್ಚೆಯಾಗಿರುವುದು ನಿಜ. ಬಳಿಗಾರ್‌ರವರು, ಅದಾದನಂತರ ಇಲ್ಲ ನಾನು ಆ ರೀತಿ ಹೇಳಿಲ್ಲ. ಹೇಳಿದ್ದನ್ನು ತಿರುಚಿ ಬರೆದಿದ್ದಾರೆ ಎಂದು ಹೇಳಿದ ಮೇಲೆ ಅದು ಅಲ್ಲಿಗೆ ಸಮಾಪ್ತಿಯಾಯಿತು. ಆದುದರಿಂದ ನಮ್ಮ ಸರ್ಕಾರಕ್ಕೆ ಈಗಿರತಕ್ಕಂಥ ಟ್ರಾನ್ಸ್‌ಫರೆನ್ಸಿ ಆಕ್ಟ್ ಏನಿದೆ ಅದರಲ್ಲಿ ನಂಬಿಕೆ ಇದೆ. ಅದರ ಪ್ರಕಾರವೇ ನಾವು ಟೆಂಡರ್ ಫಾರಂ ಅನ್ನು ಕೊಡುವುದು. ಟೆಂಡರ್ ಅನ್ನು ಯಾರು ಬೇಕಾದರೂ ಕೂಡ ಹಾಕಬಹುದು. ನಿಮ್ಮ

ಗಮನಕ್ಕೆ ಇಂತಹ ವಿಚಾರದಲ್ಲಿ ಖಚಿತವಾದ ಮಾಹಿತಿ ಏನಾದರೂ ಬಂದರೆ ನೀವು ದಯವಿಟ್ಟು ಹೇಳಿ, ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಭರವಸೆಯನ್ನು ನಾವು ಕೊಡುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಟೈಂ ತೆಗೆದುಕೊಳ್ಳುತ್ತಿದ್ದೇನೆ. ಅದಕ್ಕೆ ತಾವು ತಪ್ಪು ತಿಳಿದುಕೊಳ್ಳಬಾರದು. ಇದರ ಬಗ್ಗೆ ಸ್ಪಷ್ಟವಾದ ವರದಿ ಇದೆ. ಟೆಂಡರ್ ಫಾರಂ ಮಂಡ್ಯ ಜಿಲ್ಲೆಯದು ಲ್ಯಾಂಡ್ ಆರ್ಮಿಯವರಿಗೆ ಇಶ್ಯೂ ಮಾಡಲಿಲ್ಲ. ಏಕೆ ಇಶ್ಯೂ ಮಾಡಲಿಲ್ಲ. ಅಂದರೆ, ಅದೇ ಇಲಾಖೆಯಲ್ಲಿ ಕೆಲಸ ಮಾಡುತ್ತಿರುವಂತಹ ಕಾರ್ಯದರ್ಶಿಗಳಾದ ಬಳಿಗಾರ್‌ರವರು, ಸೂಚನೆ ಕೊಟ್ಟಿದ್ದಕ್ಕೆ ಎಕ್ಸಿಕ್ಯೂಟೀವ್ ಎಂಜಿನಿಯರಿಗೆ ಬಳಿಗಾರ್‌ರವರು ಮಾತನಾಡಿದ್ದು ಏಕೆ? ನಮ್ಮ ಸೈನಲ್ಲೇ ಟೆಂಡರ್ ಫಾರಂ ತೆಗೆದುಕೊಂಡು ಅದನ್ನೆ ಅಕ್ಸೆಪ್ಟ್ ಮಾಡಿಸಬೇಕೆಂದು ಹೇಳಿ ಮುಕ್ಕಾಲು ಘಂಟೆ entire cabinet meeting was stalled. The Chief Minister was pressurised. ನಂತರ ಚೀಫ್ ಮಿನಿಸ್ಟರ್ ಅಕ್ಸೆಪ್ಟ್ ಮಾಡಿಕೊಂಡು, ಆ ಅಧಿಕಾರಿಗೆ ನೋಟೀಸ್ ಕೊಡುತ್ತೇನೆ. ಎಂದ ಮೇಲೆ cabinet meeting has proceeded. ಎಂದು ಸ್ಪಷ್ಟವಾದ ವರದಿ ಇದೆ. ನಾನು ಕ್ಯಾಬಿನೇಟ್ ನೋಡುವುದಕ್ಕೆ ಬರಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ನೀವು ಆ ಪತ್ರಿಕಾ ವರದಿಯನ್ನು ನನಗೆ ಕೊಡಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಹೌದು ನಾನು ಹೇಳುತ್ತಿರುವುದು ಪತ್ರಿಕಾ ವರದಿಯನ್ನು ನೋಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ:– ಸಚಿವ ಸಂಪುಟದಲ್ಲಿ ಇರುವ ನನ್ನ ಮೇಲೆ ನೀವು ನಂಬಿಕೆ ಇಡಬೇಕು. ಪತ್ರಿಕಾ ವರದಿ ನಾನು ಹೇಳುವುದು. ಇವೆರಡರಲ್ಲಿ ಯಾವುದು ಸೆಲೆಕ್ಟ್ ಮಾಡಿಕೊಳ್ಳುತ್ತೀರಾ ಅದು ನಿಮಗೆ ಬಿಟ್ಟಿದ್ದು.

ಶ್ರೀ ಜೆ.ಸಿ. ಮಾಧುಸ್ವಾಮಿ:– ನಾನು ನನ್ನ ಮಾತನ್ನು ಮುಗಿಸಿಬಿಡುತ್ತೇನೆ. ನಾನು ಈ ವರದಿ ಆಧಾರದ ಮೇಲೆ ಮಾತನಾಡುತ್ತೇನೆ. Because we have no access to your cabinet proceedings. ನಾವು ಕೇಳುವುದಕ್ಕೆ ನಮಗೆ ಅಕ್ಸೆಸ್ ಇಲ್ಲ. ನಮಗೆ ಖಚಿತವಾದ ಒಂದು ಮಾಹಿತಿ ಬೇಕು. ನೀವು ಇವತ್ತು ಟೆಂಡರ್ ಫಾರಂಗಳನ್ನು ಮಿನಿಸ್ಟರ್‌ಗಳನ್ನು ಕೇಳಿ ಕೊಡಿ ಎನ್ನುವಂತಹ ಸ್ಥಿತಿಯನ್ನು ನಿರ್ಮಾಣ ಮಾಡಿದ್ದರೆ, ದಯಮಾಡಿ ಅದರ ಬಗ್ಗೆ ಸಾರಾಸಗಟಾಗಿ ಹೇಳಿ. ಇಲ್ಲಿ ಯಾವ ಶಾಸನ ಇಲ್ಲ. ಇಲ್ಲಿ ಏನು ಬೇಕೋ ಅದು ನಡೆಯುವುದು. ಇಲ್ಲಿರುವಂತಹ ಮಂತ್ರಿಗಳು ಅದರಲ್ಲೂ ಜಿಲ್ಲಾ ಉಸ್ತುವಾರಿ ಮಂತ್ರಿಗಳು ಏನು ಬೇಕಾದರೂ ಮಾಡಿಕೊಂಡು ಹೋಗಬಹುದು ಎಂದು ಒಂದು ನಿರ್ಧಾರ ತೆಗೆದುಕೊಂಡರೆ.......

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಯಾವ ಜಿಲ್ಲಾ ಉಸ್ತುವಾರಿ ಮಂತ್ರಿಗಳಿಗೂ ಕೂಡ ವಿಶೇಷವಾದ, ಈ ತರಹದ ಅಧಿಕಾರವನ್ನು ನಾವು ಕೊಟ್ಟಿಲ್ಲ. ಜಿಲ್ಲಾ ಉಸ್ತುವಾರಿ ಮಂತ್ರಿಗಳು ಏನಿದ್ದರೂ ಮೂರು ತಿಂಗಳಿಗೆ ಒಂದು ಬಾರಿ ಕೆಡಿಪಿ ಮೀಟಿಂಗ್ ಅನ್ನು ಮಾಡುತ್ತಾರೆ. ಮತ್ತು ಸರ್ಕಾರದ ಅಭಿವೃದ್ಧಿ ಕೆಲಸಗಳ ಕಡೆ ಅವರು ವೀಕ್ಷಣೆ ಮಾಡುತ್ತಾರೆ ಅನ್ನುವುದನ್ನು ಬಿಟ್ಟರೆ ಬಾಕಿ ಏನು ಕೆಲಸ ಇದೆ ಜಿಲ್ಲಾ ಉಸ್ತುವಾರಿ ಮಂತ್ರಿಗಳದ್ದು. ಯಾವ ಸರ್ಕಾರಿ ಆಜ್ಞೆ ಇದೆ ದಯವಿಟ್ಟು

ತಿಳಿಸಿ. ಆ ವಿಶೇಷವಾದ ಅಧಿಕಾರ ಯಾವ ಜಿಲ್ಲಾ ಮಂತ್ರಿಗಳಿಗೂ ಇಲ್ಲ. ಸರ್ಕಾರ ಮಾನ್ಯ ಮುಖ್ಯಮಂತ್ರಿಗಳಾದಿಯಾಗಿ ನಮಗೆ ಟ್ರಾನ್ಸ್‌ಪರೆನ್ಸಿ ಆಕ್ಟ್‌ನಲ್ಲಿ ನಂಬಿಕೆ ಇದೆ. ಆ ರೀತಿಯಾಗಿ ನಾವು ಟೆಂಡರ್ ಫಾರಂ ಅನ್ನು ಕೆಲವರಿಗೇ ಕೊಟ್ಟು ಅವರಿಗೇ ಕೊಡತಕ್ಕ ಕೆಲಸವನ್ನು ಈ ಸರ್ಕಾರ ಮಾಡುವುದಿಲ್ಲ. ಎನ್ನುವಂತಹ ಮಾತನ್ನು ಹೇಳಿದೆ. ತಾವೇನು ಹೇಳುತ್ತಿದ್ದೀರಿ. ನಾನು ನನ್ನ ಸ್ವಂತ ಅನುಭವವನ್ನು ಹೇಳುತ್ತಿದ್ದೇನೆ. ಕೇಳಿ, ಈಗ ತಾವು ಲ್ಯಾಂಡ್ ಆರ್ಮಿ ಬಗ್ಗೆ ಹೇಳುತ್ತಿದ್ದೀರಿ. ಲ್ಯಾಂಡ್ ಆರ್ಮಿ ಬಗ್ಗೆ ಎರಡ್ಮೂರು ಅಭಿಪ್ರಾಯಗಳು ಇರುವುದು ನಿಜ. ಲ್ಯಾಂಡ್ ಆರ್ಮಿ ಬಗ್ಗೆ ನಾವೇ ಆ ಕಡೆ ಇದ್ದಾಗ ಎಷ್ಟು ಚೆನ್ನಾಗಿ ಕೆಲಸ ಮಾಡುತ್ತಿದೆ ಏನು ಮಾಡುತ್ತಿದ್ದೆ ಎನ್ನುವುದನ್ನು ನಾವು ನೋಡಿದ್ದೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಅಧ್ಯಕ್ಷರೆ, ಮಾನ್ಯ ಸಿಂಧ್ಯಾರವರೆ, ಒಂದು ನಿಮಿಷ ಈಲ್ಡ್ ಆಗಿ. ನಾನು ಲ್ಯಾಂಡ್ ಆರ್ಮಿ ಬಗ್ಗೆ ಮಾತನಾಡಿ. ಅವರನ್ನು ಡಿಫೆಂಡ್ ಮಾಡುವುದಕ್ಕೆ ಇಲ್ಲಿ ನಿಂತಿಲ್ಲ. ಟೆಂಡರ್ ಫಾರಂ ಕೊಡುವ ವಿಚಾರದಲ್ಲಿ, ಜಿಲ್ಲಾ ಉಸ್ತುವಾರಿ ಸಚಿವರ ಸಿಗ್ನೇಚರ್ ಇಲ್ಲದೆ ಟೆಂಡರ್ ಫಾರಂ ಕೊಡಕೂಡದು ಎಂದು ಚರ್ಚೆಯಾಯಿತು. ಕ್ಯಾಬಿನೇಟ್‌ನಲ್ಲಿ ಎಂದು ವರದಿ ಬಂದಿರುವ ಆಧಾರದ ಮೇಲೆ ಹೇಳಿದೆ. ನನಗೇನು ಬೇರೆ ಯಾವುದೇ ಮಾಹಿತಿ ಇಲ್ಲ. ತಾವು ಈವರೆಗೂ ಇದರ ಬಗ್ಗೆ ಡಿನೈ ಮಾಡಿಲ್ಲ. ಸರ್ಕಾರದ ವತಿಯೆಂದು ಯಾವುದೇ ಪ್ರೆಸ್ ನೋಟ್ ಆಗಲಿ, ಯಾವುದರಲ್ಲಿ ಆಗಲಿ ಯಾರೂ ಡಿನೈ ಮಾಡಿಲ್ಲ. ಇಲ್ಲ ಹಾಗೆ ನಾವು ಹೇಳಿಲ್ಲ: ಕ್ಯಾಬಿನೆಟ್‌ನಲ್ಲಿ ಆ ರೀತಿ ಚರ್ಚೆಯಾಗಿಲ್ಲ. ಇದು ಸಂಬಂಧ ಇಲ್ಲ ಎಂದು ತಾವೆಲ್ಲೂ ಹೇಳಿಲ್ಲ. ತಾವು ಹೇಳಿದ್ದರೆ ಅದನ್ನು ನಾವು ಏಕೆ ಕೇಳುತ್ತಿದ್ದೆವು.

ಶ್ರೀ ಪಿ.ಜಿ.ಆರ್. ಸಿಂಧ್ಯಾ:– ಪತ್ರಿಕೆಗಳಲ್ಲಿ ನಾವು ಇಲ್ಲವೆಂದು ಹೇಳಿರುವುದು ಸಣ್ಣದಾಗಿ 6ನೇ ಪುಟದಲ್ಲೋ, 7ನೇ ಪುಟದಲ್ಲೋ ಬಂದಿರುತ್ತದೆ. ಅದನ್ನು ನೀವು ಗಮನಿಸಿರುವುದಿಲ್ಲ ಅಷ್ಟೆ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಇದು ಸೀರಿಯಸ್ ಮ್ಯಾಟರ್ ನೀವು ರೈಸ್ ಮಾಡಿದ್ದೀರಿ. ನೀವು ಡೀಸೆಂಟ್ರಲೈಸೇಷನ್ ಪರವಾಗಿ ಇರಬೇಕು. ಇಲ್ಲದೆ ಇದ್ದರೆ ಸೆಂಟ್ರಲೈನೇಷನ್ ಪರವಾಗಿ ಇರಬೇಕು. At every interval, you talk of decentralisation. ಮನುಷ್ಯನಿಗೆ ಒಂದು ಕಮಿಟ್‌ಮೆಂಟ್ ಒಂದು ಸಿದ್ಧಾಂತ ಇರಬೇಕು.

ಶ್ರೀ ಡಿ.ಆರ್. ಪಾಟೀಲ್:– ನಾವು ಡೀಸೆಂಟ್ರಲೈಸೇಷನ್ ಪರವಾಗಿಯೇ ಇರುವುದು.

SRI SIDDARAMAIAH:- Frequently Mr. Madhuswamy I do not know why he is going on the wrong side.

ಶ್ರೀ ಜೆ.ಸಿ. ಮಾಧುಸ್ವಾಮಿ:– ಮಾನ್ಯ ಸಿಂಧ್ಯಾರವರು ಸರ್ಕಾರದ ಪ್ರತಿನಿಧಿಗಳು, ನೀವು ಹೇಳಿದ್ದೀರಿ. ನೀವು ಹೇಳುವಂತಹ ಮಾತನ್ನು ನಂಬುತ್ತೇವೆ. ದಯಮಾಡಿ ಮಂತ್ರಿಗಳು ಹೇಳಿರುವುದಿಲ್ಲ. ಮೂರು ತಿಂಗಳಿಗೆ ಒಂದು ಬಾರಿ ಕೆಡಿಪಿ ಮೀಟಿಂಗ್ ಹಾಗೂ ರಾಷ್ಟ್ರಧ್ವಜ

ಹಾರಿಸುವುದು ಎರಡೇ ಅವರ ಕೆಲಸ ಎಂದು. We are very happy. ಅಷ್ಟಕ್ಕೆ ಕನ್‌ಫೈನ್ ಮಾಡಿ ಸರ್.

ಶ್ರೀ ಡಿ.ಆರ್. ಪಾಟೀಲ್:– ಮಾನ್ಯ ಅಧ್ಯಕ್ಷರೆ, ತಾವು ಕೊಡುವಂತಹ ಹಣ, ಅದು ಪಂಚಾಯತ್ ರಾಜ್ ವ್ಯವಸ್ಥೆಯೊಳಗೆ ಇರಲಿ, ನೀರಾವರಿಯೊಳಗೆ ಇರಲಿ, ಪಿಡಬ್ಲ್ಯೂಡಿ ಒಳಗೆ ಇರಲಿ, ಮತ್ತು ಯಾವುದೇ ರಂಗದಲ್ಲಿ ಇರಲಿ, ಅದು ಸದ್ವಿನಿಯೋಗ ಆಗಬೇಕೆಂದರೆ ಎರಡು ಕೆಲಸವನ್ನು ತಾವು ದಯವಿಟ್ಟು ಮಾಡಿ. ಒಂದು ಟ್ರಾನ್ಸ್‌ಪರೆನ್ಸಿ ಆಕ್ಟ್‌ನಲ್ಲಿ ಯಾವುದೇ ಎಗ್ಸ್‌ಮ್‌ಷನ್ ಕೊಡಬೇಡಿ. Every work must be exposed to competitive bidding. ಆಮೇಲೆ ಇ–ಟೆಂಡರಿಂಗ್‌ಗೆ ತಂದು ಬಿಡಿ. ಮತ್ತೆ ಅವರು ಪ್ರಿಡೆಂಟ್ ಮಾಡಿದರು. ಇವರು ಪ್ರಿವೆಂಟ್ ಮಾಡಿದರು. ಅವರ ಪರ್ಮಿಷನ್ ಬೇಕು. ಇವರ ಪರ್ಮಿಷನ್ ಬೇಕು ಎನ್ನುವ ಪ್ರಶ್ನೆನೇ ಬೇಡ. ನಾವು ಮಾಡುವ ಎಲ್ಲಾ ಕೆಲಸಗಳು ಟ್ರಾನ್ಸ್‌ಪರೆಂಟ್ ಇರುವ ಹಾಗೆ ಒಂದು ವ್ಯವಸ್ಥೆಯನ್ನು ರೂಪಿಸುವುದಕ್ಕೆ ಸಾಧ್ಯವಿದೆ. ಆಗ ತಾವು ಇಷ್ಟು ಕಷ್ಟಪಟ್ಟು ಹಣ ಶೇಖರಣೆ ಮಾಡಿ ಬೇರೆ ಬೇರೆ ಇಲಾಖೆಗೆ ಏನು ಹಣ ಕೊಡುತ್ತೀರಿ ಅದರ ಸದ್ವಿನಿಯೋಗವಾಗುತ್ತದೆ. ಆಗ ಅದು ಸರಿಯಾಗಿ ಜನರಿಗೆ ಮುಟ್ಟಬಹುದು. ಒಂದು ಟ್ರಾನ್ಸ್‌ಪರೆಂಟ್ ವ್ಯವಸ್ಥೆ ಮಾಡುವುದಕ್ಕೆ ಪ್ರಾಮಾಣಿಕ ಪ್ರಯತ್ನ ತಮ್ಮಿಂದ ಆಗಬೇಕು. ನೀವು ಪ್ರಾಮಾಣಿಕರಿಸಿದ್ದೀರಿ. ನಾವೆಲ್ಲರೂ ನಿಮ್ಮ ಮೇಲೆ ಭರವಸೆ ಇಡುವುದಕ್ಕೆ ಸಾಧ್ಯವಾಗುತ್ತದೆ. ನೀವೇ ನಿಮ್ಮ ಆಡಳಿತದಲ್ಲಿ ಮಾಡಲಿಲ್ಲವೆಂದರೆ, ಸೋರುವಿಕೆಯನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ–ವೆನ್ನುವುದನ್ನು ತಾವೆಲ್ಲರೂ ಕೂಡ ಗಮನದಲ್ಲಿಟ್ಟುಕೊಳ್ಳಬೇಕು. ದಯವಿಟ್ಟು ಅದನ್ನು ಜಾರಿಗೆ ತನ್ನಿ. ನೀವು ಹಾಗೆ ಒಂದು ಅನಾಲಿಸಿಸ್ ಮಾಡಿ. 1994 ರಲ್ಲಿ ನಿಮ್ಮ ಸರ್ಕಾರ ಏನು ಬಂದಿತ್ತು. ಆಗ ನೀವು ತುಂಡು ಗುತ್ತಿಗೆ ಜಾರಿಗೆ ತಂದಿರಿ. ಅಲ್ಲಿಯವರೆಗೂ ಟೆಂಡರಿಂಗ್ ಇತ್ತು. ನೀವು ಎಸ್‌ಆರ್ ಅನಾಲಿಸಿಸ್ ಮಾಡಿಸಿ, ಎಷ್ಟು ಪಟ್ಟು ಹೆಚ್ಚಾಗಿದೆ? ಏಕೆ ಹೆಚ್ಚಾಗಿದೆ? ನೀವು ಬೇಕಾದ ಕೆಲಸ ಮಾಡಿಸಿ, ಎಷ್ಟಿಮೇಟ್‌ಗಿಂತ ಕಡಿಮೆ ರೊಕ್ಕದೊಳಗೆ ಒಳ್ಳೆಯ ಗುಣಮಟ್ಟದ ಕೆಲಸ ಆಗುವುದಕ್ಕೆ ಸಾಧ್ಯವಿದೆ. ಆದರೆ ತುಂಡು ಗುತ್ತಿಗೆ ನಾವು ತಂದಿರುವುದರಿಂದ ಅದು ಬಹಳಷ್ಟು ಜನರಿಗೆ ಅನುಕೂಲವಾಗುವಂತಹ ಒಂದು ವ್ಯವಸ್ಥೆಯನ್ನು ರೂಪಿಸಿದ್ದಕ್ಕೆ ಎಸ್‌ಆರ್ ರೇಟ್ ಸಹ ಇನ್‌ಫ್ಲೇಟ್ ಆಗಿದೆ. ಆದುದರಿಂದ ಕಾಂಪಿಟೇಟಿವ್ ಬೆಡ್ಡಿಂಗ್‌ಗೆ ದಯವಿಟ್ಟು ವಾಪಸ್ಸು ತೆಗೆದುಕೊಂಡು ಬನ್ನಿ ಮತ್ತು ಬಹಳ ಕಡೆ ಮಾನ್ಯ ಮಾಧುಸ್ವಾಮಿಯವರು ಹೇಳಿದ ಹಾಗೆ ಈಗ ಕೆಲಸಗಳಿಗೆ ಎಕ್ವಿಪ್‌ಮೆಂಟ್ಸ್ ಉಪಯೋಗ ಮಾಡುತ್ತಾರೆ. ಮ್ಯಾನ್ಯುಯಲ್ ಮಾಡುವುದಿಲ್ಲ. ಮಾಡಲಿ ಎಕ್ವಿಪ್‌ಮೆಂಟ್ ಉಪಯೋಗ ಮಾಡಿದರೂ ಸಹ ನಾವು ಬೇಡ ಎಂದು ಹೇಳುವುದಿಲ್ಲ. ಅದನ್ನು ನಿಲ್ಲಿಸುವುದಕ್ಕಾಗುವುದಿಲ್ಲ. ಆದರೆ ಅಸೆಟ್ ಕ್ರಿಯೇಟ್ ಆಗುತ್ತದೆ. ನೀವು ಕಾಂಪಿಟೇಟಿವ್ ಬೆಡ್ಡಿಂಗ್ ಬಿಟ್ಟರೆ, ಅದರ ಅರ್ಧ ದುಡ್ಡಿನೊಳಗೆ ಅಸೆಟ್ ಕ್ರಿಯೇಟ್ ಆಗುತ್ತದೆ. ನಿಮ್ಮ ಎಸ್‌ಆರ್ ಪ್ರಕಾರ ಒಂದು ರೂಪಾಯಿ ಕೊಟ್ಟಿದ್ದಲ್ಲಿ ಎರಡು ರೂಪಾಯಿಯ ಕೆಲಸ ಆಗುತ್ತದೆ. ಈ ರೀತಿ ಕೆಲಸ ಆಗುವ ಹಾಗೆ ತಾವು

ದಯವಿಟ್ಟು ಮಾಡಬೇಕು. ಮೊನ್ನೆ ಮಾನ್ಯ ಸಿಂಧ್ಯಾರವರು ಒಂದು ಭರವಸೆಯನ್ನು ಈ ಸದನದಲ್ಲಿ ಕೊಟ್ಟರು. ಸರ್ಕಾರ ಖರೀದಿ ಮಾಡುವಂತಹ ಎಲ್ಲಾ ಬಟ್ಟೆಯನ್ನು ಕೆಹೆಚ್‌ಡಿಸಿ ಮತ್ತು ಖಾದಿ ಸೆಕ್ಟಾರ್ ಮುಖಾಂತರ ಖರೀದಿ ಮಾಡುತ್ತೇವೆ ಎನ್ನುವಂತಹ ಭರವಸೆಯನ್ನು ಮಾನ್ಯ ಸಿಂಧ್ಯಾರವರು ಕೊಟ್ಟರು. ಅದು ಕೂಡಲೇ ಜಾರಿಗೆ ಬರಬೇಕು. ತಾವೇನೋ ಭರವಸೆ ಕೊಟ್ಟಿರಿ. ಆದರೆ ಅದು ಕ್ಯಾಬಿನೇಟ್‌ನಲ್ಲಿ ಪ್ರಸ್ತಾಪ ಬರುವುದಕ್ಕೆ ಬಹಳ ದಿವಸವಾಗುವುದು. ಆದುದರಿಂದ ಈ ಶೈಕ್ಷಣಿಕ ವರ್ಷದೊಳಗೆ ಮೊದಲೆ ಏನೇನು ಮಾಡಬೇಕಾಗಿತ್ತು. ಅದನ್ನೆಲ್ಲಾ ಕೈಬಿಡುವುದು. ಆ ರೀತಿ ದಯವಿಟ್ಟು ಆಗದ ಹಾಗೆ ಕೂಡಲೇ ಮಾನ್ಯ ಸಿಂಧ್ಯಾರವರೇ ತಾವು ಮನಸ್ಸು ಮಾಡಿದರೆ ಇದನ್ನು ಮಾಡುವುದಕ್ಕೆ ಸಾಧ್ಯವಿದೆ. ನಾಳೆ ಗುರುವಾರದ ಮೀಟಿಂಗ್‌ನಲ್ಲಿ ಒಂದು ಜನರಲ್ ರೆಸಲೂಷನ್ ಮಾಡಿ. ನಾವೆಲ್ಲರೂ ನಿರುದ್ಯೋಗ ದೊಡ್ಡ ಸಮಸ್ಯೆಯೆಂಬುದನ್ನು ಒಪ್ಪಿಕೊಳ್ಳುತ್ತೇವೆ. ನೇಕಾರರಿಗೆ ನಿರಂತರವಾಗಿ ಉದ್ಯೋಗವನ್ನು ಕೊಡಬೇಕೆಂಬುದನ್ನು ನಾವೆಲ್ಲರೂ ಒಪ್ಪಿಕೊಳ್ಳುತ್ತೇವೆ. ಆದರೆ ಆ ಉದ್ಯೋಗ ಕೊಡುವಂಥದ್ದರ ಬಗ್ಗೆ ಒಂದು ವ್ಯವಸ್ಥೆಯನ್ನು ರೂಪಿಸುವುದರಲ್ಲಿ ಏಕೋ ಮನಸ್ಸು ಮಾಡುತ್ತಾ ಇಲ್ಲ. ನಾವು ಮನಸ್ಸು ಮಾಡುತ್ತೇವೆಂಬ ಭರವಸೆಯನ್ನು ಕೊಟ್ಟಿದ್ದೀರಿ. ನಿಮಗೆ ಇದರ ಬಗ್ಗೆ ಕಳಕಳಿ ಇದೆಯೆಂಬುದು ಕಳೆದ 9 ತಿಂಗಳುಗಳ ಆಡಳಿತವನ್ನು ನೋಡಿದಾಗ, ನನಗೆ ಅನ್ನಿಸಿದೆ. ನೀವು ಖಾದಿ ಸೆಕ್ಟಾರ್ ಬಗ್ಗೆ ವಿಶೇಷವಾದಂತಹ ಕಾಳಜಿಯನ್ನು ವಹಿಸಿ ಕೆಲಸವನ್ನು ಮಾಡಿದ್ದೀರಿ. ಅದೇ ರೀತಿಯಲ್ಲಿ ಈ ಕೈಮಗ್ಗ ಸೆಕ್ಟಾರ್ ಬಗ್ಗೆಯೂ ತಮ್ಮಿಂದ ಬರಲಿ ಎಂದು ಆಶಿಸುತ್ತೇನೆ. ತಾವು ತಮ್ಮ ಶಿಕ್ಷಣ ಇಲಾಖೆಯಾಗಲೀ, ಸಮಾಜ ಕಲ್ಯಾಣ ಇಲಾಖೆಯಾಗಲೀ, ಪೋಲೀಸ್ ಇಲಾಖೆಯಾಗಲೀ, ಇಂಧನ ಇಲಾಖೆಯಾಗಲೀ, ನಿಮ್ಮ ಕೆ.ಎಸ್.ಆರ್.ಟಿ.ಸಿ. ಯವರಾಗಲೀ ಎಲ್ಲರಿಗೂ ಯೂನಿಫಾರಂ ಅನ್ನು ಖರೀದಿ ಮಾಡಿ, ಏನಾಗುತ್ತದೆ? ಮಿಡಲ್ ಮನ್ ಎಲಿಮಿನೇಟ್ ಮಾಡುವುದಕ್ಕೆ ಎಲ್ಲಾ ಕಡೆ ಪ್ರಯತ್ನ ಮಾಡಿ. ಎಷ್ಟು ಕಡೆ ಸಾಧ್ಯವಿದೆಯೋ ಅಷ್ಟು ಕಡೆಗಳಲ್ಲಿ ಮಿಡಲ್ ಮನ್ ರೋಲ್ ಕಡಿಮೆ ಮಾಡಿ. ಸರ್ಕಾರ ಕೊಡುವಂತಹ ದುಡ್ಡು ನೇರವಾಗಿ ಉತ್ಪಾದಕರಿಗೆ, ಅದರಲ್ಲಿ ಉದ್ಯೋಗ ಪಡೆಯುವಂತಹ ಜನರಿಗೆ ಮುಟ್ಟುವಂತಹ ಒಂದು ವ್ಯವಸ್ಥೆಯನ್ನು ರೂಪಿಸುವುದಕ್ಕೆ ನಮಗೆ ತೊಂದರೆ ಏನು? ಇದರ ಬಗ್ಗೆ ನೀವು ಸ್ವಲ್ಪ ಮನಸ್ಸು ಮಾಡಿ. ಇದರಿಂದ ಅನುಕೂಲವಾಗುತ್ತದೆ. ಇದರಿಂದ ಬಹಳಷ್ಟು ಜನರಿಗೆ ಅನುಕೂಲವಾಗುತ್ತದೆ. ನಮ್ಮಂಥ ನೇಕಾರರನ್ನು ಪ್ರತಿನಿಧಿಸುವಂತಹ ಶಾಸಕರಿಗೆ ಬಹಳ ಉಪಕಾರ ಮಾಡಿದಹಾಗೆ ಆಗುತ್ತದೆ. ಆ ಕೆಲಸವನ್ನು ತಾವು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ವ್ಯಾಟ್ ಬಗ್ಗೆ ನಮ್ಮ ಸರ್ಕಾರ ಇದನ್ನು ಇಂಟ್ರಡ್ಯೂಸ್ ಮಾಡುವುದಕ್ಕೆ ಒಳ್ಳೆಯ ನಿರ್ಣಯವನ್ನು ಮಾಡಿದೆ. ಆದರೆ ಬಿ.ಜೆ.ಪಿ. ಯವರು ಏಕೆ ವಿರೋಧ ಮಾಡುತ್ತಾರೆಂಬುದು ಗೊತ್ತಾಗುತ್ತಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯಾ:- ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೋತ್ತರ ವೇಳೆಯ ಸಂದರ್ಭದಲ್ಲಿ ಪ್ರಸ್ತಾಪ ಮಾಡಿದಂತಹ ಪ್ರಶ್ನೆಗೆ ಉತ್ತರವನ್ನು ಕೊಡುವಾಗ ಈ

ನೇಕಾರರು ಮಾಡುವ ಉತ್ಪನ್ನಗಳನ್ನು, ಮತ್ತು ಖಾದೀ ಗ್ರಾಮೋದ್ಯೋಗ ಮಂಡಳಿಯವರು ಮಾಡುವಂತಹ ಉತ್ಪನ್ನಗಳನ್ನು ಮತ್ತು ನಮ್ಮ ರಾಜ್ಯದ ಅನೇಕ ಸಂಘ ಸಂಸ್ಥೆಗಳು ಮಾಡುವಂತಹ ಉತ್ಪನ್ನಗಳನ್ನು ಸರ್ಕಾರದಿಂದ ವಿವಿಧ ಇಲಾಖೆಗಳಿಗೆ ಅಗತ್ಯವಿರುವಷ್ಟು ತೆಗೆದುಕೊಳ್ಳುವುದಕ್ಕೆ, ಈ ಅಧಿವೇಶನ ಮುಗಿದ ನಂತರ ಒಂದು ಸಭೆಯನ್ನು ಮಾಡಿ, ಅದು ಆದನಂತರ ಈ ವಿಷಯವನ್ನು ಸಚಿವ ಸಂಪುಟದ ಮುಂದೆ ತಂದು ಇದರ ಬಗ್ಗೆ ತೀರ್ಮಾನವನ್ನು ಮಾಡುತ್ತೇನೆಂಬ ಮಾತನ್ನು ಹೇಳಿದ್ದೆ. ಆದರೆ ಈ ಮಧ್ಯದಲ್ಲಿ ನಾನು ಈ ವಿಚಾರವನ್ನು ಮಾನ್ಯ ಸದಸ್ಯರ ಗಮನಕ್ಕೆ ತರಬಯಸುತ್ತೇನೆ. ಮೊದಲನೆಯ ಬಾರಿಗೆ ಕರ್ನಾಟಕ ರಾಜ್ಯದ 27 ಜಿಲ್ಲೆಗಳಲ್ಲೂ ಸಹಿತ ಕೇಂದ್ರ ಸರ್ಕಾರದ ಖಾದಿ ಕಮೀಷನ್‌ನ ಸಹಕಾರವನ್ನು ತೆಗೆದುಕೊಂಡು, ನಾವು 27 ಜಿಲ್ಲೆಗಳಲ್ಲೂ ಮೊದಲನೆಯ ಬಾರಿಗೆ "ಖಾದಿ ಇಂಡಿಯಾ" ಎಂದು ಎಗ್ಸಿಬಿಶನ್ ಅನ್ನು ಮಾಡಿದ್ದೇವೆ. ಪ್ರತಿಯೊಂದು ಖಾದಿ ವಸ್ತು ಪ್ರದರ್ಶನದಲ್ಲಿ ಕನಿಷ್ಟ ಒಂದು, ಒಂದೂವರೆ ಕೋಟಿ ರೂಪಾಯಿಗಳಷ್ಟು ಖಾದಿ ಈ ಸಾರಿ ಮಾರಾಟ ಮಾಡಿದ್ದೇವೆ. ಬೆಂಗಳೂರು ನಗರದಲ್ಲಿ ಸುಮಾರು 8 ಕೋಟಿ ರೂಪಾಯಿಗಳಿಗೂ ಹೆಚ್ಚು, ಕೆಲವು ಸೊಸೈಟಿಗಳಲ್ಲಿ 40, 50 ಲಕ್ಷ ರೂಪಾಯಿಗಳ ಮಾರಾಟ ಮಾಡಿರುವಂಥಾದ್ದು ತಮಗೆ ಗೊತ್ತಿದೆ. ಇದರ ಜೊತೆಗೆ ಈ ವರ್ಷದಿಂದ ಅಂದರೆ 2005–06ನೇ ಸಾಲಿನಲ್ಲಿ ಖಾದಿ, ನೇಕಾರರು ತಯಾರು ಮಾಡುವಂತಹ ಬಟ್ಟೆಗಳು ಮತ್ತು ನಮ್ಮ ಕುಶಲ ಕರ್ಮಿಗಳು ತಯಾರು ಮಾಡುವಂತಹ ವಸ್ತುಗಳು, ಇವುಗಳನ್ನು ವಿಶೇಷವಾಗಿ ವಸ್ತುಪ್ರದರ್ಶನ ಮಾಡುವಂಥಾದ್ದು. ಇಲ್ಲಿ ವಸ್ತುಗಳು ಪ್ರೊಡಕ್ಷನ್ ಆಗುತ್ತದೆ. ಇದಕ್ಕೆ ಮಾರ್ಕೆಟಿಂಗ್ ಇಲ್ಲ. ಈ ಮಾರ್ಕೆಟಿಂಗ್ ಕೆಲಸವನ್ನು ಮಧ್ಯವರ್ತಿಗಳು ಮಾಡಿಕೊಂಡು ದುಡ್ಡು ಮಾಡಿಕೊಳ್ಳುತ್ತಿದ್ದಾರೆ. ಇದನ್ನು ತಪ್ಪಿಸಬೇಕಾದರೆ, ಇದರ ಹಣ ನೇರವಾಗಿ ಉತ್ಪಾದಕರಿಗೆ ಹೋಗಬೇಕಾದರೆ, ಈ ರೀತಿಯ ವಸ್ತು ಪ್ರದರ್ಶನಗಳನ್ನು ಮಾಡುವಂಥಾದ್ದು ಮತ್ತು ಇವರಿಗೆ ಹೆಚ್ಚಿಗೆ ಮಾರ್ಕೆಟಿಂಗ್ ತೆಗೆದುಕೊಳ್ಳುವಂಥಾದ್ದಕ್ಕೆ ನಾವು ಕಾರ್ಯಕ್ರಮಗಳನ್ನು ಮಾಡುತ್ತಿದ್ದೇವೆ. ದೆಹಲಿಯಲ್ಲಿ "ದೆಹಲಿ ಹಾಲ್" ವಾದ ಏನಿದೆ ಮೈಸೂರು ಹಾಥ್ ಎಂದು ಮಾಡಬೇಕೆಂದು ಇದ್ದೇವೆ. ಸುತ್ತೂರು ಸ್ವಾಮಿಗಳ ಸಹಕಾರದಿಂದ ಅಲ್ಲಿ ಮಾಡುತ್ತಿದ್ದೇವೆ. ಬೆಂಗಳೂರಿನಲ್ಲಿ ಸಹ ಅದೇ ರೀತಿಯಲ್ಲಿ ಒಂದು ಮಾಡಬೇಕೆಂದು ಇದ್ದೇವೆ. ಅದರಲ್ಲೂ ವಿಶೇಷವಾಗಿ ಉತ್ತರ ಕರ್ನಾಟಕದಲ್ಲಿ ಹುಬ್ಬಳ್ಳಿಯಲ್ಲಿ, ಗುಲ್ಬರ್ಗದಲ್ಲಿ ಒಂದೊಂದು ಪರ್ಮನೆಂಟ್ ಎಗ್ಸಿಬಿಷನ್ ಎಂದು ದೆಹಲಿಯಲ್ಲಿ ಪ್ರಗತಿ ಮೈದಾನದಲ್ಲಿ ಹೇಗೆ ಮಾಡಿದ್ದಾರೆ, ಆ ರೀತಿ ಮಾಡಬೇಕೆಂಬುದರ ಜೊತೆಗೆ, ಪ್ರತಿ ವರ್ಷವೂ ಸಹಿತ ಇನ್ನು ಮೇಲೆ ಜಿಲ್ಲಾ ಕೇಂದ್ರಗಳಲ್ಲಿ ಆಯಾ ಸ್ಥಳೀಯ ಶಾಸಕರುಗಳು, ಹಾಗೂ ಜಿಲ್ಲಾ ಮಂತ್ರಿಗಳ ಸಹಕಾರವನ್ನು ಪಡೆದು, ಈ ವಸ್ತು ಪ್ರದರ್ಶನವನ್ನು ಒಂದು ಪರ್ಮನೆಂಟ್ ಡೇಟ್‌ನಲ್ಲಿ ಮಾಡಬೇಕೆಂದು ಹೇಳಿ, ಸರ್ಕಾರಿ ಆಜ್ಞೆಯನ್ನು ಮಾತ್ರವಲ್ಲ. ಅದಕ್ಕೆ ಬೇಕಾಗಿರುವಂತಹ ಹಣವನ್ನೂ ಸಹಿತ ಮಾನ್ಯ ಉಪ ಮುಖ್ಯಮಂತ್ರಿಯವರು ಬಿಡುಗಡೆ ಮಾಡಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್:- ತಾವು ಅಧಿಕಾರಕ್ಕೆ ಬಂದ ಮೇಲೆ, ಇದರ ಬಗ್ಗೆ ವಿಶೇಷ ಲಕ್ಷ್ಯವನ್ನು ವಹಿಸಿದ್ದೀರಿ. ಅದಕ್ಕೆ ನಾವು ಎಷ್ಟು ಕೃತಜ್ಞತೆಯನ್ನು ಹೇಳಿದರೂ ಅದು ಕಡಿಮೆ ಏಕೆಂದರೆ, ನನಗೆ ಬಹಳಷ್ಟು ಕಹಿ ಅನುಭವ ಆಗಿದೆ. ಖಾದಿ ರಿಬೇಟ್ ಎಂದು 7, 8 ಕೋಟಿ ರೂ ಇರತ್ತಿತ್ತು. ಇದು ವರ್ಷಕ್ಕೆ ಇರುತ್ತಿತ್ತು. ಇದನ್ನು ಬಿಡುಗಡೆ ಮಾಡಿಸಬೇಕಾದರೆ 2-3 ವರ್ಷಗಳು ಪ್ರಯತ್ನವನ್ನು ಮಾಡಬೇಕಾಗಿತ್ತು. ಅದು ಮಾಡಿದ್ದು ಇಲ್ಲ. ನೀವು ಇದರಲ್ಲಿ ಒಳ್ಳೆಯ ಕೆಲಸವನ್ನು ಮಾಡಿದ್ದೀರಿ. ಖಾದಿ ಸೆಕ್ಟಾರ್‌ನಲ್ಲಿ ಇನ್ನು ಲಕ್ಷಾಂತರ ಜನರಿಗೆ ಉದ್ಯೋಗ ಸಿಗುತ್ತಿದೆ. ಇದರ ಅರ್ಥ ಬೇರೆ ಕ್ಷೇತ್ರಗಳಲ್ಲಿ ಉದ್ಯೋಗ ಸಿಗುತ್ತಿಲ್ಲವೆಂದೇ ಅರ್ಥ. ಈ ಖಾದಿಯಲ್ಲಿ ಕೆಲಸವನ್ನು ಮಾಡುತ್ತಾರೆಂದರೂ, ಇಲ್ಲಿ ನಮಗೆ ಎಲ್ಲರಿಗೂ ಉದ್ಯೋಗವನ್ನು ಕೊಡುವುದಕ್ಕೆ ಆಗುತ್ತಾ ಇಲ್ಲ. ಆದುದರಿಂದ ಈ ಸೆಕ್ಟಾರ್ ಅನ್ನು ಇನ್ನು ಸ್ಟ್ರೆಂಥನ್ ಮಾಡಬೇಕು. ಅವರಿಗೆ ಸರ್ಕಾರದ ಬೆಂಬಲ ಇರಬೇಕು. ತಾವು ಮಾರ್ಕೆಟಿಂಗ್ ಬಗ್ಗೆ ಏನು ವಿಶೇಷವಾದಂತಹ ಮುತುವರ್ಜಿಯನ್ನು ವಹಿಸಿದ್ದೀರಿ. ದಯವಿಟ್ಟು ಡಿಸೈನ್‌ಗಳ ಬಗ್ಗೆಯೂ, ಇದನ್ನು ಫ್ಯಾಷನ್ ಡಿಸೈನ್‌ಗಳನ್ನು ಮಾಡಿ. ಈ ಡಿಸೈನ್ ಬಗ್ಗೆಯೂ ಹೆಚ್ಚು ಮುತುವರ್ಜಿಯನ್ನು ವಹಿಸಿದರೆ, ಇನ್ನು ಹೆಚ್ಚು ಎಕ್ಸ್‌ಪೋರ್ಟ್ ಖಾದಿಗೂ ಮತ್ತು ಕೈಮಗ್ಗಕ್ಕೂ ಸಿಗುತ್ತದೆ. ಇದರ ಬಗ್ಗೆ ತಾವು ವಿಶೇಷ ಲಕ್ಷ್ಯವನ್ನು ವಹಿಸಬೇಕು. ಈ ಡಿಸೈನ್ಸ್ ಸೆಂಟರ್‌ಗಳು ಯಾವ್ಯಾವು ಇದ್ದಾವೊ, ಅವರ ಸಹಾಯ, ಸಹಕಾರವನ್ನು ಪಡೆದುಕೊಂಡು, ಫ್ಯಾಷನ್‌ಗೆ ಅನುಕೂಲವಾಗುವ ಹಾಗೆ, ಈಗಿನ ಹೊಸ ಪೀಳಿಗೆಯ ಅಭಿರುಚಿಗೆ ತಕ್ಕಂತೆ, ಬಟ್ಟೆ ನೇಯ್ಯುವಂತಹ ಒಮದು ವ್ಯವಸ್ಥೆಯನ್ನು ರೂಪಿಸುವಂಥಾದ್ದಕ್ಕೆ, ತಾವು ವಿಶೇಷವಾದಂತಹ ಲಕ್ಷ್ಯವನ್ನು ವಹಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಇನ್ನು ವ್ಯಾಟ್ ಬಗ್ಗೆ, ನಮ್ಮ ಸರ್ಕಾರ ಒಪ್ಪಿಕೊಂಡಿತು. ಮತ್ತು ಬಹಳ ಸರ್ಕಾರಗಳು ಒಪ್ಪಿಕೊಂಡಿತು. ಆದರೆ ದುರ್ದೈವ ಏಕೋ ನಮ್ಮ ಬಿ.ಜೆ.ಪಿ. ಯವರು ಮೊದಲು ಒಪ್ಪಿಕೊಂಡು, ಇದರಲ್ಲಿ ಸ್ವಲ್ಪ ಹಿಂಜರಿಯುತ್ತಿದ್ದಾರೆ. ಇದು ಪ್ರಾಮಾಣಿಕವಾಗಿ ವ್ಯವಹಾರಗಳನ್ನು ಮಾಡುವವರಿಗೆ ಇದು ಬಹಳ ಆರಾಮವಾದ ಕೆಲಸ ಆಗಿದೆ. ಇಲ್ಲಿ ಟ್ಯಾಕ್ಸನ್ನು ತಪ್ಪಿಸಿ ವ್ಯವಹಾರವನ್ನು ಮಾಡುವವರಿಗೆ, ಈ ವ್ಯವಸ್ಥೆಯಲ್ಲಿ ತಮಗೆ ಅನುಕೂಲವನ್ನು ಮಾಡಿಕೊಳ್ಳುವಂತಹ, ಕೆಲವು ಅಧಿಕಾರಿಗಳಿಗೆ ಇದರಿಂದ ತೊಂದರೆಯಾಗುತ್ತದೆ. ನೀವು ಇದರ ಬಗ್ಗೆ ಏಕೆ ಹಿಂಜರಿಯುತ್ತಿದ್ದೀರೋ ಗೊತ್ತಾಗುತ್ತಿಲ್ಲ. ತಾವು ದಯವಿಟ್ಟು ನೀವು ನಿಮ್ಮ ನಾಯಕರಿಗೆ ಹೇಳಬೇಕು. ಇದನ್ನು ಪೊಲಿಟಿಕಲ್ ಆ್ಯಂಗಲ್‌ನಿಂದ ನೋಡಬಾರದು. ಮೊದಲು ನೀವು ಅಧಿಕಾರದಲ್ಲಿ ಇದ್ದಾಗ ನೀವೆಲ್ಲರೂ ವ್ಯಾಟ್‌ಗೆ ಒಪ್ಪಿದ್ದೀರಿ. ನಿಮ್ಮ ಹಣಕಾಸಿನ ಸಚಿವರು ವ್ಯಾಟ್ ಅನ್ನು ಜಾರಿಗೆ ತರಬೇಕೆಂದು ಒತ್ತಾಯ ಮಾಡುತ್ತಿದ್ದರು. ಆಗ ಇದು ಸರಿಯಾಗಿತ್ತು. ಈಗ ವಿರೋಧ ಪಕ್ಷಕ್ಕೆ ಬಂದ ಕೂಡಲೇ ಸರಿಯಾಗಿಲ್ಲವೆಂದು ಹೇಳಿದರೆ, ಇದು ಸರಿಯಾದ ಯೋಚನೆಯಲ್ಲ.

ಶ್ರೀ ಸಿ.ಟಿ. ರವಿ:- ಮಾನ್ಯ ಅಧ್ಯಕ್ಷರೆ, ಮಾನ್ಯ ಡಿ.ಆರ್. ಪಾಟೀಲ್‌ರವರೆ, ಅರ್ಧಂಬರ್ಧ ಕೇಳಿಕೊಂಡು ಅರ್ಧ ಸತ್ಯವನ್ನು ಮಾತ್ರ ಮಾತನಾಡುತ್ತಿದ್ದೀರಿ. ಈ ವ್ಯಾಟನ್ನು

ಬಿ.ಜೆ.ಪಿ. ರಾಜ್ಯಗಳಲ್ಲಿ ನಿರಾಕರಿಸಿಲ್ಲ. ಏಕ ಕಾಲದಲ್ಲಿ ಇದು ಒಮ್ಮೆಲೇ ಜಾರಿಗೆ ಬರಬೇಕೆಂಬ ಮಾತನ್ನು ಮಾತ್ರ ಹೇಳುತ್ತಿದ್ದಾರೆ. ಇದನ್ನು ಒಮ್ಮೆಲೆ ಜಾರಿಗೆ ತರುವಂಥಾದ್ದಕ್ಕೆ ಪ್ರಯತ್ನವನ್ನು ಮಾಡಲಿಕ್ಕೆ ಮೇಲೆ ಕುಳಿತಿರುವಂತಹ ನಿಮ್ಮ ಪಾರ್ಟಿಯವರಿಗೆ ಹೇಳಬೇಕೇ ಹೊರತು, ನಮಗೆ ನೀವು ಬುದ್ಧಿಯನ್ನು ಹೇಳಬೇಡಿ. ಇದನ್ನು ಏಕ ಕಾಲಕ್ಕೆ ಜಾರಿಗೆ ತಂದರೆ ಅದಕ್ಕೆ ಬಿ.ಜೆ.ಪಿ. ಯವರು ಬೆಂಬಲ ಕೊಡುವುದುಕ್ಕೆ ಇದ್ದೇ ಇದ್ದಾರಲ್ಲಾ.

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ಎಲ್ಲಾ ಯು.ಪಿ.ಎ. ಸರ್ಕಾರದ ಎಲ್ಲಾ ಅಂಗ ಪಕ್ಷಗಳು ಇರುವ ರಾಜ್ಯದಲ್ಲಿ, ಏಕ ಕಾಲಕ್ಕೆ ಅದನ್ನು ಆರಂಭ ಮಾಡಬೇಕೆಂದು ಇದೆ. ಇಲ್ಲಿ ಯು.ಪಿ.ಎ. ಸರ್ಕಾರಗಳಲ್ಲಿನ ಅಂಗ ಪಕ್ಷಗಳಲ್ಲೇ ವ್ಯಾಟನ್ನು ಜಾರಿಗೆ ತರುವಂಥಾದ್ದಕ್ಕೆ ಒಮ್ಮತವಿಲ್ಲ. ದಯಮಾಡಿ ಅದನ್ನು ಕೂಡ ತಾವು ಒಪ್ಪಿಕೊಳ್ಳಬೇಕಾಗುತ್ತದೆ.

ಶ್ರೀ ಡಿ.ಆರ್. ಪಾಟೀಲ್:– ನೀವು ಬಹಳ ಬುದ್ಧಿವಂತರಾಗಿದ್ದೀರಿ.

ಶ್ರೀ ಆರಗ ಜ್ಞಾನೇಂದ್ರ:– ಇಲ್ಲ, ಹಿಂಜರಿಕೆ ಇಲ್ಲ. ಇಡೀ ದೇಶದಲ್ಲಿ ಒಮ್ಮೆಲೆ ಜಾರಿಗೆ ತರುವಂಥಾದ್ದಕ್ಕೆ ಒಪ್ಪಿಗೆ ಇದೆ. ಕೆಲವು ರಾಜ್ಯಗಳು ಒಪ್ಪಿಗೆ, ಕೆಲವು ರಾಜ್ಯಗಳು ಒಪ್ಪಿಲ್ಲ. ಆದುದರಿಂದ ಯು.ಪಿ.ಎ. ಅಂಗ ಪಕ್ಷಗಳಲ್ಲಿ ಒಮ್ಮತ ಇಲ್ಲ. ನೀವು ಬಿ.ಜೆ.ಪಿ. ಪಕ್ಷದ ಬಗ್ಗೆ ಹೇಳಬೇಡಿ. ನೀವು ಮೊದಲು ಉತ್ತರ ಪ್ರದೇಶವನ್ನು ಒಪ್ಪಿಸಿ ನೋಡೋಣ. ಏಕೆ ಆಗುವುದಿಲ್ಲ?

ಶ್ರೀ ಡಿ.ಆರ್. ಪಾಟೀಲ್:– ನೀವು ವ್ಯಾಟ್ ಒಳ್ಳೆಯದೆಂದು ಒಪ್ಪುತ್ತಿರೋ, ಇಲ್ಲವೋ?

ಶ್ರೀ ಸಿ.ಟಿ. ರವಿ:– ವ್ಯಾಟ್ ಏನೋ ಒಳ್ಳೆಯದೆ, ನಾವು ಬುದ್ಧಿವಂತರಾಗಿದ್ದಕ್ಕೆ ನೋಡಿ, ಇಲ್ಲಿ ಕುಳಿತಿದ್ದೇವೆ. ನೀವು ಕುಂಟ ಮತ್ತು ಕುರುಡ ಸೇರಿಕೊಂಡು ಅಲ್ಲಿ ಕುಳಿತುಕೊಂಡಿದ್ದೀರಿ. ಇಲ್ಲಿ ಯಾರು ಬುದ್ಧಿವಂತ–ರೆಂಬುದನ್ನು ಹೇಳಿ.

ಶ್ರೀ ಡಿ.ಆರ್. ಪಾಟೀಲ್:– ಮಾನ್ಯ ರವಿಯವರೆ, ತಾವು ಕುಳಿತುಕೊಳ್ಳಿ ಹೇಳುತ್ತೇನೆ.

ಶ್ರೀ ಸಿ.ಟಿ. ರವಿ:– ಮಾನ್ಯ ಎಂ.ಪಿ. ಪ್ರಕಾಶ್‌ರವರು ಕುಂಟ, ಕುರುಡರ ಸರ್ಕಾರ ಒಟ್ಟು ಕೂಡಿ ನಡೆದಿದೆಯೆಂದು ಹೇಳಿದ್ದಾರಲ್ಲಾ.

ಶ್ರೀ ಡಿ.ಆರ್. ಪಾಟೀಲ್:– ತಾವು ಕುಳಿತುಕೊಳ್ಳಿ, ತಾನು ಹೇಳುತ್ತೇನೆ. ಆದರೆ ದುರ್ದೈವದಿಂದ ನಿಮ್ಮ ಬುದ್ಧಿವಂತಿಕೆ, ಸಮಾಜದ ಅಭಿವೃದ್ಧಿಗೆ, ಕ್ಷೇತ್ರದ ಅಭಿವೃದ್ಧಿಗೆ ಉಪಯೋಗವಾಗುವುದಿಲ್ಲ. ಅದನ್ನು ಯಾವುದೋ ಬೇರೆಯದಕ್ಕೆ ಉಪಯೋಗ ಮಾಡುತ್ತೀರಿ. ಇದು ನಿಮ್ಮಲ್ಲಿ ಬದಲಾಗಬೇಕು.

ಶ್ರೀ ಆರಗ ಜ್ಞಾನೇಂದ್ರ:– ನೀವು ಈ ದೇಶದಲ್ಲಿ 55 ವರ್ಷಗಳ ಕಾಲ ನಿಮ್ಮ ಬುದ್ಧಿವಂತಿಕೆಯನ್ನು ಉಪಯೋಗಿಸಿ, ನಾವು ಜಗತ್ತಿನಲ್ಲಿ ಈ ಪರಿಸ್ಥಿತಿಗೆ ಬಂದಿದ್ದೇವೆ. ನೀವು ಕಾಂಗ್ರೆಸ್ ಪಕ್ಷದ ಬುದ್ಧಿವಂತಿಕೆಯನ್ನು 55 ವರ್ಷಗಳ ಕಾಲ ಅಪ್ಲೈ ಮಾಡಿದ್ದೀರಲ್ಲಾ, ಇದರ ಪರಿಣಾಮ ನಾವು ಹೇಗೆ ಇರುವುದು. ನೀವು ಇದನ್ನೆಲ್ಲಾ ಹೀಗೆ ಹೇಳುತ್ತಾ ಇದ್ದರೆ ಹೇಗೆ?

(ಗೊಂದಲ)

ಅಧ್ಯಕ್ಷರು:– ಮಾನ್ಯ ಪಾಟೀಲ್‌ರವರೆ, ತಾವು ಭಾಷಣವನ್ನು ಬೇಗ ಮುಗಿಸಿ.

ಶ್ರೀ ಡಿ.ಆರ್. ಪಾಟೀಲ್:– ನೀವು 1969ರಿಂದ ನೋಡಿ. Any progressive measure, including this V.A.T. ಆಗ ಬ್ಯಾಂಕ್ ರಾಷ್ಟ್ರೀಕರಣ ಇರಲಿ, ಲ್ಯಾಂಡ್ ರಿಫಾರ್ಮ್ಸ್ ಇರಲಿ, ಪಂಚಾಯತ್ ರಾಜ್ ಒಳಗೆ ಮೀಸಲಾತಿಯನ್ನು ತರುವಂಥಾದ್ದು ಇರಲಿ, ಈಗ ವ್ಯಾಟ್, any progressive measure you have always opposed. ಏಕೋ ಗೊತ್ತಾಗುತ್ತಿಲ್ಲ. ಇದನ್ನು ನೀವು ಏಕೆ ಅಪೋಸ್ ಮಾಡುತ್ತೀರಿ? ಆಮೇಲೆ ಒಪ್ಪಿಕೊಳ್ಳುತ್ತೀರಿ. ಮೊದಲು ಅಪೋಸ್ ಮಾಡುತ್ತೀರಿ. ಅದಕ್ಕೆ ಏನೇನು ತೊಂದರೆಗಳನ್ನು ಕೊಡಬೇಕೋ. ಆ ಎಲ್ಲಾ ತೊಂದರೆಗಳನ್ನು ಕೊಡುವ ಪ್ರಯತ್ನಗಳನ್ನು ಮಾಡುತ್ತೀರಿ. ಅದಕ್ಕೆ ಕೋರ್ಟ್ ಸಹಿತ ಉಪಯೋಗ ಮಾಡುತ್ತೀರಿ. ಮುಂದೆ ಈಲ್ಡ್ ಆಗುತ್ತೀರಿ. ಏಕೆ? ದಯವಿಟ್ಟು ನಿಮ್ಮ ನಾಯಕರಿಗೆ ಇದನ್ನು ಹೇಳಿ.

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ಇದನ್ನು ರಾಜಕೀಯವಾಗಿ ಚರ್ಚೆ ಮಾಡಬೇಕೆಂದರೆ, ಇದಕ್ಕೆ ಡಿಬೇಟ್ ಅನ್ನು ಕಂಡಕ್ಟ್ ಮಾಡೋಣ. ದೇಶದ ಯಾವ ಯಾವುದೋ ಭಾಗಗಳಲ್ಲಿ ನಡೆಯುವುದಕ್ಕಿಂತ, ನಮ್ಮ ಕರ್ನಾಟಕ ರಾಜ್ಯದಲ್ಲಿ ಬಜೆಟ್ ಮೇಲೆ ಏನೆಂಬುದನ್ನು ಅವರು ಹೇಳಲಿ. ನಾವು ಬೇಕಾದರೆ ಹೇಳುತ್ತೇವೆ. ಏನೇನು ಆಗಿತ್ತು. ಮಾನ್ಯ ಚಂದ್ರಶೇಖರ್‌ರವರು ಪ್ರಧಾನಮಂತ್ರಿಯಾಗಿದ್ದಾಗ, ನೀವು ದೇಶವನ್ನು ಬಿಟ್ಟು ಕೊಟ್ಟಿರಲ್ಲಾ, ಆಗ ಖಜಾನೆಯನ್ನು ಖಾಲಿ ಮಾಡಿ, ಎಷ್ಟು ಟನ್ ಬಂಗಾರವನ್ನು ವಿಮಾನದಲ್ಲಿ ತುಂಬಿಕೊಂಡು ಹೋಗಿ, ಬ್ಯಾಂಕ್‌ನಲ್ಲಿ ಇಟ್ಟು ಸಾಲ ತಂದು ಈ ದೇಶವನ್ನು ನಡೆಸಿದರು. ಯಾವ ರೀತಿ ಈ ದೇಶವನ್ನು ತಂದಿದ್ದೀರಿ. ನೀವೇ ದೇಶವನ್ನು ನಡೆಸುವಾಗ, ಈಗ ನೀವು ಎಲ್ಲಿಗೆ ಬಂದು ನಿಂತುಕೊಂಡಿದ್ದೀರಿ. ಒಂದು ಕಾಲದಲ್ಲಿ ಇಡೀ ದೇಶದಲ್ಲಿ ನಿಮ್ಮನ್ನು ಅಂದರೆ ಕಾಂಗ್ರೆಸ್ಸನ್ನು ಅಲ್ಲಾಡಿಸುವವರು ಇರಲಿಲ್ಲ. ಆದರೆ, ಇವತ್ತು ಏಕೆ ಯು.ಪಿ.ಎ. ಜೊತೆ ಮಿಕ್ಸ್ ಆಗಿದ್ದೀರಿ ಏಕೆ? ನೀವು ಈಗ ಎಲ್ಲಿಗೆ ಹೋಗಿದ್ದೀರಿ? ಇವರು ಕಳೆದೇ ಹೋಗಿದ್ದಾರೆ. ಇಲ್ಲವೇ ಇಲ್ಲ.

ಶ್ರೀ ಡಿ.ಆರ್. ಪಾಟೀಲ್:– ಮಾನ್ಯ ಜ್ಞಾನೇಂದ್ರಾ ಅವರೇ, ಈ ದೇಶದ ಸಂಪತ್ತನ್ನೆಲ್ಲಾ ಒತ್ತೆ ಇಟ್ಟರು ಎಂದು ಹೇಳಿದಿರಲ್ಲಾ.....

ಅಧ್ಯಕ್ಷರು:– ಮಾನ್ಯ ಪಾಟೀಲರೇ, ಬಜೆಟ್‌ಗೆ ಸೀಮಿತವಾಗಿ ಮಾತನಾಡಿ. Don't waste time. ಈಗ ಏನಾಗುತ್ತಿದೆಯೆಂದರೆ, ನೀವು ಪರಸ್ಪರ ಉತ್ತರ ಕೊಟ್ಟುಕೊಂಡು ಮಾತನಾಡುತ್ತಿದ್ದೀರಿ. ನೀವು ಏನೋ ಹೇಳಿದ್ದಕ್ಕೆ ಅವರು ಉತ್ತರ ಕೊಡುವುದು, ಅವರು ಹೇಳಿದ್ದಕ್ಕೆ ನೀವು ಉತ್ತರ ಕೊಡುವುದು ಆಗುತ್ತಿದೆ. ಹೀಗಾಗಿ ಬಜೆಟ್ ಮೇಲೆ ಮಾತನಾಡದೇ ಟೈಂ ವೇಸ್ಟ್ ಆಗುತ್ತದೆ. ಇನ್ನೂ ಬಹಳ ಜನ ಮಾತನಾಡಬೇಕು.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಅವರು ಮಾತನಾಡಿದ್ದಕ್ಕೆ ಸ್ವಲ್ಪ ಉತ್ತರ ಕೊಡಬೇಕಾಗುತ್ತದೆ. ಚಂದ್ರಶೇಖರ್‌ರವರು ಎಲ್ಲಾ ಒತ್ತೆ ಇಟ್ಟು ಬಂದರು ಎಂದು ಹೇಳಿದಿರಲ್ಲಾ.....

ಶ್ರೀ ಆರಗ ಜ್ಞಾನೇಂದ್ರ:- ಮಾನ್ಯ ಅಧ್ಯಕ್ಷರೆ, ಪರಿಸ್ಥಿತಿ ಏನಾಗಿದೆ ಎಂದರೆ, ನೀವು ಅಬ್ರಪ್ಟ್ ಆಗಿ ಕರೆದಿರಿ. ಅವರು ಬಜೆಟ್ ಸ್ಪೀಚ್‌ಗೆ ಇನ್ನೂ ಪ್ರಿಪೇರ್ ಆಗಿರಲಿಲ್ಲ. ಹಾಗಾಗಿ, ಅಲ್ಲಿ ಇಲ್ಲಿ, ಎಲ್ಲೆಲ್ಲಿಗೋ ಹೋಗುತ್ತಿದ್ದಾರೆ.

ಶ್ರೀ ಡಿ.ಆರ್. ಪಾಟೀಲ್:- ಮಾನ್ಯ ಅಧ್ಯಕ್ಷರೆ, ಹಾಗೆ ಒತ್ತೆ ಇಟ್ಟಂಥ ಹಣಕಾಸಿನ ಸಚಿವರು ಯಶವಂತ ಸಿನ್ಹಾರವರೇ. ಅವರೇ ಈಗ ನಿಮ್ಮ ನಾಯಕರು. ಅವರೇ ನಿಮ್ಮ ಹಣಕಾಸಿನ ಸಚಿವರು. ಅದು ತಮಗೆ ನೆನಪಿರಲಿ. ವ್ಯಾಟ್ ಬಗ್ಗೆ ತಾವು ದಯವಿಟ್ಟು ಹೇಳಬೇಕು. ವ್ಯಾಟ್ ಇಡೀ ರಾಷ್ಟ್ರದ ತುಂಬ ಏಕಕಾಲಕ್ಕೆ ಅನ್ವಯವಾಗಬೇಕು ಎಂದೇನೂ ಇಲ್ಲ. ಯಾವ ಯಾವ ರಾಜ್ಯ ಸರ್ಕಾರ ಒಪ್ಪಿಕೊಳ್ಳುತ್ತದೋ, ಅಲ್ಲಿ ಮಾಡಬಹುದು. ಸುತ್ತಮುತ್ತಲಿರುವ ಹೆಚ್ಚು ರಾಜ್ಯಗಳು ಒಪ್ಪಿಕೊಂಡರೆ ಬಹಳ ಅನುಕೂಲವಾಗುತ್ತದೆ. ಅದಕ್ಕೆ ತಾವು ದಯವಿಟ್ಟು ನಿಮ್ಮ ನಾಯಕರನ್ನು ಒಪ್ಪಿಸಲು ಪ್ರಯತ್ನ ಮಾಡಿ ಎನ್ನುವ ಮಾತನ್ನು ನಾನು ಹೇಳಿದೆ. ಉತ್ತರ ಕರ್ನಾಟಕ ನಗರದ ಅಭಿವೃದ್ಧಿ ಸಲುವಾಗಿ ಎ.ಡಿ.ಬಿ. ಯಿಂದ ಸಾಲ ತೆಗೆದುಕೊಂಡು, ಇನ್‌ಫ್ರಾಸ್ಟ್ರಕ್ಚರ್ ಡೆವಲಪ್‌ಮೆಂಟ್ ಮಾಡುವ ಯೋಜನೆ ಸರ್ಕಾರದ ಮುಂದೆ ಇದೆ. ಅದನ್ನು ಸಾಲ ಎಂದು ಮಾಡಿದರೆ, ಅದನ್ನು ಯಾವ ಮುನಿಸಿಪಾಲಿಟಿಗಳೂ ತಿರುಗಿ ಕೊಡುವಂಥ ಪರಿಸ್ಥಿತಿಯಲ್ಲಿಲ್ಲ. ಮುನಿಸಿಪಾಲಿಟಿಗೆ ಬರುವಂಥ ಎಲ್ಲಾ ಆದಾಯ ಮೂಲಗಳನ್ನು ಬಂದ್ ಮಾಡಿ, ಸರ್ಕಾರ ಕೊಡುವಂಥ ಗ್ರಾಂಟ್‌ನಲ್ಲೇ ಡೆವಲಪ್‌ಮೆಂಟ್ ಮಾಡುವಂಥ ಪರಿಸ್ಥಿತಿ ನಿರ್ಮಾಣ ಮಾಡಿದ್ದರಿಂದ, ಇದನ್ನು ಸಾಲ ಎಂದು ಕೊಡುವ ಬದಲು ಗ್ರಾಂಟ್ ಎಂದು ಕೊಡುವ ಕೆಲಸವನ್ನು ತಾವು ಮಾಡಿದರೆ ಬಹಳಷ್ಟು ಉಪಕಾರವಾಗುತ್ತದೆ. ಆ ಕೆಲಸವನ್ನು ತಾವು ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ. ವರ್ಲ್ಡ್ ಬ್ಯಾಂಕ್‌ನವರು ಹಿಂದುಳಿದ ಪ್ರದೇಶದ ಅಭಿವೃದ್ಧಿಗಾಗಿ ಐಡಾ ಅಸಿಸ್ಟೆನ್ಸ್ ಕೊಡಲು ಮುಂದೆ ಬಂದಿದ್ದಾರೆ ಎಂದು ಕೇಳಿದ್ದೇವೆ. ಆ ಐಡಾ ಅಸಿಸ್ಟೆನ್ಸನ್ನು ತೆಗೆದುಕೊಳ್ಳುವುದರಲ್ಲಿ ನಮ್ಮ ಸರ್ಕಾರ ಡಿಲೇ ಮಾಡುತ್ತಿದೆ. ಅದನ್ನು ತೆಗೆದುಕೊಳ್ಳಲು ಜುಲೈವರೆಗೆ ಟೈಂ ಇದೆ. ಅದನ್ನು ಜುಲೈ ಒಳಗೆ ತೆಗೆದುಕೊಳ್ಳಲಿಲ್ಲವೆಂದರೆ, ಬೇರೆ ರಾಜ್ಯಗಳಿಗೆ ಶಿಫ್ಟ್ ಮಾಡಬಹುದು ಎನ್ನುವ ಅನುಮಾನ ಕೆಲವರಲ್ಲಿ ಇದೆ. ಮಾನ್ಯ ಸಿಂಧ್ಯಾರವರೇ, ದಯವಿಟ್ಟು ಗಮನಿಸಬೇಕು. ಐಡಾ ಅಸಿಸ್ಟೆನ್ಸ್ ಸ್ಕೀಮಿನಲ್ಲಿ ಕೇಂದ್ರ ಸರ್ಕಾರದವನ್ನು ಕೊಡುವ ಹಣಕ್ಕೆ ಇಂಟರೆಸ್ಟ್ ಇಲ್ಲ. ಬರೀ ಸರ್ವೀಸ್ ಚಾರ್ಜನ್ನು ತೆಗೆದುಕೊಳ್ಳುತ್ತಾರೆ. ಅದನ್ನು ಈಗ ಪೂರ್ಣವಾಗಿ ರಾಜ್ಯ ಸರ್ಕಾರಕ್ಕೇ ಟ್ರಾನ್ಸ್‌ಫರ್ ಮಾಡುತ್ತಾರೆ. ಮೊದಲಿನ ಹಾಗೆ ಅದನ್ನು ತಾವೇ ತಂದು, ಲೋನ್, ಗ್ರಾಂಟ್ ಎಂದು ಮಾಡಿ ಅದಕ್ಕೆ ಶೇಕಡಾ 9 ರಷ್ಟು, ಶೇಕಡಾ 12 ರಷ್ಟು ಬಡ್ಡಿ ಕೊಡಬೇಕಾಗಿಲ್ಲ. ಆ ಸೋವಿ ಬಡ್ಡಿಯೇ ನಿಮಗೆ ಉಳಿಯುತ್ತದೆ. ಇದರ ರೀಪೇಮೆಂಟ್‌ಗೆ 30

ವರ್ಷ ಅನುಕೂಲವಾಗುತ್ತದೆ. ಅದಕ್ಕಾಗಿ, ಆ ಐಡಾ ಅಸಿಸ್ಟೆನ್ಸನ್ನು ಬೇಗ ತೆಗೆದುಕೊಳ್ಳುವ ಹಾಗೆ ಆಗಬೇಕು. ನಂಜುಂಡಪ್ಪ ವರದಿಯಲ್ಲಿ ಗುರುತಿಸಿರುವ 39 ತಾಲ್ಲೂಕುಗಳ ಬೆಳವಣಿಗೆಗೆ, ಪಂಚಾಯತ್‌ರಾಜ್ ವ್ಯವಸ್ಥೆ ಮುಖಾಂತರ ಸುಮಾರು 800–900 ಕೋಟಿ ರೂಪಾಯಿ ಐಡಾ ಅಸಿಸ್ಟೆನ್ಸ್ ಬರುವುದಿದೆ. ಅದನ್ನು ಬೇಗ ತೆಗೆದುಕೊಳ್ಳುವಂಥ ವ್ಯವಸ್ಥೆಯನ್ನು ಸರ್ಕಾರದ ಮಟ್ಟದಲ್ಲಿ ಮಾಡಬೇಕು ಎಂದು ನಾನು ಒತ್ತಾಯ ಮಾಡುತ್ತೇನೆ.

ಇನ್ನು, ಗದಗ್–ಬಿಜಾಪುರ ರೈಲ್ವೆ ಗೇಜ್ ಕನ್ವರ್ಷನ್ ಬಗ್ಗೆ ಹೇಳುವುದಾದರೆ, ಇದು ಸುಮಾರು ನಾಲ್ಕು ವರ್ಷಗಳಿಂದ ನಡೆಯುತ್ತಿದೆ. ರಾಜ್ಯ ಸರ್ಕಾರ ಕೆ–ರೈಡ್ ಮುಖಾಂತರ ತನ್ನ ಪಾಲಿನ ಹಣವನ್ನು ಬಿಡುಗಡೆ ಮಾಡುವುದರಲ್ಲಿ ಸ್ವಲ್ಪ ತಡ ಮಾಡಿದೆ ಎಂದು ಅಲ್ಲಿದ್ದಂಥ ಮೆಟೀರಿಯಲ್‌ಗಳನ್ನು ಶಿಫ್ಟ್ ಮಾಡಲು ಪ್ರಾರಂಭ ಮಾಡಿದ್ದರು. ಎರಡು ತಿಂಗಳಿಂದೀಚೆಗೆ ರಾಜ್ಯ ಸರ್ಕಾರದವರು 20 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿ, ಆ ಕೆಲಸ ಪುನಃ ಪ್ರಾರಂಭ ಆಗುವ ಹಾಗೆ ಮಾಡಿದ್ದಾರೆ. ಮುಂದಿನ ಹಣಕಾಸು ವರ್ಷದಲ್ಲಿ 53 ಕೋಟಿ ರೂಪಾಯಿಗಳನ್ನು ಇಟ್ಟಿದ್ದಾರೆ. ಗದಗ್–ಬಿಜಾಪುರ ಗೇಜ್ ಕನ್ವರ್ಷನ್ ಕೆಲಸ ಪೂರ್ತಿ ಮುಗಿಯುವ ಹಾಗೆ ಅದಕ್ಕೆ ಬೇಕಾದಂಥ ನಿಮ್ಮ ಪಾಲಿನ ಸಂಪೂರ್ಣ ಹಣವನ್ನು ಬಿಡುಗಡೆ ಮಾಡುವಂಥ ವ್ಯವಸ್ಥೆಯನ್ನು ತಾವು ರಾಜ್ಯ ಸರ್ಕಾರದ ಮುಖಾಂತರ ಮಾಡಬೇಕು.

ಶ್ರೀ ಪಿ.ಜಿ.ಆರ್. ಸಿಂಧ್ಯ (ಬೃಹತ್, ಮಧ್ಯಮ ಹಾಗೂ ಸಣ್ಣ ಕೈಗಾರಿಕೆ ಮತ್ತು ಮೂಲ ಸೌಲಭ್ಯ ಸಚಿವರು):– ಅಲ್ಲಿನ ಶಾಸಕರುಗಳು, ಲೋಕಸಭಾ ಸದಸ್ಯರು ಬಂದು ಕೇಳಿದ ಮೇಲೆ 15 ನಿಮಿಷದಲ್ಲಿ 20 ಕೋಟಿ ರೂ. ರಿಲೀಸ್ ಮಾಡಿದ್ದೇವೆ. ಮತ್ತೆ 10 ಕೋಟಿ ರೂ. ರಿಲೀಸ್ ಮಾಡುತ್ತಿದ್ದೇವೆ. ಹೀಗೆ ಒಟ್ಟು 30 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೇವೆ, ಅದನ್ನು ನೀವು ಹೇಳುವುದೇ ಇಲ್ಲ.

ಶ್ರೀ ಡಿ.ಆರ್. ಪಾಟೀಲ್:– 20 ಕೋಟಿ ರೂಪಾಯಿಗಳನ್ನು ರಿಲೀಸ್ ಮಾಡಿದ್ದೀರಿ ಎಂದು ಹೇಳಿದ್ದೇನೆ. ಆ ಕೆಲಸ ಪ್ರಾರಂಭವಾಗಿ ನಾಲ್ಕು ವರ್ಷಗಳಾದವು. ಮುಂದಿನ ವರ್ಷವಾದರೂ ಅದು ಪೂರ್ಣವಾಗುವ ಹಾಗೆ ಹಣ ಬಿಡುಗಡೆ ಮಾಡಿ ಎಂದು ಕೇಳುತ್ತಿದ್ದೇನೆ. ಅದರಿಂದ, ಬಿಜಾಪುರ, ಬಾಗಲಕೋಟೆ ಮತ್ತು ಗದಗ್ ಈ ಮೂರು ಜಿಲ್ಲಾ ಕೇಂದ್ರಗಳ ಅಭಿವೃದ್ಧಿ ಬಹಳ ತೀವ್ರತರವಾಗಿ ಆಗುತ್ತದೆ. ಇದು ಆದರೆ ನಮಗೆ ಬಾಂಬೆಯೂ ಸಮೀಪವಾಗುತ್ತದೆ. ಬೆಂಗಳೂರು ಸಮೀಪವಾಗುತ್ತದೆ ಹಾಗು ಗದಗ್, ಬಾಗಲಕೋಟೆ ಹಾಗು ಬಿಜಾಪುರಗಳಲ್ಲಿ ವ್ಯಾಪಾರ ಮತ್ತು ಉದ್ಯಮ ರಂಗಗಳ ಬೆಳವಣಿಗೆಗೆ ಬಹಳಷ್ಟು ಅನುಕೂಲವಾಗುತ್ತದೆ. ಆದರೆ, ಅದೇನೋ ನಮ್ಮ ದುರ್ದೈವದಿಂದ ಆ ಕೆಲಸ ಇನ್ನು ಪೂರ್ಣಗೊಂಡಿಲ್ಲ. ಜಾಫರ್ ಷರೀಫ್‌ರವರು ಇನ್ನೊಂದು ವರ್ಷ ರೈಲ್ವೆ ಮಂತ್ರಿಗಳಾಗಿದ್ದರೆ, ಆಗಲೇ ಈ ಗೇಜ್ ಕನ್ವರ್ಷನ್ ಕೆಲಸ ಮುಗಿಯುತ್ತಿತ್ತು. ಆಗ ಕೈಬಿಟ್ಟಂಥ ಇದು ಸುಮಾರು 10–12 ವರ್ಷಗಳಿಂದ ಹಾಗೇ

ನಡೆದಿದೆ. ಅದಕ್ಕಾಗಿ, ತಾವು ದಯವಿಟ್ಟು ಅನುಕೂಲ ಮಾಡಿಕೊಡಬೇಕು ಎನ್ನುವ ಮಾತನ್ನು ಹೇಳುತ್ತೇನೆ.

ಇನ್ನು, ಕೇಂದ್ರ ಸರ್ಕಾರದವರು ತಮ್ಮ ಬಜೆಟ್‌ನಲ್ಲಿ ಈ ಸಲ, ವೀಕಾಗಿರುವ ಡಿ.ಸಿ.ಸಿ. ಬ್ಯಾಂಕುಗಳನ್ನು ಸ್ಟ್ರೆಂಗ್ತನ್ ಮಾಡಲು ವಿಶೇಷ ಕಾರ್ಯಕ್ರಮವನ್ನು ಹಾಕಿಕೊಳ್ಳುತ್ತಿದ್ದಾರೆ. ನಮ್ಮ ರಾಜ್ಯದಲ್ಲೂ ಬಹಳಷ್ಟು ಡಿ.ಸಿ.ಸಿ. ಬ್ಯಾಂಕುಗಳು ವೀಕ್ ಆಗಿವೆ. ಮಾನ್ಯ ಸಿಂಧ್ಯಾರವರೇ, ದಯವಿಟ್ಟು ಈ ಕಡೆ ಸ್ವಲ್ಪ ಲಕ್ಷ್ಯ ಕೊಡಬೇಕು. ಡಿ.ಸಿ.ಸಿ. ಬ್ಯಾಂಕುಗಳ......

ಅಧ್ಯಕ್ಷರು:- ಮಾನ್ಯ ಪಾಟೀಲರೇ, ಈಗಾಗಲೇ ತಾವು ಮಾತನಾಡಲು ಪ್ರಾರಂಭಿಸಿ 50 ನಿಮಿಷಗಳಾಗಿವೆ. ತಾವು ಆದಷ್ಟು ಬೇಗ ಮುಗಿಸಬೇಕು.

ಶ್ರೀ ಡಿ.ಆರ್. ಪಾಟೀಲ್:- ಬೇಗ ಮುಗಿಸುತ್ತೇನೆ. ವೀಕ್ ಡಿ.ಸಿ.ಸಿ. ಬ್ಯಾಂಕನ್ನು ರೀಹ್ಯಾಬಿಲಿಟೇಟ್ ಮಾಡುವ ಕೆಲಸ ತುರ್ತಾಗಿ ಆಗಬೇಕು. ಈ ವರ್ಷ ನಾವು ಶತಮಾನೋತ್ಸವವನ್ನು ಆಚರಿಸುತ್ತಿದ್ದೇವೆ. ಕ್ರೆಡಿಟ್ ಡಿಸ್ಬರ್ಸ್‌ಮೆಂಟ್‌ನಲ್ಲಿ DCC is a very important institution. ಲೋನ್ ಬರುವುದರಲ್ಲಿ ಮತ್ತು ಲೋನ್ ಹಚ್ಚುವುದರಲ್ಲಿ ಇರುವ ಗ್ಯಾಪನ್ನು ತುಂಬಲು ಕೇಂದ್ರ ಸರ್ಕಾರದವರು, ರಾಜ್ಯ ಸರ್ಕಾರದವರು ಮತ್ತು ಅಪೆಕ್ಸ್ ಬ್ಯಾಂಕಿನವರು ಶೇರ್ ಮಾಡಿಕೊಳ್ಳಬೇಕಾಗಿದೆ. ಆ ರೀತಿ ಶೇರ್ ಆಗುವಂಥ ಕೆಲಸಕ್ಕೆ ಬೇಕಾಗುವಂಥ ಹಣಕಾಸಿನ ವ್ಯವಸ್ಥೆಯನ್ನು ತಾವು ಮಾಡಿದರೆ ಕೇಂದ್ರ ಸರ್ಕಾರದ ಯೋಜನೆ ಉಪಯೋಗವಾಗುತ್ತದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಯಾವ ಡಿ.ಸಿ.ಸಿ. ಬ್ಯಾಂಕು ಎಂದು ಹೇಳಿ.

ಶ್ರೀ ಡಿ.ಆರ್. ಪಾಟೀಲ್:- ಎಲ್ಲಾ ಡಿ.ಸಿ.ಸಿ. ಬ್ಯಾಂಕುಗಳು, ಅದರಲ್ಲಿ ವಿಶೇಷವಾಗಿ ನಮ್ಮ ಕೆ.ಸಿ.ಸಿ. ಬ್ಯಾಂಕು. ಬಹಳಷ್ಟು ಡಿ.ಸಿ.ಸಿ. ಬ್ಯಾಂಕುಗಳು ವೀಕ್ ಆಗಿವೆ. ನಮ್ಮ ಕೆ.ಸಿ.ಸಿ. ಬ್ಯಾಂಕು ಬಹಳಷ್ಟು ತೊಂದರೆಯಲ್ಲಿದೆ. ಅರ್ಬನ್ ಬ್ಯಾಂಕುಗಳು ಬಹಳಷ್ಟು ತೊಂದರೆಯಲ್ಲಿವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ವೀಕ್ ಅಲ್ಲ ಬಹಳಷ್ಟು ಡಿ.ಸಿ.ಸಿ. ಬ್ಯಾಂಕುಗಳು ಮುಳುಗಿಹೋಗಿವೆ.

ಶ್ರೀ ಜೆ.ಸಿ. ಮಾಧುಸ್ವಾಮಿ:- ಡಿ.ಸಿ.ಸಿ. ಬ್ಯಾಂಕುಗಳು ಮುಳುಗಿಹೋಗಿವೆ ಎಂದು ಮಿನಿಸ್ಟರೇ ಹೇಳಿದರೆ ನಾವು ಏನು ಮಾತನಾಡುವುದು? ಡಿ.ಸಿ.ಸಿ. ಬ್ಯಾಂಕುಗಳು ಮುಳುಗಿ ಹೋಗಿವೆ ಎಂದು ನೀವು ಹೇಳುತ್ತಿದ್ದೀರಲ್ಲಾ ಎಂದು ಹೇಳಿದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ:- ಡಿ.ಸಿ.ಸಿ. ಬ್ಯಾಂಕುಗಳ ಅವ್ಯವಹಾರ ಎಲ್ಲರಿಗೂ ಗೊತ್ತಿರುವ ವಿಚಾರವೇ? ಅವರು ಸಹಕಾರಿ ಕ್ಷೇತ್ರದಲ್ಲಿ ದುಡಿಯುತ್ತಿರ-ತಕ್ಕಂಥವರು. ಎಸ್.ಎಸ್. ಪಾಟೀಲರು ಮತ್ತು ಡಿ.ಆರ್. ಪಾಟೀಲರಂಥ ಎಷು ಜನ ಸಹಕಾರಿ ಕ್ಷೇತ್ರದಲ್ಲಿದ್ದಾರೆ? ನಾನು ಸಹಕಾರಿ ಕ್ಷೇತ್ರದ ಮುಖಂಡರನ್ನು ಹೊಗಳುತ್ತಿದ್ದೇನೆ. ಅವರು ಬಹಳ ಒಳ್ಳೆಯ ಜನರಾಗಿದ್ದಾರೆ ಮತ್ತು ಬಹಳ

ಪ್ರಾಮಾಣಿಕರಾಗಿದ್ದಾರೆ. ಆದರೆ ಸಹಕಾರಿ ಸಂಸ್ಥೆಗಳು ಏನಾಗಿವೆ ಎಂದು ಹೇಳಿ. ಡಿ.ಸಿ.ಸಿ. ಬ್ಯಾಂಕುಗಳನ್ನು ರೀಹ್ಯಾಬಿಲಿಟೇಷನ್ ಮಾಡಬೇಕು ಎನ್ನುವ ಮಾತನ್ನು ಹೇಳುತ್ತಾರೆ. ನಮ್ಮದು ಸಮ್ಮಿಶ್ರ ಸರ್ಕಾರ. ಸಮ್ಮಿಶ್ರ ಸರ್ಕಾರದಲ್ಲಿ ಎರಡೆರಡು ಅಭಿಪ್ರಾಯಗಳಿರುತ್ತವೆ. ಎರಡರ ಮಧ್ಯೆ ಏನೋ ಒಂದು ಕಾಂಪ್ರೊಮೈಸ್ ಮಾಡಿಕೊಂಡು ಧರಂಸಿಂಗ್‌ರವರು ನಡೆಸಿಕೊಂಡು ಹೋಗುತ್ತಿದ್ದಾರೆ. ಅದು ಬೇರೆ ವಿಚಾರ. ಮುಳುಗಿ ಹೋಗಿರತಕ್ಕಂಥ ಈ ಬ್ಯಾಕುಗಳನ್ನೆಲ್ಲಾ ಮೇಲಕ್ಕೆ ಎತ್ತಬೇಕು ಎಂದರೆ ಅದು ಬಹಳ ಕಷ್ಟಸಾಧ್ಯವಾದ ಕೆಲಸ. ಇದು ನನ್ನ ವೈಯಕ್ತಿಕವಾದ ಅಭಿಪ್ರಾಯ; ಇದು ಸರ್ಕಾರದ ಅಭಿಪ್ರಾಯವಲ್ಲ.

ಶ್ರೀ ಆರಗ ಜ್ಞಾನೇಂದ್ರ:– ಮಾನ್ಯ ಅಧ್ಯಕ್ಷರೆ, ಸರ್ಕಾರದಲ್ಲಿರುವಂಥ ಸಚಿವರುಗಳೇ, 50 ಜನರನ್ನು ಅಪಾಯಿಂಟ್ ಮಾಡಿಕೊಳ್ಳಿ, 100 ಜನರನ್ನು ಅಪಾಯಿಂಟ್ ಮಾಡಿಕೊಳ್ಳಿ ಎಂದು ಇಲ್ಲಿಂದ ಅನುಮತಿ ಕೊಟ್ಟು ಕಳುಹಿಸಿದರೆ ಡಿ.ಸಿ.ಸಿ. ಬ್ಯಾಂಕುಗಳು ಉಳಿಯುತ್ತವೆಯೇ? ಅವುಗಳೇನು ಕೆಲಸಕೊಡುವಂಥ ಇಂಡಸ್ಟ್ರಿಗಳೇ? ಇದರ ದೆಸೆಯಿಂದ ರೈತರ ಮನೆಗಳು ಹಾಳಾಗಿ ಹೋಗುತ್ತವೆ. ಕಂಪ್ಯೂಟರುಗಳು ಬಂದ ಮೇಲೆ ನ್ಯಾಷನಲೈಸ್ಡ್ ಬ್ಯಾಂಕುಗಳಲ್ಲಿರುವಂಥ ಉದ್ಯೋಗಿಗಳಿಗೆ ವಿ.ಆರ್.ಎಸ್. ಕೊಟ್ಟು ಕಳುಹಿಸುತ್ತಿದ್ದರೆ, ನಮ್ಮ ಡಿ.ಸಿ.ಸಿ. ಬ್ಯಾಂಕುಗಳು ತುಂಬಿಕೊಳ್ಳುತ್ತವೆ ಎಂದರೆ ಅವುಗಳು ಉಳಿಯುತ್ತವೆಯೇ? ರೈತರಿಗೆ ಇರುವಂಥ ಏಕೈಕ ಆರ್ಥಿಕ ಸಾಧನಗಳು ಅವು. ಅವು ಈ ರೀತಿಯಾದರೆ ಕಾಪಾಡಲು ಹೇಗೆ ಸಾಧ್ಯ? ಮಂತ್ರಿಗಳಿಂದ ಹಿಡಿದು ಎಲ್ಲರೂ ಸೇರಿ ಇವುಗಳನ್ನು ಕೊಲೆ ಮಾಡಲು ಒಂದು ದೊಡ್ಡ ಪ್ರಯತ್ನವೇ ನಡೆದಿದೆ. ಯಾರ ಯಾರ ಕಾಲದಲ್ಲಿ ಏನೇನಾಗಿದೆ ಎಂಬುದನ್ನು ದಯವಿಟ್ಟು ತೆಗೆಸಿ ನೋಡಿ.

ಶ್ರೀ ಎಸ್.ಎಲ್. ಧರಮೇಗೌಡ:– ಸನ್ಮಾನ್ಯ ಅಧ್ಯಕ್ಷರೆ, ಜಿಲ್ಲಾ ಸಹಕಾರ ಬ್ಯಾಂಕುಗಳ ಬಗ್ಗೆ ಮಾತನಾಡುತ್ತಿದ್ದಾರೆ. ನಾನು ಸಹ ಒಂದು ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕಿನ ಅಧ್ಯಕ್ಷನಾಗಿದ್ದೇನೆ. ಡಿ.ಸಿ.ಸಿ. ಬ್ಯಾಂಕುಗಳು ವೀಕ್ ಆಗಿವೆ ಎಂದು ಹೇಳುತ್ತಿರುವಂಥಾದ್ದರಲ್ಲಿ ಕೋಲಾರದ ಬ್ಯಾಂಕು ಬರಬಹುದು. ಬೆಂಗಳೂರಿನ ಬ್ಯಾಂಕು ಬರಬಹುದು ಅಥವಾ ಡಿ.ಆರ್. ಪಾಟೀಲರು ಹೇಳುತ್ತಿರುವಂಥ ಬ್ಯಾಂಕುಗಳು ಬರಬಹುದು. ಉಳಿದಂತೆ, ಈ ರಾಜ್ಯದಲ್ಲಿರುವ ಬಹುತೇಕ ಬ್ಯಾಂಕುಗಳು ಸದೃಢವಾಗಿವೆ. ಇದು ಒಂದು ವಿಚಾರ. ಎರಡನೆಯದಾಗಿ, ರಾಜ್ಯ ಸರ್ಕಾರ ರೈತರಿಗೆ ಪ್ಯಾಕೇಜ್ ಘೋಷಣೆ ಮಾಡಿದ್ದು, ಅದರ ಮುಖಾಂತರ ಬರತಕ್ಕಂಥ ಹಣದಲ್ಲಿ ರಾಜ್ಯದ ಎಲ್ಲಾ ಬ್ಯಾಂಕುಗಳು ಉತ್ತಮವಾಗುತ್ತವೆ ಎನ್ನುವ ಆಶಾದಾಯಕ ಭಾವನೆಯಲ್ಲಿ ಜನರು ಇದ್ದಾರೆ.

(ಈ ಹಂತದಲ್ಲಿ ಉಪಾಧ್ಯಕ್ಷರು ಪೀಠವನ್ನಲಂಕರಿಸಿದರು)

ಇವತ್ತು ಸರ್ಕಾರ ಘೋಷಣೆ ಮಾಡಿರುವಂತೆ, ರೈತರಿಗೆ ಶೇಕಡಾ 6ರ ಬಡ್ಡಿದರದಲ್ಲಿ ಸಾಲ ಕೊಡತಕ್ಕಂಥ ಕಾರ್ಯಕ್ರಮದ ಪ್ರಕಾರ, ಅದನ್ನು ಹಂಚಿಕೆ ಮಾಡುವಂಥ ಕಾರ್ಯಕ್ರಮವನ್ನು ಆ ಬ್ಯಾಂಕುಗಳು ಮಾಡುತ್ತವೆ. ಪರಿಸ್ಥಿತಿ ಹೀಗಿರುವುದರಿಂದ, ಎಲ್ಲೋ ಒಂದು ಕಡೆ ಮೂರ್‍ನಾಲ್ಕು ಬ್ಯಾಂಕುಗಳು ಹಾಳಾಗಿರುವುದನ್ನು ಹೇಳುವಾಗ, ದಯಮಾಡಿ ಎಲ್ಲಾ ಬ್ಯಾಂಕುಗಳನ್ನು ಅದರಲ್ಲಿ

ಸೇರಿಸಬಾರದು ಎನ್ನುವ ಮಾತನ್ನು ಹೇಳುತ್ತೇನೆ. ಮಂಗಳೂರಿನ ಬ್ಯಾಂಕ್ ಚೆನ್ನಾಗಿದೆ. ಬೀದರ್‌ನ ಬ್ಯಾಂಕ್ ಚೆನ್ನಾಗಿದೆ. ಈಗ ಸರ್ಕಾರ ಮಾಡಿರುವ ಘೋಷಣೆಯಿಂದ ಚಿಕ್ಕಮಗಳೂರಿನ ಬ್ಯಾಂಕು ಚೆನ್ನಾಗಿ ಆಗುತ್ತದೆ. ಹಾಸನ ಬ್ಯಾಂಕ್ ಚೆನ್ನಾಗಿದೆ. ಹೀಗಿರುವಾಗ, ಏಕೆ ಪದೇ ಪದೇ ಎಲ್ಲಾ ಬ್ಯಾಂಕುಗಳಿಗೂ ಆ ಮಾತನ್ನು ಅನ್ವಯಿಸುತ್ತಾರೆ ಎನ್ನುವುದು ಗೊತ್ತಾಗುವುದಿಲ್ಲ. ಎಲ್ಲೋ ಕೆಲವು ಕಡೆ ಲೋಪಗಳಾಗಿರಬಹುದು, ಧಾರವಾಡದ ಬ್ಯಾಂಕ್ ಚೆನ್ನಾಗಿಲ್ಲದೇ ಇರಬಹುದು ಅಥವಾ ಕೋಲಾರದ ಬ್ಯಾಂಕ್ ಚೆನ್ನಾಗಿಲ್ಲದೇ ಇರಬಹುದು ಅಥವಾ ಬೆಂಗಳೂರಿನ ಬ್ಯಾಂಕ್ ಚೆನ್ನಾಗಿಲ್ಲದೇ ಇರಬಹುದು. ದಯಮಾಡಿ, ಅದನ್ನು ಎಲ್ಲಾ ಬ್ಯಾಂಕುಗಳಿಗೂ ಅನ್ವಯಿಸಬಾರದೆಂದು ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಡಿ.ಆರ್. ಪಾಟೀಲ್:- ಡಿ.ಸಿ.ಸಿ. ಬ್ಯಾಂಕುಗಳನ್ನು ರೀಹ್ಯಾಬಿಲಿಟೇಟ್ ಮಾಡಲು ಹಿಂದೆ ನಮ್ಮ ಸರ್ಕಾರವಿದ್ದಾಗ ಒಂದು ಪ್ಯಾಕೇಜ್ ಅನೌನ್ಸ್ ಮಾಡಿತ್ತು. ಆ ಪ್ಯಾಕೇಜ್ ಪ್ರಕಾರ ಹಣಕಾಸನ್ನು ಬಿಡುಗಡೆ ಮಾಡಲು ಸಾಧ್ಯವಾಗಲಿಲ್ಲ. ಆ ಪ್ಯಾಕೇಜನ್ನು ತಾವು ದಯವಿಟ್ಟು ಅನುಷ್ಠಾನಗೊಳಿಸಿ ಧಾರವಾಡದ ಕೆ.ಸಿ.ಸಿ. ಬ್ಯಾಂಕು ಸರಿಯಾಗಿ ತನ್ನ ಕಾರ್ಯಾರಂಭ ಮಾಡುವ ಹಾಗೆ ವ್ಯವಸ್ಥೆಯನ್ನು ರೂಪಿಸಬೇಕು.

ಶ್ರೀ ಜೆ.ಸಿ. ಮಾಧುಸ್ವಾಮಿ:- ಮಾನ್ಯ ಪಾಟೀಲರೆ, ಒಂದೇ ಒಂದು doubt ಇದೆ. ನೀವು ಒಂದೂವರೆ ಪರ್ಸೆಂಟ್ commission ತೆಗೆದುಕೊಂಡು additional share 10% ನ್ನು turnover ಗೆ ಸೊಸೈಟಿಯ ಹಣವನ್ನು D.C.C. Bank ನಲ್ಲಿಟ್ಟುಕೊಂಡು, ಈಗ D.C.C. Bank ಗೆ rehabilitate ಮಾಡಿ ಎಂದು ಕೇಳುತ್ತಿದ್ದೀರಿ. ನಬಾರ್ಡ್ ನಮಗೆ 8.5% 5.5.% ಗೆ ಕೊಡುವ loan ಅನ್ನು ನೀವು ಇಲ್ಲಿ ತಂದು 9.5%, 12.5% ಮಾಡಿದ್ದಲ್ಲದೆ Bank ಗೆ rehabilitation ಏಕೆ ಕೇಳುತ್ತಿದ್ದೀರಿ ಎನ್ನುವುದು ನಮಗೆ ಅರ್ಥವಾಗಬೇಕು. ಅಲ್ಲಿ loan ನಲ್ಲಿ ನಿಮಗೆ ಪರ್ಸೆಂಟೇಜ್, ನಾನು VSSNL ನಲ್ಲಿ ಸಾಲ ತೆಗೆದುಕೊಂಡರೆ ನಿಮ್ಮ D.C.C. Bank ಗೆ 1.5%, 2% ನಾನು commission ಕೊಡಬೇಕು. ನಾನು ಅಲ್ಲಿ additional share 10 ಪರ್ಸೆಂಟ್ ಬಿಡಬೇಕು ಅಂದರೆ 10000 ತೆಗೆದುಕೊಂಡರೆ 1000 share ಬಿಡಬೇಕು. ಅದನ್ನೂ ಸಹ ನೀವು ಸೊಸೈಟಿನಲ್ಲಿ ಇಡುವುದಕ್ಕೆ ಬಿಡಲಿಲ್ಲ. ಅದನ್ನು ತೆಗೆದುಕೊಂಡು ಬಂದು D.C.C. Bank ನಲ್ಲಿ ಇಟ್ಟುಕೊಂಡು ವ್ಯವಹಾರ ಮಾಡಲಾಗುತ್ತಿದೆ. ಇಷ್ಟೆಲ್ಲ ಆದರೂ loss ಏಕೆ ಆಯಿತು ಎನ್ನುವುದನ್ನು ತಾವು co-operator ಆಗಿ ಹೇಳಬೇಕಲ್ಲಾ ರೈತರ cost ನಲ್ಲಿ you have cheated farmers of Karnataka. ಒಂದು middle agency ಇಟ್ಟುಕೊಂಡು ವ್ಯವಹಾರ ಮಾಡುವುದರಿಂದ ಆ D.C.C. Bank ಅನ್ನು ತೆಗೆದುಬಿಡಿ. Apex Bank ನಿಂದ ನೇರವಾಗಿ ಸೊಸೈಟಿಗೆ ಹಣ ಕೊಟ್ಟುಬಿಡಿ. ಇದರಿಂದ 2% ಬಡ್ಡಿ ನಮಗೆ ಉಳಿಯುತ್ತದೆ. ನೇರವಾಗಿ ಕೊಡಿ. ನೀವು VSSNL ಇದ್ದುದ್ದನ್ನು Bank ಎಂದು designate ಮಾಡಿದ್ದು ಏಕೆ? ಅದನ್ನು ತೆಗೆಯಬೇಕೆಂದು ಹೇಳಿದ್ದೆವು. ತೆಗೆದಿದ್ದೀರಾ? ಕನಿಷ್ಠ 10 ಲಕ್ಷ ರೂಪಾಯಿಗಳಿಂದ ಮೇಲೆ

turnover ಮಾಡುವ ಎಲ್ಲಾ VSSNL ಗಳನ್ನು ಸಹಕಾರಿ ಬ್ಯಾಂಕ್ ಎಂದು nominate ಮಾಡಿಬಿಟ್ಟು 2 ಪರ್ಸೆಂಟ್ ಅಥವಾ 1.5 ಪರ್ಸೆಂಟ್ ಅನ್ನು ಸೊಸೈಟಿ ಕೊಡುವ ಸಾಲಕ್ಕೆ ನೀವು ಏನು commission ತೆಗೆದುಕೊಳ್ಳುತ್ತಿದ್ದೀರಿ, ಅದನ್ನು farmers ಗೆ pass on ಮಾಡಬೇಕೆಂದು ಮಾಡಿ, DCC Bank ಗೆ package ಕೊಡಿ rehabilitate ಮಾಡಿ ಎಂದರೆ ಯಾರ cost ನಲ್ಲಿ ನಡೆದಿದೆ? ಏಕೆ ನಡೆದಿದೆ? loss ಏಕೆ ಆಯಿತೆಂದು ತಾವು ಹೇಳಬೇಕಲ್ಲವೇ?

ಶ್ರೀ ಡಿ.ಆರ್. ಪಾಟೀಲ್:– ಮಾನ್ಯ ಉಪಾಧ್ಯಕ್ಷರೆ, DCC Bank ಅಲ್ಲಿ staff ನವರು strike ಮಾಡಿದರು. ಇಲ್ಲವೆಂದರೆ KCC Bank ಈ ಸ್ಥಿತಿಗೆ ಬರುತ್ತಿರಲಿಲ್ಲ. ಅವರು strike ಮಾಡದೇ ಇದ್ದಿದ್ದರೆ ಆ depositors ಅಲ್ಲಿಂದ ಹಣವನ್ನು withdraw ಮಾಡುತ್ತಿರಲಿಲ್ಲ. ಒಂದು ಸಲ depositors ವಿಶ್ವಾಸ ಕಳೆದುಕೊಂಡರೆಂದರೆ ಯಾವುದೇ bank ಇರಲಿ, ಅಷ್ಟು liquidity ಯಾರ ಹತ್ತಿರ ಇರುತ್ತದೆ? ಅದು circulation ನಲ್ಲಿ ಇದ್ದರೆ ಅನುಕೂಲವಾಗುತ್ತದೆ. ಅದಕ್ಕೆ ಏನೋ ಕಾರಣದಿಂದಾಗಿ ಇವತ್ತು ಪರಿಸ್ಥಿತಿ ಬಹಳಷ್ಟು ತೊಂದರೆಗೆ ಒಳಗಾಗಿದೆ. ಅದಕ್ಕಾಗಿ KCC Bank ಗೆ ವಿಶೇಷ ಲಕ್ಷ್ಯ ವಹಿಸಿ ಆ rehabilitation package ಅನ್ನು ಅನುಷ್ಠಾನಗೊಳಿಸಿ ಅದು ಮತ್ತೆ ಆ ಭಾಗದ ರೈತರ ಸೇವೆ ಮಾಡಲಿಕ್ಕೆ ಸನ್ನದ್ಧವಾಗುವಂತೆ ಮಾಡುವ ಜವಾಬ್ದಾರಿ ಮಾನ್ಯ ಸಿದ್ದರಾಮಯ್ಯನವರದ್ದು ಎನ್ನುವ ಮಾತನ್ನು ನಾನು ಒತ್ತಿ ಹೇಳಿ, ಈ ಸಲ ಮಾನ್ಯ ಅರ್ಥ ಸಚಿವರು ಏನು tax ಎತ್ತುತ್ತೀರಿ, ಅದರೊಳಗೆ ಈ ಆಡಳಿತ ನಿರ್ವಹಣೆ ಸಲುವಾಗಿಯೇ ಖರ್ಚು ಬಹಳ ಆಗುತ್ತಿರುವುದನ್ನು ಕಳೆದ ಹಲವಾರು ವರ್ಷಗಳಿಂದ ನಾವು ನೋಡುತ್ತಿದ್ದೇವೆ. ಇದು ಹೆಚ್ಚು ಆದ ಹಾಗೆ ನಮ್ಮ ಊರಿಗೆ, ನಮ್ಮ ನಗರಕ್ಕೆ ಬೇಕಾಗುವಂಥ ಅಭಿವೃದ್ಧಿ ಕೆಲಸಕ್ಕೆ ಹಣ ಕಡಿಮೆ ಆಗುತ್ತಿದೆ. ಅದಕ್ಕೆ ನನ್ನ ಸಲಹೆ ಏನೆಂದರೆ, ಈ taxation ನಲ್ಲಿ ಸಿಬ್ಬಂದಿ ನಿರ್ವಹಣೆ ಸಲುವಾಗಿಯೇ ಒಂದು tax ಬೇರೆ ಇರಬೇಕು ಮತ್ತು area development ಸಲುವಾಗಿಯೇ ಒಂದು tax ಬೇರೆ ಇರುವಂತೆ ಹೀಗೆ split ಮಾಡಿ tax ಎತ್ತುವುದಕ್ಕೆ ಅನುಕೂಲವಾಗುತ್ತದೋ ಹೇಗೆ ಎನ್ನುವುದರ ಬಗ್ಗೆ ತಾವು ವಿಚಾರ ಮಾಡಬೇಕು. ಇದನ್ನು ನಾನು ಏಕೆ ಹೇಳುತ್ತಿದ್ದೇನೆಂದರೆ, ಸರ್ಕಾರಿ ನೌಕರರು ಬಂದು ನಿಮಗೆ ಒತ್ತಾಯ ಮಾಡುತ್ತಾರೆ. ಆಗ ನಿಮಗೆ ಮನಸ್ಸು ಇರಲಿ ಅಥವಾ ಇಲ್ಲದೇ ಇರಲಿ ಒಂದು Pay Commission ಅನ್ನು ಮಾಡುವುದಕ್ಕೆ ಅವರ ಒತ್ತಾಯಕ್ಕೆ ಒಳಗಾಗಿ ಒಪ್ಪುತ್ತೀರಿ. ಸುಮಾರು 5–6 ಲಕ್ಷ family ಸಲುವಾಗಿ ನೀವು yield ಆಗುತ್ತೀರಿ. ಹಾಗಾಗಿ ಇವರ ವೆಚ್ಚವನ್ನು ಸರಿದೂಗಿಸುವುದರ ಸಲುವಾಗಿ ಉಳಿದ ಪ್ರದೇಶಾಭಿವೃದ್ಧಿಗಾಗಿ ಬೇಕಾಗಿರುವಂಥ ಯೋಜನೆಗಳಲ್ಲಿ ಕಡಿತವನ್ನು ಅನಿವಾರ್ಯವಾಗಿ ಮಾಡುವ ಪ್ರಸಂಗ ನಡೆಯುತ್ತದೆ. ಅದಕ್ಕೆ ಇವೆರಡನ್ನೂ demarcate ಮಾಡಿ ನಾನು ಅಭಿವೃದ್ಧಿ ಸಲುವಾಗಿ tax ಹಾಕುತ್ತೇನೆ ಮತ್ತು ಇವರ ಸಲುವಾಗಿ ಇದಕ್ಕೆ tax ಹಾಕುತ್ತೇನೆಂದು ಮಾಡಿದರೆ ಇದರಿಂದ ಜನರಿಗೂ ಸರಿಯಾದ ತಿಳುವಳಿಕೆ ಬರುತ್ತದೆ.

ಆವಾಗ ನೌಕರರು ಕೇಳುವುದಕ್ಕೂ ಸ್ವಲ್ಪ ಅಂಜುತ್ತಾರೆ. 'ಏಕೆ ಅಷ್ಟು ಕೊಡಬೇಕ್ರಿ, ಅವರಿಗೆ ಪಗಾರ ಸಾಕಷ್ಟು ಐತೆ' ಎಂದು ಸಮಾಜವೇ ಎದ್ದು ನಿಂತು ಉತ್ತರ ಕೊಡಲಿಕ್ಕೆ ಅನುಕೂಲವಾಗುತ್ತದೆ. ಆದ್ದರಿಂದ ಅದನ್ನು split ಮಾಡುವುದಕ್ಕೆ ಸಾಧ್ಯವಾದರೆ ತಾವು ಈ ಪ್ರಯೋಗ ಮಾಡುವುದು ಒಳಿತೇನೋ ಎನ್ನುವ ಸಲಹೆಯನ್ನು ನಾನು ಕೊಡಬಯಸುತ್ತೇನೆ. ಇನ್ನು ತಾವು ಬಜೆಟ್‌ನಲ್ಲಿ ಸುಮಾರು 560 ಕೋಟಿ ರೂಪಾಯಿಗಳನ್ನು ಈ foodgrains distribution ಸಲುವಾಗಿ below poverty ಯವರಿಗೆ at concessional rate ರೂ. 3ಕ್ಕೆ ಒಂದು ಕೆ.ಜಿ.ಯಂತೆ ಕೊಡುವುದನ್ನು ತಾವು ಅಳವಡಿಸಿದ್ದೀರಿ.

ಶ್ರೀ ಜೆ.ಸಿ. ಮಾಧುಸ್ವಾಮಿ:– ಅದು 560 ಕೋಟಿ ರೂ. ಅಲ್ಲ. 500 ಕೋಟಿ ರೂ.

ಶ್ರೀ ಡಿ.ಆರ್. ಪಾಟೀಲ್:– ಇರಲಿ. ಇದು ಜನರಿಗೆ ಮುಟ್ಟಬೇಕು. ಇದು ಜನರಿಗೆ ಮುಟ್ಟುವುದರೊಳಗೆ ಸ್ವಲ್ಪ ಅಲ್ಲಲ್ಲಿಯೇ ಅವ್ಯವಹಾರವಾಗುತ್ತದೆಂದು complaint ಬರುತ್ತದೆ. ಅದಕ್ಕೆ ದಯವಿಟ್ಟು ತಾವು ಒಂದು ಕೆಲಸ ಮಾಡಿಸಬೇಕು. ಆ foodgrains ಮತ್ತು ಚಿಮಣಿ ಎಣ್ಣೆ ಇವು ಸಂಬಂಧಪಟ್ಟ ಊರಿಗೆ ಹೋಗಿ ತಲುಪಬೇಕು. ಅದು ತಲುಪಿರುವ ಬಗ್ಗೆ ಇಂತಿಷ್ಟು foodgrains ಈ ಊರಿಗೆ ಬಂದಿದೆ. ನಮ್ಮ ಹುಲಕೋಟಿಗೆ ಬರಬೇಕಾದದ್ದು ಬಂದಿದೆ. ಇಷ್ಟು ಚಿಮಿಣಿ ಎಣ್ಣೆ ಬಂದಿದೆ ಎಂದು ಅದು ಎಲ್ಲಾದರೂ ಒಂದು ಕಡೆ ರೆಕಾರ್ಡ್, documentation ಆಗುವ ಹಾಗೆ ಮಾಡಬೇಕು. ಇಲ್ಲದಿದ್ದರೆ ಹಂಚುವವರು ಮತ್ತು supply ಮಾಡುವವರು ಹೀಗೆ ಇವರಿಬ್ಬರೂ ಸೇರಿಕೊಂಡರೆ ಮುಗಿದುಹೋಗುತ್ತದೆ. ಅವಾಗ ಹಂಚಿದರೂ ಸಹಿತ 3–4 ದಿವಸ ಹಂಚುತ್ತಾರೆ. ಆ ಮೇಲೆ ಬಂದ್ ಮಾಡುತ್ತಾರೆ. ಇದು ನಿರಂತರವಾಗಿ ಸಿಗುವಂತಹ ವ್ಯವಸ್ಥೆಯಾಗಬೇಕು. ಅದು ನೇರವಾಗಿ ಜನರಿಗೆ ಮುಟ್ಟುವ ಹಾಗೆ ಆಗಬೇಕು. ಬಹಳಷ್ಟು ನಾವು ಈ delivery system ಏನಿದೆ ಇದಕ್ಕೆ ತಾವು ವಿಶೇಷ ಲಕ್ಷ್ಯವಹಿಸಿ ಇದು transparent ಆಗುವ ಹಾಗೆ ಇದು efficient ಆಗುವ ಹಾಗೆ ನೀವು delivery system ಅನ್ನು improve ಮಾಡುವ ಹಾಗೆ ಕ್ರಮ ಕೈಗೊಳ್ಳಬೇಕು. ಬರೀ foodgrains ಅಷ್ಟೇ ಅಲ್ಲ ಪ್ರತಿಯೊಂದರಲ್ಲೂ ಅದು ಯಾವುದೇ ಯೋಜನೆಯಾಗಿರಲಿ, ಸರ್ಕಾರದ ಯೋಜನೆ ನೇರವಾಗಿ ಫಲಾನುಭವಿಗಳಿಗೆ ನೀವು ಏನು ಅಪೇಕ್ಷೆ ಪಟ್ಟಿರುತ್ತೀರಿ ಅದು ಪೂರ್ತಿ ಅವರಿಗೆ ಹೋಗಿ ಮುಟ್ಟಬೇಕು. ಆ ವ್ಯವಸ್ಥೆಯಲ್ಲಿ ನಡುವೆ ಕೆಲಸ ಮಾಡತಕ್ಕಂಥವರು ಅದನ್ನು cut ಮಾಡದ ಹಾಗೆ ನಿಗಾ ವಹಿಸುವ ಕೆಲಸವನ್ನು ತಾವು ಮಾಡಬೇಕು. ಇದರಲ್ಲಿ ಜನರನ್ನು, ಜನರ ಸಂಘಟನೆಗಳು ಪಾಲ್ಗೊಳ್ಳುವುದಕ್ಕೆ ತಾವು ಅವಕಾಶ ಮಾಡಿಕೊಟ್ಟರೆ ಬಹಳ ಒಳ್ಳೆಯದು. ಇದನ್ನು ಯಾವ ರೀತಿ ಸುಧಾರಣೆ ಮಾಡುವುದಕ್ಕೆ ಸಾಧ್ಯವಾಗುತ್ತದೆ ಎನ್ನುವುದನ್ನು ತಾವು ವಿಚಾರ ಮಾಡಿ ಆ ಸುಧಾರಣೆಯ ಕ್ರಮಗಳನ್ನು ತಾವು ಕೈಗೊಳ್ಳಬೇಕೆನ್ನುವಂಥ ಮಾತನ್ನು ನಾನು ಹೇಳಬಯಸುತ್ತೇನೆ. ಇನ್ನು ದೇವದಾಸಿ ಪದ್ಧತಿ ಬಗ್ಗೆ ನಾನು ತಮಗೆ ಹೇಳಿದ್ದೆ. ಅಥಣಿ ತಾಲ್ಲೂಕಿನಲ್ಲಿ ವಿಮೋಚನಾ ಸಂಘದವರು ದೇವದಾಸಿ ಮಕ್ಕಳ ಸಲುವಾಗಿಯೇ ಒಂದು residential school ಅನ್ನು

ಪ್ರಾರಂಭ ಮಾಡಿದ್ದಾರೆ. Christian Children Fund ನವರು ಇದಕ್ಕೆ ಅನುದಾನ ಕೊಡುತ್ತಿದ್ದರು. ಅವರು ಮೊದಲು 5 ವರ್ಷ ಕೊಡುತ್ತೇವೆಂದರು. ಅದನ್ನು ಮತ್ತೆ 5 ವರ್ಷ extend ಮಾಡಿದರು. 10 ವರ್ಷವಾದ ಮೇಲೆ ಅವರು withdraw ಮಾಡಿದ್ದಾರೆ. ಈಗ ಕಳೆದ 2–3 ವರ್ಷಗಳಿಂದ ಆ ಸಂಸ್ಥೆಯನ್ನು ತೂಗಿಸಿಕೊಂಡು ಹೋಗುವುದಕ್ಕೆ ಆ ಸಂಸ್ಥೆಯ ಸಂಘಟಕರಿಗೆ ಬಹಳಷ್ಟು ತಾಪತ್ರಯವಾಗಿದೆ. ತಾವು ದಯವಿಟ್ಟು ಇದಕ್ಕೆ ವಿಶೇಷ ಅನುದಾನ ಸಿಗುವ ಹಾಗೆ ಮಾಡಿದರೆ ಬಹಳ ಅನುಕೂಲವಾಗುತ್ತದೆ. ಅದಕ್ಕೆ ವಿಶೇಷ ಅನುದಾನವನ್ನು ಕೊಡಲಿಕ್ಕೆ ಅದನ್ನು pick up ಮಾಡಲಿಕ್ಕೆ ನೀತಿ ನಿಯಮಗಳಲ್ಲಿ ನಿಮಗೇನಾದರೂ ತೊಂದರೆ ಇದ್ದರೆ, ತಾವೇನು ಈಗ ಹೊಸದಾಗಿ residential school ಅನ್ನು ಪ್ರಾರಂಭ ಮಾಡುವುದಕ್ಕೆ ಅನುಮತಿ ಕೊಡಬೇಕೆಂದಿದ್ದೀರಿ, ಇನ್ನೋ ಒಂದು school ಎಂದು recognise ಮಾಡಿದಿರೆಂದರೆ, ನೀವು ಒಂದು ಸಲ ಹೋಗಿ ಆ school ಅನ್ನು ನೋಡಿದರೆ ಖಂಡಿತವಾಗಿ ನೀವು ಅದನ್ನು appreciate ಮಾಡುತ್ತೀರಿ. Supreme Court ಸಹಿತ ಇಡೀ ರಾಷ್ಟ್ರದಲ್ಲೇ ದೇವದಾಸಿ ಮಕ್ಕಳಿಗೆ ಈ ರೀತಿ ಒಂದು ವ್ಯವಸ್ಥೆ ಮಾಡಿ ಶಿಕ್ಷಣ ಸಿಗುವಂಥ ವ್ಯವಸ್ಥೆಯನ್ನು ಮಾಡಿದರೆ ಮುಂದಿನ ಪೀಳಿಗೆ ಇದಕ್ಕೆ ಬಲಿಯಾಗುವುದಿಲ್ಲವೆಂದು Supreme Court ಅದನ್ನು appreciate ಮಾಡಿ ಕೇಂದ್ರ ಸರ್ಕಾರಕ್ಕೆ ಆದೇಶ ಮಾಡಿದೆ. ಅದಕ್ಕೆ ದಯವಿಟ್ಟು ಇದೊಂದು ಆಗುವ ಹಾಗೆ ಮಾಡಿದರೆ ಬಹಳಷ್ಟು ಅನುಕೂಲವಾಗುತ್ತದೆ ಎನ್ನುವ ಮಾತನ್ನು ತಮಗೆ ಹೇಳಿ, ತಾವು ಕೊಟ್ಟಿರುವಂಥ ಈ ಬಜೆಟ್ ಅನ್ನು ನಾನು ಸ್ವಾಗತ ಮಾಡಿ, ಈ ಪ್ರದೇಶಾಭಿವೃದ್ಧಿಗೆ ತಾವೇನು ಹಣ ಇಟ್ಟಿದ್ದೀರಿ ಅದರೊಳಗೆ ಹೈದರಾಬಾದ್ ಕರ್ನಾಟಕ ಹಿಂದುಳಿದ ಪ್ರದೇಶ, ಅವರಿಗೆ ಹೆಚ್ಚು ಹಣ ಇಟ್ಟಿದ್ದೀರಿ ಪರವಾಗಿಲ್ಲ. ಆದರೆ ಮಲೆನಾಡಿಗಿಂತ ನಮ್ಮ ಬಯಲು ಪ್ರದೇಶದವರು ಮುಂದುವರಿದವರೇನೂ ಅಲ್ಲ. ಮಲೆನಾಡು ಪ್ರದೇಶಕ್ಕೆ ರೂ. 20 ಕೋಟಿ, ನಮಗೆ ರೂ. 5 ಕೋಟಿ ಇಟ್ಟಿದ್ದೀರಿ. ಇದು ತಾರತಮ್ಯವೆಂದು ನನಗೆ ಅನಿಸುತ್ತದೆ. ನಾವು ಈ ತಾರತಮ್ಯ ಬಗೆಹರಿಸಬೇಕೆಂದು ನೀವು ಹಿಂದಿನ ಸರ್ಕಾರದಲ್ಲಿ ಅರ್ಥಮಂತ್ರಿಗಳಾಗಿದ್ದಾಗಲೂ ಪ್ರಯತ್ನ ಪಟ್ಟಿರಿ. ಆಗ ಆಗಲಿಲ್ಲ. ನಮ್ಮ ಸರ್ಕಾರದೊಳಗೂ ಪ್ರಯತ್ನ ಪಟ್ಟೆವು. ಆಗಲೂ ಸಹ ಆಗಲಿಲ್ಲ. ಈಗಲಾದರೂ ಆಗುತ್ತದೋ ಇಲ್ಲವೋ ಎನ್ನುವುದು ನನಗೆ ಗೊತ್ತಿಲ್ಲ. ತಾವು ಹಿಂದೆ ಜೆ.ಹೆಚ್. ಪಟೇಲರ ಸರ್ಕಾರದಲ್ಲಿ ಅರ್ಥಮಂತ್ರಿಗಳಾಗಿದ್ದಾಗ ನಮಗೆ ಈ floor ನೊಳಗೆ ಬಯಲು ಸೀಮೆ ಪ್ರದೇಶಕ್ಕೆ ಹೆಚ್ಚು ಹಣ ಕೊಡುತ್ತೇವೆನ್ನುವ ಭರವಸೆಯನ್ನು ನಮಗೆ ಕೊಟ್ಟಿದ್ದಿರಿ. ಬಯಲು ಪ್ರದೇಶದ ಅಭಿವೃದ್ಧಿಗಾಗಿ ಹಣಕಾಸನ್ನು ಹೆಚ್ಚು ಮಾಡುತ್ತೇವೆನ್ನುವ ಭರವಸೆಯನ್ನು ತಾವು ಇಲ್ಲಿ ಕೊಟ್ಟಿದ್ದಿರಿ. ಆಗ ಏಕೋ ಅದು ತಮ್ಮಿಂದ ಈಡೇರಲಿಲ್ಲ. ಮುಂದೆ ನಮ್ಮ ಸರ್ಕಾರ ಬಂದಾಗಲೂ ಅದನ್ನು ಹೆಚ್ಚು ಮಾಡಿಸಲಿಕ್ಕೆ ನಮ್ಮ ಕೈಯಿಂದ ಸಾಧ್ಯವಾಗಲಿಲ್ಲ. ಈಗಲಾದರೂ ಆ ಬಯಲು ಪ್ರದೇಶದ ಅಭಿವೃದ್ಧಿ ಎಂದರೆ, ಅದು DPAP ಏರಿಯಾ. ಅದಕ್ಕೆ ನೀವು ಬೇಕಾದರೆ ಎಲ್ಲಾ ಹಣವನ್ನು ನೀರು ಸಂಗ್ರಹಣೆಕ್ಕೋಸ್ಕರ ಮಳೆ ಆಶ್ರಿತ ಕೃಷಿಯನ್ನು ಸುಧಾರಿಸುವುದಕ್ಕೋಸ್ಕರ

ವಿನಿಯೋಗ ಮಾಡಿ ಎಂದು ಕಂಡೀಷನ್ ಹಾಕಿ ಕೊಟ್ಟರೂ ಸಹಿತ, ಇದಕ್ಕೆ ನಾವು ಉಪಯೋಗ ಮಾಡುತ್ತೇವೆ. ದಯವಿಟ್ಟು ಆ surplus budget ಹಣ ಏನಿದೆ. ಅದನ್ನು ಈ ನಮ್ಮ ಬಯಲು ಪ್ರದೇಶದ ಅಭಿವೃದ್ಧಿಗಾಗಿ ಅದನ್ನು ಮೀಸಲಿಟ್ಟರೆ ಬಹಳ ಅನುಕೂಲವಾಗುತ್ತದೆ ಎನ್ನುವಂತಹ ಮಾತನ್ನು ಹೇಳಬಯಸುತ್ತೇನೆ. ಮಾನ್ಯ ನಾಡಗೌಡರು ಹೇಳುತ್ತಿದ್ದಾರೆ. More than 70% MLA ಗಳು ಆ ಏರಿಯಾದಿಂದಲೇ ಬರುತ್ತಿದ್ದೇವೆ. ನಮ್ಮ ವ್ಯವಸ್ಥೆಯಲ್ಲಿ ಅದೇ ದುರ್ದೈವ. ಬಹಳ ಮಂದಿ ನಾವು ಯಾರನ್ನು represent ಮಾಡುತ್ತೇವೋ ಅವರ ಶೋಷಣೆ ನಿರಂತರವಾಗಿ ನಡೆಯುತ್ತಿದೆ. ಅವರ ಹಿತರಕ್ಷಣೆ ಆಗುತ್ತಿಲ್ಲ. ಎಷ್ಟು ಅಸಹಾಯಕರಾಗಿ ನಾವು ಈ ವ್ಯವಸ್ಥೆಯನ್ನು ನೋಡಬೇಕಾಗಿದೆ. ಎನ್ನುವುದನ್ನು ತಾವು ವಿಚಾರ ಮಾಡಬೇಕು. ನಾವೆಲ್ಲರೂ ಆತ್ಮಾವಲೋಕನ ಮಾಡಿಕೊಂಡು, ಅವಕಾಶ ಸಿಕ್ಕಾಗ ನಾವು ಯಾರನ್ನು ಪ್ರತಿನಿಧಿಸುತ್ತೇವೋ ಅವರ ಹಿತರಕ್ಷಣೆ ಮಾಡುವಂತಹ ಯೋಜನೆಗಳನ್ನು ಅದಕ್ಕೆ ಬೇಕಾಗುವಂತಹ ಹಣಕಾಸನ್ನು ರೂಢಿಸುವಂತಹ ಕೆಲಸ ಆಗಲಿ ಎಂದು ಹಾರೈಸಿ, ನನಗೆ ಮಾತನಾಡಲು ಅವಕಾಶ ಕೊಟ್ಟಿದ್ದಕ್ಕೆ ಮಾನ್ಯ ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಮಹಿಮಾ ಜೆ. ಪಟೇಲ್ (ಚೆನ್ನಗಿರಿ):– ಮಾನ್ಯ ಉಪಾಧ್ಯಕ್ಷರೆ, ನಮ್ಮ ಮಾನ್ಯ ಉಪಮುಖ್ಯಮಂತ್ರಿಯವರು ಮಂಡಿಸಿರುವ 2005–06ರ ಆಯವ್ಯಯವನ್ನು ನಾನು ಮೆಚ್ಚುತ್ತಾ ಅವರು ಇರತಕ್ಕಂಥ ಹಣಕಾಸಿನ ವ್ಯವಸ್ಥೆಯಲ್ಲಿ ಅತ್ಯುತ್ತಮವಾದ ಬಜೆಟ್‌ನ್ನು ಮಂಡಿಸಿದ್ದಾರೆ. ಅದಕ್ಕಾಗಿ ಅವರಿಗೆ ಹಾರ್ದಿಕ ಶುಭಾಶಯಗಳನ್ನು ಹೇಳುತ್ತಾ ಶಿಕ್ಷಣಕ್ಕಾಗಿ ಕಳೆದ ವರ್ಷ ಅಂದರೆ 2004–05ರಲ್ಲಿ ನೀಡಿದ್ದ 4300 ಕೋಟಿ ರೂಪಾಯಿಗಳಿಂದ ಶೇಕಡ 11ರಷ್ಟು ಹೆಚ್ಚಿಸಿ 4800 ಕೋಟಿ ರೂಪಾಯಿಗಳಷ್ಟನ್ನು ಈ ಸಾಲಿಗೆ ಒದಗಿಸಿದ್ದಾರೆ. ಇದನ್ನು ನಾನು ಸ್ವಾಗತಿಸುತ್ತೇನೆ. ಆದರೆ, ನಮ್ಮ ಶಿಕ್ಷಣ ಪದ್ಧತಿ ಏನಿದೆ ಅದರಲ್ಲಿ ಅಮೂಲಾಗ್ರವಾದ ಬದಲಾವಣೆಯಾಗಬೇಕಾಗಿದೆ. ಈಗ ಇರತಕ್ಕ ಪದ್ಧತಿಯಲ್ಲಿ ಈಗಾಗಲೇ ಎಸ್.ಎಸ್.ಎಸ್.ಸಿ. ಯವರೆಗೆ ಮಕ್ಕಳನ್ನು ಫೇಲ್ ಮಾಡಬಾರದು ಎಂಬ ಸೂಚನೆಯನ್ನು ಕೊಟ್ಟಿದ್ದಾರೆ. ಆದರೂ ಈಗ ಇರತಕ್ಕ ಶಿಕ್ಷಣ ಪದ್ಧತಿಯಲ್ಲಿ ಪರೀಕ್ಷೆಗಳನ್ನೇನು ನಡೆಸುತ್ತಾರೆ ಇದು ಮಕ್ಕಳ ಮೇಲೆ ಅವರ ಮನಸ್ಸಿನ ಮೇಲೆ ಅಪಾರವಾದ ಒತ್ತಡವನ್ನು ತರುತ್ತಾ ಮಕ್ಕಳು ಬೆಳೆಯುತ್ತಾ, ಬೆಳೆಯುತ್ತಾ ತಮ್ಮ ವಿಕಾಸದಲ್ಲಿ ಕುಂಟಿತರಾಗುತ್ತಿರುವುದನ್ನು ನಾವೆಲ್ಲ ನೋಡುತ್ತಿದ್ದೇವೆ. ಈಗ ಇರುವ ಶಿಕ್ಷಣ ಪದ್ಧತಿ ಒಂದು ಸ್ಪರ್ಧಾತ್ಮಕವಾದ ಶಿಕ್ಷಣ ಪದ್ಧತಿಯಾಗಿದೆ. ಬಹಳ ಚಿಕ್ಕ ವಯಸ್ಸಿನಿಂದಲೇ ಮಕ್ಕಳಿಗೆ ಒಬ್ಬರ ಮೇಲೆ ಒಬ್ಬರು ಕಾಂಪೀಟ್ ಮಾಡುವುದನ್ನು ಕಲಿಸುತ್ತಿದ್ದೇವೆ. ಅದು ಬೆಳೆಯುತ್ತಾ ಬೆಳೆಯುತ್ತಾ ವಿಧಾನಸಭೆಯವರೆಗೆ ಬಂದರೂ ಅದೇ ಕಾಂಪಿಟೇಷನ್‌ನೇ ಇದೆ. ಆದರೆ, ಶಿಕ್ಷಣ ಪದ್ಧತಿಯಲ್ಲಿ ಈ ಕಾಂಪಿಟೇಟೀವ್ ಶಿಕ್ಷಣದಿಂದ ಕೋ–ಆಪರೇಟೀವ್ ಶಿಕ್ಷಣ ಬರಬೇಕಾಗಿರುವುದು ಬಹಳ ಮುಖ್ಯ. ಶಿಕ್ಷಣದಲ್ಲಿ ಶಾಲಾ ಗುಣಮಟ್ಟ ಮೌಲ್ಯ ನಿರ್ಧಾರ ಸಂಸ್ಥೆಯನ್ನು ಸ್ಥಾಪಿಸಲು ಉಪಮುಖ್ಯಮಂತ್ರಿಯವರೇನು ಉದ್ದೇಶಿಸಿದ್ದಾರೆ ಆ ಗುಣಮಟ್ಟ ಮೌಲ್ಯ ನಿರ್ಧಾರ ಸಂಸ್ಥೆಯೇನಿದೆ

ಅದನ್ನು ನಿರ್ಧಾರ ಮಾಡುವಂಥವರ ಗುಣಮಟ್ಟವನ್ನು ನಾವು ಮೊದಲು ನಿರ್ಧಾರ ಮಾಡಬೇಕಾಗುತ್ತದೆ. ನನ್ನ ಸ್ನೇಹಿತನೊಬ್ಬ ಹಾಲೆಂಡ್‌ನಲ್ಲಿ ಒಂದು ಶಾಲೆಯನ್ನು ನಡೆಸುತ್ತಿದ್ದಾನೆ. ಅವನು ಹೇಳುತ್ತಿದ್ದ. ಅಲ್ಲಿ ಬಹಳಷ್ಟು ಮುಕ್ತವಾದ ಶಿಕ್ಷಣ ಇರುತ್ತದೆ. ಅಂಥ ಶಿಕ್ಷಣ ಪದ್ಧತಿಯಲ್ಲೇ ಮಕ್ಕಳು 15ನೇ ವಯಸ್ಸಿಗೆ ಬರುವಷ್ಟರಲ್ಲಿ ಮನೋ ವಿಜ್ಞಾನಿಗಳ ಹತ್ತಿರ ಹೋಗಿ ಚಿಕಿತ್ಸೆಯನ್ನು ಪಡೆಯುವ ಮಟ್ಟಕ್ಕೆ ಬಂದು ಮುಟ್ಟುತ್ತಾರಂತೆ. ಆದ್ದರಿಂದ ಹೊಸ ಶಿಕ್ಷಣ ಪದ್ಧತಿಯನ್ನು ಈಗಾಗಲೇ ವಿಶ್ವದಾದ್ಯಂತ ಮಾಡುತ್ತಿದ್ದಾರೆ. ಅದೇನೆಂದರೆ, ಮಕ್ಕಳು ತಮ್ಮ ಆಯ್ಕೆಯ ವಿಷಯವನ್ನು, ಯಾರನ್ನು ಆಯ್ಕೆ ಮಾಡಿಕೊಳ್ಳುತ್ತಾರೆ ಅವರಿಂದ ತಾವು ಎಲ್ಲಿ ಕಲಿಯಲು ಇಚ್ಛೆ ಪಡುತ್ತಾರೆ ಅಲ್ಲಿ ಕಲಿಯುವಂಥ ಒಂದು ಪದ್ಧತಿಯನ್ನು ವಿಶ್ವದಾದ್ಯಂತ ಮಾಡುತ್ತಿದ್ದಾರೆ. ನಾವೂ ಕೂಡ ಈಗಾಗಲೇ ಪ್ರಪಂಚದ ಜೊತೆಗೆ ಸಂಪೂರ್ಣವಾಗಿ ತೆರೆದುಕೊಂಡಿರುವುದರಿಂದ ನಮ್ಮ ಶಿಕ್ಷಣ ಪದ್ಧತಿಯಲ್ಲೂ ಅಮೂಲಾಗ್ರವಾದ ಬದಲಾವಣೆ ಬರಬೇಕಾಗಿದೆ. ಈಗ ಉದ್ದೇಶಿಸಿರುವಂಥ 4800 ಕೋಟಿ ರೂಪಾಯಿಗಳಲ್ಲಿ ಹೆಚ್ಚು ಹಣವನ್ನು ಶಿಕ್ಷಣ ಮತ್ತು ಶಿಕ್ಷಣದ ಪದ್ಧತಿಯನ್ನು ಉತ್ತಮ ಪಡಿಸುವುದರ ಕಡೆಗೆ ಉಪಯೋಗಿಸಬೇಕು. ಅಕ್ಷರ ದಾಸೋಹ. ಇದರ ಅಡಿಯಲ್ಲಿ 39 ಸಾವಿರ ಅಡುಗೆ ಕೇಂದ್ರಗಳು ಈಗಾಗಲೇ ಆಗಿದೆಯೆಂದು ಹೇಳಿದ್ದಾರೆ. ಆದರೆ, ಇನ್ನೂ ಬಹಳಷ್ಟು ಶಾಲೆಗಳಲ್ಲಿ ಅಡುಗೆ ಮನೆಗಳು ಆಗಿಲ್ಲ. ಬಹಳಷ್ಟು ತೊಂದರೆಯನ್ನು ಮಕ್ಕಳು ಅನುಭವಿಸುತ್ತಿದ್ದಾರೆ. ಶಾಲೆಗಳಲ್ಲಿ ಕೊಠಡಿಗಳ ಸಂಖ್ಯೆ ನನ್ನ ಚೆನ್ನಗಿರಿ ತಾಲ್ಲೂಕಿನಲ್ಲಿ ಎಷ್ಟು ಕೊಠಡಿಗಳು ಬೇಕಾಗುತ್ತದೆ, ಎಷ್ಟು ಹಣ ಬೇಕಾಗುತ್ತದೆ, ಎಂಬ ಬಗ್ಗೆ ಲೆಕ್ಕಾಚಾರ ಮಾಡಿಸಿದೆ. ಸುಮಾರು ಒಂದೂಕಾಲು ಕೋಟಿ ರೂಪಾಯಿಗಳಷ್ಟು ಚೆನ್ನಗಿರಿ ತಾಲ್ಲೂಕು ಒಂದರಲ್ಲೇ ಶಾಲಾ ಕೊಠಡಿಗಳು ಮತ್ತು ಕಾಪೌಂಡ್ ನಿರ್ಮಾಣಕ್ಕಾಗಿ ಅವಶ್ಯಕತೆ ಇದೆ. ಆ ರೀತಿ ಲೆಕ್ಕಾ ಮಾಡುತ್ತಾ ಹೋದರೆ ರಾಜ್ಯಾದ್ಯಂತ ಕಡಿಮೆ ಇರುವ ಶಾಲಾ ಕೊಠಡಿಗಳು, ಶಾಲೆಗಳಿಗೆ ಬೇಕಾದಂಥ ಕಾಪೌಂಡ್‌ಗಲ ನಿರ್ಮಾಣದ ಕಡೆಗೆ ಗಮನಹರಿಸಿದರೆ ಸಾಕಷ್ಟು ಹಣದ ಅವಶ್ಯಕತೆ ಇದೆ. ಆದರೆ, ಇರತಕ್ಕ ಇತಿಮಿತಿಯಲ್ಲಿ ಇದಕ್ಕಾಗಿ ಈಗಾಗಲೇ ಸಾಕಷ್ಟು ಹಣವನ್ನು ಕೊಟ್ಟಿರುವುದಕ್ಕೆ ನಾನು ಸ್ವಾಗತಿಸುತ್ತೇನೆ. ಆಹಾರ ವಿತರಣೆಯಲ್ಲಿ ಈಗಾಗಲೇ ಮಾನ್ಯ ಸಚಿವರಾದ ಮಹದೇವ್‌ಪ್ರಸಾದ್‌ರವರು ಒಳ್ಳೆಯ ಹೆಜ್ಜೆಯನ್ನಿಟ್ಟು ಈಗ ಎಲ್ಲಾ ಕಡೆ ಸರ್ವೆ ಮಾಡಲು ಪ್ರಾರಂಭ ಮಾಡುತ್ತಿದ್ದಾರೆ. ಇದರ ಬಗ್ಗೆ ಈಗಾಗಲೇ ಸಾಕಷ್ಟು ಜನ ಸದಸ್ಯರು ಚರ್ಚೆ ಮಾಡಿರುವುದರಿಂದ, ಈ ಸರ್ವೆ ಆಗುವಾಗ ನಿಜವಾಗಲೂ ಬಡವರಿಗೆ ಸಿಗುವಂತೆ ಆಗಬೇಕು. ಏಕೆಂದರೆ ಹಿಂದಿನ ಸರ್ಕಾರ ಹೋಗಿದ್ದಕ್ಕೆ ಬಹಳಷ್ಟು ಕಾರನ ಈ ಆಹಾರ ವಿತರಣೆಯ ಕಾರ್ಡುಗಳ ಹಂಚಿಕೆಯಲ್ಲಿ ಬಹಳಷ್ಟು ಏರುಪೇರುಗಳಾಗಿದ್ದು ಎಂಬುದು ನಮಗೆ ಕಂಡುಬರುತ್ತದೆ. ಈಗ ಕಾರ್ಡುಗಳನ್ನು ಹಂಚಿಕೆ ಮಾಡುವಾಗ ನಿಜವಾದ ಬಡವರಿಗೆ ಕಾರ್ಡುಗಳು ಸಿಗುವುದಕ್ಕೆ ಗಮನಕೊಡಬೇಕು. ನಾವು ಹಳ್ಳಿಗಳಲ್ಲಿ ಹೋಗಿ ಕೇಳಿದರೆ ಕೇವಲ ಶ್ರೀಮಂತರ ಹತ್ತಿರ ಕಾರ್ಡುಗಳು ಇದ್ದಾವೆ ಎಂದು ದೂರನ್ನು ಹೇಳುತ್ತಾರೆ. ಆ ರೀತಿ ಶ್ರೀಮಂತರಿಗೆ ಕಾರ್ಡು ಸಿಗದಂತೆ ಬಡವರಿಗೆ ಮಾತ್ರ ಕಾರ್ಡು ಸಿಗುವಂತೆ ಈಗಾಗಲೇ ನಿಬಂಧನೆಗಳನ್ನು ಹಾಕಿಕೊಂಡು ಏನು ಸರ್ವೆ

ಮಾಡುತ್ತಿದ್ದಾರೆ. ಅಂಥ ನಿಬಂಧನೆಯ ಅಡಿಯಲ್ಲಿ ಅದಕ್ಕೆ ವಿರೋಧ ಪಕ್ಷದವರೇನು ಬದಲಾವಣೆಯನ್ನು ಸೂಚಿಸಿದ್ದಾರೆ ಅದನ್ನು ಗಮನದಲ್ಲಿಟ್ಟುಕೊಂಡು ನಿಜವಾದ ಬಡವರಿಗೆ, ವಿರೋಧ ಪಕ್ಷದವರು ಹೇಳಿದಂತೆ ಮೀನು ಹಿಡಿಯುವಂಥವರು, ಕೋಳಿ ಸಾಕುವಂಥವರು ಕೂಡ ಕೆಲವರು ವೆಹಿಕಲ್‌ನ್ನು ಇಟ್ಟುಕೊಂಡಿದ್ದಾರೆ. ಅವರ ವ್ಯಾಪಾರಕ್ಕೆ ಅನುಕೂಲವಾಗುವ ರೀತಿ ಪೆಟ್ರೋಲ್‌ನ್ನು ಉಪಯೋಗಿಸಲೇ ಬೇಕಾಗುತ್ತದೆ. ಅಡುಗೆ ಮಾಡುವವರು ಮೊಬೈಲ್ ಟೆಲಿಫೋನ್‌ನನ್ನು ಇಟ್ಟುಕೊಂಡಿದ್ದಾರೆಂದು ಹೇಳಿದರು. ಅವರ ವ್ಯಾಪಾರಕ್ಕೆ ಅನುಕೂಲವಾದರೂ ಕೂಡ, ಅವರು ನಿಜವಾಗಲೂ ಬಡತನ ರೇಖೆಗಿಂತ ಕೆಳಗೆಯೇ ಇರುತ್ತಾರೆ. ಆದ್ದರಿಂದ ಅದನ್ನು ಗಮನದಲ್ಲಿಟ್ಟುಕೊಂಡು ಸರ್ವೆ ಮಾಡುವಾಗ ನಿಜವಾದ ಬಡವರಿಗೆ ಕಾರ್ಡುಗಳು ಸಿಗುವಂಥ ವ್ಯವಸ್ಥೆಯಾಗಬೇಕು. ಅದರ ಸಹಾಯಧನಕ್ಕಾಗಿ 560 ಕೋಟಿ ರೂಪಾಯಿಗಳನ್ನೇನು ಇಟ್ಟಿದ್ದಾರೆ ಇದನ್ನೂ ಸ್ವಾಗತಿಸುತ್ತೇನೆ. ಗ್ರಾಮೀಣಾ–ಭಿವೃದ್ಧಿಯಲ್ಲಿ ಈಗಾಗಲೇ ಕಳೆದ ವರ್ಷದಲ್ಲಿ ನಮ್ಮ ಚೆನ್ನಗಿರಿ ತಾಲ್ಲೂಕು, ದಾವಣಗೆರೆ ಜಿಲ್ಲೆಯ ಸುತ್ತಮುತ್ತಲಿನ ಎಲ್ಲಾ ಜಿಲ್ಲೆಗಳು ಕರ್ನಾಟಕ ರಾಜ್ಯದ ಬಹಳಷ್ಟು ಜಿಲ್ಲೆ ಮತ್ತು ತಾಲ್ಲೂಕುಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಈಗಾಗಲೇ ತಲೆದೋರಿದ್ದು ಅದಕ್ಕಾಗಿ ಮಂತ್ರಿಗಳಾದ ಸತ್ಯನಾರಾಯಣ್‌ರವರೂ ಇದ್ದಾರೆ. ನಾವು ಎಲ್ಲೇ ಹೋದರೂ ಕುಡಿಯುವ ನೀರಿನ ಸಮಸ್ಯೆಯನ್ನು ಎದುರಿಸುವುದೇ ಶಾಸಕರುಗಳಿಗೆ ಬಹಳಷ್ಟು ಕಷ್ಟವಾಗಿದೆ. ನಾವು ಹೋಗುತ್ತಿರುವ ದಾರಿ ಸರಿ ಇದೆಯೋ ಎಂಬ ಬಗ್ಗೆ ಮತ್ತೆ ಹಿಂದಿರುಗಿ ನೋಡಬೇಕಾಗಿದೆ. ಒಂದೊಂದು ಹಳ್ಳಿಗಳಲ್ಲಿ ನೂರರಿಂದ ನೂರೈವತ್ತು ಕೊಳವೆ ಬಾವಿಗಳನ್ನು ತೆಗೆದಿದ್ದೇವೆ. ನಮ್ಮ ಕಡೆ ಅಡಿಕೆ ಬೆಳೆಯುವುದು ಜಾಸ್ತಿ. ಅಡಿಕೆಯನ್ನು ಉಳಿಸಿಕೊಳ್ಳಬೇಕೆಂದು ಒಂದು ಹತ್ತು ಎಕರೆ ತೋಟವಿದ್ದರೆ ಹತ್ತು ಕೊಳವೆ ಬಾವಿಗಳನ್ನು ತೆಗೆಸಿದ್ದಾರೆ. ಸುಮಾರು ಐವತ್ತು ಅಡಿ ದೂರದಲ್ಲಿ ಒಂದೊಂದು ಬೋರ್‌ವೆಲ್‌ಗಳನ್ನು ಹಾಕಿಸಿರುತ್ತಾರೆ. ಅದೂ ಸಾವಿರ ಅಡಿಯವರೆಗೆ ಬೋರ್‌ವೆಲ್ ತೆಗೆದರೂ ಕೂಡ ಬರೀ ಧೂಳು ಬರುತ್ತಿದೆ. ನೀರು ಬರುತ್ತಿಲ್ಲ. ಆ ರೀತಿ ಪರಿಸ್ಥಿತಿಯಾಗಿದೆ. ಈ ರೀತಿ ನಾವು ಕೊಳವೆ ಬಾವಿಗಳನ್ನು ತೆಗೆಯುತ್ತಿರುವುದು ಸರಿ ಇದೆಯೇ ಎಂಬ ಬಗ್ಗೆ ಮತ್ತೊಮ್ಮೆ ನೋಡಬೇಕಾಗಿದೆ. ವಿಜ್ಞಾನಿಗಳು ಹೇಳುತ್ತಾರೆ. ಭೂಮಿಯ ಕೆಳಗೆ ಅಂತರ್ಜಲವೇನು ಹರಿಯುತ್ತದೆ ಅದು ನದಿಗಳ ರೀತಿ ಹರಿಯುತ್ತಿರುತ್ತದೆ, ನಾವು ನೇರವಾಗಿ ಕೊಳವೆ ಬಾವಿಗಳನ್ನು ಹಾಕಿ ಅದನ್ನು ಎಳೆಯುವುದರಿಂದ ಕೆಳಗೆ ವ್ಯಾಕ್ಯೂಮ್ ಕ್ರಿಯೇಟ್ ಆಗುತ್ತದಂತೆ, ಒಂದು ನಿರ್ವಾತ ವಾತಾವರಣ ಸೃಷ್ಟಿಯಾಗಿ ಅದೇ ಬಹಳ ದಿನ ಮುಂದುವರೆದರೆ ಭೂಮಿ ಕುಸಿದುಹೋಗಬಹುದು ಅಥವಾ ಭೂಕಂಪ ಉಂಟಾಗಬಹುದು, ಸುನಾಮಿಯಂಥ ಅಲೆಗಳು ಏಳುವುದೂ ಕೂಡ ಈ ರೀತಿ ಕೊಳವೆ ಬಾವಿಗಳನ್ನು ನಾವೇನು ಪ್ರಕೃತಿಯ ಮೇಲೆ ಪ್ರಹಾರ ಮಾಡುತ್ತಿದ್ದೇವೆ ಇದರಿಂದಾಗಿ ಈ ರೀತಿಯ ಸಮಸ್ಯೆಗಳು ಆಗುತ್ತದೆ ಎಂದು ವಿಜ್ಞಾನಿಗಳು ಹೇಳುತ್ತಿದ್ದಾರೆ. ನಾವು ವಿಧಾನ ಸಭೆಗೆ ಹೌಸ್ ಎಂದು ಕರೆಯುತ್ತೇವೆ. ಅಪ್ಪರ್ ಹೌಸ್, ಲೋಯರ್ ಹೌಸ್ ಎಂದು ಕರೆಯುತ್ತೇವೆ. ಆದರೆ ನಾವು ಇಲ್ಲಿ ಒಟ್ಟಿಗೆ ಒಂದು ಮನೆಯವರ ರೀತಿ ಕುಳಿತು

ಚರ್ಚೆ ಮಾಡಿ ಒಂದು ನಿರ್ಧಾರಕ್ಕೆ ಬರುತ್ತಿಲ್ಲ. ಎಲ್ಲರೂ ಒಬ್ಬರ ಮೇಲೆ ಒಬ್ಬರು ಬೆರಳು ತೋರಿಸಿ, ನಿಮ್ಮದು ತಪ್ಪು, ನಿಮ್ಮದು ತಪ್ಪು ಎಂದು ನಾವು ಎಲ್ಲರೂ ಹೇಳುವುದರಲ್ಲಿ ಹೆಚ್ಚು ನಿರತರಾಗಿದ್ದೇವೆಯೇ ಹೊರತು ಇದು ಎಲ್ಲಾ ಸಮಸ್ಯೆಗಳಿಗೆ ಒಂದು ಪರಿಹಾರವನ್ನು ನಾವು ಎಲ್ಲಾ ಒಟ್ಟಿಗೆ ಕುಳಿತು ನಮ್ಮ ತಲೆಗಳನ್ನು ಕೂಡಿಸಿ ಹೇಗೆ ಪರಿಹಾರವನ್ನು ಕಂಡುಹಿಡಿಯಬೇಕು ಎನ್ನುವುದರ ಬಗ್ಗೆ ನಾವು ನಮ್ಮ ತಲೆಗಳನ್ನು ಕೂಡಿಸುತ್ತಿಲ್ಲ. ಆ ದಿಕ್ಕಿನಲ್ಲಿ ಈ ಹೌಸ್ ಎಂದರೆ ಒಂದು ಮನೆ, ಮನೆಯಲ್ಲಿ ನಾವೆಲ್ಲಾ ಒಂದು ಕುಟುಂಬದ ಸದಸ್ಯರು ಎನ್ನುವ ಭಾವನೆಯಿಂದ ಕೆಲಸ ಮಾಡಬೇಕಾಗಿದೆ. ಮಾನ್ಯ ಕುಮಾರ ಬಂಗಾರಪ್ಪನವರು ಮಾತನಾಡುವ ಸಂದರ್ಭದಲ್ಲಿ ಒಂದು ಒಳ್ಳೆಯ ಮಾತನ್ನು ಹೇಳಿದರು. ಅವರು ಹೇಳಿದ ಹಾಗೆ ಎಲ್ಲರಿಗೂ ಜವಾಬ್ದಾರಿ ಇರಬೇಕಾಗುತ್ತದೆ. ಹೀಗಾಗಿ ಪ್ರತಿಯೊಬ್ಬರೂ ನಾವು ಜವಾಬ್ದಾರಿಯನ್ನು ತೆಗೆದುಕೊಂಡು ಮಾತನಾಡುವಾಗ, ಕೆಲಸ ಮಾಡುವಾಗ, ಜವಾಬ್ದಾರಿಯಿಂದ ನಡೆದುಕೊಂಡಾಗ ಮಾತ್ರ ಈಗಿರುವ ಎಲ್ಲಾ ಸಮಸ್ಯೆಗಳಿಗೆ ನಾವು ಪರಿಹಾರವನ್ನು ಕಾಣಲಿಕ್ಕೆ ಸಾಧ್ಯತೆ ಇದೆ. ಗ್ರಾಮೀಣಾಭಿವೃದ್ಧಿಯಲ್ಲಿ ಏನು ಹಣವನ್ನು ಒದಗಿಸಿದ್ದಾರೆ ಈ ಹಣ ಸಾಲುವುದಿಲ್ಲ. ಏಕೆಂದರೆ, ನಮಗೆ ಅವಶ್ಯಕತೆ ಇರುವಂಥ ಬಹಳಷ್ಟು ರಸ್ತೆಗಳು, ಕುಡಿಯುವ ನೀರಿನ ಸಮಸ್ಯೆ, ಪ್ರತಿ ಹಳ್ಳಿಯಲ್ಲಿಯೂ ಕೂಡ ಬಾಕ್ಸ್ ಚರಂಡಿ ಆಗಬೇಕು. ರಸ್ತೆಗಳುಲು ಆಗಬೇಕೆಂದು ಅಲ್ಲಿನ ಜನರು ಕೇಳುತ್ತಿದ್ದಾರೆ. ಅದಕ್ಕೆ ಈ ವರ್ಷ ನಾವು ಇರುವ ಹಣದಲ್ಲಿ ಮ್ಯಾನೇಜ್ ಮಾಡುತ್ತಿದ್ದೇವೆ. ಮುಂದಿನ ವರ್ಷಗಳಲ್ಲಿ ಹೆಚ್ಚಿನ ಹಣವನ್ನು ಗ್ರಾಮೀಣಾಭಿವೃದ್ಧಿಗೆ ಕೊಡುವಂಥ ಕೆಲಸ ಆಗಬೇಕಾಗಿದೆ, ಏಕೆಂದರೆ, ಮುಂಧಿನ ವರ್ಷ ಮಂಡಿಸುವ ಬಜೆಟ್‌ನಲ್ಲಿ ಈ ಇಲಾಖೆಗೆ ಹೆಚ್ಚಿನ ಒತ್ತು ಕೊಡಬೇಕೆಂದು ಮಾನ್ಯ ಉಪ ಮುಖ್ಯಮಂತ್ರಿಗಳಾದ ಶ್ರೀಮಾನ್ ಸಿದ್ಧರಾಮಯ್ಯನವರಲ್ಲಿ ಕೇಳಿಕೊಳ್ಳುತ್ತೇನೆ. ಇನ್ನು ನಮ್ಮ ಶ್ರೀ ವಿಶ್ವೇಶ್ವರಯ್ಯನವರು "Industrialise or perish" ಎಂದೇನು ಹೇಳಿದರು, ಔದ್ಯೋಗಿಕರಣ ಅಥವಾ ನಾಶ, ಉದ್ಯಮಗಳನ್ನು ಸ್ಥಾಪನೆ ಮಾಡಬೆಕು ಇಲ್ಲಾಂದ್ರೆ ನಾಶವಾಗುತ್ತೇವೆಂದು ಶ್ರೀ ವಿಶ್ವೇಶ್ವರಯ್ಯನವರು ಏನು ಹೇಳಿದ್ದರು. ಆ ನಿಟ್ಟಿನಲ್ಲಿ ಹೆಚ್ಚಿನ ಉದ್ಯಮಗಳನ್ನು ಸ್ಥಾಪಿಸುವುದಕ್ಕೆ ಮುಂದಾಗಬೇಕಾಗುತ್ತದೆ. ಉದ್ಯಮಗಳು ಎಂದರೆ, ಈಗಾಗಲೇ ಹೇಳಿದ ಹಾಗೆ ಐಟಿ, ಬಿಟಿ, ಇವೇ ಉದ್ಯಮಗಳು ಎನ್ನುವ ಸ್ಥಿತಿಗೆ ಬಂದಿದ್ದೇವೆ. ಇನ್ನು ಸ್ಮಾಲ್ ಸ್ಕೇಲ್ ಇಂಡಸ್ಟ್ರೀಸ್‌ಗಳು ಶೇಕಡ ತೊಂಬತ್ತಕ್ಕಿಂತ ಹೆಚ್ಚು ನಷ್ಟದಲ್ಲಿ ನಡೆಯುತ್ತಿವೆ. ಸ್ಮಾಲ್ ಸ್ಕೇಲ್ ಇಂಡ್‌ಸ್ಟ್ರೀಸ್‌ಗಳನ್ನು ಮಾಡುವುದೇ ತಪ್ಪು ಎನ್ನುವ ಪರಿಸ್ಥಿತಿಗೆ ನಾವು ಈಗಾಗಲೇ ಬಂದು ತಲುಪಿದ್ದೇವೆ. ನಮ್ಮ ಹಳ್ಳಿಗಳಲ್ಲಿ ಕಳೆದ ಮೂರು ವರ್ಷಗಳಲ್ಲಿ ಬರ ಇದ್ದುದ್ದರಿಂದ ಹೆಚ್ಚಿನ ಉತ್ಪತ್ತಿ ಅದರಲ್ಲೂ ಕೃಷಿ ಉತ್ಪನ್ನ ಇಲ್ಲದೇ, ಕೃಷಿ ಉತ್ಪನ್ನ ಆಧಾರಿತ ಒಂದು ಉದ್ಯಮಗಳನ್ನು ಸ್ಥಾಪನೆ ಮಾಡಲಾರದಂಥ ಸ್ಥಿತಿಗೆ ನಾವು ಬಂದಿದ್ದೇವೆ. ಹೊಸದಾಗಿ ನಮಗೇನು ಗೊತ್ತಿದೆ ಎಂದರೆ, ಕೃಷಿಯಲ್ಲಿ ಭತ್ತ, ಕಬ್ಬು, ಅಡಿಕೆ, ಎಂದು ಎಲ್ಲಿ ನೀರಾವರಿ ಇರುತ್ತದೆ ಆ ಭಾಗದಲ್ಲಿ ಇವುಗಳನ್ನು ಬೆಳೆಯಬೇಕೆಂದು ಆಲೋಚನೆ ಮಾಡುತ್ತೇವೆ. ಎಲ್ಲಿ ನೀರಾವರಿ ಇಲ್ಲ ಕೇವಲ ಒಣ ಬೇಸಾಯ ಇದೆ ಅಲ್ಲಿ ಮೆಕ್ಕೆ ಜೋಳ, ಹತ್ತಿ,

ಜೋಳ, ರಾಗಿ ಈ ತರಹದ ಕೆಲವೇ ಕೆಲವು ಬೆಳೆ ಬೆಳೆಯಬೇಕೆಂದು ಆಲೋಚನೆ ಮಾಡುತ್ತೇವೆ. ಆದರೆ ನಾನು ಕೆಲವು ವಿಜ್ಞಾನಿಗಳ ಜೊತೆಗೆ ಮಾತನಾಡಿದಾಗ, ನಾವೇನು ಬಳ್ಳಾರಿ ಜಾಲಿ ಎಂದು ಕರೆಯುತ್ತೇವೆ ಅದನ್ನು ನಾವು ಬೆಳೆದರೆ, ಈ ಮೆಕ್ಕೆಜೋಳ, ಜೋಳ, ಈ ಬೆಳೆಯಿಂದ ಬರತಕ್ಕಂಥ ಹಣಕ್ಕಿಂತ ಹೆಚ್ಚಿನ ಹಣವನ್ನು ನಾವು ಈ ಬಳ್ಳಾರಿ ಜಾಲಿ ಬೆಳೆದರೆ ಪಡೆಯಬಹುದು. ಹಣವನ್ನು ಪಡೆಯಬಹುದು ಹಾಗೂ ಅದರ ಮೂಲಕ ನಾವೇನು ಈಗ ಸೌದೆಗೋಸ್ಕರ ಕಾಡನ್ನು ಕಡಿಯುತ್ತಿದ್ದೇವೆ. ಅದನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತದೆ. ಇಂಥ ಹೊಸ ಹೊಸ ಆಲೋಚನೆಗಳನ್ನು ನಾವು ತೆಗೆದುಕೊಂಡು ಬಂದು ಕೃಷಿಯಲ್ಲಿ ಕೂಡ ಬದಲಾವಣೆಯನ್ನು ಮಾಡುವುದರ ಮೂಲಕ ನಮ್ಮ ಎಲ್ಲಾ ಬದಲಾವಣೆಗಳನ್ನು ತರುವುದಕ್ಕೆ ಸಾಧ್ಯತೆ ಇದೆ. ಇದರ ಮೂಲಕ ಔದ್ಯೋಗಿಕರಣ ಏನು ಇದೆ ಅದನ್ನು ನಾವು ಹೊಸ ಹೊಸ ಬೆಳೆಗಳನ್ನು ಬೆಳೆದು ಅದರ ಆಧಾರಿತವಾದ ಉದ್ಯಮಗಳನ್ನು ಸ್ಥಾಪಿಸುವುದರಿಂದ, ನಾವು ನಮ್ಮ ಹಣಕಾಸಿನ ಸ್ಥಿತಿಯ ಜೊತೆಗೆ ನಮ್ಮ ರಾಜ್ಯದ ಸಂಪೂರ್ಣ ಹಣಕಾಸಿನ ಸ್ಥಿತಿಯನ್ನು ಬದಲಾವಣೆ ಮಾಡುವುದಕ್ಕೆ ಸಾಧ್ಯತೆ ಇದೆ. ನಮ್ಮಲ್ಲಿ ಈಗ ಕೃಷಿ ವಿಜ್ಞಾನ ಸಂಸ್ಥೆಗಳು ಬಹಳಷ್ಟು ಇವೆ. ಅವುಗಳನ್ನು ಉಪಯೋಗ ಪಡೆದುಕೊಂಡು ಅದರ ಆಧಾರದ ಮೇಲೆ ಕೆಲವು ಉದ್ಯಮಗಳನ್ನು ಸ್ಥಾಪಿಸುವಂಥ ಕಡೆಗೆ ನಾವು ಎಲ್ಲರೂ ಆಲೋಚನೆ ಮಾಡಬೇಕಾಗಿದೆ. ನಮ್ಮ ಹತ್ತಿರ ಏನು ರಾ–ಮೇಟಿರಿಯಲ್ ಇದೆ ಅದರ ಆಧಾರದ ಮೇಲೆ ನಾವು ಉದ್ಯಮವನ್ನು ಮಾಡಿದಾಗ ಮಾತ್ರ. ರಾ–ಮೇಟಿರಿಯಲ್ ಬೆಳೆಯುವಂಥ ಕೃಷಿಕರಿಗೆ ರೈತರಿಗೆ ಅವರಿಗೂ ಅನುಕೂಲವಾಗುತ್ತದೆ, ಉದ್ಯಮಗಳನ್ನು ಮಾಡಿದವರಿಗೂ ಅನುಕೂಲವಾಗುತ್ತದೆ, ಸಾಕಷ್ಟು ಕೆಲಸಗಳನ್ನೂ ಕೂಡ ಸೃಷ್ಟಿ ಮಾಡುವುದಕ್ಕೆ ಸಾಧ್ಯತೆ ಇದೆ. ಆ ತರಹದ ಇಂಟಿಗ್ರೇಟೆಡ್ ಪ್ಲಾನ್ ಮಾಡುವುದರ ಕಡೆಗೆ ಸರ್ಕಾರ ಅಲೋಚನೆ ಮಾಡಬೇಕು. ಹಾಗೆಯೇ ವಿದ್ಯುಚ್ಛಕ್ತಿ ಉತ್ಪಾದನೆ ಅದರ ಅವಶ್ಯಕತೆ ನಮಗೆ ಎಷ್ಟರಮಟ್ಟಿಗೆ ಇದೆ ಎನ್ನುವುದರ ಬಗ್ಗೆ ಈಗಾಗಲೇ ಹೇಳಿದ್ದಾರೆ. ರಾಜ್ಯಕ್ಕೆ ಇನ್ನು ಸುಮಾರು 25 ಸಾವಿರ ಮೆ.ವ್ಯಾ. ನಷ್ಟು ವಿದ್ಯುತ್ ಬೇಕಾಗುತ್ತದೆ. ಆದರೆ ನಾವು ಪ್ರೊಡ್ಯೂಸ್ ಮಾಡುತ್ತಿರುವುದು ಕೇವಲ 7500 ಮೆ.ವ್ಯಾ. ನಷ್ಟು ಮಾತ್ರ ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುತ್ತಿದ್ದೇವೆ. ಉಳಿದಂಥ ಗ್ಯಾಪ್ ಏನು ಇದೆ, ಅದಕ್ಕೆ ಸುಮಾರು 4–5 ಸಾವಿರ ಮೆ.ವ್ಯಾ. ನಷ್ಟು ವಿದ್ಯುಚ್ಛಕ್ತಿ ಉತ್ಪಾದನೆಗೆ ಆಲೋಚನೆ ಮಾಡುತ್ತಿದ್ದಾರೆ. ಉಳಿದ ಗ್ಯಾಪ್ ಏನು ಇದೆ ಅದನ್ನು ಹೇಗೆ ತುಂಬಬೇಕು ಎನ್ನುವುದರ ಬಗ್ಗೆ ಸಮಗ್ರವಾದ ಒಂದು ಕಾರ್ಯ ಯೋಜನೆ ಇನ್ನೂ ರೂಪಿತವಾಗಿಲ್ಲ. ಸುಮಾರು ಇನ್ನು 10–15 ಸಾವಿರ ಮೆ.ವ್ಯಾ. ವಿದ್ಯುತ್ ಉತ್ಪಾದನೆಯಾಗಬೇಕಾದರೆ, ನಾವು ಹೈಡ್ರೋ ಎಲೆಕ್ಟ್ರಿಸಿಟಿಗೆ ಬೇಕಾದ ಹೈಡೆಲ್ ಮೂಲಗಳು ಏನು ಇವೆ, ನಾವು ಈಗಾಗಲೇ ಅವುಗಳನ್ನು ಎಲ್ಲವನ್ನು ಮಾಡಿ ಆಗಿದೆ. ಶಾಖೋತ್ಪನ್ನ ಎಂದರೆ ಅದಕ್ಕೆ ಕೋಲ್ ತರಬೇಕು. ದೂರದಿಂದ ಕೋಲ್ ತಂದು ಇಲ್ಲಿ ಉರಿಸಿ ನಾವು ಮತ್ತೆ ಪರಿಸರವನ್ನು ಮಲಿನಗೊಳಿಸಿ ಅದರಿಂದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವುದು ಕಷ್ಟದ ಕೆಲಸ. ಇಲ್ಲಾಂದ್ರೆ ಅಟಾಮಿಕ್ ಎನರ್ಜಿಗೆ ಹೋಗಬೇಕು. ಅದೂ ಕೂಡ ಸ್ವಲ್ಪ ಹೆಚ್ಚು

ಕಡಿಮೆಯಾಯಿತು ಎಂದರೆ ಚರ್ನೋಬಿಲ್‌ನಲ್ಲಿ ಆದಂಥ ಅಘಾತಗಳು ದುರಂತಗಳು ಆಗುವ ಸಾಧ್ಯತೆ ಇರುವುದರಿಂದ ನಾವು ಅಟಾಮಿಕ್ ಎನರ್ಜಿಗೆ ಹೋಗುವುದು ಕಷ್ಟವಾಗುತ್ತದೆ. ಈಗಾಗಲೇ ರಾಜ್ಯ ಸರ್ಕಾರದ ನಮ್ಮ ಒಂದು ಸಂಸ್ಥೆ ಇದೆ. ಏನು non-conventional energy resources ಇದೆ. ಅವುಗಳನ್ನು ಟ್ಯಾಪ್ ಮಾಡಿ ನಾವು ವಿದ್ಯುಚ್ಛಕ್ತಿಯನ್ನು ಉತ್ಪಾದನೆ ಮಾಡುವುದರ ಬಗ್ಗೆ ಹಾಗೂ ಅದನ್ನು ಕಂಡು ಹಿಡಿಯುವುದರ ಬಗ್ಗೆಯೇ ಒಂದು ಸಂಸ್ಥೆ ಇದೆ. ಆದರೆ ಅದರ ಉಪಯೋಗವನ್ನು ನಮ್ಮ ಸರ್ಕಾರಗಳು ಹೆಚ್ಚಾಗಿ ತೆಗೆದುಕೊಂಡಿಲ್ಲ. ಅಂಥ non-conventional energy resources ತೆಗೆಯುವಂಥ ಸಂಸ್ಥೆ ಏನು ಇದೆ, ಅದಕ್ಕೆ ಇನ್ನೂ ಹೆಚ್ಚಿನ ಹಣಕಾಸನ್ನು ಬಿಡುಗಡೆ ಮಾಡಬೇಕಾಗಿದೆ. ನಾವು ಎಲ್ಲೋ ಒಂದು ಕಡೆ ಓದುತ್ತೇವೆ. ನೀರನ್ನು ಉಪಯೋಗಿಸಿ ವಿದ್ಯುಚ್ಛಕ್ತಿಯನ್ನು ತಯಾರಿಸುತ್ತಾರೆ ಅಥವಾ ಸಮುದ್ರದ ಅಲೆಗಳನ್ನು ಉಪಯೋಗಿಸಿ ವಿದ್ಯುಚ್ಛಕ್ತಿಯನ್ನು ತಯಾರಿಸುತ್ತಾರೆ, ಹಾಗೆಯೇ ಈ ಗಾಳಿ, ಸೂರ್ಯಶಕ್ತಿಯಿಂದ ಕೂಡ ವಿದ್ಯುಚ್ಛಕ್ತಿಯನ್ನು ತಯಾರಿಸಲಾಗುವುದೆಂದು ಓದಿರುತ್ತೇವೆ. ಆದರೆ ನಮ್ಮ ಸುತ್ತಮುತ್ತ ಇರುವ ಪ್ರತಿಯೊಂದು ವಸ್ತುಗಳೆಲ್ಲದರಲ್ಲೂ ಸಾಕಷ್ಟು ಎನರ್ಜಿ ಇದೆ. ಸೃಷ್ಟಿಯಾಗಿರುವುದು ಎಲ್ಲವೂ ಎನರ್ಜಿ ಮತ್ತು ಇನ್‌ಫಾರ್ಮೆಷನ್‌ನಿಂದ ಕೂಡಿದೆ ಎಂದು ಹೇಳುತ್ತಾರೆ. ಪ್ರತಿಯೊಂದರಲ್ಲೂ ಎನರ್ಜಿ ಇದೆ, ಈ ಪುಸ್ತಕದಲ್ಲಿ ಕೂಡ ಎನರ್ಜಿ ಇದೆ. ಆದರೆ ಅದನ್ನು ಹೇಗೆ ಟ್ಯಾಪ್ ಮಾಡಬೇಕೆಂಬುದು ನಮಗೆ ಇನ್ನೂ ಗೊತ್ತಿಲ್ಲ. ಆ ಕಡೆಗೆ ನಾವು ಈ ಒಂದು non-conventional energy resources ಕಂಡು ಹಿಡಿಯುವ ಸಂಸ್ಥೆ ಏನು ಇದೆ, ಅದಕ್ಕೆ ಹೆಚ್ಚಿನ ಹಣಕಾಸನ್ನು ಒದಗಿಸಿ, ವಿದ್ಯುಚ್ಛಕ್ತಿ ಕೊರತೆ ಏನು ಇದೆ ಅದನ್ನು ತುಂಬಿಕೊಳ್ಳುವುದರ ಕಡೆಗೆ ನಾವು ಕೆಲಸ ಮಾಡುವುದಕ್ಕೆ ಸಾಧ್ಯತೆ ಇದೆ. ಇನ್ನು ಮಿನಿ ಹೈಡೆಲ್‌ಗಳು ಎಲ್ಲೆಲ್ಲಿ ಇವೆ ಅವುಗಳಿಗೂ ಕೂಡ ಹೆಚ್ಚಿನ ಅವಕಾಶ ಕೊಡಬೇಕು. ಯಾರೂ ಈ ಮಿನಿ ಹೈಡೆಲ್‌ಗಳನ್ನು ಮಾಡುವುದಕ್ಕೆ ಪ್ರೈವೇಟ್ ಕಂಪನಿಯವರು ತಯಾರಾಗಿದ್ದಾರೆ ಅವರಿಗಾದರೂ ನಾವು ಬೆಂಬಲ ಕೊಟ್ಟು ಮಾಡಿಸಬಹುದು, ಇಲ್ಲಾಂದ್ರೆ ಸರಕಾರದವರು ಕೂಡ ಮಿನಿ ಹೈಡ್‌ಲ್‌ಗಳು, 2–3 ಮೆ.ವ್ಯಾ. ಸ್ಥಾಪಿಸುವುದಕ್ಕೆ ಉತ್ತೇಜನ ಕೊಡಬಹುದು. ಈ ತರಹದ್ದು ಬಹಳಷ್ಟು ಇದೆ. ಇನ್ನೂ ಹೆಚ್ಚಿನ ಮಿನಿ ಹೈಡೆಲ್‌ಗಳನ್ನು ಮಾಡುವುದಕ್ಕೆ ಸರ್ಕಾರದ ವತಿಯಿಂದ ಸಾಧ್ಯ ಇದೆ. ಹಾಗೆಯೇ ನೀರಾವರಿ ಸಮಸ್ಯೆ ಬಂದಾಗ, ನಮ್ಮ ಭದ್ರಾ, ತುಂಗಭದ್ರಾ, ಈ ಭಾಗದಲ್ಲಿ ಈಗಾಗಲೇ ಅಲ್ಲಿ ಗಲಾಟೆ ಶುರುವಾಗಿದೆ. ಮೊದಲು ಎರಡನೇ ಮಹಾ ಯುದ್ಧ ಆದ ಮೇಲೆ ಮೂರನೇ ಮಹಾ ಯುದ್ಧ ಆಗುವುದಿಲ್ಲವೆಂದು ಹೇಳುತ್ತಿದ್ದರು. ಮೂರನೇ ಮಹಾ ಯುದ್ಧ ಆಗುವುದು ಈ ನೀರಿಗಾಗಿ ಎಂದು ಹೇಳುತ್ತಿದ್ದರು. ಅದು ಹೇಗೆ ಆಗುತ್ತದೆ ಮೂರನೆಯ ಮಹಾಯುದ್ದ ಎಂದು ಯೋಚನೆ ಮಾಡುತ್ತಿದ್ದೆವು. ಈಗಾಗಲೇ ಮೂರನೇ ಮಹಾ ಯುದ್ದ ನೀರಿಗಾಗಿ ಪ್ರಾರಂಭವಾಗಿದೆ. ಕೆನಾಲ್‌ಗಳು ಹರಿದು ಬರುವ ಭಾಗದಲ್ಲಿ, ಈ ಭದ್ರಾವತಿ, ಹೊಳೆಹೊನ್ನೂರು, ಚೆನ್ನಗಿರಿ, ಜನ ಎಲ್ಲಾ ಒಬ್ಬರಿಗೊಬ್ಬರು, ಭದ್ರಾವತಿಯವರ ಜೊತೆ ಹೊಳೆಹೊನ್ನೂರವರು ಹೊಡೆದಾಡಬೇಕಾಗಿದೆ.

ಹೊಳೆಹೊನ್ನೂರುರವರ ಜೊತೆ ಚೆನ್ನಗಿರಿಯವರು ಹೊಡೆದಾಡಬೇಕು. ಚೆನ್ನಗಿರಿಯವರ ಜೊತೆ ಮಾಯಕೊಂಡ, ದಾವಣಗೇರಿ, ಈ ಭಾಗದವರು ಹೊಡೆದಾಡಬೇಕಾಗಿದೆ. ನಮ್ಮ ಭದ್ರಾ ಕೆನಾಲ್ ಹೇಗೆ ಹರಿದು ಬರುತ್ತದೆ ಅದು ಒಬ್ಬರಿಗೊಬ್ಬರು ಹೊಡೆದಾಡುವಂಥ ಪರಿಸ್ಥಿತಿ ಬಂದಿದೆ. ಚೆನ್ನಗಿರಿ ತಾಲ್ಲೂಕಿನಲ್ಲಿ ನಾವು ಸೂಳೆಕೆರೆಯಿಂದ ಮೇಲ್ಭಾಗದ ಜನರು ಒಂದು ರೀತಿ ನಿಲುವು ತಾಳುತ್ತಾರೆ. ಸೂಳೆಕೆರೆಯಿಂದ ಕೆಳಭಾಗದಲ್ಲಿರುವ ಜನರು ಒಂದು ರೀತಿ ನಿಲುವು ತಾಳುತ್ತಾರೆ. ಅಲ್ಲಿ ಕೆನಾಲ್‌ಗಳಿಗೆ ಪಂಪ್‌ಸೆಟ್ಟುಗಳನ್ನು ಅಳವಡಿಸಿ ಅವರು ತಮ್ಮ ಅಡಿಕೆ ತೋಟಗಳನ್ನು ಬದುಕಿಸಿಕೊಳ್ಳುವುದಕ್ಕೆ ಅವರು ಪ್ರಯತ್ನಪಡುತ್ತಿದ್ದಾರೆ. ಎಲ್ಲಾ ಕಡೆಗೂ ನೀರಿನ ಹಾಹಾಕಾರ ಇದೆ. ಎಲ್ಲಾ ಚಾನೆಲ್‌ಗಳಲ್ಲಿ ನೀರು ಇಲ್ಲದ ಪರಿಸ್ಥಿತಿ ಉಂಟಾಗಿದೆ. ಭದ್ರ ಜಲಾಶಯದಂಥ ಜಲಾಶಯದಲ್ಲಿ ಸುಮಾರು 15 ಅಡಿಗಿಂತ ಹೆಚ್ಚು ಹೂಳು ತುಂಬಿಕೊಂಡಿದ್ದು ಅದು ನೀರನ್ನು ಹಿಡಿದಿಟ್ಟುಕೊಳ್ಳುವ ಸ್ಥಿತಿ ಕಡಿಮೆಯಾಗಿದೆ. ಹೆಚ್ಚಿಗೆ ನೀರನ್ನು ಹಿಡಿದಿಟ್ಟುಕೊಳ್ಳುವುದಕ್ಕೂ ಕೂಡ ಆಗುತ್ತಿಲ್ಲ. ನೀರನ್ನು ಹಿಡಿದಿಟ್ಟುಕೊಳ್ಳುವಂಥ ಕೆಪಾಸಿಟಿ ಕಡಿಮೆ–ಯಾಗಿರುವುದರಿಂದ ಇವತ್ತಿನ ದಿವಸ ಕೆನಾಲ್‌ನಲ್ಲಿ ಹೆಚ್ಚು ಸಮಯದವರೆಗೆ ನೀರನ್ನು ಬಿಡುತ್ತಿಲ್ಲ. ಮತ್ತೆ ಇವತ್ತಿನ ದಿವಸ ರೈತರೂ ಕೂಡ ಬರೀ ಭತ್ತ, ಕಬ್ಬು ಮತ್ತು ಅಡಿಕೆ, ಈ ತರಹದ ಬೆಳೆ ಬೆಳೆಯುತ್ತಿರುವುದರಿಂದ ಹೆಚ್ಚು ನೀರನ್ನು ನಾವು ಸರಿಯಾಗಿ ಉಪಯೋಗಿಸಿಕೊಳ್ಳುವುದಕ್ಕೆ ಆಗದೇ ಇರುವುದರಿಂದ ಅಕ್ಕಪಕ್ಕದ ಊರಿನ ರೈತರು ಹೊಡೆದಾಡತಕ್ಕಂಥ ಪರಿಸ್ಥಿತಿ ನಿರ್ಮಾಣ ಆಗುತ್ತದೆ. ಹಾಗೆಯೇ ಅಕ್ಕಪಕ್ಕದ ತಾಲ್ಲೂಕಿನ ರೈತರು ಮತ್ತು ಅಕ್ಕಪಕ್ಕದ ಜಿಲ್ಲೆಯ ರೈತರು ಹೊಡೆದಾಡತಕ್ಕಂಥ ಪರಿಸ್ಥಿತಿ ನಿರ್ಮಾಣವಾಗುತ್ತದೆ. ನಮ್ಮಲ್ಲಿ ರತಕ್ಕಂಥ ಬೆಳೆಗಳನ್ನು ಉಳಿಸಿಕೊಳ್ಳುವುದಕ್ಕೋಸ್ಕರ ಭದ್ರಾ ಜಲಾಶಯದಿಂದ ಸುಮಾರು ನಾಲ್ಕು ಟಿ.ಎಂ.ಸಿ. ನೀರನ್ನು ತುಂಗಭದ್ರಾ ಜಲಾಶಯಕ್ಕೆ ಬಿಡಬೇಕೆಂದು ಕಂದಾಯ ಮಂತ್ರಿಗಳಾಗಿರತಕ್ಕಂಥ ಮಾನ್ಯ ಎಂ.ಪಿ. ಪ್ರಕಾಶ್‌ರವರು ನಮಗೊಂದು ಮನವಿಯನನು ಕಳುಹಿಸಿಕೊಟ್ಟಿದ್ದರು. ನೀರು ಕೊಡುವುದಕ್ಕೆ ಆಗುವುದಿಲ್ಲವೆಂದು ನಮ್ಮಲ್ಲಿರುವ ಐ.ಸಿ.ಸಿ. ಕಮಿಟಿಯಲ್ಲಿ ತೀರ್ಮಾನ ತೆಗೆದುಕೊಂಡೆವು. ಏಕೆಂದರೆ ನಮ್ಮ ರೈತರಿಗೆ ನೀರಿನ ಅವಶ್ಯಕತೆ ಇರುವಾಗ ನಾವು ಇಂಥ ಸಮಯದಲ್ಲಿ ಹೇಗೆ ಕೊಡುವುದಕ್ಕೆ ಆಗುತ್ತದೆಂದು ನಾವು ನಿರಾಕರಣೆ ಮಾಡಿದೆವು. ಇವತ್ತಿನ ದಿವಸ ಜಿಲ್ಲೆ ಜಿಲ್ಲೆಗಳ ನಡುವೆ ಮತ್ತು ರಾಜ್ಯ ರಾಜ್ಯಗಳ ನಡುವೆ ಯುದ್ಧ ನಡೆಯತಕ್ಕಂಥ ಪರಿಸ್ಥಿತಿ ಬಂದಿದೆ. ಮತ್ತೆ ರಾಷ್ಟ್ರ ರಾಷ್ಟ್ರಗಳ ನಡುವೆ ಬಂದಿರತಕ್ಕಂಥ ಸಮಸ್ಯೆ ಈ ನೀರಿನಿಂದಾಗಿ ಎಂಬ ಸ್ಥಿತಿಗೆ ನಾವು ಬಂದಿದ್ದೇವೆ. ಇಂಥ ಒಂದು ಅಮೂಲ್ಯವಾದಂಥ ನೀರನ್ನು ನಾವು ಇವತ್ತಿನ ದಿವಸ ಹರಿಸುವುದಕ್ಕೆ ಆಗದೆ ಇರುವಂಥ ಎಲ್ಲಾ ಕಾಲುವೆಗಳು ಕೆಟ್ಟು ಹಾಳಾಗಿರುವುದರಿಂದ ಬಹಳಷ್ಟು ನೀರು ಸೋರಿ ಹೋಗತಕ್ಕಂಥ ಪರಿಸ್ಥಿತಿ ಇವತ್ತಿನ ದಿವಸ ಭದ್ರ ಮತ್ತು ತುಂಗಭದ್ರಾ ಕೆನಾಲ್‌ಗಳಲ್ಲಿ ಆಗುತ್ತಿದೆ. ಆದ್ದರಿಂದ ಭದ್ರಾ ಕೆನಾಲ್‌ನ ದುರಸ್ಥಿಗಾಗಿ ಸುಮಾರು 500 ಕೋಟಿ ರೂಪಾಯಿ ಬೇಕಾಗುತ್ತದೆಂದು ನಾವು ಕೇಳಿದ್ದೆವು. ನಾವು ಹೋಗಿ ಕೇಳಿದ್ದಕ್ಕೆ, ಭದ್ರಾ ಮತ್ತು ತುಂಗಭದ್ರ ಕೆನಾಲ್ ರಿಪೇರಿಗಾಗಿ 200 ಕೋಟಿ ರೂಪಾಯಿಗಳನ್ನು ಈ

ಸಾರಿಯ ಬಜೆಟ್‌ನಲ್ಲಿ ಮಾನ್ಯ ಉಪ ಮುಖ್ಯಮಂತ್ರಿಗಳು ಇಟ್ಟಿದ್ದಾರೆ. ಅದ್ದರಿಂದ, ಅಲ್ಲಿನ ದುರಸ್ಥೀಕರಣ ಮತ್ತು ನವೀಕರಣ ಕಾಮಗಾರಿಗಳನ್ನು ನಾವು ಈಗ ಅಲ್ಲಿ ಪ್ರಾರಂಭ ಮಾಡಬಹುದಾಗಿದೆ. ಆದರೆ, ಮುಂದಿನ ದಿನಗಳಲ್ಲಿ ಈ ಕೆನಾಲ್‌ಗಳನ್ನು ಬಹಳ ಸುಸಜ್ಜಿತವಾಗಿ ಮಾಡುವುದಕ್ಕೆ ಭದ್ರಾ ಕೆನಾಲ್‌ಗೆ 500 ಕೋಟಿ ರೂಪಾಯಿಗಿಂತ ಹೆಚ್ಚಿನ ಹಣದ ಅವಶ್ಯಕತೆ ಇರುತ್ತದೆ. ಮತ್ತೆ ತುಂಗಾಭದ್ರ ಜಲಾಶಯದ ಕೆನಾಲ್ ದುರಸ್ಥಿ ಕೆಲಸಕ್ಕೆ ಇನ್ನೂ ಹೆಚ್ಚಿನ ಹಣದ ಅವಶ್ಯಕತೆ ಇದೆ ಎಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಗಳಾದಂಥ ಶ್ರೀ ಸಿದ್ದರಾಮಯ್ಯನವರ ಹತ್ತಿರ ಹೋಗಿ ಕೆಲವು ರಿಕ್ವೆಸ್ಟ್‌ಗಳನ್ನು ನಾವು ಮಾಡಿಕೊಂಡಿದ್ದೆವು. ಈ ಸಾರಿಯ ಬಜೆಟ್ ಅಲ್ಪಸಂಖ್ಯಾತರಿಗೆ ಮತ್ತು ಹಿಂದುಳಿದ ವರ್ಗದವರಿಗೆ ಹಾಗೂ ರೈತರಿಗೆ ಅನುಕೂಲವಾಗುವಂಥ ಒಂದು ಬಜೆಟ್ ಆಗಿರಬೇಕು. ಹಾಗೆಯೇ. ನಮ್ಮ ಭದ್ರಾ ಮತ್ತು ತುಂಗಾಭದ್ರಾ ಜಲಾಶಯದ ಕೆನಾಲ್ ದುರಸ್ಥಿಗೆ ಹೆಚ್ಚಿನ ಹಣ ಬೇಕಾಗುತ್ತದೆಂದು ಮತ್ತು ಶಾಸಕರ ನಿಧಿಗೆ ಹಣ ಕೊಡಬೇಕಾಗುತ್ತದೆಂದೂ ಕೂಡ ಹೇಳಿದ್ದೆ. ಈ ಸಾರಿಯ ಬಜೆಟ್‌ನಲ್ಲಿ ಇವೆಲ್ಲವನ್ನೂ ಮಾಡಬೇಕೆಂದು ಹೋಗಿ ಹೇಳಿದಾಗ ಅವರು ಏನು ಹೇಳಿದರೆಂದರೆ, ನೀವು ಹೇಳಿರತಕ್ಕಂಥದ್ದನ್ನೆಲ್ಲಾ ಮಾಡುತ್ತೇನೆ ಮತ್ತೆ ನಮ್ಮ ಪಕ್ಷದ ನಿಲುವು ಏನಿದೆ ಅದರ ಪ್ರಕಾರ ನಾನು ಬಜೆಟ್ ಮಾಡುತ್ತೇನೆಂದು ಹೇಳಿದರು. ಅವರು ಹೇಳಿದ ಪ್ರಕಾರ ಈಗ ನಡೆದುಕೊಂಡಿದ್ದಾರೆ. ಮಾನ್ಯ ಸಿದ್ದರಾಮಯ್ಯನವರ ಮೇಲೆ ಇರತಕ್ಕಂಥ ನಮ್ಮ ಅಭಿಮಾನ ಏನೆಂದರೆ ಅವರು ಹೇಳಿದ ಪ್ರಕಾರ ನಡೆದುಕೊಳ್ಳುತ್ತಾರೆ. ನುಡಿದಂತೆ ನಡೆಯುವವರು ನಾವೆಂದು ಬಜೆಟ್‌ನಲ್ಲಿ ಹೇಳಿಕೊಂಡಿದ್ದಾರೆ. ನಾವು ಚುನಾವಣಾ ಪೂರ್ವದಲ್ಲಿ ಚುನಾವಣಾ ಪ್ರಣಾಳಿಕೆಯಲ್ಲಿ ಏನೇನು ಹೇಳಿದ್ದೆವು ಅವೆಲ್ಲವೂ ಕೂಡ ಪೂರಕವಾಗುವಂತೆ ಮತ್ತು ಅದರ ಪ್ರಕಾರ ಬಜೆಟ್ ಮಾಡಿದ್ದಾರೆ. ಹಾಗೆಯೇ, ಇವರು ನುಡಿದಂತೆ ನಡೆದು ನಮ್ಮೆಲ್ಲರಿಗೂ ಕೂಡ ಒಂದು ಹೊಸ ದಾರಿಯನ್ನು ಹಾಕಿಕೊಟ್ಟಿದ್ದಾರೆ. ಆದ್ದರಿಂದ, ಹೊಸ ಪೀಳಿಗೆಯ ಹುಡುಗರಾಗಿರತಕ್ಕಂಥ ನಾವೆಲ್ಲಾ ಮಾನ್ಯ ಸಿದ್ದರಾಮಯ್ಯನವರು ಹಾಕಿ ಕೊಟ್ಟಿರತಕ್ಕಂಥ ದಿಕ್ಕಿನಲ್ಲಿ ಅಥವಾ ದಾರಿಯಲ್ಲಿ ಅಂದರೆ ನುಡಿದಂತೆ ನಡೆಯುವ ಕಡೆ ಹೋಗುವುದಕ್ಕೆ ನಾವೆಲ್ಲಾ ತಯಾರಿದ್ದೇವೆ. ಕೊನೆಯದಾಗಿ ನನ್ನ ಕಳಕಳಿ ಮನವಿ ಏನೆಂದರೆ, ನಾನು ಈಗಾಗಲೇ ಈ ಹೌಸ್ ಬಗ್ಗೆ ಹೇಳಿರತಕ್ಕಂಥ ಭಾವನೆ ನಮ್ಮೆಲ್ಲರಲ್ಲಿಯೂ ಕೂಡ ಬರಬೇಕು. ಮತ್ತೆ ಈ ಸಂದರ್ಭದಲ್ಲಿ ಬಜೆಟ್ ಬಿಟ್ಟು ನಕ್ಸಲೈಟ್ ಬಗ್ಗೆ ಮಾತನಾಡಬೇಕೆಂದು ಇದ್ದೇನೆ. ಈಗಾಗಲೇ ನಕ್ಸಲೈಟ್ಸ್ ಬಗ್ಗೆ ಸಾಕಷ್ಟು ಚರ್ಚೆ ಮತ್ತು ವಿವಾದಗಳು ಇಲ್ಲಿ ನಡೆದಿವೆ. ನಕ್ಸಲೈಟ್ಸ್ ಮಾಡತಕ್ಕಂಥದು ತಪ್ಪೆಂದು ನಾವು ಹೇಳುವ ಮೊದಲು ನಾವು ನಿಜವಾಗಿಯೂ ಕೂಡ ಹಿಂಸೆಗೆ ವಿರೋಧಿಗಳು ಆಗಿದ್ದೇವೆ ಎಂಬುದನ್ನು ತಿಳಿದುಕೊಂಡು ಅವರ ಹಿಂಸಯನ್ನು ನಾವು ವಿರೋಧಿಸಬೇಕಾಗುತ್ತದೆ. ನಮ್ಮ ಬಿ.ಜೆ.ಪಿ. ಸ್ನೇಹಿತರಲ್ಲಿ ನಾನು ಕೇಳಿಕೊಳ್ಳುವುದೇನೆಂದರೆ ಅವರು ಮಾಡತಕ್ಕಂಥದ್ದು ತಪ್ಪು ಎಂದು ಹೇಳುವುದಕ್ಕಿಂಥ ಮೊದಲು ನಾವು ಹಿಂಸೆಗೆ ವಿರೋಧಿಗಳು ಎನ್ನತಕ್ಕಂಥ ಮಾತನ್ನು ಹೇಳಿ ಆನಂತರ ಅವರು ಮಾಡತಕ್ಕಂಥ

ಹಿಂಸೆ ತಪ್ಪು ಎಂದು ಹೇಳಬೇಕೆಂದು ಈ ಸಂದರ್ಭದಲ್ಲಿ ಕೇಳಿಕೊಳ್ಳುತ್ತಾ ನಾನು ಮತ್ತೊಮ್ಮೆ ನಮ್ಮ ಉಪ ಮುಖ್ಯಮಂತ್ರಿಗಳಾಗಿರತಕ್ಕಂಥ ಶ್ರೀ ಸಿದ್ದರಾಮಯ್ಯನವರು ಮಂಡಿಸಿರತಕ್ಕಂಥ ಬಜೆಟ್‌ನ್ನು ನಾನು ಶ್ಲಾಘಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ. ನಮಸ್ಕಾರ.

ಶ್ರೀ ಎಂ.ಪಿ. ಕುಮಾರಸ್ವಾಮಿ (ಮೂಡಿಗೆರೆ): – ಮಾನ್ಯ ಉಪಾಧ್ಯಕ್ಷರೆ, ಬಜೆಟ್ ಮೇಲೆ ಮಾತನಾಡಲು ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ನಾನು ತಮಗೆ ವಂದಿಸುತ್ತೇನೆ. ನನ್ನ ಮೊದಲ ಮತ್ತು ನನ್ನ ಅನುಭವಕ್ಕೆ ಬಂದಂಥ ಎರಡು ಅಂಶಗಳನ್ನು ಇಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮಾನ್ಯ ಉಪಮುಖ್ಯಮಂತ್ರಿಗಳು ಮಂಡಿಸಿರತಕ್ಕಂಥ ಬಜೆಟ್‌ನಲ್ಲಿ ನನಗೆ ಅಂಥ ವಿಶೇಷ ಏನೂ ಕಾಣುತ್ತಿಲ್ಲ. ಏಕೆಂದರೆ, ಈ ಬಜೆಟ್ ಪುಸ್ತಕವನ್ನು ಪೂರ್ಣವಾಗಿ ಓದಿದ ನಂತರ ನನಗೆ ಅರ್ಥವಾಗಿರತಕ್ಕಂಥ ವಿಷಯ ಏನೆಂದರೆ, ಯಾವ ರೀತಿಯಾಗಿ ಆದಾಯವನ್ನು ಕಲೆಕ್ಟ್ ಮಾಡಲಾಗುತ್ತದೆ ಎನ್ನತಕ್ಕಂಥ ವಿಷಯವನ್ನು ಇದರಲ್ಲಿ ಎಲ್ಲಿಯೂ ಕೂಡ ಹೇಳಿಲ್ಲ. ಇದರ ಬಗ್ಗೆ ನನಗೆ ಅನಿಸಿರತಕ್ಕಂಥದ್ದು ಏನೆಂದರೆ, ರೆವಿನ್ಯೂ ಅಥವಾ ಅಬ್ಕಾರಿ ಅಥವಾ ಕಮರ್ಷಿಯಲ್ ಟ್ಯಾಕ್ಸ್ ಡಿಪಾರ್ಟ್‌ಮೆಂಟ್‌ಗಳಿಂದ ಬರತಕ್ಕಂಥ ಆದಾಯವನ್ನು ಬೇರೆ ಬೇರೆ ಇಲಾಖೆಗಳಿಗೆ ಹಂಚಿದ್ದಾರೆಂದು ನನಗೆ ಅನಿಸಿತು. ಮತ್ತೆ ಇದನ್ನು ಹಂಚತಕ್ಕಂಥದ್ದೂ ಕೂಡ ಅಷ್ಟೊಂದು ಸುಲಭದ ಕೆಲಸವಲ್ಲವೆಂದೂ ಕೂಡ ನನಗೆ ಅರ್ಥವಾಗಿದೆ. ಆದರೆ, ಈ ಕೆಲಸ ಮಾಡುವುದಕ್ಕೆ ಉಪ ಮುಖ್ಯಮಂತ್ರಿಗಳು, ಅರ್ಥ ಸಚಿವರು ಬೇಕಾಗಿತ್ತೇ ಎನ್ನತಕ್ಕಂಥ ಸಂಶಯ ನನಗೆ ಇದೆ. ಹಾಗೆಯೇ ಇದರಲ್ಲಿ ಹೇಳಿಕೊಳ್ಳುವುದು ಏನೂ ಇಲ್ಲ ಎಂಬುದನ್ನು ನಾನು ಭಾವಿಸಿದ್ದೇನೆ. ನಾನೇನು ಫೈನಾನ್ಸ್ ಎಕ್ಸ್‌ಪರ್ಟ್ ಅಲ್ಲ. ಆದರೆ, ಮಾನ್ಯ ಅರ್ಥ ಸಚಿವರು ಮಂಡಿಸಿರತಕ್ಕಂಥ ಬಜೆಟ್‌ನಲ್ಲಿ ಅಬ್ಕಾರಿ ಅಥವಾ ರೆವಿನ್ಯೂ ಇಲಾಖೆಗಳಿಂದ ಕಲೆಕ್ಟ್ ಮಾಡತಕ್ಕಂಥ ಆದಾಯದ ಲೆಕ್ಕಾಚಾರದ ಬಗ್ಗೆ ಹೇಳುವುದಾದರೆ, ಕೆಲವೊಂದು ಸಂದರ್ಭದಲ್ಲಿ ಅಥವಾ ಪ್ರಕೃತಿ ವಿಕೋಪವಾದಂಥ ಸಂದರ್ಭದಲ್ಲಿ ಟ್ಯಾಕ್ಸ್ ಸರಿಯಾಗಿ ಕಲೆಕಟ್ ಆಗದೆ ಸರ್ಕಾರಕ್ಕೆ ನಿಗದಿತ ರೆವಿನ್ಯೂ ಬಾರದೆ ಇದ್ದಂಥ ಸಂದರ್ಭದಲ್ಲಿ ಸರ್ಕಾರ ಎಲ್ಲಿಂದ ಈ ಖರ್ಚುಗಳನ್ನು ಭರಿಸುತ್ತದೆ ಎನ್ನತಕ್ಕಂಥದ್ದು ಮತ್ತು ಇದಕ್ಕೆ ಎಲ್ಲಿಯಾದರೂ ಹಣವನ್ನು ಈಗಾಗಲೇ ಕ್ರೋಢೀಕರಿಸಲಾಗಿದೆಯೇ ಎನ್ನತಕ್ಕಂಥ ವಿಚಾರವನ್ನು ಇದರಲ್ಲಿ ಎಲ್ಲಿಯೂ ಕೂಡ ತೋರಿಸಿಲ್ಲ. ಆದ್ದರಿಂದ, ಈ ಬಜೆಟ್ ಪೂರ್ಣವಾಗಿ ಯಶಸ್ವಿ ಆಗುತ್ತದೆಂದು ನನಗೆ ವೈಯಕ್ತಿಕವಾಗಿ ಅನಿಸುವುದಿಲ್ಲ. ಮತ್ತೆ ನನಗೆ ಇರತಕ್ಕಂಥ ಎರಡನೇ ಸಂಶಯ ಏನೆಂದರೆ, ಕರ್ನಾಟಕ ರಾಜ್ಯ ಸರ್ಕಾರ ಎಷ್ಟು ಸಾಲ ಮಾಡಿದೆ ಎನ್ನತಕ್ಕಂಥದ್ದು ನನ್ನ ಪ್ರಶ್ನೆಯಾಗಿದೆ. ನಬಾರ್ಡ್‌ನಿಂದ ಮತ್ತು ವಿಶ್ವಬ್ಯಾಂಕ್ ಮತ್ತು ಐ.ಎಂ.ಎಫ್. ನಿಂದ ಎಷ್ಟು ಸಾಲ ಮಾಡಲಾಗಿದೆ ಎಂಬುದನ್ನು ತೋರಿಸಿಲ್ಲ. ಹಾಗೆಯೇ ಈ ಹಣವನ್ನು ಹೇಗೆ ತೀರಿಸುತ್ತೇವೆಂದು ಮತ್ತು ಎಲ್ಲಿಂದ ತೀರಿಸಲಾಗುತ್ತದೆ ಎನ್ನತಕ್ಕಂಥ ವಿಷಯವನ್ನು ಇದರಲ್ಲಿ ಎಲ್ಲಿಯೂ ಕೂಡ ಹೇಳಿಲ್ಲ. ನನಗೆ ತಿಳಿದ ಮಟ್ಟಿಗೆ ಸುಮಾರು 40 ಸಾವಿರ ಕೋಟಿ ರೂಪಾಯಿಗಳಷ್ಟು ಸಾಲ ಇದೆ. ಅಥವಾ ಇನ್ನೂ ಜಾಸ್ತಿ ಇರಬಹುದೆಂದು ನಾನು

ತಿಳಿದುಕೊಂಡಿದ್ದೇನೆ. ಈ ವಿಷಯಕ್ಕೆ ಸಂಬಂಧಪಟ್ಟಂತೆ ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾರೆಂದು ನಾನು ತಿಳಿಕೊಂಡಿದ್ದೇನೆ. ಈಗ ವ್ಯಾಟ್ ವ್ಯಾಟ್ ಎಂದು ಹೇಳುತ್ತಿದ್ದಾರೆ. ಆದರೆ, cat out of the bag ಎನ್ನುವ ಹಾಗೆ ಆದರೆ ಮಾತ್ರ ಅದರ ನಿಜವಾದ ಬಣ್ಣ ಗೊತ್ತಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಮತ್ತೆ ನೌಕರಶಾಹಿ ಅಧಿಕಾರಿಗಳನ್ನು ನಂಬಿ ಈ ಬಜೆಟ್‌ನ್ನು ತಯಾರು ಮಾಡಿದ್ದಾರೆಂದು ನನಗೆ ಗೊತ್ತಿದೆ. ಇದು ಹೇಗಾಗಿದೆ ಎಂದರೆ ಇವತ್ತಿನ ದಿವಸ ಒಂದು ಫಿಲಂ ರಿಲೀಸ್ ಆಗಿ ಅದರಲ್ಲಿ ಬೇರೆ ರೀತಿಯ ಡ್ಯಾನ್ಸ್ ಅಥವಾ ಬೇರೆ ರೀತಿಯ ಗ್ಲ್ಯಾಮರ್ ಇರತಕ್ಕಂಥ ಡ್ರೆಸ್ ಇರತಕ್ಕಂಥ ರೀತಿಯಲ್ಲಿ ಇದಾಗುತ್ತದೆ ಎನ್ನತಕ್ಕಂಥದ್ದು ನನ್ನ ಒಂದು ಸಂಶಯ ಆಗಿದೆ. ಹಾಗೆಯೇ, ಇದರ ಒಂದು ಪರಿಣಾಮ ಅಥವಾ ಯಶಸ್ವಿ ಶೂನ್ಯವಾಗಬಹುದೆಂಬುದು ನನ್ನ ಅನಿಸಿಕೆಯಾಗಿದೆ. ಮತ್ತೆ ಅರ್ಥ ಸಚಿವರಾಗಿರತಕ್ಕಂಥ ಮಾನ್ಯ ಸಿದ್ದರಾಮಯ್ಯನವರು ಇವತ್ತಿನ ದಿವಸ ಕಾಂಗ್ರೆಸ್ ಮತ್ತು ಜನತಾದಳ (ಎಸ್) ವನ್ನು ನಂಬಿ ಈ ಒಂದು ಬಜೆಟ್‌ನ್ನು ಕೊಟ್ಟಿದ್ದಾರೆಂದು ನಾನು ತಿಳಿದುಕೊಂಡಿದ್ದೇನೆ. ಇತ್ತೀಚಿನ ಪತ್ರಿಕಾ ವರದಿಯನ್ನು ನೋಡಿ ಮಾನ್ಯ ಸಿದ್ದರಾಮಯ್ಯನವರ ಮೇಲೆ ನನಗೊಂದು ಸಂಶಯ ಬಂದಿದೆ. ಅದೇನೆಂದರೆ, ಇವರು ಸೈಕಲ್ ಏರಿದರೆ ಕರ್ನಾಟಕದ ಗತಿ ಏನು ಎಂಬುದು ನನ್ನ ಅನಿಸಿಕೆಯಾಗಿದೆ. ಹಾಗೆಯೇ ಇದಕ್ಕೆ ಮಾನ್ಯ ಸಿದ್ದರಾಮಯ್ಯನವರು ಉತ್ತರ ಕೊಡುವುದಕ್ಕೆ ಸಿದ್ದರಿದ್ದಾರೆಯೇದ ಎನ್ನತಕ್ಕಂಥದ್ದು ನನ್ನ ಪ್ರಶ್ನೆಯಾಗಿದೆ. ಮತ್ತೆ ಈ ಬಜೆಟ್ ಗತಿ ಏನು ಎಂಬುದು ನನ್ನ ಅನಿಸಿಕೆಯಾಗಿದೆ. ಮತ್ತೆ ನಾನು ಮಲೆನಾಡು ಭಾಗದಿಂದ ಬಂದಿರುವನಾಗಿರುವುದರಿಂದ ಸರ್ಕಾರದ ಗಮನಕ್ಕೆ ಬಂದೆರಡು ವಿಚಾರಗಳನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇವತ್ತಿನ ದಿವಸ ಮಲೆನಾಡು ಪ್ರದೇಶಗಳಲ್ಲಿ ನಕ್ಸಲ್ ಚಟುವಟಿಕೆ ಇದೆ ಎನ್ನತಕ್ಕಂಥದ್ದು ತಮಗೆಲ್ಲಾ ಗೊತ್ತಿದೆ. ಬೆಳ್ತಂಗಡಿ, ಕಾರ್ಕಳ ಮತ್ತು ಮೂಡಿಗೆರೆ ಹಾಗೂ ಚಿಕ್ಕಮಗಳೂರು ಮತ್ತು ಶೃಂಗೇರಿಯ ಭಾಗಗಳು ಇದರಲ್ಲಿ ಸೇರಿಕೊಂಡಿವೆ. ಈ ಭಾಗಗಳಲ್ಲಿ ಈಗಾಗಲೇ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಂಡಿದ್ದೇವೆಂದು ಹೇಳುತ್ತಿದ್ದಾರೆ. ಮತ್ತೆ ಇಲ್ಲಿಗೆ ಸರ್ಕಾರದಿಂದ ಅಭಿವೃದ್ಧಿ ಆಯುಕ್ತರನ್ನು ಕಳುಹಿಸಿಕೊಟ್ಟಿದ್ದಾರೆ. ಆದರೆ ಅಭಿವೃದ್ಧಿ ಆಯುಕ್ತರು ಈ ಭಾಗದ ಶಾಸಕರುಗಳನ್ನು ಸಂಪೂರ್ಣವಾಗಿ ನಿರ್ಲಕ್ಷ್ಯ ಮಾಡಿದ್ದಾರೆ. ಹಾಗೆಯೇ, ಅಲ್ಲಿರತಕ್ಕಂಥ ಜನರ ಸಂಬಂಧವನ್ನು ಕೂಡ ಮರೆಮಾಚಿ ಹೋಗಿದ್ದಾರೆ. ಮತ್ತೆ ಆ ಭಾಗಕ್ಕೆ ಏನು ಪ್ಯಾಕೇಜ್ ಕೊಟ್ಟಿದ್ದಾರೆ ಎಂಬುದನ್ನು ಎಲ್ಲಿಯೂ ಕೂಡ ಹೇಳಿಲ್ಲ. ಬರೀ ಪ್ಯಾಕೇಜ್, ಅಧಿವೇಶನ ನಡೆಯುವ ಸಂದರ್ಭದಲ್ಲಿ ಮಾತ್ರ ಆಯುಕ್ತರು ಆ ಪ್ರದೇಶಕ್ಕೆ ಹೋಗುತ್ತಾರೆ, ಬಾಕಿ ಟೈಮ್‌ನಲ್ಲಿ ಆ ಕಡೆ ಹೋಗುವುದಿಲ್ಲ. ಪ್ಯಾಕೇಜ್ ಸುದ್ದಿಯೂ ಕೂಡ ಇರುವುದಿಲ್ಲ. ಇದೊಂದು ಮೋಸ ಮಾಡುವಂಥ ತಂತ್ರ, ಮತ್ತು ಕಣ್ಣೊರೆಸುವ ಒಂದು ತಂತ್ರವೆಂದು ನನ್ನ ಅಭಿಪ್ರಾಯ ಕೂಡ ಆಗಿದೆ. ಇದಕ್ಕೆ ಸರ್ಕಾರ ಒಂದು ಸ್ಪಷ್ಟವಾಗಿ ಉತ್ತರವನ್ನು ಕೊಡಬೇಕಾಗುತ್ತದೆ. ದಯವಿಟ್ಟು ಜನಪ್ರತಿನಿಧಿಗಳನ್ನ ಕಡೆಗಣಿಸಬಾರದು ಎಂದು ಹೇಳುತ್ತೇನೆ. ಜನತಾದಳದ ಒಬ್ಬ ಹಿರಿಯ ಮುಖಂಡರು ಒಬ್ಬರು ತಮ್ಮ

ಅಭಿಪ್ರಾಯವನ್ನು ಹೇಳಿದರು. ಜನಪ್ರತಿನಿಧಿಗಳಿಗೆ ಅತ್ಯಂತ ಗೌರವ ಇರತಕ್ಕಂಥ ಸರ್ಕಾರದ ಕಾಲವೆಂದರೆ ಈಗ ಎಂದು, ಏಕೆಂದರೆ ಅವರ ಹೆಸರನ್ನು ನಾನು ಬಹಿರಂಗಪಡಿಸಿ ಎಂದರೆ ಬಹಿರಂಗ ಪಡಿಸುತ್ತೇನೆ. ಜನಪ್ರತಿನಿಧಿಗಳಿಗೆ ಒಂದಿಷ್ಟು ನಯಾ ಪೈಸೆಯ ಬೆಲೆ ಇಲ್ಲವೆಂದು ಹೇಳಬೇಕೆಂದರೆ ಅದಕ್ಕೆ ಕಾರಣ ಈ ಸರ್ಕಾರವೆಂದು ನಾನು ಹೇಳುತ್ತೇನೆ.

ಶ್ರೀ ಎಸ್.ಎಲ್. ಧರ್ಮೇಗೌಡ (ಬಿರೂರು):– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಕುಮಾರಸ್ವಾಮಿಗಳೇ, ಒಂದು ನಿಮಿಷ, ವಿರೋಧಪಕ್ಷ ಮತ್ತು ಆಡಳಿತ ಪಕ್ಷವೆಂದು ಇರುವಾಗ ಗುಣಕ್ಕೆ ಮತ್ಸರ ಉಂಟೆ ಎಂದು ಮಾತನಾಡಬೇಕಾಗುತ್ತದೆ. ಇದಕ್ಕೆ ಕಾರಣ ಇಷ್ಟೆ, ನಾನು ರಾಜ್ಯದ ಯಾವ ಜಿಲ್ಲೆಗಳನ್ನು ಸೇರಿಸಿ ಮಾತನಾಡುತ್ತಿಲ್ಲ. ಚಿಕ್ಕಮಗಳೂರು, ಕೊಡಗು ಮತ್ತು ಹಾಸನ ಈ ಮೂರು ಜಿಲ್ಲೆಗಳಿಗೆ ಮಾತ್ರ ಸಂಬಂಧಪಟ್ಟಂತೆ ನಾವು ನೀವೆಲ್ಲಾ ಸೇರಿ ಶಾಸಕರೆಲ್ಲಾ ಹೋಗಿ ಅರ್ಥ ಸಚಿವರ ಹತ್ತಿರ ಮಾತನಾಡಿ ನಮಗೆ 39 ಕೋಟಿ ರೂಪಾಯಿ ಪ್ಯಾಕೇಜ್‌ನ್ನು ಕೊಡಿ ಸ್ವಾಮಿ ಅಲ್ಲಿ ರೈತರು ಕಾಫಿ ಬೆಳೆಗಾರರು ಉಳಿಯುತ್ತಿಲ್ಲವೆಂದು ಗೋಳೋ ಎಂದು ಹೇಳಿ 20 ಸಲ ಅವರ ಕಛೇರಿಗೆ ಹೋದಾಗ ಅವರು ಬಹಳ ಕಷ್ಟಪಟ್ಟು ಈ ಪ್ಯಾಕೇಜ್‌ನಲ್ಲಿ ಸೇರಿಸಿ ಕಾಫಿ ಬೆಳೆಗಾರರಿಗೆ ಬಡ್ಡಿ ಮನ್ನಾ ಮಾಡಿದ್ದೇವೆ ಎನ್ನುವ ಮಾತನ್ನು ಹೇಳಿದ್ದಾರೆ. ನೀವು 20 ಸಲ ನಿಯೋಗದ ಜೊತೆಯಲ್ಲಿ ಅವರ ಬಾಗಿಲಿಗೆ ಹೋಗಿದ್ದೀರಿ. ಅದಕ್ಕಾದರೂ ಒಂದು ಮಾತು ಹೊಗಳುವುದು ಬೇಡವೆ ಮಾನ್ಯ ಕುಮಾರಸ್ವಾಮಿಗಳೇ, ಮಾತೆತ್ತಿದರೆ ನೀವು ವಿರೋಧ ಪಕ್ಷದಲ್ಲಿದ್ದೀರಿ ಎಂದು ನಾಡುವುದೆ ನಾವು ಸುಮ್ಮನೆ ಕುಳಿತಿದ್ದೇ ಎಂದು ಹಾಗೆ ಮಾತನಾಡುತ್ತೀರಾ? ಇದು ನ್ಯಾಯವೇ ಹೇಳಿ ನೋಡೋಣ. ನೀವೇ ಒಂದು ಸಲ ನಿಯೋಗದಲ್ಲಿ ಹೋಗಿದ್ದೀರಿ. ಅರ್ಥ ಸಚಿವರು ನಿಮಗೆ ಮನ್ನಣೆ ಕೊಟ್ಟಿದ್ದಾರೆ. ಅದಕ್ಕಾಗಿ ಒಂದು ಮಾತನ್ನು ಹೊಗಳುವುದು ಬೇಡವೇ ಈ ಸದನದಲ್ಲಿ, ಹೇಲಿ ನೋಡೋಣ.

ಶ್ರೀ ಮಹದೇವ:– ಹೊಗಳಿ ಹೊಗಳಿ ಹೊನ್ನಶೂಲಕ್ಕೇರಿಸುವುದು ಬೇಡವೆಂದು ಅವರು ಇರುವ ವಿಷಯವನ್ನು ಹೇಳುತ್ತಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ:– ಮಾನ್ಯ ಮುಖ್ಯಮಂತ್ರಿಗಳು ಚಿಕ್ಕಮಗಳೂರು ಜಿಲ್ಲೆಗೆ ನಕ್ಸಲೇಟ್ ಸಲುವಾಗಿ ಒಂದು ಕೋಟಿ ರೂಪಾಯಿಗಳ ಪ್ಯಾಕೇಜ್ ಕೊಡುತ್ತೇವೆಂದು ಹೇಳಿದ್ದರು. ಅದರಲ್ಲಿ ಎಷ್ಟು ಹಣ ಬಿಡುಗಡೆಯಾಗಿದೆ ಹೇಳಿ?

ಶ್ರೀ ಎಸ್.ಎಲ್. ಧರ್ಮೇಗೌಡ:– ಹಣ ಬಿಡುಗಡೆಯಾಗುತ್ತದೆ ಸ್ವಾಮಿ ರೈತರ ಸಾಲದ ಬಡ್ಡಿ ಮನ್ನಾ ಮಾಡುತ್ತೇವೆಂದು ಬಜೆಟ್‌ನಲ್ಲಿ ಮಂಡಿಸಿದ್ದಾರೆ ಅಲ್ಲವೆ? ಇಡೀ ರೈತರು ಕಟ್ಟತಕ್ಕ ಎಲ್ಲಾ ಬಡ್ಡಿ ಮನ್ನಾ ಅಗಿದೆ, ಅಂದರೆ ಅನುಕೂಲವಾಯಿತು ಅಲ್ಲವೆ?

ಶ್ರೀ ಅರಗ ಜ್ಞಾನೇಂದ್ರ:– ನಕ್ಸಲೇಟ್ ಪ್ಯಾಕೇಜ್ ಬಗ್ಗೆ ಒಬ್ಬ ಈ ರಾಜ್ಯದ ಮುಖ್ಯ ಮಂತ್ರಿಗಳು ಹೇಳಿದ ಮೇಲೆ ಎಷ್ಟು ಹಣ ರಿಲೀಸ್ ಆಗಿದೆ? ಮಾನ್ಯ ಮುಖ್ಯಮಂತ್ರಿಗಳು ಬಂದು ಹೇಳಿದ ಮೇಲೆ ಏನಾದರೂ ಕೊಡಬೇಕು ಅಲ್ಲವೆ ಸ್ವಾಮಿ. ಮಾನ್ಯ ಮುಖ್ಯಮಂತ್ರಿಗಳ ಬಾಯಿಂದ

ಬರುವ ಮಾತು ಅಂದರೆ ಅದು ವೇದವಾಕ್ಯ. ಅದನ್ನು ಜನ ನಂಬುತ್ತಾರೆ. ಅದನ್ನೇ ಮಾನ್ಯ ಕುಮಾರಸ್ವಾಮಿಯವರು ಹೇಳಿದ್ದು.

ಶ್ರೀ ಮಹದೇವ:– ಮಾನ್ಯ ಉಪಾಧ್ಯಕ್ಷರೆ, ವಿರೋಧ ಪಕ್ಷದವರು ತೆಗಳಬೇಕು ಎನ್ನುವುದಾದರೆ ಸ್ವಲ್ಪ ಮಿತಿಯಲ್ಲಿ ಮಾಡಿ, ಏಕೆಂದರೆ, ನಿಮಗೆ ಇವತ್ತು ಹೇಳುತ್ತೇನೆ. ಕಾಫಿ ಬೆಳೆಗಾರರು ದೆಹಲಿಯವರಿಗೆ ಫಸ್ಟ್‌ಟೈಮ್ ಹೋಗಿ ಬಂದಿದ್ದೀರಿ. ನಿಮಗೆ ಯಾವುದೂ ಕೂಡ ಸಬ್ಸಿಡಿ ಸಿಕ್ಕಿರಲಿಲ್ಲ. ನಾವು ಇವತ್ತು ಕೊಟ್ಟಿದ್ದೇವೆ. ಅದನ್ನೂ ಕೂಡ ಅಟ್‌ಲೀಸ್ಟ್ ನೆನೆಸಿಕೊಳ್ಳಬೇಕು. ಮಾತನಾಡುವಾಗ ಜಸ್ಟ್ ಫಾರ್ ದಿ ಸೇಕ್ ಆಫ್ ಟಾಕಿಂಗ್ ಮಾತನಾಡುವುದಕ್ಕೆದ ಹೋಗಬೇಡಿ. ದೆಹಲಿಯವರೆಗೆ ಹೋದರೂ ಕೂಡ ನಿಮಗೆ 10 ಪೈಸೆ ಸಿಕ್ಕಿರಲಿಲ್ಲ ಅದನ್ನು ಮರೆಯಬೇಡಿ.

ಶ್ರೀ ಎಂ.ಪಿ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಉಪ ಮುಖ್ಯಮಂತ್ರಿಗಳು ಅನೇಕ ಒಳ್ಳೆಯ ವಿಚಾರಗಳನ್ನು ಮಾಡಬೇಕೆಂದು ನಾನು ತಿಳಿದುಕೊಂಡಿದ್ದೇನೆ. ದಯಮಾಡಿ ತಪ್ಪಾಗಿ ಭಾವಿಸುವುದು ಬೇಡ. ದಯಮಾಡಿ ನನಗೆ ಎರಡು ನಿಮಿಷ ಮಾತನಾಡಲು ಕಾಲಾವಕಾಶವನ್ನು ಕೊಡಿ. ಈಗ ನನ್ನ ಮಲೆನಾಡಿನ ಸಮಸ್ಯೆಯ ಬಗ್ಗೆ ಹೇಳುತ್ತೇನೆ.

ಉಪಾಧ್ಯಕ್ಷರು:– ಎರಡು ನಿಮಿಷವಲ್ಲ. ನೀವು ಇನ್ನು ಕಾಲಗಂಟೆಯವರೆಗೆ ಮಾತನಾಡಿ.

ಶ್ರೀ ಎಂ.ಪಿ. ಕುಮಾರಸ್ವಾಮಿ:– ಮಾನ್ಯ ಉಪಾಧ್ಯಕ್ಷರೆ, ಆಯಿತು ಮಾತನಾಡುತ್ತೇನೆ. ಇವತ್ತು ಮಲೆನಾಡಿನ ಭಾಗದಲ್ಲಿ ವಿಚಿತ್ರ ಮಂಗನ ಕಾಯಿಲೆ ಬಂದು ಈ ರೋಗದಿಂದ ಸುಮಾರು 20 ಜನ ನಿಗೂಢ ರೀತಿಯಿಂದ ಬಲಿಯಾಗಿದ್ದಾರೆ. ಸರ್ಕಾರ ಯಾವುದೇ ರೀತಿಯ ಪರಿಹಾರವನ್ನು ಕೊಟ್ಟಿಲ್ಲ, ಒಂದೇ ಕುಟುಂಬದಲ್ಲಿ 4–5 ಜನ ತೀರಿ ಹೋಗಿದ್ದಾರೆ. ಅಲ್ಲಿರತಕ್ಕಂಥ ಆಸ್ಪತ್ರೆಗಳು ಕೂಡ ಸರಿ ಇಲ್ಲ. ನನ್ನ ಕ್ಷೇತ್ರದ ಕಳಸದಲ್ಲಿ ಆಸ್ಪತ್ರೆ ಕೂಡ ಇಲ್ಲ. ಆಸ್ಪತ್ರೆ ಕೊಡಿ ಎಂದು ಕೇಳಿದರೆ ಸರ್ಕಾರ ಇಲ್ಲಿಯವರೆಗೆ ಏನೂ ಉತ್ತರವನ್ನು ಕೊಟ್ಟಿಲ್ಲ. ದಯಮಾಡಿ ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಕ್ರಮ ಕೈಗೊಳ್ಳುತ್ತಾರೆಂದು ಭಾವಿಸುತ್ತೇನೆ. ಇವತ್ತು ನನ್ನ ವಿರೋಧ ಪಕ್ಷದ ಮಿತ್ರರು ಒಂದೆರಡು ಮಾತುಗಳನ್ನು ಹೇಳಿದ್ದಾರೆ. ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಹಿಂದುಳಿದ ವರ್ಗದ ನಾಯಕರು, ನಿಜವಾಗಲೂ ಕೂಡ ಕಾಫಿ ಪ್ಯಾಕೇಜ್ ಬಗ್ಗೆ ನಮ್ಮ ಭಾಗಕ್ಕೆ ಅವರು ಅನುಕೂಲವನ್ನು ಮಾಡಿದ್ದಾರೆ. ಅವರ ಧೋರಣೆಗಳೂ ಕೂಡ ನಮಗೆ ಸ್ಪಷ್ಟವಾಗಿ ಅರ್ಥವಾಗಿವೆ, ಸಾಕಷ್ಟು ಕಾಳಜಿಯನನು ಹೇಳಬೇಕಾದರೂ ಅವರು ನೇರವಾಗಿ ಹೇಳಿದ್ದಾರೆ. ವ್ಯವಸ್ಥೆಯ ವಿರುದ್ಧ ಬಂಡೆದ್ದಿದ್ದಾರೆ. ಅದನ್ನು ಇತ್ತೀಚೆಗೆ ನಾವು ಪತ್ರಿಕೆಗಳಲ್ಲಿ ಓದಿದ್ದೇವೆ. ಅವರ ಬಗ್ಗೆ ವೈಯಕ್ತಿಕವಾಗಿ ನನಗೆ ಅಪಾರವಾದ ಗೌರವ ಇದೆ. ಆದರೆ ಮಾನ್ಯ ಸಿದ್ದರಾಮಯ್ಯವರು ಮುಖ್ಯಮಂತ್ರಿಗಳು ಆಗಬೇಕಾಗಿತ್ತು. ಆಗಿದ್ದರೆ ಚೆನ್ನಾಗಿ ಇರುತ್ತಾ ಇತ್ತು. ಆದರೆ ಸಮಾಜ ಕಲ್ಯಾಣ ಇಲಾಖೆಗೆ ಈ ಬಜೆಟ್‌ನಲ್ಲಿ ಉತ್ತಮವಾದ ಹಣಕಾಸನ್ನು ಒದಗಿಸಿದ್ದಾರೆ. ಕಳೆದ ವರ್ಷಕ್ಕಿಂತ ಈ ವರ್ಷ ಹಣವನ್ನು ಡಬಲ್ ಮಾಡಿದ್ದಾರೆ. ನಾನು ಮೊದಲು ಶಾಸಕನಾಗಿ ಬಂದಾಗ ಕೇಳಿದ್ದು ಕೂಡ ಅದೆ,

ಉತ್ತಮವಾದ ಕೆಲಸವನ್ನು ಮಾಡುವುದಕ್ಕೆ ಆ ಇಲಾಖೆಗೆ ಹಣವನ್ನು ಕೊಟ್ಟಿದ್ದಾರೆ. ಇದರ ಬಗ್ಗೆ ನಮಗೆಲ್ಲರಿಗೂ ಕೂಡ ಸಂತೋಷವಾಗಿದೆ. ಇನ್ನು ಮುಂದೆ ಸಮಾಜ ಕಲ್ಯಾಣ ಇಲಾಖೆಯ ಹಾಸ್ಟೆಲ್‌ಗಳನ್ನು ಕಟ್ಟುವುದಕ್ಕೆ ಹಾಗೂ ವಿದ್ಯಾರ್ಥಿಗಳ ಸಂಖ್ಯೆಯನ್ನು ಕೂಡ ಹೆಚ್ಚಿಗೆ ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತಾ, ಇಲ್ಲಿ ಮಾತನಾಡಲು ಅಕಾಶ ಕೊಟ್ಟ ತಮಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಶಿವರಾಜ ಸಜ್ಜನರ (ಹಾವೇರಿ):– ಮಾನ್ಯ ಉಪಾಧ್ಯಕ್ಷರೆ, 2005–06ನೇ ಸಾಲಿನ ಬಜೆಟ್ ಮೇಲೆ ಮಾತನಾಡಲು ಅವಕಾಶವನ್ನು ಕೊಟ್ಟಿದ್ದಕ್ಕಾಗಿ ತಮಗೆ ಧನ್ಯವಾದಗಳನ್ನು ಸಮರ್ಪಿಸಿ, ಈ ಬಜೆಟ್ ಒಂದು ವಿಶಿಷ್ಟವಾದ ಬಜೆಟ್ ಆಗುತ್ತದೆಂದು ನಾನು ಬಜೆಟ್ ಪೂರ್ವದಲ್ಲಿ ಭಾವಿಸಿಕೊಂಡಿದ್ದೆ. ಮಾನ್ಯ ಸಿದ್ದರಾಮಯ್ಯನವರು ಬಜೆಟ್ ಪೂರ್ವದಲ್ಲಿ ಕೃಷಿಕರ ಬಗ್ಗೆ, ನೀರಾವರಿ ಯೋಜನೆಗಳ ಬಗ್ಗೆ ಹೆಚ್ಚಿನ ಒಂದು ಒತ್ತನ್ನು ಕೊಟ್ಟು ಮಾತನಾಡಿರುವುದನ್ನು ನಾನು ಪತ್ರಿಕೆಯಲ್ಲಿ ಓದಿ ತಿಳಿದುಕೊಂಡಿದ್ದೆ, ಆದರೆ ದುರ್ದೈವದಿಂದ ಕೃಷಿಕರ ಬಗ್ಗೆ ಇದರಲ್ಲಿ ಹೆಚ್ಚಿನ ಒತ್ತನ್ನು ಕೊಡದೆ ಕೃಷಿಕರಿಗೆ ಮೂಲಭೂತವಾಗಿ ಬೇಕಾಗಿರತಕ್ಕಂಥ ನೀರಾವರಿ ಯೋಜನೆಗಳ ಬಗ್ಗೆ ನಿರ್ಲಕ್ಷ್ಯವನ್ನು ತೋರಿರುವಂಥದ್ದು ನಿಜಕ್ಕೂ ದುರ್ದೈವದ ಸಂಗತಿ ಎಂದು ಹೇಳುವುದಕ್ಕೆ ನಾನು ಈ ಸಂದರ್ಭದಲ್ಲಿ ಇಚ್ಛೆಪಡುತ್ತೇನೆ. ನನಗೆ ಈ ಸಂದರ್ಭದಲ್ಲಿ 8ನೇ ಕ್ಲಾಸಿನ ಒಬ್ಬ ವಿದ್ಯಾರ್ಥಿ ಬರೆದಂಥ ಉತ್ತರ ಕೂಡ ನನಗೆ ನೆನಪಾಗುತ್ತಿದೆ. 8ನೇ ತರಗತಿಯ ವಿದ್ಯಾರ್ಥಿಗೆ ವಾರ್ಷಿಕ ಪರೀಕ್ಷೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದರು. "ಹಲ್ಲಿ ಗೋಡೆಯ ಮೇಲೆ ಜಾರದೆ ಓಡಾಡುತ್ತದೆ" ಇದಕ್ಕೆ ಒಂದು ವೈಜ್ಞಾನಿಕ ಕಾರಣವನ್ನು ಕೊಡಿ ಎಂದು. ಅದಕ್ಕೆ ಆ ವಿದ್ಯಾರ್ಥಿ ಏನು ಬರೆದಿದ್ದನೆಂದರೆ, ಅದು ಹಿಂದಿನಿಂದಲೂ ಓಡಾಡಿಕೊಂಡು ಬಂದಿದೆ, ಈಗಲೂ ಓಡಾಡುತ್ತಿದೆ, ಮುಂದೆಯೂ ಓಡಾಡುತ್ತದೆಂದು ಅವನು ಬರೆದಿದ್ದನು. ಹಾಗೆ ಈ ವರ್ಷದ ಬಜೆಟ್ ಏನಾಗಿದೆ ಎಂದರೆ, ಹಿಂದಿನ ವರ್ಷ ಬಜೆಟ್ ಮಂಡನೆ ಮಾಡಿದ್ದರು. ಈ ವರ್ಷ ಕೂಡ ಬಜೆಟ್ ಮಂಡನೆ ಮಾಡಿದ್ದಾರೆ. ಮುಂದಿನ ವರ್ಷ ಕೂಡ ಬಜೆಟ್ ಮಂಡನೆ ಮಾಡುತ್ತಾರೆ. ವೈಜ್ಞಾನಿಕವಾಗಿ ವಿಚಾರ ಮಾಡಿ ರೈತರು ಏನು ಕಷ್ಟವನ್ನು ಅನುಭವಿಸುತ್ತಿದ್ದಾರೆ. ಈ ನಾಲ್ಕು ವರ್ಷಗಳ ಭೀಕರ ಬರಗಾಲದಿಂದ ಹೇಗೆ ತತ್ತರಿಸಿದ್ದಾರೆ. ಅವರಿಗೆ ನಾವು ಯಾವ ಅನುಕೂಲಗಳನ್ನು ಮಾಡಿಕೊಟ್ಟರೆ ರೈತ ಈ ರಾಜ್ಯದಲ್ಲಿ ನಿಶ್ಚಿಂತೆಯಿಂದ ಎರಡು ಹೊತ್ತಿನ ಕೂಳನ್ನು ತಿನ್ನಬಹುದು ಎನ್ನುವುದರ ಬಗ್ಗೆ ಚಿಂತನೆಯನ್ನು ಮಾಡಲಿಲ್ಲವಲ್ಲಾ ಎಂದು ನಾನು ಇವತ್ತು ವಿಷಾದದಿಂದ ಹೇಳುವುದಕ್ಕೆ ಇಚ್ಛೆಪಡುತ್ತಿದ್ದೇನೆ. ನೀರಾವರಿ ಯೋಜನೆಗಳಿಗೆ ನಾವು ಮೊದಲನೆಯ ಆದ್ಯತೆಯನ್ನು ಕೊಡಬೇಕಾಗಿರುವಂಥದ್ದು ಈ ರಾಜ್ಯದ ಒಂದು ಆದ್ಯ ಕರ್ತವ್ಯವೆಂದು ನಾವು ಭಾವಿಸಿಕೊಂಡು ಹೆಚ್ಚಿನ ಒಂದು ಸೌಲಭ್ಯವನ್ನು ನಾವು ನೀರಾವರಿಗೆ ಒದಗಿಸಬೇಕಾಗಿದೆ. ಉದಾಹರಣೆಗೆ ನಮ್ಮ ಹಾವೇರಿ ಜಿಲ್ಲೆಗೆ ಸಂಬಂಧಪಟ್ಟಂಥ ಅಪ್ಪರ್‌ತುಂಗಾ ಯೋಜನೆ ಅನೇಕ ವರ್ಷಗಳಿಂದ ಅಂದರೆ ಸುಮಾರು 15 ವರ್ಷಗಳಿಂದ ಚಾಲನೆಯನ್ನು

ಕೊಟ್ಟಿದ್ದರೂ ಕೂಡ ಇವತ್ತಿಗೂ ಕೂಡ ಮೊದಲನೆಯ ಹಂತದ ಯೋಜನೆ ಸಂಪೂರ್ಣವಾಗಿ ಮುಕ್ತಾಯವಾಗದೆ, ಆ ಭಾಗದ ಲಕ್ಷಾಂತರ ಎಕರೆ ಜಮೀನಿಗೆ ನೀರನ್ನು ಕೊಡುವುದಕ್ಕೆ ಸಾಧ್ಯವಾಗಿಲ್ಲ. ನಾನು ಕಳೆದ ಅಧಿವೇಶನದಲ್ಲಿ ಒಂದು ಪ್ರಶ್ನೆಯನ್ನು ಕೇಳಿದ್ದೆ. ಮೊದಲನೇ ಹಂತದ ಯೋಜನೆಯ ಈ ಅಪ್ಪರ್‌ತುಂಗಾ ಯೋಜನೆಯನ್ನು ಯಾವಾಗ ಪ್ರಾರಂಭ ಮಾಡುತ್ತೀರಿ? ಆ ಭಾಗದ ರೈತರಿಗೆ ಯಾವಾಗ ನೀರನ್ನು ಕೊಡುತ್ತೀರಿ ಎನ್ನುವ ಒಂದು ಪ್ರಶ್ನೆಯನ್ನು ಕೇಳಿದ್ದೆ. 2006ನೇ ಸಾಲಿಗೆ ನೀರನ್ನು ಕೊಡುತ್ತೇವೆಂದು ಅವರು ಉತ್ತರವನ್ನೂ ಕೂಡ ಕೊಟ್ಟಿದ್ದಾರೆ. ಹಾವೇರಿಯ ಜಿಲ್ಲೆಯ ಶಾಸಕರು ಹಾಗೂ ಆ ಭಾಗದ ಲೋಕಸಭೆಯ ಸದಸ್ಯರು ಅಲಲಿ ಹೋಗಿ ನೋಡಿದಾಗ ಅದು 2006 ಕ್ಕೂ ಕೂಡ ಆ ಯೋಜನೆ ಮುಕ್ತಾಯಗೊಳ್ಳದಿರುವ ಒಂದು ಪರಿಸ್ಥಿತಿ ಇದೆ. ಟನಲ್ ಅಲ್ಲಿ ಕೊರೆಯುತ್ತಿದ್ದಾರೆ. ಆ ಟನಲ್ ಕೆಲಸ ಇವತ್ತು ಒಂದು ಭಾಗದಲ್ಲಿ ನಿಂತುಹೋಗಿದೆ. ಆ ಟನಲ್ ಕೊರೆಯುವಂಥ ಸಂದರ್ಭದಲ್ಲಿ ಇವತ್ತು ಆ ಮಣ್ಣು ಬರುವಾಗ ಬಿದ್ದು ಮತ್ತೆ ಆ ಕೆಲಸವನ್ನು ಮಾಡುವಂಥ ಒಂದು ಪರಿಸ್ಥಿತಿ ಇಲ್ಲವೆನ್ನುವ ದೃಷ್ಟಿಯಿಂದ ಆ ಕೆಲಸ ಸಂಪೂರ್ಣವಾಗಿ ನಿಂತು ಹೋಗಿದೆ. ಇದನ್ನು ಸರ್ಕಾರ ಗಮನಹರಿಸಿ ರೈತರಿಗೆ ಬೇಕಾದಂಥ ನೀರಾವರಿ ಸೌಲಭ್ಯಗಳನ್ನು ಆದ್ಯತೆ ಕೊಟ್ಟು ಈ ಬಜೆಟ್‌ನಲ್ಲಿ ಎಷ್ಟು ಹಣಕಾಸನ್ನು ಕೊಟ್ಟಿದ್ದಾರೆ. ಅದರ ಮೂರು ಪಟ್ಟು ಹಣವನ್ನು ಈ ನೀರಾವರಿ ಯೋಜನೆಗಳಿಗೆ ಕೊಡಬೇಕಾಗಿತ್ತು. ಆ ಹಣ ಕೊಟ್ಟರೆ ಮಾತ್ರ, ಈ ರಾಜ್ಯದಲ್ಲಿರುವಂಥ ರೈತ ನೀರಾವರಿ ಸೌಲಭ್ಯಗಳನ್ನು ಹೊಂದಿ ಆರ್ಥಿಕವಾಗಿ ಸಬಲವಾಗುವುದಕ್ಕೆ ಸಾಧ್ಯತೆಯಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುತ್ತಾ ಇನ್ನು ಅನೇಕ ಸಣ್ಣಮಟ್ಟ ನೀರಾವರಿ ಯೋಜನೆಗಳು, ಹಾವೇರಿ ತಾಲ್ಲೂಕಿನಲ್ಲಿರುವ ಗೌರಾಪೂರ ಏತ ನೀರಾವರಿ ಯೋಜನೆ, ತಿಮ್ಮಾಪೂರ ಏತ ನೀರಾವರಿ ಯೋಜನೆಗಳು ಕೂಡ ಅನೇಕ ವರ್ಷಗಳಿಂದ ಅನುಷ್ಠಾನಕ್ಕೆ ಬಂದಿದ್ದರೂ ಇವತ್ತು ಕೂಡ ಅವು ಸಂಪೂರ್ಣವಾಗಿ ಮುಕ್ತಾಯವಾಗದೆ ಕುಂಟುತ್ತಾ ಸಾಗಿರುವುದು ಕೂಡ ಇವತ್ತು ರೈತನಿಗೆ ಒಂದು ಉಪಕಾರ ಮಾಡಬೇಕಾದ ಸರ್ಕಾರ ಇವತ್ತು ದಿವ್ಯ ನಿರ್ಲಕ್ಷ್ಯವನ್ನು ತೋರಿಸಿದೆ ಎಂದು ಹೇಳಿ, ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಚ್ಛೆಪಡುತ್ತೇನೆ. ಇನ್ನು ಕುಡಿಯುವ ನೀರಿನ ಸಮಸ್ಯೆ, ಈ ರಾಜ್ಯದ 4 ವರ್ಷಗಳಿಂದ ಭೀಕರವಾದ ಒಂದು ಬರಗಾಲಕ್ಕೆ ತುತ್ತಾಗಿ ಮಳೆಯ ಅಭಾವದಿಂದ ಇವತ್ತು ಅನೇಕ ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆಯನ್ನು ಅನುಭವಿಸುತ್ತಿದ್ದೇವೆ. ಅದು ಬೇಸಿಗೆಯಲ್ಲಿ ದನಕರುಗಳಿಗೆ, ಪ್ರಾಣಿ ಪಕ್ಷಿಗಳಿಗೆ ಇವತ್ತು ಒಂದು ಹನಿ ನೀರು ಕೂಡ ಸಿಗದೆ ಇರುವ ಪರಿಸ್ಥಿತಿಯಾಗಿದೆ. ಇವತ್ತು ಇದಕ್ಕೆ ನಾವೆಲ್ಲರೂ ಕಾರಣರಾಗಿದ್ದೇವೆ. ನೀರಾವರಿ ಮೂಲಗಳನ್ನು ನಾವು ಹಾಳುಮಾಡಿಕೊಂಡಿದ್ದೇವೆ. ಕೆರೆಕಟ್ಟೆಗಳನ್ನು ಇವತ್ತು ಸಾಗುವಳಿ ಮಾಡಿಕೊಂಡು, ಹೊಲಗಳನ್ನು ಮಾಡಿಕೊಂಡಿದ್ದೇವೆ. ಕ್ರಿಕೆಟ್ ಮೈದಾನಗಳನ್ನಾಗಿ ಪರಿವರ್ತನೆ ಮಾಡಿಕೊಂಡಿದ್ದೇವೆ. ಹರಿದುಬರುವಂತಹ ನೀರಿನ ಕಾಲುವೆಗಳನ್ನು ಇವತ್ತು ನಾವು ಮುಚ್ಚಿಕೊಂಡು ಅದರಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದೇವೆ. ಇಷ್ಟೆಲ್ಲಾ ಮಾಡಿರುವ ನಾವು ನೀರಿನ ಕ್ಷಾಮಕ್ಕೆ, ನಾವೇ ಕಾರಣರಾಗಿದ್ದೇವೆಂದು ಹೇಳಿದರೆ

ತಪ್ಪಾಗುವುದಿಲ್ಲ. ಈ ಎಲ್ಲಾ ವಿಚಾರಗಳ ಬಗ್ಗೆ ನಾವು ಮನಗಂಡು ಕುಡಿಯುವ ನೀರಿಗಾಗಿ ನಾವು ಮೊದಲನೆಯ ಆದ್ಯತೆಯನ್ನು ಕೊಟ್ಟಿದ್ದೆ ಆದರೆ, ಮೊದಲು ನಾವು ಕೆರೆಕಟ್ಟೆಗಳನ್ನು ಸುಧಾರಣೆ ಮಾಡಬೇಕು. ಅದರಲ್ಲಿರುವಂತಹ ಹೂಳನ್ನು ತೆಗೆಯಬೇಕು. ಮತ್ತು ಮಳೆಗಾಲದಲ್ಲಿ ನದಿಗೆ ಹತ್ತಿರವಿರುವಂತಹ ಕೆರೆಕಟ್ಟೆಗಳನ್ನು ಹೊಳೆಯ ಹತ್ತಿರವಿರುವಂತಹ ಕೆರೆಕಟ್ಟೆಗಳನ್ನು, ಮಳೆಗಾಲದಲ್ಲಿ ಅದಕ್ಕೆ ನೀರನ್ನು ತುಂಬಿಸಿ ಬೇಸಿಗೆಯಲ್ಲಿ ಆ ನೀರನ್ನು ಉಪಯೋಗಿಸುವಂತಹ, ಆ ಕೆರೆಕಟ್ಟೆಗಳಲ್ಲಿ ಸಂಗ್ರಹವಾದಂತಹ ನೀರು ಅದರ ಹತ್ತಿರವಿರುವಂತಹ ಬೋರ್‌ವೆಲ್‌ಗಳನ್ನೂ ಸಹ ನಾವು ರೀಚಾರ್ಜ್ ಮಾಡಬಹುದು. ಅನೇಕ ಜನ ರೈತರು ಬೋರ್‌ವೆಲ್‌ಗಳಲ್ಲಿ ನೀರಿ ಸಿಗದೆ ಆತ್ಮಹತ್ಯೆ ಮಾಡಿಕೊಂಡಿದ್ದಾರೆ. ಕೇವಲ ಕಾಗದಪತ್ರಗಳಿಂದ ಮಾತ್ರ ಇವತ್ತು ಅವರು ನೀರಾವರಿ ಸೌಲಭ್ಯವನ್ನು ಹೊಂದಿದಂತಹ ರೈತರಾಗಿದ್ದಾರೆ. ಆದರೆ ನಿಜವಾಗಿಯೂ ಆ ರೈತರ ಹೊಲಕ್ಕೆ ಹೋಗಿ ನೋಡಿದಾಗ ಒಂದು ಹನಿ ನೀರು ಕೂಡ ಇವತ್ತು ಆ ಬೋರ್‌ವೆಲ್‌ಗಳಲ್ಲಿ ಸಿಗುತ್ತಿಲ್ಲ. 800 ರಿಂದ 1000 ಅಡಿ ತೋಡಿದರೂ ಕೂಡ ಇವತ್ತು ಒಂದು ಹನಿ ನೀರು ಕೂಡ ಸಿಗುತ್ತಿಲ್ಲ. ಇಂತಹ ಸಂದರ್ಭದಲ್ಲಿ ಸರ್ಕಾರ ಈ ಕುಡಿಯುವ ನೀರಿನ ಯೋಜನೆಗಾಗಿ, ಇದರ ಬಗ್ಗೆ ಸಾಕಷ್ಟು ವಿಚಾರ ಮಾಡಬೇಕು. ಎಲ್ಲಾ ಗ್ರಾಮಗಳಿಗೆ ಕೆರೆಕಟ್ಟೆಗಳನ್ನು ಪುನಶ್ಚೇತನ ಮಾಡುವಂತಹ, ಹೂಳು ತೆಗೆಸುವಂತಹ ಮತ್ತು ಹೊಳೆಯಿಂದ ನೀರನ್ನು ತುಂಬಿಸುವಂತಹ ಕಾರ್ಯಕ್ಕೆ ಈ ಬಜೆಟ್‌ನಲ್ಲಿ ಹೆಚ್ಚಿನ ಒಂದು ಆದ್ಯತೆಯನ್ನು ಕೊಡಬೇಕಾಗಿತ್ತು ಅಂತ ನಾನು ಮಾನ್ಯ ಸಭಾಧ್ಯಕ್ಷರ ಮುಖಾಂತರ ಸನ್ಮಾನ್ಯ ಉಪ ಮುಖ್ಯಮಂತ್ರಿಗಳಲ್ಲಿ ಈ ಸಂದರ್ಭದಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಗೋವಿಂದ ಎಂ. ಕಾರಜೋಳ:- ಮಾನ್ಯ ಉಪಾಧ್ಯಕ್ಷರೆ, ಈ ಕೆರೆಕಟ್ಟೆಗಳ ಒತ್ತುವರಿ ವಿಚಾರದಲ್ಲಿ ಸರ್ಕಾರ ಇದೇ ಅಧಿವೇಶನದಲ್ಲಿ ಒಂದು ಬಿಗಿಯಾದಂತಹ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ಏನಾದರೂ ವ್ಯವಸ್ಥೆ ಮಾಡಬೇಕೆಂದು ನಾನು ಸರ್ಕಾರಕ್ಕೆ ಮನವಿ ಮಾಡಿಕೊಳ್ಳುತ್ತೇನೆ.

ಶ್ರೀ ಶಿವರಾಜ ಸಜ್ಜನರ್:- ಮಾನ್ಯ ಉಪಾಧ್ಯಕ್ಷರೆ, ಕೃಷಿ ಸಾಲಕ್ಕೆ 6 ಪರ್ಸೆಂಟ್ ಬಡ್ಡಿಯನ್ನು ಘೋಷಣೆ ಮಾಡಿರುವುದಕ್ಕೆ ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳನ್ನು ಈ ಸಂದರ್ಭದಲ್ಲಿ ಶ್ಲಾಘಿಸುತ್ತಿದ್ದೇನೆ. ಆದರೆ ನಮ್ಮ ಜಿಲ್ಲೆಗೆ ಸಂಬಂಧಪಟ್ಟಂತೆ ಹೇಳುವುದಾದರೆ, ನಮ್ಮ ಜಿಲ್ಲೆಯಲಲಿ ಕೆ.ಸಿ.ಸಿ. ಬ್ಯಾಂಕ್ ಹಳೆಯ ಧಾರವಾಡ ಜಿಲ್ಲೆಯ ಈ ಬ್ಯಾಂಕ್ ಇವತ್ತು ಈ ವರ್ಷದಲ್ಲಿ 100 ವರ್ಷದ ಆಚರಣೆಯನ್ನು ಕೂಡ ನಾವು ಮಾಡುತ್ತಿದ್ದೇವೆ. ಆದರೆ ಕೆ.ಸಿ.ಸಿ. ಬ್ಯಾಂಕಿನ ಕೆಟ್ಟ ಪರಿಸ್ಥಿತಿಯಿಂದಾಗಿ ಅದರ ವ್ಯಾಪ್ತಿಯಲ್ಲಿ ಬರುವಂತಹ ಅನೇಕ ಸಣ್ಣಪುಟ್ಟ ವ್ಯವಸಾಯ ಸೇವಾ ಸಹಕಾರ ಬ್ಯಾಂಕುಗಳು, ಅರ್ಬನ್ ಬ್ಯಾಂಕುಗಳು ಎಲ್ಲಾ ಸಹಕಾರಿ ರಂಗ ಇವತ್ತಿನ ದಿವಸ ಅತ್ಯಂತ ಹೀನಾಯ ಪರಿಸ್ಥಿತಿಯನ್ನು ಅಲ್ಲಿ ಅನುಭವಿಸುತ್ತಿದೆ. ನಾನು ಈ ಹಿಂದಿನ ಅಧಿವೇಶನದಲ್ಲಿ, ಹೋದ ವರ್ಷದ ಬಜೆಟ್ ಅಧಿವೇಶನದಲ್ಲಿ ಕೂಡ ನಾನು ನಮ್ಮ ಧಾರವಾಡ ಕೆ.ಸಿ.ಸಿ. ಬ್ಯಾಂಕ್‌ನ್ನು ಪುನಶ್ಚೇತನಗೊಳಿಸಬೇಕು ಅದಕ್ಕೆ ಸರ್ಕಾರ ಸಂಪೂರ್ಣವಾದಂತಹ

ಸಹಕಾರವನ್ನು ಕೊಡಬೇಕು. ಮತ್ತು ಆ ಬ್ಯಾಂಕಿಗೆ ಕೊಡಬೇಕಾದಂತಹ ಎಲ್ಲಾ ಬಾಕಿಗಳನ್ನು ತಕ್ಷಣ ಒದಗಿಸಬೇಕೆಂದು ನಾನು ಎರಡು ಅಧಿವೇಶನಗಳಲ್ಲಿ ಮಾತನಾಡಿದ್ದೆ. ಇವತ್ತು ಕೂಡ ಆ ಕೆ.ಸಿ.ಸಿ. ಬ್ಯಾಂಕ್‌ನ ಬಗ್ಗೆ ಸರ್ಕಾರ ಅದರ ಪರಿಸ್ಥಿತಿಯನ್ನು ಮನಗಾಣದೆ ಆ ಬ್ಯಾಂಕನ್ನು ಇವತ್ತು ಇನ್ನಷ್ಟು ಕಂದಕಕ್ಕೆ ದೂಡುವಂತಹ ವ್ಯವಸ್ಥೆ ನಿರ್ಮಾಣವಾಗಿದೆ. ಈ 6 ಪರ್ಸೆಂಟ್ ಬಡ್ಡಿ ರೈತರಿಗೆ ಮುಟ್ಟಬೇಕಾಗಿದ್ದರೆ ಆ ಕೆ.ಸಿ.ಸಿ. ಬ್ಯಾಂಕನ್ನು ನಾವು ಪುನಶ್ಚೇತನಗೊಳಿಸಬೇಕು. ಏತಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆಂದರೆ, ಈ 6 ಪರ್ಸೆಂಟ್ ಬಡ್ಡಿಯನ್ನು ಆ ವ್ಯವಸಾಯ ಬ್ಯಾಂಕಿನಲ್ಲಿ ಸಾಲ ತೆಗೆದುಕೊಂಡವರಿಗೆ ಮಾತ್ರ ಸರ್ಕಾರ (6) ಪರ್ಸೆಂಟ್ ಬಡ್ಡಿಯನ್ನು ನಿಗದಿಮಾಡಿದೆ. ಆದರೆ ದುರ್ದೈವದಿಂದ ಕೆ.ಸಿ.ಸಿ. ಬ್ಯಾಂಕ್‌ನವರು ರೈತರಿಗೆ ಸಾಲವನ್ನು ಕೊಡುತ್ತಿಲ್ಲ. ಸಾಲವನ್ನು ಕೊಡದೆ ಇರುವಂತಹ ಪರಿಸ್ಥಿತಿ ಆ ಬ್ಯಾಂಕಿಗೆ ಬಂದಿರುವುದರಿಂದ ನಾನು ಸನ್ಮಾನ್ಯ ಉಪಮುಖ್ಯಮಂತ್ರಿಗಳಲ್ಲಿ ಅತ್ಯಂತ ಕಳಕಳಿಯಿಂದ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಮೊದಲು ನೀವು ಧಾರವಾಡ ಕೆ.ಸಿ.ಸಿ. ಬ್ಯಾಂಕ್‌ನ್ನು ಪುನಶ್ಚೇತನಗೊಳಿಸಬೇಕು. ಅದಕ್ಕೆ ಹೆಚ್ಚಿನ ಹಣಕಾಸಿನ ನೆರವನ್ನು ಕೊಟ್ಟು ಆ ಭಾಗದ ರೈತರಿಗೆ ನೀವು 6 ಪರ್ಸೆಂಟ್ ಬಡ್ಡಿಯ ಲಾಭ ಮುಟ್ಟಬೇಕಾದರೆ ನೀವು ಆ ಬ್ಯಾಂಕಿನ ಮುಖಾಂತರ ಕೃಷಿಕರಿಗೆ ಹೆಚ್ಚಿನ ಸಾಲಸೌಲಭ್ಯವನ್ನು ಒದಗಿಸಬೇಕೆಂದು ನಾನು ಈ ಸಂದರ್ಭಧಲ್ಲಿ ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇನ್ನು ಗ್ರಾಮೀಣ ಪ್ರದೇಶಕ್ಕೆ ಉತ್ತಮವಾದಂತಹ ಗುಣಮಟ್ಟದ ವಿದ್ಯುತ್‌ನ್ನು ಪೂರೈಕೆ ಮಾಡುತ್ತಿದ್ದೇವೆಂದು ಬಜೆಟ್‌ನಲ್ಲಿ ಹೇಳಿಕೊಂಡಿದ್ದಾರೆ. ನಾವು ಈ ಬೇಸಿಗೆಯ ಸಂದರ್ಭದಲ್ಲಿ, ಮಳೆಗಾಲದಲ್ಲಿ ಪ್ರತಿವರ್ಷಕ್ಕಿಂತ ಈ ವರ್ಷ ಉತ್ತಮ ಗುಣಮಟ್ಟದ ವಿದ್ಯುತ್ತನ್ನು ನಾವು ಪಡೆದುಕೊಂಡಿದ್ದೇವೆ. ಆದರೆ ಈ ಬೇಸಿಗೆಯಲ್ಲಿ ಇವತ್ತು ರೈತ ಅತ್ಯಂತ ಕಷ್ಟಕರವಾದಂತಹ ಪರಿಸ್ಥಿತಿಯನ್ನು ಅನುಭವಿಸುತ್ತಿದ್ದಾನೆ. ನೀರಿನ ವ್ಯವಸ್ಥೆ ಇದ್ದಲ್ಲಿ ವಿದ್ಯುತ್ ಸಿಗುತ್ತಿಲ್ಲ, ನೀರಿನ ವ್ಯವಸ್ಥೆ ಇಲ್ಲದಲ್ಲಿ ವಿದ್ಯುತ್ ಸಿಗುತ್ತಿದೆ. ಇದರಿಂದ ರೈತ ಸಂಪೂರ್ಣವಾಗಿ ಇವತ್ತು ಮಳೆಯ ಅಭಾವದಿಂದ ಬೇಸಿಗೆಯಲ್ಲಿ ವಿದ್ಯುತ್ತಿನ ಒಂದು ಅಭಾವದಿಂದ ಅತ್ಯಂತ ಕಷ್ಟದಾದಂತಹ ಒಂದು ಪರಿಸ್ಥಿತಿಗೆ ರೈತ ಸೂಕಲ್ಪಟ್ಟಿದ್ದಾನೆ. ಈ ರೈತರ ಪಂಪುಸೆಟ್ಟುಗಳಿಗೆ ವಿದ್ಯುತ್‌ನ್ನು ಅಕ್ರಮ ಸಕ್ರಮಗೊಳಿಸುವಂತಹ ವಿಚಾರದಲ್ಲಿ ನಾವು ಅನೇಕ ಸಾರಿ ವಿದ್ಯುತ್ ಮಂತ್ರಿಗಳಲ್ಲಿ ವಿನಂತಿಯನ್ನು ಮಾಡಿಕೊಂಡಿದ್ದೇನೆ. ಅಕ್ರಮ ಸಕ್ರಮಗೊಳಿಸಬೇಕಾದಂತಹ ಸಂದರ್ಭದಲ್ಲಿ ಅದರಲ್ಲಿ ರೈತರಿಗೆ ಯಾವುದೇ ದಂಡವನ್ನು ಹಾಕದೆ ಸಂಪೂರ್ಣವಾಗಿ ಅದನ್ನು ಸಕ್ರಮಗೊಳಿಸಬೇಕೆಂದು ನಾವು ಅನೇಕ ಸಾರಿ ವಿನಂತಿಯನ್ನು ಮಾಡಿಕೊಂಡಿದ್ದೆವು. ಆದರೆ ಸನ್ಮಾನ್ಯ ವಿದ್ಯುತ್ ಮಂತ್ರಿಗಳು 10 ಸಾವಿರ ರೂಪಾಯಿಗಳು ದಂಡದ ರೂಪದಲ್ಲಿ ವಸೂಲು ಮಾಡಬೇಕೆಂಬ ಆದೇಶವನ್ನೂ ಕೂಡ ಅವರು ಕೊಟ್ಟಿದ್ದಾರೆ. ಅದರ ಬಗ್ಗೆ ತಾವು ತಕ್ಷಣ ವಿಚಾರ ಮಾಡಬೇಕು. ರೈತರ ಹಿತದೃಷ್ಟಿಯಿಂದ ಈ ರಾಜ್ಯದಲ್ಲಿ ಏನಾದರೂ ನಮ್ಮ ರೈತರು ಬದುಕಬೇಕಾಗಿದ್ದರೆ 10 ಸಾವಿರ ರೂಪಾಯಿಗಳ ಬದಲಾಗಿ 5 ಸಾವಿರ ರೂಪಾಯಿಗಳನ್ನು ತಾವು ತಕ್ಷಣ ದಂಡ ರೂಪದಲ್ಲಿ ತೆಗೆದುಕೊಂಡು ರೈತರ ಎಲ್ಲಾ ಅಕ್ರಮವಾಗಿರುವಂತಹ ವಿದ್ಯುತ್ ಪಂಪುಸೆಟ್ಟುಗಳನ್ನು ಸಕ್ರಮಗೊಳಿಸಬೇಕೆಂದು ನಾನು ತಮ್ಮ ಮುಖಾಂತರ ವಿನಂತಿಯನ್ನು

ಮಾಡಿಕೊಳ್ಳುತ್ತಿದ್ದೇನೆ. ಮತ್ತು ಈ ಕುಟೀರ ಜ್ಯೋತಿ ಮತ್ತು ಭಾಗ್ಯಜ್ಯೋತಿ ಅಡಿಯಲ್ಲಿ ಬಡವರಿಗೆ ಕೊಟ್ಟಂತಹ ಈ ವಿದ್ಯುತ್ ಸಂಪರ್ಕವನ್ನು ಈಗ ಅನೇಕ ಭಾಗದಲ್ಲಿ ಅದನ್ನು ಕಡಿತಗೊಳಿಸುತ್ತಿದ್ದಾರೆ. ಇನ್ನು ಮುಂದೆ ಆ ವಿದ್ಯುತ್ ಸಂಪರ್ಕವನ್ನು ಮಾಡಬಾರದೆಂದು ಒಂದು ಆದೇಶವನ್ನು ವಿದ್ಯುತ್ ಇಲಾಖೆಯಿಂದ ಈಗಾಗಲೇ ಕೊಟ್ಟಿದ್ದಾರೆ. ಅದನ್ನು ತಾವು ಪರಿಶೀಲಿಸಬೇಕು. ಕಳೆದ ಒಂದು ತಿಂಗಳಿನಲ್ಲಿ ಈ ಭಾಗ್ಯಜ್ಯೋತಿ ಮತ್ತು ಕುಟೀರ ಜ್ಯೋತಿಗಳನ್ನು ಈಗಾಗಲೇ ಅದಕ್ಕೆ ಸಂಪರ್ಕವನ್ನು ಕಲ್ಪಿಸಿಕೊಟ್ಟಿದ್ದಾರೆ. ಆದರೆ ವಿದ್ಯುತ್ ಇಲಾಖೆಯಿಂದ ಒಂದು ಆದೇಶ ಬಂದಿದೆ, ಆ ಸಂಪರ್ಕವನ್ನು ಇನ್ನು ಮುಂದೆ ತಾವು ತೆಗೆದುಕೊಳ್ಳಬಾರದು, ಎನ್ನುವಂತಹ ಆದೇಶ ಬಂದಿದೆ. ಅದರ ಬಗ್ಗೆ ಸನ್ಮಾನ್ಯ ಸಚಿವರು ಪರಿಶೀಲಿಸಿ ಶೀಘ್ರವಾಗಿ ಈ ಯೋಜನೆಗೆ ಚಾಲನೆಯನ್ನು ಕೊಡಬೇಕೆಂದು ನಾನು ವಿನಂತಿಯನ್ನು ಮಾಡಿಕೊಳ್ಳುತ್ತಿದ್ದೇನೆ. ಇನ್ನು ಹಾವೇರಿ ಜಿಲ್ಲೆಯ ಸಣ್ಣ ನೀರಾವರಿ ಇಲಾಖೆ ಪರಿಸ್ಥಿತಿಯನ್ನು ನೋಡಿದರೆ ತಾಲ್ಲೂಕು ಮಟ್ಟದ ಅಧಿಕಾರಿಗಳಿಗೆ ಒಂದು ದೂರವಾಣಿಯೂ ಕೂಡ ಇರುವುದಿಲ್ಲ. ಆ ದೂರವಾಣಿಯ ಬಿಲ್ಲನ್ನು ಕಟ್ಟದೆ ಇರುವಂತಹ ಕಾರಣದಿಂದಾಗಿ, ಅದನ್ನು ಕೂಡ ಡಿಸ್‌ಕನೆಕ್ಟ್ ಮಾಡಿದ್ದಾರೆ. ಅಂತಹ ಒಂದು ಕೆಟ್ಟಪರಿಸ್ಥಿತಿಯಲ್ಲಿ ಇವತ್ತು ಸಣ್ಣ ನೀರಾವರಿ ಇಲಾಖೆ ಇದೆ. ಆ ಇಲಾಖೆಯಲ್ಲಿ ಯಾವುದಾದರೂ ಒಂದು ಟೆಂಡರ್‌ನ್ನು ಕರೆದರೆ ಯಾವ ಕಾಂಟ್ರಾಕ್ಟದಾರನು ಕೂಡ ಬರುವುದಿಲ್ಲ. ಏಕೆಂದರೆ ನಮ್ಮ ಧಾರವಾಡ ಜಿಲ್ಲೆ, ಆ ವಲಯದ ಬಾಕಿ ಸುಮಾರು 55 ರಿಂದ 60 ಕೋಟಿ ರೂಪಾಯಿಗಳು ಇದೆ. ಆ ಇಲಾಖೆಗೆ ಸಂಬಂಧಪಟ್ಟಂತಹ ಯಾವುದೇ ಕೆಲಸಕಾರ್ಯಗಳು ನಡೆಯುತ್ತಿಲ್ಲ. ನಮ್ಮ ಹಾವೇರಿ ಜಿಲ್ಲೆಯ ವರದಾ ನದಿಗೆ ಕಟ್ಟಿರುವಂತಹ ಸುಮಾರು 13 ಬ್ಯಾರೇಜ್‌ಗಳು ಇವತ್ತು ಅನೇಕ ಕಾರಣಗಳಿಂದಾಗಿ ದುಸ್ಥಿತಿಗೆ ಬಂದಿದ್ದು, ಅದನ್ನು ದುರಸ್ಥಿ ಮಾಡಿಸಬೇಕೆಂದು ನಾವು ಇಲಾಖೆಯ ಅಧಿಕಾರಿಗಳನ್ನು ಕೇಳಿದರೆ 55 ರಿಂದ 60 ಕೋಟಿ ರೂಪಾಯಿಗಳು ಬಾಕಿ ಇದೆ. ಇದನ್ನು ನಾವು ಯಾವಾಗ ದುರಸ್ಥಿ ಮಾಡಬೇಕು ತಾವು ಸನ್ಮಾನ್ಯ ಉಪಮುಖ್ಯಮಂತ್ರಿ ಹಾಗೂ ಹಣಕಾಸಿನ ಮಂತ್ರಿಗಳಿಗೆ ಪತ್ರವನ್ನು ಕೊಡಿ ಅವರು ಹಣಕಾಸನ್ನು ಕೊಟ್ಟರೆ ಮಾತ್ರ ನಾವು ರಿಪೇರಿ ಮಾಡುತ್ತೇವೆಂಬ ಸಬೂಬನ್ನೂ ಕೂಡ ಹೇಳುತ್ತಿದ್ದಾರೆ. ಕೋಟ್ಯಾಂತರ ರೂಪಾಯಿಗಳನ್ನು ನಾವು ಖರ್ಚು ಮಾಡಿ ಆ ಬ್ಯಾರೇಜ್‌ಗಳನ್ನು ಕಟ್ಟಿದ್ದೇವೆ. ಒಂದೊಂದು ಬ್ಯಾರೇಜ್‌ಗೆ 2 ರಿಂದ 3 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಆದರೂ ದುರ್ದೈವದಿಂದ ಯಾವ ಬ್ಯಾರೇಜ್‌ನಲ್ಲಿಯೂ ಕೂಡ ಬೇಸಿಗೆಯಲ್ಲಿ ನೀರು ನಿಲ್ಲಿಸುವುದಕ್ಕೆ ಸಾಧ್ಯವಿಲ್ಲ. ಅನೇಕ ಬ್ಯಾರೇಜ್‌ಗಳು ಅದರ ಬುಡದಿಂದ ನೀರು ಇವತ್ತು ಸೋರಿಹೋಗುತ್ತಿದೆ. ಗೇಟ್‌ಗಳ ಒಂದು ಅನಿಯಮಿತ ಅವ್ಯವಸ್ಥೆಯಿಂದಾಗಿ ಆ ಗೇಟಿನ ಸಂದಿಯಲ್ಲಿಯೂ ಕೂಡ ಇವತ್ತು ನೀರು ಹರಿದುಹೋಗುತ್ತಿದೆ. ಆ ಕಾರಣದಿಂದಾಗಿ ಯಾವ ಬ್ಯಾರೇಜ್‌ನಲ್ಲಿಯೂ ನಾವು ನೀರು ನಿಲ್ಲಿಸುವುದಕ್ಕೆ ಸಾಧ್ಯವಾಗುತ್ತಿಲ್ಲ. ಅದಕ್ಕಾಗಿ ದಯವಿಟ್ಟು ತಾವು ಈ ನಮ್ಮ ಹಾವೇರಿ ಜಿಲಲ್ಲೆಯ ವರದಾ ನದಿಗೆ ಕಟ್ಟಿರುವಂತಹ ಎಲ್ಲಾ ಬ್ಯಾರೇಜ್‌ಗಳ ದುರಸ್ಥಿಗಾಗಿ ತಕ್ಷಣ ಹಣಕಾಸನ್ನು ಬಿಡುಗಡೆ ಮಾಡಬೇಕು. ಬೇಸಿಗೆಯ ಸಂದರ್ಭದಲ್ಲಿ ಆ ಎಲ್ಲಾ ಬ್ಯಾರೇಜ್‌ಗಳಲ್ಲಿ ನೀರನ್ನು ನಿಲ್ಲಿಸುವಂತಹ

ವ್ಯವಸ್ಥೆ ಮಾಡಬೇಕೆಂದು ನಾನು ತಮ್ಮ ಮುಖಾಂತರ ವಿನಂತಿಯನ್ನು ಮಾಡುತ್ತಿದ್ದೇನೆ. ಇನ್ನು ಕೆರೆಗಳ ಅಭಿವೃದ್ಧಿಯ ವಿಚಾರದ ಬಗ್ಗೆ ಹೇಳುವುದಾದರೆ, ನಾನು ಈಗಾಗಲೇ ಮಾತನಾಡಿದ್ದೇನೆ. ಅದರ ವಿಚಾರದಲ್ಲಿ ಸರ್ಕಾರ ಮೊದಲನೆಯ ಆದ್ಯತೆಯನ್ನು ಕೊಟ್ಟು ತಾವು ಕೆರೆಗಳ ಅಭಿವೃದ್ಧಿಗಾಗಿ ಹೆಚ್ಚಿನ ಹಣಕಾಸಿನ ನೆರವನ್ನು ಒದಗಿಸಬೇಕೆಂದು ನಾನು ತಮ್ಮ ಮುಖಾಂತರ ಸರ್ಕಾರಕ್ಕೆ ಒತ್ತಾಯವನ್ನು ಮಾಡುತ್ತಿದ್ದೇನೆ. ಇನ್ನು ನಮ್ಮ ರಾಜ್ಯದ ವೈದ್ಯಕೀಯ ವಿಚಾರದಲ್ಲಿ ಈಗಾಗಲೇ ಸರ್ಕಾರ ಆರು ವೈದ್ಯಕೀಯ ಕಾಲೇಜುಗಳನ್ನು ಪ್ರಾರಂಭಿಸುವುದಾಗಿ ಕಳೆದ ಅಧಿವೇಶನದಲ್ಲಿ ತಿಳಿಸಿತ್ತು. ಈಗಾಗಲೇ ತಾವು ಕೊಟ್ಟಿರುವ ವೈದ್ಯಕೀಯ ಕಾಲೇಜುಗಳು ದೊಡ್ಡ ದೊಡ್ಡ ಸಿಟಿಗಳಿಗೆ ಮಾತ್ರ ಸೀಮಿತವಾಗಿದೆ. ಹಾವೇರಿ ಕೂಡ ರಾಜ್ಯದಲ್ಲೇ ದೊಡ್ಡ ಜಿಲ್ಲೆಯಾಗಿರತಕ್ಕಂತಹ ಆ ಜಿಲ್ಲೆಗೆ ಒಂದು ವೈದ್ಯಕೀಯ ಕಾಲೇಜನ್ನು ಮಂಜೂರು ಮಾಡಬೇಕು. ಅನೇಕ ಆಸ್ಪತ್ರೆಗಳಿಗೆ ಇವತ್ತು ಡಾಕ್ಟರ್‌ಗಳು ಇಲ್ಲ. ಉದಾಹರಣೆಗೆ ನಮ್ಮ ಹಾವೇರಿ ಜಿಲ್ಲೆಯಲ್ಲಿರುವ 27 ಆಸ್ಪತ್ರೆಗಳಿಗೆ ಡಾಕ್ಟರ್‌ಗಳು ಲಭ್ಯವಾಗುತ್ತಿಲ್ಲ. ಇವತ್ತು ಡಾಕ್ಟರ್‌ಗಳ ಹುದ್ದೆಗೆ ಅರ್ಜಿಯನ್ನು ಕರೆದರೂ ಸಹ ಯಾರೂ ಬರುತ್ತಿಲ್ಲ. ಈಗ ತಾವು ಎಂ.ಬಿ.ಬಿ.ಎಸ್. ಡಾಕ್ಟರ್ ಹುದ್ದೆಗೆ ನಿಗದಿಪಡಿಸಿರುವ 10 ರಿಂದ 13 ಸಾವಿರ ರೂಪಾಯಿಗಳ ಸಂಬಳಕ್ಕೆ ಯಾರೂ ಸಹ ಕೆಲಸ ಮಾಡಲಿಕ್ಕೆ ಸಿದ್ದರಿಲ್ಲ. ನೆರೆಯ ರಾಜ್ಯಗಳಲ್ಲಿ ಹದಿನೇಳು, ಹತ್ತೊಂಭತ್ತು ಹಾಗೂ ಇಪ್ಪತ್ತೈದು ಸಾವಿರದವರೆಗೂ ಸಂಬಳವನ್ನು ಡಾಕ್ಟರ್ಸ್‌ಗೆ ನಿಗದಿಪಡಿಸಿ ನೀಡುತ್ತಿದ್ದಾರೆ. ತಾವು ಕೇವಲ ಹತ್ತರಿಂದ ಹದಿಮೂರು ಸಾವಿರ ರೂಪಾಯಿ ಸಂಬಳವನ್ನು ಕೊಟ್ಟರೆ ಯಾವ ಡಾಕ್ಟರ್ಸ್ ಸಹ ಗ್ರಾಮೀಣ ಭಾಗದಲ್ಲಿ ಆಸ್ಪತ್ರೆಗಳಿಗೆ ಬಂದು ಕೆಲಸ ಮಾಡಲಿಕ್ಕೆ ತಯಾರಿಲ್ಲ. ಇದನ್ನೆಲ್ಲಾ ಪರಿಶೀಲಿಸಿ, ಅವರಿಗೆ ಹೆಚ್ಚಿನ ಪಗಾರವನ್ನು ಕೊಟ್ಟು ಡಾಕ್ಟರ್‌ಗಳ ನೇಮಕವನ್ನು ಕೂಡ ಮಾಡಬೇಕು. ಈ ಬಜೆಟ್‌ನಲ್ಲಿ ಸನ್ಮಾನ್ಯ ಉಪಮುಖ್ಯಮಂತ್ರಿಗಳು ಅನೇಕ ಉತ್ತಮವಾದಂತಹ ಕೆಲವು ಯೋಜನೆಗಳನ್ನು ಕೂಡ ಘೋಷಣೆ ಮಾಡಿದ್ದಾರೆ. ಅದರಲ್ಲಿ ಶಾಸಕರಿಗೆ ಅಭಿವೃದ್ಧಿ ಹಣವೆಂದು 50.00 ಲಕ್ಷ ರೂಪಾಯಿಗಳನ್ನು ಕೊಡುವುದಾಗಿ ಘೋಷಣೆ ಮಾಡಿದ್ದಾರೆ. ಈ ಘೋಷಣೆಗೆ ನಾನು ಹೃತ್ಪೂರ್ವಕ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಅದು ಒಂದು ಕೋಟಿ ರೂಪಾಯಿಗೆ ಘೋಷಣೆಯಾಗಬೇಕಾಗಿತ್ತು. ಇವತ್ತು ನಾವು ಯಾವುದೇ ಗ್ರಾಮಕ್ಕೆ ಹೋದರೂ ಜನಗಳು ನಮ್ಮನ್ನು ಜನರು ಕೇಳುತ್ತಾರೆ. ನಮಗೆ ಕುಡಿಯಲಿಕ್ಕೆ ನೀರು ಇಲ್ಲ. ರಸ್ತೆ ಇಲ್ಲ. ಗಟಾರಗಳು ಇಲ್ಲ. ಹಾಗಾಗಿ ತಾವು ಇದೇ ಅಧಿವೇಶನದಲ್ಲಿ ಅಭಿವೃದ್ಧಿ ಹಣವನ್ನು 50.00 ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗಳಿಗೆ ಹೆಚ್ಚಿಸಿ ಹಣಕಾಸಿನ ನೆರವು ನೀಡಬೇಕೆಂದು ತಮ್ಮಲ್ಲಿ ವಿನಂತಿಸಿಕೊಳ್ಳುತ್ತೇನೆ. ಇನ್ನು ಗಂಗಾ ಕಲ್ಯಾಣ ಯೋಜನೆಗೆ ಕಳೆದ ಅಧಿವೇಶನಕ್ಕಿಂತ ಈ ಅಧಿವೇಶನದಲ್ಲಿ ದುಪ್ಪಟ್ಟು ಹಣವನ್ನು ಒದಗಿಸಿದ್ದಾರೆ. ಇದಕ್ಕೂ ಕೂಡ ಧನ್ಯವಾದಗಳನ್ನರ್ಪಿಸುತ್ತೇನೆ; ಆದರೆ ವೈಯಕ್ತಿಕ ಒಂದು ಬೋರ್‌ವೆಲ್ ತೆಗೆಯಲಿಕ್ಕೆ 65,000–00 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದು ಸಾಕಾಗುವುದಿಲ್ಲ. ಈಗಾಗಲೇ ಎಲ್ಲಾ ಸಾಮಗ್ರಿಗಳ ಬಿಲ್ ಏರಿಕೆಯಾಗಿರುವುದರಿಂದ ಅದನ್ನು 1.00 ಲಕ್ಷ ರೂಪಾಯಿ ಏರಿಸಬೇಕು; ಹರಿಜನ ಗಿರಜನರು

ಹೊಲ ಖರೀದಿ ಮಾಡುವ ಸಂದರ್ಭದಲ್ಲಿ ನೀರಾವರಿ ಸೌಕರ್ಯವಿರುವ ಹೊಲಕ್ಕೆ 60,000 ರೂಪಾಯಿಗಳನ್ನು ಕೊಡುತ್ತಿದ್ದಾರೆ. ನೀರಾವರಿ ಸೌಕರ್ಯವಿಲ್ಲದ ಹೊಲಕ್ಕೆ ಕೇವಲ 30.000 ರೂಪಾಯಿಗಳನ್ನು ಕೊಡುತ್ತಿದ್ದಾರೆ. ಇದನ್ನು ಡಬಲ್ ಮಾಡಬೇಕೆಂದು ವಿನಂತಿಸುತ್ತೇನೆ. ಇನ್ನು ಕ್ರೀಡೆಯ ಬಗ್ಗೆ ಇವತ್ತು ನಾನು ಅತ್ಯಂತ ವಿಷಾದದಿಂದ ಹೇಳಬೇಕಾಗಿದೆ. ನಮ್ಮ ರಾಷ್ಟ್ರದಲ್ಲಿ ಸುಮಾರು 110 ಕೋಟಿ ಜನಸಂಖ್ಯೆ ಇದ್ದರೂ ಕೂಡ.....

ಉಪಾಧ್ಯಕ್ಷರು:– ಮಾನ್ಯ ಸಜ್ಜನ್‌ರವರೇ ನಿಮಗೆ ಕೊಟ್ಟ 15 ನಿಮಿಷ ಮುಗಿಯಿತು. ಮತ್ತೆ 10 ನಿಮಿಷ ಜಾಸ್ತಿ ತೆಗೆದುಕೊಂಡಿದ್ದೀರಿ? ಬೇಗ ಮಾತನಾಡಿ ಮುಗಿಸಬೇಕು. ಬೇರೆ ಕಾರ್ಯಕ್ರಮ ಇದೆ.

ಶ್ರೀ ಶಿವರಾಜ್ ಸಜ್ಜನರ್:– ಆಯಿತು. ಈ ಸಂದರ್ಭದಲ್ಲಿ ಒಂದು ಮಾತನ್ನು ಹೇಳಲೇಬೇಕಾಗಿದೆ. 107 ಕೋಟಿ ಜನಸಂಖ್ಯೆಯನ್ನು ಹೊಂದಿರುವಂತಹ ಈ ರಾಷ್ಟ್ರದಲ್ಲಿ ಇವತ್ತು ಅತ್ಯಂತ ಹೀನಾಯವಾದಂತಹ ಸೋಲನ್ನು ಎಲ್ಲಾ ಒಲಂಪಿಕ್ಸ್‌ಗಳಲ್ಲಿ ಎಲ್ಲಾ ಕ್ರೀಡಾಪಟುಗಳು ಅನುಭವಿಸುತ್ತಿದ್ದಾರೆ; ಇದಕ್ಕೆ ಕಾರಣವೇನೆಂದರೆ ರಾಜ್ಯ ಸರ್ಕಾರವೇ ಇರಬಹುದು ಅಥವಾ ಕೇಂದ್ರಸರ್ಕಾರವೇ ಇರಬಹುದು, ಅವರಿಗೆ ಹೆಚ್ಚಿನ ಪ್ರೋತ್ಸಾಹವನ್ನು ಕೊಟ್ಟಿಲ್ಲ. ಹಣಕಾಸಿನ ನೆರವನ್ನು ಕೊಟ್ಟಿಲ್ಲ. ಅವರಿಗೆ ಬೇಕಾಗುವಂತಹ ಮೂಲಭೂತ ಸೌಲಭ್ಯವನ್ನು ಒದಗಿಸದೇ ಇರುವುದರಿಂದ ಇವತ್ತು ನಮ್ಮ ರಾಷ್ಟ ಕ್ರೀಡೆಗಳಲ್ಲಿ ಇಂತಹ ಹೀನಾಯವಾದ ಸೋಲನ್ನು ಅನುಭವಿಸುತ್ತಿದೆ. ಹಾವೇರಿ ಜಿಲ್ಲೆಯಲ್ಲೂ ಕೂಡ ಒಂದು ಕ್ರೀಡಾಂಗಣವನ್ನು ಕಟ್ಟಿದ್ದಾರೆ. ಸುಮಾರು ಹದಿನೈದು ವರ್ಷಗಳಿಂದ ಆ ಕ್ರೀಡಾಂಗಣವನ್ನು ನಿರ್ಮಿಸುತ್ತಿದ್ದರೂ ಕೂಡ ಅದು ಇವತ್ತಿಗೂ ಸಹ ಮುಕ್ತಾಯವಾಗಿಲ್ಲ. ದುರ್ದೈವದ ಸಂಗತಿಯೆಂದರೆ ಹಾವೇರಿ ಜಿಲ್ಲೆಯಲ್ಲಿ ಯಾವುದೇ ಕ್ರೀಡೆಗಾಗಲೀ ಒಂದು ಕೋಚದ ಕೂಡ ಇಲ್ಲ. ಅಷ್ಟು ದೊಡ್ಡದಾದಂತಹ ಜಿಲ್ಲೆಗೆ ಒಬ್ಬ ಕೋಚ್ ಕೂಡ ಅಲ್ಲಿಗೆ ಕೆಲಸ ಮಾಡಲಿಕ್ಕೆ ಬರುತ್ತಿಲ್ಲ ಅಂದರೆ ನಾನು ವಿಷಾದಿಸುತ್ತೇನೆ. ಆ ಕೋಚ್‌ಗಳಿಗೆ ನಾವು ಕೊಡುತ್ತಿರುವ ಪಗಾರ ಬಹಳ ಕಡಿಮೆಯಾಗಿರುವುದರಿಂದ ಅವರು ಅಲ್ಲಿಗೆ ಕೆಲಸ ಮಾಡಲಿಕ್ಕೆ ಬರುತ್ತಿಲ್ಲ. ಅವರಿಗೆ ಕೇವಲ 1,700.00 ರೂಪಾಯಿ ಪಗಾರ ಕೊಡಲಾಗುತ್ತಿದೆ. ಕೇವಲ 2,500 ರಿಂದ 3000 ರೂಪಾಯಿಗಳೊಳಗೆ ಅವರಿಗೆ ಪಗಾರವನ್ನು ಕೊಡುತ್ತಿರುವ ಕಾರಣದಿಂದ ಆ ಕೋಚ್‌ಗಳು ಕ್ರೀಡೆಗಳ ಬಗ್ಗೆ ಚೆನ್ನಾಗಿ ಕೋಚ್ ಮಾಡಲಿಕ್ಕೆ ಸಾಧ್ಯವಾಗುತ್ತಿಲ್ಲ. ಈ ವಿಚಾರವನ್ನು ತಾವು ಮನಗಾಡು ಕ್ರೀಡೆಗೆ ಹೆಚ್ಚಿನ ಪ್ರೋತ್ಸಾಹವನ್ನು ಹಣಕಾಸಿನ ನೆರವನ್ನು ಒದಗಿಸಬೇಕೆಂದು ತಮ್ಮಲ್ಲಿ ಕಳಕಳಿಯ ವಿನಂತಿಯನ್ನು ಮಾಡಿಕೊಂಡು ಇವತ್ತಿನ ದಿವಸ ಈ ಬಜೆಟ್‌ನ ಮೇಲೆ ಮೇತನಾಡಲಿಕ್ಕೆ ನನಗೆ ಅವಕಾಶವನ್ನು ಮಾಡಿಕೊಟ್ಟ ತಮಗೆ ಧನ್ಯವಾದಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

4. ಪ್ರಕಟಣೆ

ಉಪಾಧ್ಯಕ್ಷರು:– ಒಂದು ವಿಶೇಷವಾದ ಸೂಚನೆಯಲ್ಲಿ ಈಗಾಗಲೇ ತಿಳಿಸಿದಂತೆ ವಿಧಾನಸೌಧದ ಮೂರನೇ ಮಹಡಿಯ ಸಮ್ಮೇಳನ ಸಭಾಂಗಣದಲ್ಲಿ ವಿಶೇಷವಾದ ಉಪನ್ಯಾಸ